ಸ್ಥಳಾವಕಾಶವಿರುತ್ತಿದ್ದ ಈ ವಾಹನಗಳು ಹಗುರಾಗಿರುತ್ತಿದ್ದುವು. ಪೋಲೋಕಾರ್ಟ್ ಕ್ಯಾಬ್ರಿಯೊಲೆ, ಡಾಗ್‌ಕಾರ್ಟ್ ಮತ್ತು ಸಲ್ಕಿ ಈ ಬಗೆಯವು. ಬಕ್‌ಬೋರ್ಡ್, ಬಗ್ಗಿ, ಸರ್ರಿ, ಬ್ಯಾರೂಷ್, ಬ್ರೂಮ್ ಇವು ನಾಲ್ಕು ಚಕ್ರದ ವಾಹನಗಳಾಗಿದ್ದುವು. ಸಾಮಾನ್ಯವಾಗಿ ಇವುಗಳ ಮುಂದಿನ ಚಕ್ರಗಳು ಆಕಾರದಲ್ಲಿ ಕಿರಿಯವಾಗಿರುತ್ತಿದ್ದುವು. ಕಡಿದಾದ ತಿರುವು ತೆಗೆದುಕೊಳ್ಳಲು ಅನುವು ಮಾಡಿ ಕೊಡುವುದೇ ಇದರ ಉದ್ದೇಶವಾಗಿತ್ತು. 19ನೆಯ ಶತಮಾನದ ಮಧ್ಯ ಭಾಗದ ಹೊತ್ತಿಗೆ ಸ್ವಯಂಚಾಲಿತ ವಾಹನಗಳ ಯುಗ ಆರಂಭವಾಗಿ, ದಿನಗಳೆದಂತೆ ಅವುಗಳ ಉತ್ಕರ್ಷ ಸಾಧಿತವಾಗುತ್ತ ಬಂದುದರಿಂದ ಈ ಎಲ್ಲ ವಾಹನಗಳೂ ಮೂಲೆಗುಂಪಾಗಿ, ಸೀಮಿತೋದ್ದೇಶಗಳಿಗೆ ಮಾತ್ರ ಬಳಕೆಯಾಗುತ್ತಿವೆ. ಕೆಲವಂತೂ ಅವಶೇಷ ಮಾತ್ರವಾಗಿ ಉಳಿದಿವೆ (**ನೋಡಿ– ತೇರು; ರಥ**). (ಪಿ.ಜಿ.ಡಿ.)


ಸರ್ರಿ

**ಗಾಡ್ವಿನ್ ಆಸ್ಟೆನ್ ಶಿಖರ :** ಹಿಮಾಲಯ ಪರ್ವತದ ಶಾಖೆಗಳಲ್ಲೊಂದಾದ ಕಾರಕೋರಂ ಶ್ರೇಣಿಯ ಉನ್ನತ ಶಿಖರಗಳಲ್ಲಿ ಒಂದು. ಇದಕ್ಕೆ $K^2$ (ಕೇಟೂ) ಶಿಖರ ಎಂದೂ ಹೆಸರಿದೆ. ಟಿಬೆಟ್ ಭಾಷೆಯಲ್ಲಿ ಇದರ ಹೆಸರು ದಾಪ್ಸಾಂಗ್. ಶ್ರೀನಗರದಿಂದ ಈಶಾನ್ಯಕ್ಕೆ 256.ಕಿ.ಮೀ ದೂರದಲ್ಲಿದೆ. ವಿಶ್ವದಲ್ಲಿ ಇದು ಎರಡನೆಯ ಉನ್ನತ ಶಿಖರ. ಇದರ ಎತ್ತರ 8,611 ಮೀ. (28,251'). ಮಂಜುಗಡ್ಡೆ ಇದನ್ನು ಸದಾ ಮುಚ್ಚಿರುತ್ತದೆ. ಇದರ ನೆತ್ತಿಯನ್ನು ಮುಟ್ಟುವ ದಾರಿ ಅತ್ಯಂತ ದುರ್ಗಮವಾದ್ದು. 1850ರಲ್ಲಿ ಲೆಫ್ಟನೆಂಟ್ ಕರ್ನಲ್ ಹೆನ್ರಿ ಹ್ಯಾವರ್‌ಶ್ಯಾಮ್ ಗಾಡ್ವಿನ್ ಆಸ್ಟೆನ್ (1834 – 1923) ಎಂಬ ಭೂಗೋಳಶಾಸ್ತ್ರಜ್ಞ ಈ ಶಿಖರದ ಸರ್ವೇಕ್ಷಣೆ ಮಾಡಿದ. ಇದಕ್ಕೆ ಅವನ ಹೆಸರೇ ಬಳಕೆಗೆ ಬಂದಿದೆ. ಬಾಲ್ಟೊರೊ ನೀರ್ಗಲ್ಲ ನದಿ ಇಲ್ಲಿ ಉಗಮಿಸುತ್ತದೆ.

ಈ ಶಿಖರವನ್ನೇರಲು ಇಟಲಿಯ ಪರ್ವತಾರೋಹಣ ತಂಡವೊಂದು 1954 ರಲ್ಲಿ ಪ್ರಥಮವಾಗಿ ಪ್ರಯತ್ನಪಟ್ಟಿತು. ಈ ತಂಡದ ನಾಯಕನಾಗಿದ್ದವ ಮಿಲಾನ್ ವಿದ್ಯಾಪೀಠದ ಭೂವಿಜ್ಞಾನ ಪ್ರಾಧ್ಯಾಪಕ ಆರ್ಡಿಟೊ ಡೇಸಿಓ. ಅವನ ಅನಂತರ 1955ರಲ್ಲಿ ಜರ್ಮನ್ ಮತ್ತು ಇಂಗ್ಲಿಷ್ ಪರ್ವತಾರೋಹಣ ತಂಡಗಳು ಗಾಡ್ವಿನ್ ಶಿಖರವನ್ನು ಏರಿದುವು. *

**ಗಾಡ್ವಿನ್, ಮೇರಿ :** 1759–97. ಸ್ತ್ರೀಸುಧಾರಣೆಗಾಗಿ ದುಡಿದ ಆಂಗ್ಲ ಲೇಖಕಿ. ಐರಿಷ್ ಕುಟುಂಬದಿಂದ ಬಂದವಳು. ತಂದೆಯ ದುಂದಿನ ಪರಿಣಾಮವಾಗಿ, ತಾಯಿಯ ಮರಣಾನಂತರ 19ರ ತರುಣದಲ್ಲೇ ಈಕೆ ಸ್ವಾವಲಂಬಿಯಾಗಿ ಬಾಳಬೇಕಾಯಿತು. ಪ್ರಾರಂಭದಲ್ಲಿ ಕಸೂತಿ ಕೆಲಸ ಮಾಡಿ ಅನಂತರ ತಾನೇ ಪ್ರಾರಂಭಿಸಿದ ಶಾಲೆಯಲ್ಲಿ ಶಿಕ್ಷಕಿಯಾಗಿ ಸ್ವಲ್ಪ ಕಾಲ ದುಡಿದು ಶಾಲೆನಡೆಸುವುದು ಅಶಕ್ಯವಾದಾಗ ಬರವಣಿಗೆಗೆ ಕೈಹಾಕಿದಳು. ಈಕೆಯ ಮೊದಲ ಕಾದಂಬರಿ ಮೇರಿ ಎಂಬುದು ಒಂದು ಕಲ್ಪಿತ ಕಥನ. ಈಕೆ ಐರ್ಲೆಂಡ್‌ನಲ್ಲಿ ಲಾರ್ಡ್ ಕಿಂಗ್ಸ್‌ಬರಾನ ಮನೆಯಲ್ಲಿ ಮಕ್ಕಳಿಗೆ ಪಾಠ ಕಲಿಸುವ ಶಿಕ್ಷಕಿಯಾಗಿ ಸ್ವಲ್ಪಕಾಲ ಕೆಲಸ ಮಾಡಿದ್ದೂ ಉಂಟು. ಆ ಕೆಲಸವೂ ಹೋದಮೇಲೆ ಈಕೆಯ ಒಲವು ಪೂರ್ಣವಾಗಿ ಸಾಹಿತ್ಯದ ಕಡೆ ತಿರುಗಿತು. ಮೊದಲು ದಿ ಎಲಿಮೆಂಟ್ಸ್ ಆಫ್ ಮೊರ್‍ಯಾಲಿಟಿ ಮತ್ತು ಫಿಸಿಯಾನಮಿ ಎಂಬ ಎರಡು ಹೊತ್ತಿಗೆಗಳನ್ನು ಭಾಷಾಂತರಿಸಿದಳು. ಒರಿಜಿನಲ್ ಸ್ಟೋರೀಸ್ ಫ್ರಾಮ್ ರಿಯಲ್ ಲೈಫ್ (1791) ಎಂಬ ಈಕೆಯ ಪುಸ್ತಕಕ್ಕೆ ಕವಿ ವಿಲಿಯಂ ಬ್ಲೇಕ್ ಚಿತ್ರಗಳನ್ನು ಬರೆದಿದ್ದಾನೆ. ಮಾರನೆಯ ವರ್ಷವೇ ಸ್ತ್ರೀಯ ಹಕ್ಕುಗಳನ್ನು ಸಮರ್ಥಿಸಿ ಈಕೆ ಬರೆದ ಪ್ರಸಿದ್ಧ ಗ್ರಂಥ ವಿಂಡಿಕೇಷನ್ ಆಫ್ ದಿ ರೈಟ್ಸ್ ಆಫ್ ವಿಮೆನ್ ಎಂಬುದು ಹೊರಬಂತು. ಆಗಿನ ಸಮಾಜದಲ್ಲಿ ಬಿರುಗಾಳಿಯನ್ನೇ ಎಬ್ಬಿಸಿದ ಈ ಗ್ರಂಥದಲ್ಲಿ ಸ್ತ್ರೀಶಿಕ್ಷಣದ ಅಗತ್ಯವನ್ನು ಒತ್ತಿ ಹೇಳಲಾಗಿದೆ.



1792 ರಲ್ಲಿ ಫ್ರಾನ್ಸಿನ ಕ್ರಾಂತಿಯ ಪ್ರಗತಿಯನ್ನು ವೀಕ್ಷಿಸಲು ಹೋದಾಗ ಕ್ಯಾಪ್ಟನ್ ಗಿಲ್ಬರ್ಟ್ ಇಮ್‌ಲಿ ಎಂಬುವನನ್ನು ಪ್ಯಾರಿಸಿನಲ್ಲಿ ಭೇಟಿಯಾದಳು. ಇಬ್ಬರಿಗೂ ವಿವಾಹವಾಯಿತು. ಒಬ್ಬ ಮಗಳು ಹುಟ್ಟಿದ ಅನಂತರ 1794ರಲ್ಲಿ ವಿವಾಹ ವಿಚ್ಛೇದವಾಯಿತು. ಇದೇ ಸಮಯದಲ್ಲಿ ಈಕೆ ಫ್ರಾನ್ಸಿನ ಮಹಾಕ್ರಾಂತಿಯನ್ನು ಕುರಿತು ಒಂದು ಗ್ರಂಥ ಬರೆದಳು. 1796ರಲ್ಲಿ ಈಕೆ ಲಂಡನ್ನಿಗೆ ಬಂದು ಇಂಗ್ಲಿಷ್ ಲೇಖಕ, ತತ್ತ್ವಶಾಸ್ತ್ರನಿಪುಣ ವಿಲಿಯಂ ಗಾಡ್ವಿನ್ ಎಂಬಾತನನ್ನು ಸಂಧಿಸಿದಳು. ಮಾರನೆಯ ವರ್ಷವೇ ಇವರಿಬ್ಬರೂ ವಿವಾಹವಾದರು. ಅದೇ ವರ್ಷ ಮೇರಿ ಎಂಬ ಹೆಣ್ಣು ಮಗುವಿಗೆ ಜನ್ಮವಿತ್ತು ಗಾಡ್ವಿನ್ ತೀರಿಕೊಂಡಳು. ಮುಂದೆ ಕವಿ ಷೆಲ್ಲಿ ಇದೇ ಮೇರಿಯನ್ನು ಮದುವೆಯಾದ.

ಗಾಡ್ವಿನ್ ಬರೆದಿರುವ ಗ್ರಂಥಗಳಲ್ಲಿ ಮುಖ್ಯವಾದ ಇನ್ನೆರಡು ಗ್ರಂಥಗಳು ಇವು: ಥಾಟ್ಸ್ ಆನ್ ದಿ ಎಜುಕೇಷನ್ ಆಫ್ ಡಾಟರ್ಸ್; ವಿಂಡಿಕೇಷನ್ ಆಫ್ ದಿ ರೈಟ್ಸ್ ಆಫ್ ಮ್ಯಾನ್.

ಗಾಡ್ವಿನ್ ಮೇರಿಯ ಜೀವನ ಚರಿತ್ರೆಯನ್ನು ಗಂಡ ವಿಲಿಯಂ ಗಾಡ್ವಿನ್ ಬರೆದಿದ್ದಾನೆ. (ಪಿ.ಎಂ.ಎಚ್.)

**ಗಾಡ್ವಿನ್, ವಿಲಿಯಂ :** 1756–1836. ಇಂಗ್ಲಿಷ್ ಕಾದಂಬರಿಕಾರ ಮತ್ತು ತತ್ತ್ವಶಾಸ್ತ್ರಜ್ಞ. ಕೇಂಬ್ರಿಜ್‌ಷೈರಿನ ವಿಸ್‌ಬೆಕ್ ಎಂಬಲ್ಲಿ ಜನಿಸಿದ. ವ್ಯಾಸಂಗ ಮಾಡಿದ್ದು ನಾರ್ವಿಚ್ ಶಾಲೆಯಲ್ಲಿ. ತಂದೆ ಮತಾಧಿಕಾರಿ, ಮಗನೂ ತನ್ನಂತೆ ಆಗಬೇಕೆಂದು ಆತನ ಬಯಕೆ. ಅದಕ್ಕಾಗಿ ಮಗ ಹಾಕ್ಸ್‌ಟನ್ ಕಾಲೇಜಿನಲ್ಲಿ ವ್ಯಾಸಂಗ ಮುಂದುವರಿಸಬೇಕಾಯಿತು. ವ್ಯಾಸಂಗಾನಂತರ ಗಾಡ್ವಿನ್ 1778 ರಿಂದ 1783 ರ ವರೆಗೆ ಕ್ರೈಸ್ತ ಪುರೋಹಿತನಾಗಿ ಕೆಲಸ ಮಾಡಿದ. 1782 ರಲ್ಲಿ ಲಂಡನ್ ನಗರಕ್ಕೆ ಬಂದು ನೆಲಸಿದ. ಮತಧರ್ಮದ ವಿಚಾರದಲ್ಲಿ ಬಗೆಹರಿಯದ ಶಂಕೆಗಳುಂಟಾಗಿ ಧರ್ಮದ ಬಗ್ಗೆ ಹೊಸ ಭಾವನೆಗಳು, ನಂಬಿಕೆಗಳು ಮೂಡಿದ್ದರಿಂದ ಪುರೋಹಿತ ಕೆಲಸಕ್ಕೆ ರಾಜೀನಾಮೆ ಇತ್ತು ಸಾಹಿತ್ಯದ ಕಡೆ ತಿರುಗಿದ. ಪ್ರಾರ್ಥನಾಸಭೆಯ ಉಪದೇಶ ಭಾಷಣಗಳ ಶೈಲಿಯಲ್ಲಿ ಈತ ಬರೆದ ಇತಿಹಾಸ ಚಿತ್ರಗಳ ಮೊದಲ ಪುಸ್ತಕ ಯಾರ ಗಮನವನ್ನೂ ಸೆಳೆಯಲಿಲ್ಲ. ಅನಂತರ ಗಾಡ್ವಿನ್ ನ್ಯೂ ಆನ್ಯುಯಲ್ ರಿಜಿಸ್ಟರಿನ ಪ್ರಮುಖ ಲೇಖಕರಲ್ಲಿ ಒಬ್ಬನಾಗಿ ರಾಜಕೀಯ ಮತ್ತು ಸಾಮಾಜಿಕ ಸುಧಾರಕನೆಂದು ಪ್ರಸಿದ್ಧಿ ಪಡೆದ. ಸರ್ಕಾರದಿಂದ ಅಧಿಕಾರದ ದುರುಪಯೋಗವಾಗುತ್ತದಾಗಿ ಅದರ ಅಗತ್ಯವಿಲ್ಲ. ಪರಸ್ಪರ ಗೌರವಯುತ ಸಂಬಂಧ ಮುಖ್ಯವಾದ್ದರಿಂದ ವಿವಾಹ ವಿಧಿಯ ಅಗತ್ಯವಿಲ್ಲ – ಮುಂತಾದ ಈತನ ತತ್ತ್ವಗಳನ್ನು ಇನ್‌ಕ್ವಯರಿ ಕನ್ಸರ್ನಿಂಗ್ ಪೊಲಿಟಿಕಲ್ ಜಸ್ಟೀಸ್ (1793) ಎಂಬ ಗ್ರಂಥದಲ್ಲಿ ಕಾಣುತ್ತೇವೆ. ಒಂದು ವರ್ಷದ ಅನಂತರ ಈತನ ಸಾಮಾಜಿಕ ಸಿದ್ಧಾಂತಗಳನ್ನೊಳಗೊಂಡ ಕಾಲೆಬ್ ವಿಲಿಯಂಸ್ ಎಂಬ ಪ್ರಸಿದ್ಧ ಕಾದಂಬರಿ ಹೊರಬಂತು. ಈತನ ಪ್ರಸಿದ್ಧ ಕಾದಂಬರಿಗಳಲ್ಲಿ ಎರಡನೆಯದು ಸೇಂಟ್ ಲಿಯಾನ್ (1799), ಫ್ಲೀಟ್‌ವುಡ್ (1804), ಮ್ಯಾಂಡೆವಿಲ್ (1817) ಮತ್ತು ಕ್ಲೌಡ್‌ಸ್ಲೇ (1830) ಈತನ ಇತರ ಕಾದಂಬರಿಗಳು. ಗಾಡ್ವಿನ್ 1803ರಲ್ಲಿ ಚಾಸರನ ಜೀವನ ಚರಿತ್ರೆಯನ್ನು ಎರಡು ಸಂಪುಟಗಳಲ್ಲಿ ಹೊರತಂದ. 1808 ರಲ್ಲಿ ಎನ್ ಎಸ್ಸೆ ಆನ್ ಸೆಪಲ್‌ಕರ್ಸ್ ಎಂಬುದೂ 1824–28ರಲ್ಲಿ ಹಿಸ್ಟರಿ ಆಫ್ ದಿ ಕಾಮನ್‌ವೆಲ್ತ್ ಆಫ್ ಇಂಗ್ಲೆಂಡ್ ಎಂಬುದೂ ಬೆಳಕು ಕಂಡವು. ಈತನ ಕೊನೆಯ ಕೃತಿ ಲೈವ್ಸ್ ಆಫ್ ದಿ ನೆಕ್ರೊಮ್ಯಾನ್ಸರ್ 1834ರಲ್ಲಿ ಪ್ರಕಟವಾಯಿತು. ಕೆಲವು ಕಾಲ ಗಾಡ್ವಿನ್ ಪುಸ್ತಕ ಪ್ರಕಟಣ ಉದ್ಯೋಗವನ್ನೂ ಕೈಗೊಂಡಿದ್ದ.

ಗಾಡ್ವಿನ್ 1797ರಲ್ಲಿ ಮೇರಿ ಉಲ್‌ಸ್ಟನ್‌ಕ್ರ್ಯಾಫ್ಟ್ (ನೋಡಿ– ಗಾಡ್ವಿನ್,–ಮೇರಿ) ಎಂಬಾಕೆಯನ್ನು ವಿವಾಹವಾದನಲ್ಲದೆ ಆಕೆಯ ಜೀವನಚರಿತ್ರೆಯೊಂದನ್ನು ಬರೆದಿದ್ದಾನೆ. ಆಕೆಯ ಮರಣಾನಂತರ 1801ರಲ್ಲಿ ಮೇರಿ ಜೇನ್ ಕ್ಲೈರ್‌ಮಾಂಟ್ ಎಂಬ ವಿಧವೆಯನ್ನು ಈತ ವಿವಾಹವಾದ.

ಗಾಡ್ವಿನ್‌ಮೇರಿ ಮತ್ತು ಗಾಡ್ವಿನ್ ವಿಲಿಯಂ ಪುತ್ರಿ ಮೇರಿಯನ್ನು 1816ರಲ್ಲಿ ಷೆಲ್ಲಿ ವಿವಾಹವಾದ.

ವರ್ಡ್ಸ್‌ವರ್ತ್, ಕೋಲ್‌ರಿಜ್ ಮತ್ತು ಷೆಲ್ಲಿ ಮೊದಲಾದವರು ಗಾಡ್ವಿನ್‌ನಿಂದ ಸಾಕಷ್ಟು ಪ್ರಭಾವಿತರಾಗಿದ್ದಾರೆ. *

**ಗಾಡ್ವಿನ್, ಹೆನ್ರಿ ಥಾಮಸ್ :** 1784–1853. ಬ್ರಿಟಿಷ್ ಭಾರತ ಸೇನೆಯ ಒಬ್ಬ ಅಧಿಕಾರಿ. 1824–26ರಲ್ಲಿ ಒಂದನೆಯ ಬರ್ಮ ಯುದ್ಧದಲ್ಲಿ ಭಾಗವಹಿಸಿದ್ದ. 1846ರಲ್ಲಿ ಮೇಜರ್ ಜನರಲ್ ಆದ.

1852–53ರಲ್ಲಿ ನಡೆದ ಎರಡನೆಯ ಬರ್ಮ ಯುದ್ಧದಲ್ಲಿ ಗಾಡ್ವಿನ್ ನಾಯಕತ್ವದಲ್ಲಿ ಬ್ರಿಟಿಷ್ ಭೂಸೇನೆ ಕಾರ್ಯಾಚರಣೆ ನಡೆಸಿತು. ತನ್ನ ಸಾಹಸಕ್ಕಾಗಿ ನೈಟ್ ಪದವಿ ಪಡೆದಿದ್ದ ಗಾಡ್ವಿನ್ 1853ರಲ್ಲಿ ಸಿಮ್ಲಾದಲ್ಲಿ ತೀರಿಕೊಂಡ. (ವಿ.ಕೆ)

**ಗಾಡ್‌ಹ್ಯೂ :** ಫ್ರೆಂಚ್ ಈಸ್ಟ್ ಇಂಡಿಯ ಕಂಪನಿಯ ನಿರ್ದೇಶಕರಲ್ಲೊಬ್ಬ. ಭಾರತದಲ್ಲಿ ಫ್ರೆಂಚ್ ಗವರ್ನರ್–ಜನರಲ್ ಆಗಿದ್ದ ಡ್ಯುಪ್ಲೆಕ್ಸನನ್ನು ಅಧಿಕಾರದಿಂದ ತೆಗೆದುಹಾಕಲು ಮತ್ತು ಅಲ್ಲಿ ಫ್ರೆಂಚರ ಸ್ಥಿತಿಗತಿಗಳ ವಿಚಾರಣೆ ನಡೆಸಲು ಫ್ರೆಂಚ್ ಕಂಪನಿ ಇವನನ್ನು 1754ರಲ್ಲಿ ಭಾರತಕ್ಕೆ ಕಳುಹಿಸಿತು. ಇವನು 1754ರ ಆಗಸ್ಟ್ ತಿಂಗಳಲ್ಲಿ ಪಾಂಡಿಚೇರಿಯನ್ನು ತಲುಪಿದ. ಆ ವೇಳೆಗೆ ದಕ್ಷಿಣ ಭಾರತದಲ್ಲಿ ಫ್ರೆಂಚರ ಬಲ ಕುಂದುತ್ತಿತ್ತು. ಡ್ಯುಪ್ಲೆಕ್ಸ್ ಆ ಕಾಲದ ವಿವಾದಾಸ್ಪದ ವ್ಯಕ್ತಿಯಾಗಿದ್ದ. ಅವನ ರಾಷ್ಟ್ರಪ್ರೇಮ, ನಿಷ್ಠೆ, ಸಾಹಸ ಮತ್ತು ಗುರಿಗಳು ಫ್ರೆಂಚರ ದೃಷ್ಟಿಯಲ್ಲಿ ಸಂಶಯಾತೀತವಾಗಿದ್ದುವಾದರೂ ಅವನು ತನ್ನ ಯೋಜನೆಗಳನ್ನು ಕಾರ್ಯಗತಮಾಡಿದ ವಿಧಾನ ಮಾತ್ರ ದೋಷಯುಕ್ತವಾಗಿದ್ದುವು. ಪರಿಸರದ ಪ್ರತಿಕೂಲತೆಯಿಂದಾಗಿ ವಿಫಲತೆಗೊಂಡಿದ್ದುವು. ಗಾಡ್‌ಹ್ಯೂ ಭಾರತಕ್ಕೆ ಬಂದದ್ದು ಇಂಥ ಹಿನ್ನೆಲೆಯಲ್ಲಿ.

ಗಾಡ್‌ಹ್ಯೂ ಭಾರತಕ್ಕೆ ಬಂದೊಡನೆಯೇ ಇಂಗ್ಲಿಷರೊಂದಿಗೆ ಯುದ್ಧ ನಿಲ್ಲಿಸಿದ. 1755ರ ಜನವರಿಯಲ್ಲಿ ಅವರೊಂದಿಗೆ ತಾತ್ಕಾಲಿಕ ಒಪ್ಪಂದ ಮಾಡಿಕೊಂಡ. ಭಾರತದ ರಾಜರ ವ್ಯವಹಾರಗಳಲ್ಲಿ ಕೈಹಾಕುವುದಿಲ್ಲವೆಂದು ಎರಡು ಪಕ್ಷಗಳೂ ಒಪ್ಪಿಕೊಂಡವು. ಇಂಗ್ಲಿಷರ ಅಧೀನ ಪ್ರದೇಶಗಳಿಗೆ ಫ್ರೆಂಚರೂ ಫ್ರೆಂಚರಿಗೆ ಸೇರಿದ್ದ ಪ್ರದೇಶಗಳಿಗೆ ಇಂಗ್ಲಿಷರೂ ಮನ್ನಣೆ ನೀಡಬೇಕೆಂಬುದು ಒಪ್ಪಂದದ ಷರತ್ತುಗಳಲ್ಲೊಂದು. ಈ ಒಪ್ಪಂದವನ್ನು ಎರಡು ಕಂಪನಿಗಳೂ ಅನುಮತಿಸಬೇಕಾಗಿತ್ತು. ಆದರೆ ಅಷ್ಟರಲ್ಲಿ (1756) ಯುರೋಪಿನಲ್ಲಿ ಏಳು ವರ್ಷಗಳ ಯುದ್ಧ ಪ್ರಾರಂಭವಾದ್ದರಿಂದ ಫ್ರಾನ್ಸ್ ಮತ್ತು ಬ್ರಿಟನ್ ಪುನಃ ಯುದ್ಧಕ್ಕೆ ಇಳಿದುವು. ತತ್ಫಲವಾಗಿ ಈ ಒಪ್ಪಂದ ಕಾರ್ಯಗತವಾಗಲೇ ಇಲ್ಲ.

ಗಾಡ್‌ಹ್ಯೂ ಮಾಡಿಕೊಂಡ ಒಪ್ಪಂದ ದೇಶದ ಅವನತಿಗೆ ಮತ್ತು ರಾಷ್ಟ್ರದ ಅವಮಾನಕ್ಕೆ ಮಾಡಿದ ರುಜು ಎಂದು ಡ್ಯುಪ್ಲೆಕ್ಸ್ ಟೀಕಿಸಿದ. ಈ ಪ್ರಸಂಗದ ಬಗ್ಗೆ ಇತಿಹಾಸಕಾರರ ಅಭಿಪ್ರಾಯ ವಿಭಿನ್ನವಾದ್ದು. ತನ್ನ ಅಸಮರ್ಥ ಸೈನ್ಯದಿಂದಾಗಲೀ ಭಾರತದಲ್ಲಿ ಫ್ರೆಂಚರ ಅಂದಿನ ಸ್ಥಿತಿಗತಿಗಳಿಂದಾಗಲೀ ಗಾಡ್‌ಹ್ಯೂ ಬ್ರಿಟಿಷರ ವಿರುದ್ಧ ಯುದ್ಧಹೂಡುವ ಸ್ಥಿತಿಯಲ್ಲಿರಲಿಲ್ಲವೆಂಬುದು ಕೆಲವು ಇತಿಹಾಸಕಾರರ ಅಭಿಪ್ರಾಯ. ಆರ್ಥಿಕವಾಗಿಯಾಗಲೀ ಸೈನ್ಯಬಲದಲ್ಲಿಯಾಗಲೀ ಫ್ರೆಂಚರು ಬ್ರಿಟಿಷರಿಗೆ ಸರಿಗಟ್ಟುವಂತಿರಲಿಲ್ಲ. ಭಾರತದಲ್ಲಿ ಫ್ರೆಂಚರ ವಸಾಹತು ನಿರ್ಮಿಸುವ ಆಶೆ ಕೊನೆಗೊಂಡದ್ದು ಏಳು ವರ್ಷಗಳ ಯುದ್ಧದಿಂದಲೇ ಹೊರತು ಗಾಡ್‌ಹ್ಯೂ ಮಾಡಿಕೊಂಡ ಒಪ್ಪಂದದಿಂದಲ್ಲವೆಂಬುದು ಕೆಲವು ಇತಿಹಾಸಕಾರರ ಅಭಿಪ್ರಾಯ. ಆದರೂ ಗಾಡ್‌ಹ್ಯೂ ಮಾಡಿಕೊಂಡ ಈ ಒಪ್ಪಂದ ಫ್ರೆಂಚರಿಗೆ ಯಾವ ರೀತಿಯಲ್ಲೂ ಅನುಕೂಲವಾಗುವಂತಿರಲಿಲ್ಲವೆಂಬುದು ನಿಜ.

ಗಾಡ್‌ಹ್ಯೂ ಡ್ಯುಪ್ಲೆಕ್ಸ್‌ನನ್ನು ಹುದ್ದೆಯಿಂದ ತೆಗೆದುಹಾಕಿದ್ದು ಮತ್ತು ಅನಂತರ ಅವನ ಬಗ್ಗೆ ವ್ಯವಹರಿಸಿದ ರೀತಿ–ಇವು ಡ್ಯುಪ್ಲೆಕ್ಸ್‌ನ ಕೊನೆಯ ಕಾಲದ ದುಃಸ್ಥಿತಿಗೆ ಕಾರಣವಾದುದೆಂದು ಒಂದು ವಾದವಿದೆ. ಆದರೆ ಡ್ಯುಪ್ಲೆಕ್ಸ್ ಸ್ವದೇಶಕ್ಕೆ ಮರಳಲು ಗಾಡ್‌ಹ್ಯೂ ಸಾಕಷ್ಟು ಸಹಾಯ ಮಾಡಿದ. ಫ್ರೆಂಚ್ ಕಂಪನಿ ಡ್ಯುಪ್ಲೆಕ್ಸ್‌ನನ್ನು ಕಡೆಗಣಿಸಿದ್ದರಿಂದ ಅವನಿಗೆ ಆ ಗತಿ ಬಂತೇ ಹೊರತು ಗಾಡ್‌ಹ್ಯೂನಿಂದಲ್ಲವೆಂಬುದು ಹಲವು ಇತಿಹಾಸಕಾರರ ಅಭಿಮತ. (ಡಿ.ಎಸ್.ಜೆ.)

**ಗಾಣಗಾಪುರ :** ದತ್ತಸಂಪ್ರದಾಯದ ಒಂದು ಪವಿತ್ರ ತೀರ್ಥಕ್ಷೇತ್ರ ಕರ್ನಾಟಕದ ಗುಲ್ಬರ್ಗ ಜಿಲ್ಲೆಯಲ್ಲಿ ಪುಣೆ – ರಾಯಚೂರು ರೈಲುಮಾರ್ಗದಲ್ಲಿರುವ ಗಾಣಗಾಪುರ ರೈಲುನಿಲ್ದಾಣದಿಂದ 22 ಕಿಮೀ ದೂರದಲ್ಲಿ ಭೀಮಾ– ಅಮರಜ ನದಿಗಳ ಸಂಗಮದ ಹತ್ತಿರ ಈ ಊರು ಇದೆ. ಶ್ರೀಗುರುಚರಿತ್ರೆ ಎಂಬ ಗ್ರಂಥದಲ್ಲಿ ಇದನ್ನು ಗಾಣಗಾಪುರ, ಗಾಣಗಾಭವನ, ಗಂಧರ್ವಭವನ, ಗಂಧರ್ವಪುರ ಎಂಬ ಹೆಸರುಗಳಿಂದ ಉಲ್ಲೇಖಿಸಲಾಗಿದೆ. ದತ್ತಾವತಾರಿ ಎಂದು ಪ್ರಸಿದ್ಧಿಹೊಂದಿರುವ ಶ್ರೀನರಸಿಂಹ ಸರಸ್ವತಿಯವರು ವಾಡಿ ಎಂಬ ಊರಿನಿಂದ ಇಲ್ಲಿಗೆ ಬಂದು ಸುಮಾರು 23 ವರ್ಷ ನೆಲೆಸಿದ್ದರು. ಈ ಅವಧಿಯಲ್ಲಿ ಇಲ್ಲಿ ದತ್ತಸಂಪ್ರದಾಯವನ್ನನುಸರಿಸುವವರ ಸಂಖ್ಯೆ ಹೆಚ್ಚಾಯಿತು. ಸರಸ್ವತಿಯವರು ಮೊದಲು ಸಂಗಮದ ಹತ್ತಿರವೇ ವಾಸವಾಗಿದ್ದು ಅನಂತರ ಊರ ಮಧ್ಯದಲ್ಲಿರುವ ಮಠದಲ್ಲಿರತೊಡಗಿ ಮುಂದೆ ಶ್ರೀಶೈಲದ ಕಡೆಗೆ ತೆರಳಿದರು.

ಮಠದ ಆವಾರದಲ್ಲಿ ಮಹಾದೇವ – ಪಾರ್ವತಿಯರ ಮೂರ್ತಿ, ಅಶ್ವತ್ಥವೃಕ್ಷದ ಬೊದರಿನಲ್ಲಿ ನಾಗನಾಥ ಮತ್ತು ಹನುಮಂತನ ಮೂರ್ತಿಗಳು ತುಲಸೀ ವೃಂದಾವನಗಳು ಗೋಚರವಾಗುತ್ತವೆ. ಈ ಮಠದಲ್ಲಿರುವ ಶ್ರೀಗುರುಗಳ ಪಾದುಕೆಗಳು ನಿರ್ಗುಣ ಪಾದುಕೆಗಳೆಂದು ಹೆಸರಾಗಿವೆ. ವಾಡಿಯಲ್ಲಿರುವ ಪಾದುಕೆಗಳನ್ನು ಮನೋಹರ ಪಾದುಕೆಗಳೆನ್ನುತ್ತಾರೆ. ಮಠದ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಎರಡು ಮಹಾದ್ವಾರಗಳಿವೆ. ಪಶ್ಚಿಮದ ಮಹಾದ್ವಾರ ವಿಶಾಲವಾಗಿದ್ದು ಅದರ ಮಹಡಿಯಲ್ಲಿ ನಗಾರಖಾನೆ (ದೇವಸ್ಥಾನದ ನಗಾರಿಗಳನ್ನು ಬಾರಿಸುವ ಜಾಗ) ಇದೆ. ಭಕ್ತಾದಿಗಳು ಕೂಡಲು ಯೋಗ್ಯವಾದ ಏಳು ಜಗಲಿಗಳಿವೆ. ಗರ್ಭಗುಡಿಯಲ್ಲಿನ ಪಾದುಕೆಗಳ ದರ್ಶನ ಮಾಡಬೇಕಾದರೆ ಉಡುಪಿಯಲ್ಲಿರುವಂತೆ ಒಂದು ಬೆಳ್ಳಿಯ ಕಿಟಕಿಯ ಮೂಲಕ ನೋಡಬೇಕಾಗುತ್ತದೆ. ಇಲ್ಲಿ ನಿತ್ಯೋಪಾಸನೆ ಬೆಳಗ್ಗಿನಿಂದ ಪ್ರಾರಂಭವಾಗುತ್ತದೆ. ಪಾದುಕೆಗಳಿಗೆ ಜಲಸ್ಪರ್ಶ ಮಾಡುವುದಿಲ್ಲ. ಕೇಸರಿ ಮತ್ತು ಅಷ್ಟಗಂಧಗಳನ್ನು ಲೇಪಿಸುತ್ತಾರೆ. ಪ್ರತಿ ಗುರುವಾರ ರಾತ್ರಿ ಪಲ್ಲಕ್ಕಿಸೇವೆ ನಡೆಯುತ್ತದೆ.



ಊರಿನಿಂದ 1.6 ಕಿಮೀ ದೂರದಲ್ಲಿ ಭೀಮಾ– ಅಮರಜ ನದಿಗಳ ಸಂಗಮದ ಹತ್ತಿರ ಭಸ್ಮದ ರಾಶಿಯಿದೆ. ಹಿಂದೆ ಇಲ್ಲಿ ಯಜ್ಞಕಾರ್ಯಗಳು ನೆರವೇರುತ್ತಿದ್ದು ಆ ಯಜ್ಞಬೂದಿಯನ್ನು ಹೀಗೆ ಒಂದು ಕಡೆ ಗುಡ್ಡೆ ಮಾಡಲಾಗಿದೆಯೆಂದು ಪ್ರತೀತಿ. ಭಾವುಕ ಭಕ್ತರು ಸ್ನಾನಮಾಡಿದ ಅನಂತರ ಈ ಭಸ್ಮವನ್ನು ಲೇಪಿಸಿಕೊಳ್ಳುವರು. ಸಂಗಮೇಶ್ವರ ದೇವಾಲಯದ ಎದುರು ಶ್ರೀನರಸಿಂಹ ಸರಸ್ವತಿಯವರ ತಪೋಭೂಮಿ ಇದೆ. ಸಂಗಮದಿಂದ ಊರಿಗೆ ಬರುವ ದಾರಿಯಲ್ಲಿ ಷಟ್‌ಕುಲತೀರ್ಥ, ನರಸಿಂಹತೀರ್ಥ, ಭಾಗೀರಥೀತೀರ್ಥ, ಪಾಪವಿನಾಶಿತೀರ್ಥ, ಕೋಟಿತೀರ್ಥ, ರುದ್ರಪಾದತೀರ್ಥ, ಚಕ್ರತೀರ್ಥ ಮತ್ತು ಮನ್ಮಥತೀರ್ಥ ಎಂಬ ಎಂಟು ತೀರ್ಥಗಳಿವೆ. ಇಲ್ಲಿನ ತೀರ್ಥಗಳಲ್ಲಿ ಸ್ನಾನಮಾಡಿದರೆ ಅನೇಕ ಫಲಗಳು ಪ್ರಾಪ್ತಿಯಾಗುತ್ತವೆ ಎಂಬ ನಂಬಿಕೆ.

ಗಾಣಗಾಪುರದ ಉತ್ಸವ ಸಮಾರಂಭಗಳಲ್ಲಿ ಶ್ರೀದತ್ತಜಯಂತಿ ಮತ್ತು ಶ್ರೀನರಸಿಂಹ ಸರಸ್ವತಿಯವರ ಪುಣ್ಯತಿಥಿ – ಇವೆರಡು ವಿಶೇಷ ಮಹತ್ತ್ವದವು. ಶ್ರೀಗುರುವಿನ ಜೀವನಕಾರ್ಯ ಇಲ್ಲಿಯೇ ನಡೆದುದರಿಂದ ಈಗ ಸು. 500 ವರ್ಷಗಳಿಂದ ಇದು ಭಕ್ತರಿಗೆ ಜಾಗೃತ ಸ್ಥಾನವಾಗಿದೆ.

ಆಧಿವ್ಯಾಧಿಗಳಿಂದ ಬಳಲುವ ಅನೇಕ ಜನ ತಮ್ಮ ದುಃಖನಿವಾರಣೆಗಾಗಿ ಇಲ್ಲಿಗೆ ಬಂದು ಸೇವೆಮಾಡಿ ಶ್ರೀಗುರುಚರಿತ ಪಾರಾಯಣಮಾಡಿ ಭಿಕ್ಷಾ ಜೀವನವನ್ನು ನಡೆಸುವರು. ಶ್ರೀಗುರುಚರಿತ್ರೆಯಲ್ಲಿನ ಚಮತ್ಕಾರಿ ಕಥೆಗಳನ್ನೋದುವುದರಿಂದ ಶ್ರದ್ಧಾಜೀವನವನ್ನನುಸರಿಸುವುದರಲ್ಲಿ ವಿಶ್ವಾಸ ಹುಟ್ಟುತ್ತದೆ. ಮಠದಲ್ಲಿ ಮಧ್ಯಾಹ್ನ ಮಹಾನೈವೇದ್ಯ ನಡೆಯುತ್ತದೆ. ಅನಂತರ ಸೇವಾಕರ್ತರು ಮಧುಕರಿ ಬೇಡಲು ಹೋಗುತ್ತಾರೆ. ಧನಿಕರಾದ ಅನೇಕ ದತ್ತಭಕ್ತರು ಸೇವಾಕರ್ತರಿಗೆ ಧನಧಾನ್ಯ ಸಹಾಯ ಒದಗಿಸುತ್ತಿದ್ದಾರೆ. ದತ್ತವ್ರತದ ಪ್ರಕಾರ ಪ್ರತಿಯೊಬ್ಬ ಯಾತ್ರಿಕನೂ ಕನಿಷ್ಠಪಕ್ಷ ಐದು ಮನೆಗಳಿಗಾದರೂ ಹೋಗಿ ಬೇಡಬೇಕು ಎಂಬುದು ನಿಯಮ. ಭಾವುಕ ಭಕ್ತರು ಈ ನಿಯಮವನ್ನು ಅತ್ಯಂತ ಶ್ರದ್ಧೆಯಿಂದ ಪಾಲಿಸುತ್ತಾರೆ. *

**ಗಾಣದ ಕನ್ನಪ್ಪ :** ಬಸವೇಶ್ವರನ ಸಮಕಾಲೀನನೆನ್ನಲಾದ ಒಬ್ಬ ಶಿವಶರಣ, ವಚನಕಾರ, ಕನ್ನಯ್ಯಪ್ರಿಯ ಗುಹೇಶ್ವರನ ಶರಣ, ಗುಹೇಶ್ವರನಲ್ಲಯ್ಯ ಎಂಬ ಅಂಕಿತಗಳಲ್ಲಿ ವಚನಗಳನ್ನು ರಚಿಸಿದ್ದಾನೆ. ವೃತ್ತಿಯಿಂದ ಈತ ಮೀನುಗಾರ. ಗುರುರಾಜಚಾರಿತ್ರ ಹಾಗೂ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ ಗ್ರಂಥಗಳಲ್ಲಿ ಈತನ ಪ್ರಸ್ತಾಪವಿದೆ.

ಕಲ್ಯಾಣಪಟ್ಟಣದ ತ್ರಿಪುರಾಂತಕ ಕೆರೆಯಲ್ಲಿ ಗಾಳಹಾಕಿ ಮೀನು ಹಿಡಿಯುವ ಕಾಯಕದಲ್ಲಿ ಪ್ರವೃತ್ತನಾದ ಕನ್ನಪ್ಪ ಹಾಗೂ ಆತನ ಧರ್ಮಪತ್ನಿ ರೇಚವ್ವೆ ಶಿವಭಕ್ತಿ ಸಂಪನ್ನರು. ಇವರು ಶಿವಾನುಭವ ಸದ್ಗೋಷ್ಠಿಗಳಲ್ಲಿ ಭಾಗವಹಿಸಿ ಲಿಂಗಭಕ್ತಿಯಲ್ಲಿ ನಿರತರಾಗಿ ಗುಪ್ತಭಕ್ತಿಯುಳ್ಳವರಾಗಿದ್ದರು. ಕನ್ನಪ್ಪ ಅಂದಂದಿಗೆ ಹಿಡಿದ ಮೀನುಗಳನ್ನು ಅಂದಂದೇ ಮಾರಿ ಬಂದ ಹಣದಿಂದ ಜಂಗಮ ಸೇವೆ ಮಾಡುತ್ತಿದ್ದ. ಒಮ್ಮೆ ಈತನಿಗೆ ಗಣಾರಾಧನೆ ಮಾಡಬೇಕೆಂಬ ಅಭಿಲಾಷೆಯಾಯಿತು. ಅಂದು ಲಿಂಗಪೂಜೆಗೆ ಕುಳಿತಾಗ ಅಗೋಚರವಾಗಿ ಒಂದು ದನಿ ನಿನಗೇನು ಬೇಕು – ಎಂದಂತಾಯಿತು. ಕೂಡಲೆ ಕನ್ನಪ್ಪ ಸ್ವರ್ಣಮತ್ಸ್ಯ – ಎನ್ನಲಾಗಿ, ಹಾಗೆಯೇ ಆಗಲಿ ಎಂದು ಉತ್ತರವೂ ಬಂತು.

ನಿತ್ಯದ ಕಾಯಕದಂತೆ ಕನ್ನಪ್ಪ ಅಂದು ತ್ರಿಪುರಾಂತಕ ಕೆರೆಯಲ್ಲಿ ಗಾಳ ಹಾಕಿದ್ದಾಗ ಚಿನ್ನದ ಮೀನೇ ಅದಕ್ಕೆ ತಗಲಿಕೊಂಡಿತು. ಸಂತೋಷಗೊಂಡ ಕನ್ನಪ್ಪ ಅದನ್ನು ಮಾರಿ ಹೆಚ್ಚು ಹಣ ಪಡೆದು ಶಿವಾನುಭವ ಮಂಟಪಕ್ಕೆ ಹೋಗಿ ಜಂಗಮಮೂರ್ತಿಗಳನ್ನು ತನ್ನ ಮನೆಗೆ ದಾಸೋಹಕ್ಕೆ ಬರಬೇಕೆಂದು ಪ್ರಾರ್ಥಿಸಿದ. ಬಿನ್ನಹದಂತೆ ಜಂಗಮರು ಸಕಾಲಕ್ಕೆ ಈತನ ಮನೆಗೆ ಬರಲಾಗಿ ಅಲ್ಲಿದ್ದ ಸತ್ತ ಮೀನುಗಳು ಹಾಗೂ ಅಲ್ಲಿಯ ವಾಸನೆಯನ್ನು ಸಹಿಸಲಾರದೆ ಅಸಹ್ಯಪಟ್ಟು ಹಿಂದಿರುಗಿದರು. ಅವರನ್ನು ಮತ್ತೆ ಕರೆತರಲು ಬಸವಸದನಕ್ಕೆ ಹೋದಾಗ ಅವರೆಲ್ಲ ಕನ್ನಪ್ಪನಿಗೆ ಛೀಮಾರಿಹಾಕಿ ಕಳುಹಿಸಿದರು.

ಇತ್ತ, ಜಂಗಮರು ಬಸವಸದನದಲ್ಲಿ ಭೋಜನಕ್ಕೆ ಮುನ್ನ ಲಿಂಗಪೂಜೆಗಾಗಿ ತಮ್ಮ ಕರಡಿಗೆಗಳನ್ನು ಬಿಚ್ಚಿದಾಗ ಸೆಜ್ಜೆಯಲ್ಲಿ ಯಾರ ಲಿಂಗವೂ ಕಾಣಲಿಲ್ಲ. ಅವರೆಲ್ಲ ನಡುಗಿಹೋದರು. ಇದನ್ನು ಕಂಡ ಬಸವೇಶ ಅವರಿಂದ ವಿಚಾರ ತಿಳಿದು ತಾನೇ ಕನ್ನಪ್ಪನ ಮನೆಗೆ ಬಂದು, ಜಂಗಮರ ತಪ್ಪನ್ನು ಮನ್ನಿಸುವಂತೆ ಬೇಡಿಕೊಂಡು, ಜಂಗಮರ ಇಷ್ಟಲಿಂಗಗಳನ್ನು ಕರುಣೆಯಿಟ್ಟು ಹಿಂದಿರುಗಿಸಬೇಕೆಂದು ಪ್ರಾರ್ಥಿಸಿದ.

ಬಸವೇಶನಿಂದ ವಿಚಾರ ತಿಳಿದ ಕನ್ನಪ್ಪ ಅವರನ್ನೆಲ್ಲ ತ್ರಿಪುರಾಂತಕ ಕೆರೆಯ ಬಳಿಗೆ ಬರಹೇಳಿ, ಅಲ್ಲಿ ಕುಳಿತು ಧ್ಯಾನಾಸಕ್ತನಾದ. ಆಗ ಕಳೆದುಹೋದ ಇಷ್ಟಲಿಂಗಗಳು ನೀರಿನಲ್ಲಿ ತೇಲಿಬಂದವು. ಜಂಗಮರು ತಂತಮ್ಮ ಇಷ್ಟಲಿಂಗಗಳನ್ನು ಪಡೆದು ಕನ್ನಪ್ಪನನ್ನು ಸ್ತುತಿಸಿ ಹಿಂತಿರುಗಿದರು. ಕನ್ನಪ್ಪನ ವಚನಗಳಿಗೆ ಒಂದು ಉದಾ :

ಪುಣ್ಯ ಪಾಪವಿಲ್ಲಾಗಿ ಯಮನ ಹಂಗಿಲ್ಲ
ಬಂದುದನುಂಬನಾಗಿ ಮಾನವರ ಹಂಗಿಲ್ಲ
ಭವಗೆಟ್ಟವನಾಗಿ ದೈವದ ಹಂಗಿಲ್ಲ
ಸತ್ಯಜ್ಞಾನಾನಂದವೆ ತಾನಾಗಿ ಇನ್ನಾರ ಹಂಗಿಲ್ಲ
ಇನ್ನಾರ ಹಂಗಿಲ್ಲದಾತ ಗುಹೇಶ್ವರನಲ್ಲಯ್ಯನೊಬ್ಬನೆ. *

**ಗಾತರು :** ಟ್ಯೂಟನ್ ಜನಾಂಗಕ್ಕೆ ಸೇರಿದ ಮತ್ತು ಪ್ರ.ಶ. 1ನೆಯ ಶತಮಾನದಲ್ಲಿ ವಿಸ್ಟುಲ ನದಿಯ ತೀರದಲ್ಲಿ ವಾಸಿಸುತ್ತಿದ್ದ ವಿವಿಧ ಜರ್ಮ್ಯಾನಿಕ್ ಪಂಗಡಗಳ ಒಕ್ಕೂಟದ ಜನಾಂಗ. ಕ್ರೈಸ್ತ ಧರ್ಮ ಸ್ವೀಕರಿಸಿದ ಪ್ರಥಮ ಜರ್ಮ್ಯಾನಿಕರೆಂದೂ ಇವರನ್ನು ಗುರುತಿಸುತ್ತಾರೆ. ಜನಾಂಗವನ್ನು ಸ್ಥೂಲವಾಗಿ ಗಾತರೆಂದು ಕರೆಯಬಹುದು. ಯುರೋಪಿನ ಇತಿಹಾಸದಲ್ಲಿ ಮಹತ್ತರ ಪಾತ್ರವನ್ನು ವಹಿಸಿದ ಇವರ ಉಗಮ, ಪೂರ್ವ ಚರಿತ್ರೆ ಮುಂತಾದ ವಿಷಯಗಳ ಬಗ್ಗೆ ಚಾರಿತ್ರಿಕ ಅಂಶಗಳಿಗಿಂತ ಕಥೆಗಳೇ ಹೆಚ್ಚು. ಗಾತ್ ಜನಾಂಗದವರಲ್ಲಿ ಪ್ರಚಲಿತವಾದ ಪರಂಪರಾಗತ ನಂಬಿಕೆಯ ಪ್ರಕಾರ ಸ್ಯಾಂಡ್ಜ಼ ದ್ವೀಪ ಇವರ ಮೂಲನಿವಾಸ. ಅಲ್ಲಿಂದ ವಲಸೆ ಹೊರಟು ಗಾತಿಸ್ಕಾಂಡ್ಜ಼ ಎಂಬಲ್ಲಿ ಮೊಟ್ಟಮೊದಲು ನೆಲಸಿದರು. ಅನಂತರ ಇವರು ಪಾಮರೇನಿಯದ ಸಮೀಪದಲ್ಲಿದ್ದ ಅನೇಕ ಜನಾಂಗಗಳನ್ನು ಸೋಲಿಸಿ ತಮ್ಮ ಸ್ಥಾನವನ್ನು ಭದ್ರಪಡಿಸಿ ಕೊಂಡರು.

ಪ್ರಾಚೀನ ಸಾಹಿತ್ಯದಲ್ಲಿ ಗಾತರ ಹೆಸರು ಮೊಟ್ಟಮೊದಲಿಗೆ ಕಂಡುಬರುವುದು ಪ್ರಚಲಿತಶಕೆಯ ಆರಂಭ ವರ್ಷಗಳಲ್ಲಿ. ಅದಕ್ಕಿಂತ ಮುಂಚೆ ಇವರ ಸ್ಥಿತಿಗತಿಗಳು ನಮಗೆ ತಿಳಿದು ಬರುವುದಿಲ್ಲ. ಪ್ರಚಲಿತಶಕೆಯ ಆರಂಭ ವರ್ಷಗಳಲ್ಲಿ ಮ್ಯಾರೊಬಾಡ್ಯೂಸ್ ರಾಜನ ಆಳ್ವಿಕೆಗೆ ಇವರು ಒಳಪಟ್ಟಿದ್ದರೆಂದು ತಿಳಿದುಬರುತ್ತದೆ. ಪ್ರ.ಶ.ಸು.3ನೆಯ ಶತಮಾನದ ಸಮಯದಲ್ಲಿ ರೋಮನ್ ಇತಿಹಾಸದಲ್ಲೂ ಗಾತರ ಪಾತ್ರ ಪ್ರಾರಂಭ ವಾಗುತ್ತದೆ. ಆ ಸಮಯಕ್ಕೆ ಇವರು ತಮ್ಮ ರಾಜ್ಯವನ್ನು ಸಾಕಷ್ಟು ವಿಸ್ತರಿಸಿ ಡ್ಯಾನ್ಯೂಬ್ ನದಿಯ ಕೆಳಪಾತ್ರದವರೆಗೂ ಆಗಾಗ್ಗೆ ನುಗ್ಗುತ್ತಿದ್ದರು. ಚಕ್ರವರ್ತಿ ಗಾರ್ಡಿಯನ್ ಗಾತರನ್ನು ಸೋಲಿಸಿದ್ದ. ಆದರೆ ಅವನ ಅನಂತರ ಬಂದ ಚಕ್ರವರ್ತಿಗಳಲ್ಲಿ ಒಬ್ಬನಾದ ಡೇಷಿಯಸ್ (201–251) ಗಾತರಿಂದ ಕೊಲ್ಲಲ್ಪಟ್ಟ. ಚಕ್ರವರ್ತಿ ಗ್ಯಾಲಿಯೀನಸ್ (ಮರಣ.268) ಗಾತರಿಗೆ ಕಪ್ಪಕಾಣಿಕೆ ಕೊಡಬೇಕಾಯಿತು. ಪ್ರ.ಶ.ಸು. 321ರಲ್ಲಿ ಚಕ್ರವರ್ತಿ ಕಾನ್‌ಸ್ಟಂಟೈನ್ (280–337) ಗಾತರನ್ನು ಈ ಪ್ರದೇಶಗಳಿಂದ ಹೊಡೆದೋಡಿಸಿ, ಗಾತರ ರಾಜನಾಗಿದ್ದ ಅರಿಯಾರಿಕನೊಡನೆ ಮೈತ್ರಿ ಬೆಳೆಸಿದ. ಗಾತರು ದಕ್ಷಿಣ ಮತ್ತು ಪೂರ್ವ ಭಾಗಗಳಲ್ಲಿ ತಮ್ಮ ಬಲವನ್ನು ಹೆಚ್ಚಿಸಿಕೊಂಡ ಮೇಲೆ ತಮ್ಮ ಮೂಲವಾಸಸ್ಥಾನದೊಡನೆ ಸಂಪರ್ಕ ಕಳೆದುಕೊಂಡರು.

ಪ್ರಾಚೀನ ಗಾತ್ ರಾಜರಲ್ಲಿ ಅತ್ಯಂತ ಮುಖ್ಯನಾದವನು ಹೆರ್ಮಾನರಿಕ್. ಇವನ ಶೌರ್ಯ ಸಾಧನೆಗಳನ್ನು ಕುರಿತು ಅನೇಕ ಕಟ್ಟು ಕಥೆಗಳು ಹುಟ್ಟಿಕೊಂಡಿವೆ. ಇವನು ಹೆರೂಲಿ, ಏಸ್ಟೈ, ವೆನೆಡಿ ಮತ್ತು ಇನ್ನೂ ಅನೇಕ ದಕ್ಷಿಣ ರಷ್ಯನ್ ಅನಾಗರಿಕ ಬುಡಕಟ್ಟು ಜನರನ್ನು ಸೋಲಿಸಿದ. ಇವನ ರಾಜ್ಯ ಪಶ್ಚಿಮದಲ್ಲಿ ಹೋಲ್‌ಸ್ಟೈನ್‌ವರೆಗೆ ಹಬ್ಬಿತ್ತು. 370ರಲ್ಲಿ ಹೂಣರು ಆಸ್ಟ್ರೋಗಾತ್ ರಾಜ್ಯದ ಮೇಲೆ ಧಾಳಿ ನಡೆಸಿ ಬಹಳ ಕಷ್ಟನಷ್ಟಗಳಿಗೆ ಕಾರಣರಾದರು. ಇದರಿಂದ ದು:ಖಿತನಾದ ಹೆರ್ಮಾನರಿಕ್ ಆತ್ಮಹತ್ಯೆ ಮಾಡಿಕೊಂಡ. ಅನಂತರ ಆಸ್ಟ್ರೋಗಾತ್ ರಾಜ್ಯ ಹೂಣರ ವಶವಾಯಿತು.

ಇದಾದ ಅನಂತರ ಗಾತರಲ್ಲಿ ಪೂರ್ವದ ಗಾತರು ಮತ್ತು ಪಶ್ಚಿಮದ ಗಾತರು ಎಂಬ ವ್ಯತ್ಯಾಸ ಹೆಚ್ಚು ತೀವ್ರವಾಗಿ ಕಾಣಬರುತ್ತದೆ. ಪ್ರ.ಶ.376ರಲ್ಲಿ ಪಶ್ಚಿಮ ಗಾತರು ಫ್ರಿತಿಜೆರ್ನ್ ಎಂಬ ನಾಯಕನ ನೇತೃತ್ವದಲ್ಲಿ ಡ್ಯಾನ್ಯೂಬ್ ನದಿಯನ್ನು ದಾಟಿ ರೋಮನ್ ಚಕ್ರಾಧಿಪತ್ಯದ ಪ್ರಾಂತ್ಯವಾದ ಮೀಷಿಯಕ್ಕೆ ನುಗ್ಗಿದರು. ಸ್ವಲ್ಪ ಕಾಲದ ಅನಂತರ ಇವರಿಗೂ ಅಲ್ಲಿಯ ಮೂಲ ಜನಕ್ಕೂ ಕಲಹಗಳು ಪ್ರಾರಂಭವಾದುವು. 378ರ ವೇಳೆಗೆ ಇಲ್ಲಿ ಪಶ್ಚಿಮ ಗಾತರು ಪ್ರಬಲರಾದರು. ಅನಂತರ ಚಕ್ರವರ್ತಿ ತೀಯೊಡೋ ಷಿಯಸ್ (346–395) ಗಾತರೊಡನೆ ಸಖ್ಯ ಬೆಳೆಸಿದ. ಬಹು ಮಂದಿ ಗಾತ್ ವೀರರು ರೋಮನ್ ಚಕ್ರಾಧಿಪತ್ಯದಲ್ಲಿ ಸಾಮಂತರಾದರು. ತೀಯೊಡೋಷಿಯಸ್ 395ರಲ್ಲಿ ಮರಣ ಹೊಂದಿದ ಮೇಲೆ ರೋಮನ್ ಚಕ್ರಾಧಿಪತ್ಯಕ್ಕೂ ಗಾತರಿಗೂ ಇದ್ದ ಸಖ್ಯ ನಾಶವಾಯಿತು. ಗಾತರು ತಮ್ಮ ಸಾಮಂತಸ್ಥಾನವನ್ನು ತ್ಯಜಿಸಿ ಅಲರಿಕನನ್ನು ತಮ್ಮ ರಾಜನನ್ನಾಗಿ ಮಾಡಿಕೊಂಡರು. ಇವನ ಕಾಲದಲ್ಲಿ ಅವರು ಸ್ವತಂತ್ರವಾಗಿ ಆಳಲು ಪ್ರಾರಂಭ ಮಾಡಿದರೂ ಅವರು ಎಲ್ಲಿಯೂ ನೆಲೆಯಾಗಿ ನಿಲ್ಲಲಿಲ್ಲ. ಅಲರಿಕ್ 395–96 ರಲ್ಲಿ ಗ್ರೀಸಿನ ಮೇಲೆ ದಂಡೆತ್ತಿ ಹೋದ. ಸು. 409–10ರಲ್ಲಿ ರೋಮ್ ನಗರವನ್ನು ಮುತ್ತಿ ಈ ನಗರವನ್ನು ನಾಶಮಾಡಿದ.

ಅಲರಿಕನ ಅನಂತರ ಅಟಾಲ್ಫ್ ಗಾತರ ರಾಜನಾದ. ರೋಮನ್ ಸಾಮ್ರಾಜ್ಯವನ್ನು ನಾಶಮಾಡಿ ಅದರಷ್ಟೇ ಪ್ರಮುಖವಾದ ಗಾತಿಕ್ ಸಾಮ್ರಾಜ್ಯವನ್ನು ಕಟ್ಟಬೇಕೆನ್ನುವುದೇ ಇವನ ಮುಖ್ಯ ಉದ್ದೇಶವಾಗಿತ್ತು. ತೀಯೊಡೋಷಿಯಸನ ಮಗಳಾದ ಪ್ಲೇಸಿಡಿಯಳನ್ನು ವಿವಾಹವಾದ. ಇದರಿಂದ ಗಾತರೂ ರೋಮನ್ನರೂ ಒಂದಾಗುವ ಅವಕಾಶವೂ ಇತ್ತು. ಆದರೆ ಇವರ ಮಗ ಬಾಲ್ಯದಲ್ಲೆ ಮರಣ ಹೊಂದಿದ. ಅಷ್ಟೇ ಅಲ್ಲದೆ 415ರಲ್ಲಿ ಅಟಾಲ್ಫನ ಕೊಲೆಯಾಯಿತು. ಹೀಗಾಗಿ ಅವನ ಆಸೆಗಳು ನೆರವೇರಲಿಲ್ಲ. ಇವನ ಅನಂತರ ವಾಲ್ಲಿಯ ಗಾತರ ರಾಜನಾದ. ಇವನ ಕಾಲದಲ್ಲಿ ಗಾತರ ಸಾಮ್ರಾಜ್ಯ ವಿಸ್ತಾರವಾಯಿತು. ವಾಲ್ಲಿಯನ ಅನಂತರ 1ನೆಯ ತೀಯೊಡೋರಿಕ್ ರಾಜನಾದ. ಇವನ ಕಾಲದಲ್ಲಿ ಹೂಣರ ಧಾಳಿಗಳನ್ನು ಎದುರಿಸುವ ಸಲುವಾಗಿ ರೋಮನ್ನರೂ ಗಾತರೂ ಒಟ್ಟುಗೂಡಿದರು. ಆದರೆ ಹೂಣರ ಸೈನ್ಯದಲ್ಲಿ ಪೂರ್ವ ಗಾತರನ್ನು ಇವರು ಎದುರಿಸಬೇಕಾಯಿತು. ಈ ಯುದ್ಧದಲ್ಲಿ ತೀಯೊಡೋರಿಕ್ ಮರಣ ಹೊಂದಿದ. ಇದರಿಂದ ಪಶ್ಚಿಮ ಗಾತರ ರಾಜ್ಯ ಗಾಲ್ ಪ್ರದೇಶಕ್ಕೆ ಮಾತ್ರ ಸೀಮಿತಗೊಳ್ಳುವಂತಾಯಿತು. ಪಶ್ಚಿಮ ಗಾತರು ರೋಮನ್ನರ ಸಂಸ್ಕೃತಿಯನ್ನು ಅನುಸರಿಸಿದರೂ ಕೆಥೊಲಿಕ್ ಜನಕ್ಕೆ ಅವರ ಧರ್ಮ ಹಿಡಿಸಲಿಲ್ಲ. ಹೀಗಾಗಿ ಪಶ್ಚಿಮ ಗಾತರು ತಮ್ಮ ಪ್ರಭಾವವನ್ನು ಹೆಚ್ಚು ಕಾಲ ಸ್ಪೇನಿನಲ್ಲಿ ಉಳಿಸಿಕೊಳ್ಳುವುದು ಕಷ್ಟವಾಯಿತು.

ಹೂಣರ ರಾಜ ಆಟ್ಟಿಲನ ಮರಣಾನಂತರ ಹೂಣರಲ್ಲಿ ಒಗ್ಗಟ್ಟು ಕಡಿಮೆಯಾಯಿತು. ಇದೇ ತಕ್ಕ ಸಮಯವೆಂದು ಪೂರ್ವ ಗಾತರು ಸ್ವತಂತ್ರ್ಯರಾದರು. ಪ್ರ.ಶ. 5ನೆಯ ಶತಮಾನದ ಕೊನೆಯಲ್ಲಿ ಪೂರ್ವಗಾತರ ರಾಜನಾದ ತೀಯೊಡೋರಿಕ್ ಈ ವಂಶದಲ್ಲಿ ಅತ್ಯಂತ ಶ್ರೇಷ್ಠನೂ ಸಮರ್ಥನೂ ಆದ ವ್ಯಕ್ತಿ. ಸುಮಾರು 493ರ ಸಮಯಕ್ಕೆ ಪೂರ್ವ ಗಾತ್ ಸಾಮ್ರಾಜ್ಯಕ್ಕೆ ಇಟಲಿ, ಸಿಸಿಲಿ ಮುಂತಾದ ಪ್ರದೇಶಗಳೂ ಸೇರಿಕೊಂಡುವು. ಇವನ ದಕ್ಷ ಆಡಳಿತದಲ್ಲಿ ಪೂರ್ವ ಮತ್ತು ಪಶ್ಚಿಮ ಗಾತರು ಸ್ವಲ್ಪ ಕಾಲ ಒಟ್ಟಿಗೆ ಸೇರಿದರು. ತೀಯೊಡೋರಿಕ್ ರಾಜನ ಮಗಳನ್ನು ವಿಸಿಗಾತ್ ರಾಜ ಎರಡನೆಯ ಅಲರಿಕ ಮದುವೆಯಾದ. ಇದರಿಂದ ಈ ಎರಡು ಮನೆತನಗಳಿಗೂ ಬಾಂಧವ್ಯ ಬೆಳೆಯಿತು. ತೀಯೊಡೋರಿಕ್ ರಾಜನ ಕಾಲದಲ್ಲಿ ಪೂರ್ವ ಗಾತಿಕ್ ಸಾಮ್ರಾಜ್ಯ ಸುಸಂಸ್ಕೃತವಾಯಿತು. ಗಾತಿಕ್ ಸಾಮ್ರಾಜ್ಯದ ಮೇಲೆ ರೋಮನ್ ಚಕ್ರಾಧಿಪತ್ಯದ ಪ್ರಭಾವ ವಿಶೇಷವಾಯಿತು. ಆದರೆ 526ರಲ್ಲಿ ತೀಯೊಡೋರಿಕ್ ಮರಣ ಹೊಂದಲು ಪೂರ್ವ ಮತ್ತು ಪಶ್ಚಿಮ ಗಾತ್ ರಾಜ್ಯಗಳು ಬೇರ್ಪಟ್ಟುವು. ಸ್ಪೇನಿನಲ್ಲಿ ಅಮಲರಿಕ್ ಎಂಬುವನು ಪಶ್ಚಿಮ ಗಾತರ ರಾಜನಾದ. ಪೂರ್ವಗಾತರು ಸ್ವಲ್ಪ ಕಾಲದಲ್ಲೇ ಅವನತಿ ಹೊಂದಿದರು.

ಪಶ್ಚಿಮ ಗಾತ್ ಸಾಮ್ರಾಜ್ಯ ಹೆಚ್ಚು ಕಾಲ ಬಾಳಿತು. ಲಿಯೋವಿಜಿಲ್ಡ್ ಎಂಬಾತ 568 ರಿಂದ 586ರ ವರೆಗೆ ಆಳಿದ. ಈತ ಗಾತ್ ಸಮ್ರಾಜ್ಯದ ದೊರೆಗಳಲ್ಲಿ ಅತ್ಯಂತ ಶ್ರೇಷ್ಠನಾದವ. ಇವನು ಗಾಲ್ ಮತ್ತು ಸ್ಪೇನ್ ಪ್ರಾಂತ್ಯಗಳನ್ನು ಒಟ್ಟುಗೂಡಿಸಿದ. ಅನೇಕ ಸಣ್ಣಪುಟ್ಟ ರಾಜರನ್ನು ಸೋಲಿಸಿ ತನ್ನ ರಾಜ್ಯವನ್ನು ವಿಸ್ತರಿಸಿದ. ಇವನ ಮಗ ರೆಕಾರಡನ ಕಾಲದಲ್ಲಿ ಬಹುಮಂದಿ ಗಾತರು ಕೆಥೊಲಿಕ್ ಧರ್ಮವನ್ನು ಅನುಸರಿಸಲು ಪ್ರಾರಂಭಿಸಿದರು. ಇದರಿಂದ ರೋಮನ್ನರಿಗೂ ಗಾತರಿಗೂ ಧಾರ್ಮಿಕ ಸಮಾನತೆ ಯುಂಟಾಯಿತು. ಇದಾದಮೇಲೆ ಗಾತರ ಮೇಲೆ ರೋಮನ್ನರ ಪ್ರಭಾವ ವಿಶೇಷವಾಗ ತೊಡಗಿತು. ಕಾಲಕ್ರಮದಲ್ಲಿ ಗಾತ್ ಎನ್ನುವ ಪದವೂ ಮರೆತುಹೋಗುವಂತೆ ರೋಮನ್ ಸಂಸ್ಕೃತಿಯಲ್ಲಿ ಗಾತರು ಸೇರಿ ಹೋದರು. ಮಧ್ಯ ಯುರೋಪಿನಲ್ಲಿ ಸು. 8 ಶತಮಾನಗಳ ಕಾಲ ಪ್ರಭಾವಯುತರಾಗಿದ್ದ ಗಾತರು ಅವನತಿ ಹೊಂದಿದರು. ಅದರೆ ಸ್ಪೇನಿನಲ್ಲಿ ಅವರ ಪ್ರಭಾವ ವಿಶೇಷವಾಗಿ ಕಂಡುಬರುತ್ತದೆ. (ಎಚ್.ಆರ್.ಡಿ.; ಎ.ವಿ.ಎನ್.)

**ಗಾತಿಕ್ ಕಲೆ :** ಪ್ರ.ಶ. 12ನೆಯ ಶತಮಾನದಿಂದ 15ನೆಯ ಶತಮಾನದವರೆಗೆ ಯುರೋಪಿನ ವಿವಿಧ ಭಾಗಗಳಲ್ಲಿ ಪ್ರಸಿದ್ಧವಾಗಿದ್ದ ಕಲಾ ಸಂಪ್ರದಾಯ. ಜರ್ಮನಿಯ ಗಾತ್ ಎಂಬ ಬುಡಕಟ್ಟಿಗೆ ಸೇರಿದ ಜನ ರೋಮನ್ ಸಾಮ್ರಾಜ್ಯವನ್ನು ಗೆದ್ದು ರೋಮನರ ಅನೇಕ ಕಟ್ಟಡಗಳನ್ನೂ ಶಿಲ್ಪಗಳನ್ನೂ ನಾಶಮಾಡಿದರು. ಈ ಜನ ಅನಾಗರಿಕರೆಂದೂ ಅಭಿಜಾತ ರೋಮನ್ ಮತ್ತು ಗ್ರೀಕ್ ಸಂಪ್ರದಾಯಗಳನ್ನು ಅರಿಯದವರೆಂದೂ ಭಾವಿಸಿದ್ದ ಕೆಲವರು ಈ ಕಾಲದಲ್ಲಿ ಬೆಳೆದುಬಂದ ಕಲೆಯನ್ನು ಗಾತಿಕ್ ಕಲೆ ಎಂದು ಕರೆದರು. ಒರಟರೂ ಅನಾಗರಿಕರೂ ಆದ ಜನಗಳ ಕಲೆಯೆಂಬ ತಾತ್ಸಾರ ಭಾವನೆಯಿಂದ ಈ ಪದ ಮೊದಲು ಬಳಕೆಗೆ ಬಂದಂತೆ ಕಾಣುತ್ತದೆ. ಕಾಲಕ್ರಮದಲ್ಲಿ ಈ ಕಲೆಯ ಅವಶೇಷಗಳ ಪೂರ್ಣ ಅಧ್ಯಯನವಾದ ಮೇಲೆ ಈ ತಾತ್ಸಾರ ಮನೋಭಾವ ಮಾಯವಾಗಿ ಗಾತಿಕ್ ಕಲೆ ತನ್ನದೇ ಆದ ವೈಶಿಷ್ಟ್ಯಗಳನ್ನು ಹೊಂದಿದೆಯೆಂದೂ ಯುರೋಪಿನ ಕಲೆಗೆ ಇದರ ಕೊಡುಗೆ ಮಹತ್ತರವಾದುದೆಂದೂ ಜನ ಅರಿತರು. ಗಾತಿಕ್ ಸಂಪ್ರದಾಯ ಮಧ್ಯ ಫ್ರಾನ್ಸ್ ದೇಶದಲ್ಲಿ ಪ್ರ.ಶ. 12ನೆಯ ಶತಮಾನದಲ್ಲಿ ಪ್ರಾರಂಭವಾಗಿ 13, 14 ಮತ್ತು 15ನೆಯ ಶತಮಾನಗಳಲ್ಲಿ ಯುರೋಪಿನ ವಿವಿಧ ಭಾಗಗಳಿಗೆ ಹರಡಿತು. ಅನಂತರ ಪುನರುಜ್ಜೀವನ ಕಲೆ ಉಚ್ಛ್ರಾಯ ಸ್ಥಿತಿಗೆ ಬಂದ ಮೇಲೆ ಆ ಸಂಪ್ರದಾಯ ನಶಿಸಿ ಹೋಯಿತು.



**ಕನ್ಯಾಮೇರಿ ಮತ್ತು ಶಿಶು ಕ್ರಿಸ್ತ. ಲೀಯಾನ್ ನಗರದ ಕತೀಡ್ರಲಿನ ಒಂದು ಶಿಲ್ಪ. 13ನೆಯ ಶತಮಾನ. ಸ್ಪ್ಯಾನಿಷ್ ಶೈಲಿ**

ವಾಸ್ತು ವಿಭಾಗಕ್ಕೆ ಸೇರಿದಂತೆ ಈ ಕಲೆಯ ವೈಶಿಷ್ಟ್ಯಗಳು ಹೀಗಿವೆ. ಅಡ್ಡಡ್ಡಲಾಗಿದ್ದ ಕಟ್ಟಡಗಳು ಉದ್ದುದ್ದವಾಗಿಯೂ ಚೂಪಾಗಿಯೂ ಬೆಳೆದದ್ದು ಈ ಕಾಲದಲ್ಲಿ. ಉದ್ದನೆಯ ಮತ್ತು ತೆಳುವಾದ ಕಂಬಗಳ ಆಸರೆಯಿಂದ ಚೂಪಾದ ಕಮಾನುಗಳನ್ನು ತಯಾರಿಸಿರುವುದು ಇನ್ನೊಂದು ವೈಶಿಷ್ಟ್ಯ. ಮರದಿಂದ ಚಾವಣಿ ಗಳನ್ನು ಮಾಡುವ ತಂತ್ರಕ್ಕೆ ಬದಲಾಗಿ ಕಲ್ಲನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಲು ಪ್ರಾರಂಭವಾದುದೂ ಈ ಕಾಲದಲ್ಲೇ. ಚೂಪಾದ ಗೋಪುರಗಳು ವಿಶೇಷವಾಗಿ ಬಳಕೆಗೆ ಬಂದುದರಿಂದ ಈ ಕಾಲದ ಕಟ್ಟಡಗಳಿಗೆ ಒಂದು ರೀತಿಯ ವಿಶಿಷ್ಟ ಸೌಂದರ್ಯ ಬಂತು. ಗಾತಿಕ್ ಕಲೆ ಅಭಿವೃದ್ಧಿಯಾದಂತೆ ಅಲಂಕರಣ ಕಾರ್ಯ ವಿಶೇಷವಾಗತೊಡಗಿತು. ರೋಮನೆಸ್ಕ್ ಕಲೆಗಿಂತ ಭಿನ್ನವಾದ ರೀತಿಯಲ್ಲಿ ಈ ಅಲಂಕರಣ ವಿನ್ಯಾಸ ವ್ಯಾಪಕವಾಗಿ ಬೆಳೆದು ಬಂತು. ಇದು ಎಷ್ಟೊಂದು ವಿಸ್ತಾರವಾಗಿ ಬೆಳೆಯಿತೆಂದರೆ, ಇದನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳುವುದೇ ಕಷ್ಟವಾಯಿತು. ರೋಮನೆಸ್ಕ್ ಕಲೆಯ ವೃತ್ತಾಕಾರದ ಚಿಹ್ನೆಗಳ ಜೊತೆಗೆ ಜ್ಯಾಮಿತಿಯ ವಿವಿಧ ಚಿಹ್ನೆಗಳು ವಿಶೇಷವಾದುವು. ಇವುಗಳ ಜೊತೆಗೆ ಲತೆಗಳು, ಬಳ್ಳಿಗಳು, ಎಲೆಗಳು ಮತ್ತು ಹೂಗಳ ಅಲಂಕರಣ ವಿಶೇಷವಾದುವು. ಜೊತೆಯಲ್ಲಿಯೇ ವಿಚಿತ್ರವಾದ ಪ್ರಾಣಿಗಳ ಪಿಶಾಚಿಗಳ ಮತ್ತು ಪೌರಾಣಿಕ ಪ್ರಾಣಿಗಳ ಅಲಂಕಾರವೂ ಗೋಡೆಗಳ ಮೇಲೆ ಕಾಣಬಂದುವು. ಇವುಗಳಿಂದ ಗಾತಿಕ್ ಕಲೆಯ ಅಲಂಕಾರ ಒಂದು ವಿಚಿತ್ರ ರೀತಿಯದೆಂದು ಪ್ರಸಿದ್ಧವಾಯಿತು.



**ಮಾರ್ಟಿನ್ ಮತ್ತು ಜೆರೋಮ್ ಸಂತರ ಮೂರ್ತಿಗಳು 1220–39. ಫ್ರೆಂಚ್ ಶಿಲ್ಪ**

ಬಣ್ಣದ ಗಾಜುಗಳ ಬಳಕೆ ಗಾತಿಕ್ ಕಲೆಯ ಮತ್ತೊಂದು ವೈಶಿಷ್ಟ್ಯ. ಕಟ್ಟಡಗಳು ಕಿಟಕಿಗಳಿಗೆ ವಿವಿಧ ಆಕಾರಗಳ ಮತ್ತು ವಿಧವಿಧವಾದ ಬಣ್ಣಗಳ ಗಾಜು ಗಳನ್ನು ಅಳವಡಿಸಲಾಯಿತು. ಈ ಬಣ್ಣದ ಗಾಜುಗಳು ಬೆಳಕನ್ನು ಪ್ರತಿಬಿಂಬಿಸಿ ಕಟ್ಟಡಗಳ ಒಳಭಾಗ ವನ್ನು ಒಂದು ರೀತಿಯ ಮಾಯಾ ಜಾಲಗಳಂತೆ ಮಾಡಿದುವು. ಗೋಡೆಗಳ ಮೇಲೆ ವರ್ಣಚಿತ್ರ ಗಳೂ, ಶಿಲ್ಪಗಳೂ ವಿಶೇಷವಾದವು. ಕೆತ್ತನೆಯ ಕೆಲಸ ಈ ಕಾಲದಲ್ಲಿ ನಿಜವಾದ ಕಲೆಯೆನಿಸಿತು. ಕಲ್ಲು, ಮರ, ದಂತ ಮೊದಲಾದ ವಸ್ತು ಗಳಲ್ಲಿ ಮಾಡಿದ ಶಿಲ್ಪಗಳು ಕಿಟಕಿಯ ಗೂಡುಗಳಲ್ಲಿ, ಬಾಗಿಲುವಾಡದ ಮೇಲ್ಭಾಗಗಳಲ್ಲಿ ವಿಶೇಷವಾದವು. ಇವುಗಳು ಮಾತ್ರವಲ್ಲದೆ, ಕಿಟಕಿಯ ಮತ್ತು ಬಾಗಿಲಿನ ಕೊಂಡಿಗಳು, ಚಿಲಕಗಳು, ಬೀಗಗಳು ಈ ಮೊದಲಾದವು ಕೂಡ ಕಲಾತ್ಮಕವಾಗಿದ್ದು, ಎಲ್ಲೆಲ್ಲೂ ಕಲೆಯ ಉತ್ಕರ್ಷವನ್ನು ತೋರಿದುವು. ಇವುಗಳ ಜೊತೆಗೆ ದಿನಬಳಕೆಯ ವಸ್ತುಗಳಾದ, ಮಂಚ, ಕುರ್ಚಿ, ಮೇಜು ಮುಂತಾದವೂ ಉಪಯುಕ್ತವಷ್ಟೇ ಅಲ್ಲದೆ ನಿಜವಾದ ಕಲಾವಸ್ತುಗಳೇ ಆದವು. ಸ್ಯಾಲಿಸ್‌ಬರಿ, ಲಿಂಕನ್ ಮತ್ತು ಕ್ಯಾಂಟರ್‌ಬರಿಗಳಲ್ಲಿರುವ ಕತೀಡ್ರಲ್‌ಗಳಲ್ಲಿ ಉಳಿದು ಬಂದಿರುವ ಈ ವಸ್ತುಗಳಿಂದ ಗಾತಿಕ್ ಕಲೆಯ ಅಲಂಕಾರದ ಸ್ವರೂಪ ನಮಗೆ ವ್ಯಕ್ತವಾಗುತ್ತದೆ.

ಗಾತಿಕ್ ಕಲಾವಸ್ತುಗಳಲ್ಲಿ ಅಲಂಕೃತ ಬಟ್ಟೆಗಳೂ ಪೀಠೋಪಕರಣಗಳನ್ನು ಮುಚ್ಚಲು ಉಪಯೋಗಿಸುತ್ತಿದ್ದ ಗವುನುಗಳೂ ವಿಶೇಷವಾಗಿ ಉಳಿದು ಬಂದಿಲ್ಲ. ಆದರೆ ಕತೀಡ್ರಲ್‌ಗಳಲ್ಲಿರುವ ವರ್ಣಚಿತ್ರಗಳಲ್ಲಿ ಉಬ್ಬು ಚಿತ್ರದ ನಮೂನೆಗಳನ್ನು ನೆಯ್ದಿರುವ ಕಿನ್‌ಕಾಪು ಕೆಲಸ ಮಾಡಿದ ವಸ್ತ್ರಗಳನ್ನೂ ಮಖಮಲ್ಲು ಬಟ್ಟೆಗಳನ್ನೂ ಧರಿಸಿರುವ ಸ್ತ್ರೀ ಪುರುಷರನ್ನು ಕಾಣಬಹುದು. ಈ ರೀತಿಯ ಕೆಲಸಗಳಿಗೆ ಸಮಕಾಲೀನ ಇಟಲಿ ಪ್ರಸಿದ್ಧವಾಗಿತ್ತು. ಚಿತ್ರಗಳನ್ನು ನೇಯ್ದ ಗೋಡೆತೆರೆಗಳು ಬಹು ನಾಜೂಕಾಗಿದ್ದುವು. ಈ ರೀತಿಯ ಚಿತ್ರಗಳಲ್ಲಿ ವಿಶೇಷವಾಗಿ ಲತೆಗಳು ಮತ್ತು ಬಳ್ಳಿಗಳು ಕಂಡರೂ ಅಪೂರ್ವವಾಗಿ ಮಾನವಾಕೃತಿಯ ಮತ್ತು ಪ್ರಾಣಿಗಳ ಚಿತ್ರಗಳೂ ಬಳಸಲ್ಪಡುತ್ತಿದ್ದವು. ಪ್ರ.ಶ. 15ನೆಯ ಶತಮಾನದ ಅನಂತರ ಪುನರುಜ್ಜೀವನ ಕಲೆ ಬೆಳೆದು ಗಾತಿಕ್ ಕಲೆ ಅವನತಿಯನ್ನು ಹೊಂದಲು ಪ್ರಾರಂಭಿಸಿತಾದರೂ ಬಹುಕಾಲದವರೆಗೆ ಗಾತಿಕ್ ಕಲೆಯ ಲಕ್ಷಣಗಳು ಒಂದಲ್ಲ ಒಂದು ರೀತಿಯಲ್ಲಿ ಸೂಕ್ತ ಬದಲಾವಣೆಗಳೊಂದಿಗೆ ಯುರೋಪಿಯನ್ ಕಲೆಯಲ್ಲಿ ಸೇರಿದುವು. ಇದು ಗಾತಿಕ್ ಕಲೆ ಎಷ್ಟು ಜನಾನುರಾಗಿ ಯಾಗಿತ್ತೆಂಬುದಕ್ಕೂ ಅದರಲ್ಲಿ ನಿತ್ಯ ನೂತನವಾದ ಲಕ್ಷಣಗಳು ಇದ್ದುವೆಂಬುದಕ್ಕೂ ಸಾಕ್ಷಿಯಾಗಿದೆ **(ನೋಡಿ– ಐರೋಪ್ಯಕಲೆ; ಗಾತಿಕ್ ವಾಸ್ತುಶೈಲಿ)**.



**ಪ್ರಾರ್ಥನಾ ಭಂಗಿಯ ಶಿಲ್ಪ. 14ನೆಯ ಶತಮಾನ. ಇಟಾಲಿಯನ್ ಶೈಲಿ**

(ಎ.ವಿ.ಎನ್.)

**ಗಾತಿಕ್ ಭಾಷೆ :** ಪೂರ್ಣವಾಗಿ ವಿವರಗಳು ತಿಳಿದುಬಂದಿವೆಯೆಂದು ಹೇಳಬಹುದಾದ ಜರ್ಮ್ಯಾನಿಕ್ ಭಾಷೆಗಳಲ್ಲಿ ಅತಿ ಪ್ರಾಚೀನವಾದುದು. ಹಾಗಾಗಿ ಇದರ ಬಗ್ಗೆ ವಿಶೇಷ ಆಸಕ್ತಿ ತಲೆದೋರುವುದು ಸಹಜ. ಈ ಭಾಷೆಯನ್ನು ಕುರಿತಾದ ತಿಳಿವಳಿಕೆಗೆ ಇದೇ ಭಾಷೆಯಲ್ಲಿರುವ ಬೈಬಲಿನ ಅನುವಾದದ ಉಳಿಕೆಯೇ ಆಧಾರ. ಪ್ರ.ಶ. 350ರ ಸುಮಾರಿಗೆ ಪಶ್ಚಿಮ ಗಾತರ ಪಾದ್ರಿ ವುಲ್‌ಫಿಲನೆಂಬವನಿಂದ ಈ ಅನುವಾದ ಆಯಿತೆನ್ನಲು ಆ ಕಾಲದಲ್ಲಿ ಗಾತ್ ಜನ ಕಪ್ಪು ಸಮುದ್ರದ ಪಶ್ಚಿಮ ದಂಡೆಯಲ್ಲಿ ವಾಸಮಾಡುತ್ತಿದ್ದುದೇ ಕಾರಣವೆನ್ನಬಹುದು. ಆದ್ದರಿಂದ ಈ ಅನುವಾದ ಇಂಗ್ಲಿಷ್ ಮತ್ತು ಜರ್ಮನ್ ಭಾಷೆಗಳಲ್ಲಿ ಉಪಲಬ್ಧವಾಗಿರುವ ಪ್ರಾಚೀನತಮ ಗ್ರಂಥಗಳಿಂದ ಕ್ರಮವಾಗಿ 300 ಮತ್ತು 400 ವರ್ಷ ಹಿಂದಿನದೆನ್ನಬಹುದು.

ಗ್ರೀಕ್ ವರ್ಣಮಾಲೆಯ ಮಾದರಿಯನ್ನಿಟ್ಟುಕೊಂಡು ವುಲ್‌ಫಿಲನಿಂದ ರಚನೆಗೊಂಡ 27ಅಕ್ಷರಗಳಿಂದ ಕೂಡಿರುವ ವಿಶೇಷ ವರ್ಣಮಾಲೆಯ ಆಧಾರದ ಮೇಲೆ ಅನುವಾದಿತ ಬೈಬಲನ್ನು ಬರೆಯಲಾಗಿದೆ. ಗಾತಿಕ್ ಭಾಷೆಯಲ್ಲಿನ ಸ್ವರಗಳ ಬಗ್ಗೆ

ವಿಶದವಾಗಿ ಹೇಳಲಾಗದಿದ್ದರೂ ವ್ಯಂಜನಗಳು ಮಾತ್ರ ಜರ್ಮ್ಯಾನಿಕ್ ಮೂಲ ಭಾಷೆಗೆ ವಿದ್ವಾಂಸರು ಕಲ್ಪಿಸಿಕೊಂಡಿರುವ ವ್ಯಂಜನಗಳೇ ಆಗಿವೆ– ಮೂರು ಅಘೋಷಸ್ಪರ್ಶಗಳು (ಪ, ತ, ಕ), ಮೂರು ಅಘೋಷ ಸಂಘರ್ಷಿಗಳು (ಫ, ಥ, ಹ), ಮೂರು ಘೋಷ ಸ್ಪರ್ಶ–ಸಂಘರ್ಷಿಗಳು (ಬ, ದ, ಗ), ಎರಡು ಊಷ್ಮ ವರ್ಣಗಳು (ಸ, ಜ), ಎರಡು ನಾಸಿಕ್ಯಗಳು (ಮ, ನ), ಎರಡು ಸಲಿಲಗಳು (ಲ, ರ), ಮತ್ತು ಎರಡು ಅಂತಸ್ಥಗಳು (ಅರ್ಧಸ್ವರಗಳು) (ವ, ಯ).


ಪ್ರ. ಶ. 466 ರಿಂದ 711ರವರೆಗೆ ಸ್ಪೇನ್ ದೇಶವನ್ನಾಳಿದ ಪಶ್ಚಿಮ ಗಾತರು ಮತ್ತು 489ರಿಂದ 554ರವರೆಗೆ ಇಟಲಿಯನ್ನಾಳಿದ ಪೂರ್ವ ಗಾತರೂ ಗಾತಿಕ್ ಭಾಷೆಯನ್ನಾಡಿದವರೇ ಆಗಿರಬೇಕು. ಆದರೆ ಈ ಭಾಷೆ ಬಹಳ ಕಾಲ ಈ ಯಾವುದೇ ದೇಶಗಳಲ್ಲಿ ಉಳಿದು ಬರಲಿಲ್ಲ. ಇದಕ್ಕೂ ಮುಂದೆ ಸಾವಿರ ವರ್ಷಗಳವರೆಗೆ ಈ ಭಾಷೆ ವ್ಯವಹಾರದಲ್ಲಿದ್ದ ದೇಶವೆಂದರೆ ಕ್ರಿಮಿಯ ಎನ್ನಬಹುದು. ರಾಜಕಾರ್ಯಕ್ಕಾಗಿ ಕಾನ್‍ಸ್ಟಾಂಟಿನೋಪಲಿಗೆ ಬಂದಿದ್ದ ಬಸ್‍ಬೆಕ್ ಎಂಬ ಹೆಸರಿನ ಫ್ಲೆಮಿಷ್ ರಾಜಕಾರಣಿ ಕ್ರಿಮಿಯದಲ್ಲಿ ವ್ಯವಹಾರದಲ್ಲಿದ್ದ ಗಾತಿಕ್ ಭಾಷೆಯ ಹಲವಾರು ಶಬ್ದಗಳನ್ನು, ವಾಕ್ಯಾಂಶಗಳನ್ನು ಗಮನಿಸಿ ಬರೆದಿಟ್ಟಿದ್ದಾನೆ. ಗಾತಿಕ್ ಭಾಷೆಯ ಬಗ್ಗೆ ನಮಗೆ ದೊರಕುವ ಕಟ್ಟ ಕಡೆಯ ಬರೆವಣಿಗೆ ಎಂದರೆ ಈ ತುಣುಕುಗಳೇ. **(ಡಬ್ಲ್ಯೂ.ಜಿ.ಎಂ.)**

**ಗಾತಿಕ್ ವಾಸ್ತು ಶೈಲಿ :** ಈ ಶೈಲಿ ಎಲ್ಲಿ ಮತ್ತು ಹೇಗೆ ಉಗಮವಾಯಿತು ಎಂಬ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿವೆ. ಇಂಗ್ಲಿಷ್ ಚರಿತ್ರಕಾರರು ಇದು ಇಂಗ್ಲಿಷ್ ಜನಾಂಗದ ಕೊಡುಗೆಯೆಂದೂ ಜರ್ಮನ್ನರು ತಮ್ಮ ಕೊಡುಗೆಯೆಂದು ವಾದಿಸುವ ರಾದರೂ ಇತ್ತೀಚಿನ ಸಂಶೋಧನೆಗಳಿಂದ ಇದು ಫ್ರಾನ್ಸಿನ ಕೊಡುಗೆಯೆಂದೂ ಮೊಟ್ಟ ಮೊದಲು ಪ್ಯಾರಿಸ್ಸಿನ ಸಮೀಪದಲ್ಲಿ ಪ್ರಾರಂಭವಾಯಿತೆಂದೂ ತಿಳಿದುಬಂದಿದೆ. ಪ್ರ.ಶ.



ಸೇಂಟ್ ಡೇನಿಸ್ ಕತೀಡ್ರಲ್‍ನ ಒಳಭಾಗ. ಗಾತಿಕ್ ವಾಸ್ತು ಶೈಲಿಯ ಉಗಮವಾದದ್ದು ಇಲ್ಲಿ

1144ರಲ್ಲಿ ದೊರೆ ಏಳನೆಯ ಲೂಯಿ, ಅವನ ರಾಣಿ, ಐವರು ಆರ್ಚ್‍ಬಿಷಪ್ಪರು ಹದಿನಾಲ್ಕು ಬಿಷಪ್ಪರು ಮತ್ತು ಅನೇಕ ಜನಗಳು ಸೇಂಟ್ ಡೇನಿಸ್ ಕ್ರೈಸ್ತಮಠದಲ್ಲಿ ಸೇರಿ, ಆರಾಧನಾಗೀತೆಯನ್ನು ಹಾಡಲು ಅನುಕೂಲವಾಗಿರುವಂಥ ಪ್ರತ್ಯೇಕ ಕಟ್ಟಡ ಒಂದನ್ನು ರೂಪಿಸಿದರು. ಅದು ಉದ್ದನೆಯ ಗೋಪುರ, ಬಣ್ಣದ ಗಾಜಿನ ಕಿಟಕಿ ಮುಂತಾದವುಗಳಿಂದ ಕೂಡಿದ್ದು, ಪ್ಯಾರಿಸ್ಸಿನ ಸಮೀಪದಲ್ಲಿ ಮುಂದೆ ಕಟ್ಟಲಾದ ಚರ್ಚುಗಳಿಗೆಲ್ಲ ಒಂದು ಮಾದರಿಯಾಯಿತು. ಆದ್ದರಿಂದ ಆ ಚರ್ಚನ್ನೇ ಗಾತಿಕ್ ವಾಸ್ತುಶೈಲಿಯ ತೊಟ್ಟಿಲು ಎಂದು ವಿದ್ವಾಂಸರು ಭಾವಿಸಿದ್ದಾರೆ. ಗಾತಿಕ್ ವಾಸ್ತುಶೈಲಿಯ ಸಮರ್ಥನೆ ಮಾಡಿ ಅದರ ಬೆಳೆವಣಿಗೆಗೆ ಕಾರಣರಾದವರೆಂದರೆ ಸಂತ ಬರ್ನಾರ್ಡ್ ಮತ್ತು ಸಂತ ಸುಗೇರ್. ಧರ್ಮ ರಹಸ್ಯಗರ್ಭಿತವೂ ಭಯಭಕ್ತಿ ಪ್ರಚೋದಕವೂ ಆದುದೆಂದೂ ಆದ್ದರಿಂದ ಧಾರ್ಮಿಕ ಕಟ್ಟಡಗಳು ಅದಕ್ಕೆ ಅನುಗುಣವಾಗಿರಬೇಕೆಂದೂ ಸಂತ ಬರ್ನಾರ್ಡ್ ವಾದಿಸಿದ. ಆದ್ದರಿಂದ ಗಾತಿಕ್ ಕಟ್ಟಡಗಳಲ್ಲಿ ವಿಲಕ್ಷಣವೂ ಭಯಭಕ್ತಿಯನ್ನು ಪ್ರಚೋದಿಸುವಂಥವೂ ಆದ ಅನೇಕ ವಿನ್ಯಾಸಗಳು ಪ್ರಾರಂಭವಾದುವು. ಈತ ಸೇಂಟ್ ಡೆನಿಸ್ ಚರ್ಚಿನ ಮುಖ್ಯ ಪಾದ್ರಿಯಾದ ಮೇಲೆ (1122) ಮುನ್ನೂರು ವರ್ಷಗಳಿಂದಲೂ ಇದ್ದ ಈ ಕಟ್ಟಡಕ್ಕೆ ತಾನೇ ಹೊಸ ರೂಪು ಕೊಟ್ಟು ಅದನ್ನು ಹೊಸದಾಗಿ ಕಟ್ಟಿಸಿದ. ಅಲ್ಲಿಂದ ಮುಂದೆ ಇದೇ ಗಾತಿಕ್ ವಾಸ್ತುಶೈಲಿಯ ಮಾದರಿಯಾಗಿ ಬೆಳೆವಣಿಗೆ ಹೊಂದುತ್ತ ಹೋಯಿತು.



ಪ್ಯಾರಿಸಿನ ಸಮೀಪ ಷಾರ್ಟ್ರ ನಗರದಲ್ಲಿಯ ಚರ್ಚು (ಪ್ರಾರಂಭ ಸು. 1145). 12 ರಿಂದ 16ನೆಯ ಶತಮಾನದ ಗಾತಿಕ್ ಶಿಲ್ಪದ ವಿವಿಧ ಮಾದರಿಗಳು ಇಲ್ಲಿ ಕಾಣಸಿಗುತ್ತವೆ.

ಬರ್ನಾರ್ಡನ ಅಭಿಪ್ರಾಯದಂತೆ ಗಣಿತ ಮತ್ತು ಜ್ಯಾಮಿತಿಯ ಸಾಧನೆಗಳ ನೆರವಿನಿಂದ ಹೊಸ ವಿನ್ಯಾಸ ರೂಪುಗೊಂಡಿತು. ಸುಂದರವಾದ ಆರಾಧನಾಗೃಹಗಳ ಸಾಲುಸಾಲುಗಳು ಸೇರಿದುವು. ಅವುಗಳ ಕಿಟಕಿಗಳಿಗೆ ಬಣ್ಣದ ಗಾಜುಗಳು ಅಳವಡಿಸಿದರು. ಸೇಂಟ್ ಡೆನಿಸ್ ಚರ್ಚಿನಲ್ಲಿ ನೆಲಮಾಳಿಗೆ ದೇವಾಲಯಕ್ಕೆ ತಳಪಾಯದಂತಿದ್ದರೂ ರೋಮನೆಸ್ಕ್ ಶೈಲಿಗೂ ಗಾತಿಕ್ ಶೈಲಿಗೂ ಇಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ನೆಲಮಾಳಿಗೆಯ (ಹೆಣಗಳನ್ನು ಹೂಳುವ ಜಾಗ) ದಪ್ಪ ಗೋಡೆಗಳು ಸಣ್ಣ ಸಣ್ಣ ಕೊಠಡಿಯಾಕಾರದ ಜಾಗವನ್ನು ಒದಗಿಸಿದರೆ ಅದರ ಮೇಲಿನ ದೇವಾಲಯ ವಿಶಾಲವಾದ ಹಜಾರವನ್ನು ಒದಗಿಸುತ್ತದೆ. ನೆಲಮಾಳಿಗೆಯ ಭಾವಣಿ ಕೂಡು ಕಮಾನುಗಳನ್ನಿಟ್ಟು ನಿರ್ಮಿಸಿದ ಭಾವಣಿಕಟ್ಟಾಗಿದ್ದರೆ, ಮೇಲಿನ ದೇವಾಲಯದ ಭಾವಣಿ ಪಕ್ಕೆಲುಬಿನಾಕರದ ಕಮಾನುಗಳನ್ನು ಹೊಂದಿದ್ದಾಗಿದೆ. ಒಂದು ವಿಧದಲ್ಲಿ ಪಕ್ಕೆಲುಬಿನಾ ಕಾರದ ಭಾವಣಿ ಗಾತಿಕ್ ವಾಸ್ತುಶೈಲಿಯ ಪ್ರಧಾನ ಲಕ್ಷಣವಾಗಿಯೇ ಪರಿಣಮಿಸಿತು. ಈ ರೀತಿಯ ಭಾವಣಿಯನ್ನು ಅಳವಡಿಸುವುದರಲ್ಲಿಯೂ ಹತ್ತಾರು ಬಗೆಗಳನ್ನು ಗುರುತಿಸಬಹುದು. ಇದು ಆಗಿನ ಕಾಲದ ಶಿಲ್ಪಿಗಳ ನಿಪುಣತೆಗೂ ಸಾಕ್ಷಿಯಾಗಿದೆ.

ಈ ರೀತಿಯ ಛಾವಣಿಯನ್ನು ಅಳವಡಿಸಿದ್ದರಿಂದ ಇಡೀ ಕಟ್ಟಡ ವಿಸ್ಮಯವನ್ನುಂಟು ಮಾಡುವಂತೆ ಅವ್ಯಾಹತವಾದ ಬೆಳಕಿನಿಂದ ಹೊಳೆಯುವುದೆಂದು ಅದರ ನಿರ್ಮಾತ ಸಂತ ಸುಗೇರ್ ಹೇಳಿದ್ದಾರೆ.

ಪ್ರ.ಶ. 1145–50ರಲ್ಲಿ ಕಟ್ಟಲಾದ ನೊಯೊನ್ ಕೆತೀಡ್ರಲ್‌ನಲ್ಲಿ ಡೆನಿಸ್ ಚರ್ಚಿನ ಮಾದರಿಯನ್ನೇ ಅನುಸರಿಸಲಾಗಿದೆ. ನೋಟರ್‌ಡೇಮ್ ಕೆತೀಡ್ರಲ್‌ನಲ್ಲಿಯೂ ಇದೇ ಮಾದರಿಯನ್ನು ಕಾಣಬಹುದು. ಕಿರಿದಾದ, ಕಂಬಗಳ ನಡುವಣ ಅಂಗಳದಲ್ಲಿ ಎರಡು ಕಡೆಗಳಲ್ಲಿಯೂ ಚೂಪು ಕಮಾನುಗಳು ಅವುಗಳ ಮೇಲೆ ಅದೇ ರೀತಿಯ ಎರಡು ಮಹಡಿಗಳೂ ಬಂದು ಈ ಕಟ್ಟಡಕ್ಕೆ ಒಂದು ಭವ್ಯತೆಯನ್ನು ಕೊಡುತ್ತವೆ. ಮುಂಭಾಗದ ಬಾಗಿಲಿನಿಂದ ನೋಡಿದರೆ ನಾಲ್ಕಾರು ಮಹಡಿಗಳನ್ನುಳ್ಳ ಕಟ್ಟಡದಂತೆ ಭಾಸವಾಗುವ ಬೃಹತ್‌ಪ್ರಮಾಣದ ಈ ಕಟ್ಟಡ 1160–1205ರ ಸಮಯದಲ್ಲಿ ಪೂರ್ಣಗೊಂಡಿತು. ಆರಂಭದ ಗಾತಿಕ್ ವಾಸ್ತುಶೈಲಿಗೆ ನೋಟರ್ ಡೇಮ್ ಕೆತೀಡ್ರಲ್ ಒಂದು ಒಳ್ಳೆಯ ಉದಾಹರಣೆ. ಶಿಲ್ಪವೂ ವಾಸ್ತುವಿನ ಹೊಸ ನಮೂನೆಗೆ ತಕ್ಕಂತೆ ಹೊಂದಿಕೊಂಡಿರುವುದು ಅಲ್ಲಿನ ವೈಶಿಷ್ಟ್ಯ. ವಿಶಾಲವೂ ಎತ್ತರವೂ ಆದ ಬಾಗಿಲುಗಳು, ಕಿಟಕಿಗಳ ಮೇಲ್ಭಾಗ, ಅರೆಗಂಬಗಳು ಮೊದಲಾದುವು ಶಿಲ್ಪಗಳಿಂದ ಕೂಡಿದ್ದು ಧಾರ್ಮಿಕ ಭಾವನೆಗೆ ಪುಷ್ಟಿಕೊಡುವಂತಿದೆ. ಅದರಲ್ಲಿಯೂ ಪಶ್ಚಿಮ ದ್ವಾರ ಶಿಲ್ಪಗಳಿಂದ ಆವೃತ್ತವಾಗಿ, ಸಾಂಕೇತಿಕವಾಗಿ ಅದು ದೇವಲೋಕದ ಜೆರೂಸಲೆಂಗೆ ಹೆಬ್ಬಾಗಿಲೋ ಎನ್ನುವಂತೆ ಕೆತ್ತಲಾಗಿದೆ. ಅಲ್ಲಿಯೇ ಇರುವ ಷಾರ್ಟ್ರ ಕೆತೀಡ್ರಲ್‌ನಲ್ಲಿರುವ ಒಳಾಂಗಣದಲ್ಲಿ ರಾಜರಾಣಿಯರಿಗೆ ಸಂಬಂಧಿಸಿದ ಶಿಲ್ಪಗಳು ವಿಶೇಷವಾಗಿರುವುದರಿಂದ ಅದನ್ನು




ಆಮ್ಯನ್ (ಉತ್ತರ ಫ್ರಾನ್ಸ್) ಕತೀಡ್ರಲ್, ಹೆಬ್ಬಾಗಿಲಿನ ಚಿತ್ರ, ಪ್ರಾರಂಭ ಸು. 1277

ರಾಜವಂಶದ ಮಹಾದ್ವಾರವೆಂದು ಕರೆಯಲಾಗಿದೆ. 1145–50ರಲ್ಲಿ ರಚನೆಗೊಂಡ ಪಶ್ಚಿಮದ ಮೂರು ಮಹಾದ್ವಾರಗಳನ್ನೂ ಒಂದೇ ಹೆಬ್ಬಾಗಿಲಂತೆ ಕೆತ್ತಲಾಗಿದೆ. ಕ್ರಿಸ್ತನ ಜನನ, ದೇವಾಲಯಕ್ಕೆ ಆತನನ್ನು ಒಯ್ಯುವುದು, ವರ್ಜಿನ್ ಮಾತೆಯೊಂದಿಗೆ ಕ್ರಿಸ್ತ – ಈ ಶಿಲ್ಪಫಲಕಗಳು ಬಲದ್ವಾರದ ಮೇಲಿವೆ. ಕ್ರಿಸ್ತ ಸ್ವರ್ಗವನ್ನು ಏರುತ್ತಿರುವುದು ಎಡ ದ್ವಾರದಲ್ಲಿದೆ. ಮಧ್ಯದ ದ್ವಾರದಲ್ಲಿ ಆತ ಎರಡನೆಯ ಸಾರಿ ಹಿಂದಿರುಗುವ ಕಥೆ ಬಂದಿದೆ. ಇವುಗಳ ಕೆಳಗೆ ಕ್ರಿಸ್ತನ ಜೀವನಕ್ಕೆ ಸಂಬಂಧಿಸಿದ ವಿವಿಧ ಕಥೆಗಳು ರೂಪುಗೊಂಡಿವೆ. ಕಮಾನಿನ ಕೆಳಭಾಗದಲ್ಲಿ ಮಾಡಿರುವ ಕೆತ್ತನೆಯ ಕೆಲಸವೂ ಗಮನಾರ್ಹವಾಗಿದೆ. ಬಲಭಾಗದಲ್ಲಿ ಜ್ಞಾನವನ್ನು ಸಾಂಕೇತಿಕವಾಗಿಯೂ ವರ್ಷದ ಹನ್ನೆರಡು ತಿಂಗಳನ್ನು ಎಡಭಾಗದಲ್ಲಿಯೂ ಕೆತ್ತಲಾಗಿದೆ. ದ್ವಾರಗಳ ಇಕ್ಕೆಡೆಗಳಲ್ಲಿರುವ ಕಂಬಗಳಲ್ಲಿ ಹಳೆಯ ಒಡಂಬಡಿಕೆಯಲ್ಲಿ ಹೇಳಿರುವ ರಾಜರಾಣಿಯರ ಶಿಲ್ಪಗಳಿವೆ. ಇವುಗಳೆಲ್ಲವೂ ಪ್ರಾರಂಭ ಗಾತಿಕ್ ವಾಸ್ತುಶಿಲ್ಪಕ್ಕೆ ಉತ್ತಮ ಉದಾಹರಣೆಗಳು.

1194ರಲ್ಲಿ ಷಾರ್ಟ್ರ ಕತೀಡ್ರಲ್ ಬೆಂಕಿಗೆ ಆಹುತಿಯಾಯಿತು. ನೆಲಮಾಳಿಗೆ, ಪಶ್ಚಿಮದ ಗೋಪುರಗಳನ್ನು ಬಿಟ್ಟರೆ, ಕಟ್ಟಡದ ಇತರ ಭಾಗಗಳೆಲ್ಲವೂ ನಾಶವಾದುವು. ಕೂಡಲೇ ಈ ಕಟ್ಟಡವನ್ನು ಹೊಸದಾಗಿ ಕಟ್ಟುವ ಕೆಲಸ ಪ್ರಾರಂಭವಾಯಿತು. ಆ ಕೆಲಸ ಮುಗಿದದ್ದು 1220ರಲ್ಲಿ. ಇಲ್ಲಿಂದ ಗಾತಿಕ್ ವಾಸ್ತುಶೈಲಿಯಲ್ಲಿ ಮುಂದಿನ ಹೆಜ್ಜೆ ಪ್ರಾರಂಭವಾಯಿತೆನ್ನ ಬಹುದು. 1194 ರಿಂದ 1248ರ ವರೆಗಿನ ಅವಧಿಯಲ್ಲಿ ನಿರ್ಮಾಣವಾದ ಕತೀಡ್ರಲ್‌ಗಳನ್ನು ಪ್ರೌಢ ಗಾತಿಕ್ ಎಂದು ವ್ಯವಹರಿಸುತ್ತಾರೆ. ಪುನರುಜ್ಜೀವನಗೊಂಡ ಈ ಷಾರ್ಟ್ರ ಕತೀಡ್ರಲ್ ಪ್ರೌಢ ಗಾತಿಕ್ ಶೈಲಿಯ ಮೊದಲ ಕಟ್ಟಡ. ಬೆಂಕಿಯಲ್ಲಿ ಹಾಳಾಗದೇ ಉಳಿದಿದ್ದ ಪಶ್ಚಿಮದ ಗೋಪುರ ಮತ್ತು ನೆಲಮಾಳಿಗೆಯನ್ನು ಅನುಸರಿಸಿ ಅದಕ್ಕೆ ತಕ್ಕ ಪ್ರಮಾಣದ ಪುನರ್ನಿರ್ಮಾಣ ಕಾರ್ಯ ಆರಂಭವಾಯಿತು. ಈ ಕಟ್ಟಡದಲ್ಲಿ ಕಾಣಬರುವ ಮುಖ್ಯ ವೈಶಿಷ್ಟ್ಯವೆಂದರೆ ಹಾಡುವ ಸ್ಥಳ. ಶಿಲುಬೆಯಾಕಾರದ ದೇವಾಲಯದ ಅಡ್ಡಭಾಗ ಮತ್ತು ಮಧ್ಯಾಂಗಣ – ಈ ಮೂರು ಭಾಗಗಳಲ್ಲಿನ ಸಮತೋಲನ. ಅನಂತರ ಬೋರ್ಗೆಸ್ ಎಂಬಲ್ಲಿ ಮತ್ತೊಂದು ಕತೀಡ್ರಲ್ ನಿರ್ಮಿತವಾಯಿತು. ಇಲ್ಲಿ ದೇವಾಲಯದ ಶಿಲುಬೆಯಾಕಾರದ ಅಡ್ಡಭಾಗವನ್ನು ಪೂರ್ಣವಾಗಿ ಕೈಬಿಟ್ಟಿದ್ದರಿಂದ ಒಳಾಂಗಣ ವಿಶಾಲವಾಯಿತು. ಈ ಕಟ್ಟಡದಲ್ಲಿ ಒಂದರ ಮೇಲೆ ಒಂದರಂತೆ ಮೂರು ಕಿಟಕಿಗಳನ್ನು ಅಳವಡಿಸಲಾಯಿತು. ಮೂರೂ ಮಹಡಿಗಳ ಮುಂಭಾಗ ಈ ಕತೀಡ್ರಲ್‌ಗೆ ಒಂದು ಭವ್ಯತೆಯನ್ನು ಕೊಟ್ಟಿತು. ಷಾರ್ಟ್ರನಲ್ಲಿ ಪ್ರಾರಂಭವಾದ ಬೆಳವಣಿಗೆಗಳು ರೀಮ್ಸ್ ಮತ್ತು ಆಮ್ಯನ್ಸ್ ಕತೀಡ್ರಲ್‌ಗಳಲ್ಲಿ ಪೂರ್ಣಗೊಂಡುವು. ಪ್ರೌಢ ಗಾತಿಕ್ ಶೈಲಿಯ ಕಟ್ಟಡಗಳಿಗೆ ಇವೆರಡೂ ಉತ್ತಮ ಉದಾಹರಣೆಗಳು. ನೆಲದಿಂದ ಸು. 42ಮೀ ಎತ್ತರದ ಛಾವಣಿ ಚೂಪು ಕಮಾನುಗಳಿಂದ ಮಧ್ಯದಲ್ಲಿರುವ ಕಂಬಗಳಿಂದ ಇನ್ನೂ ಎತ್ತರವಿರುವಂತೆ ಭಾಸವಾಗುತ್ತದೆ.

ಈ ಕತೀಡ್ರಲ್‌ಗಳ ಮಹಾದ್ವಾರಗಳ ಶಿಲ್ಪಗಳು ಗಾತಿಕ್ ಶೈಲಿಯಲ್ಲೇ ಅತ್ಯುತ್ತಮ ಶಿಲ್ಪಗಳೆಂದು ಪರಿಗಣಿತವಾಗಿವೆ. ಇಲ್ಲಿನ ಶಿಲ್ಪಗಳು ಸಾಮಾನ್ಯವಾಗಿ ಸರಳವಾಗಿಲ್ಲ. ಅವುಗಳ ಪ್ರತಿಮಾ ವಿವರಣೆಗಳು ಬಹು ಜಟಿಲವಾಗಿವೆ. ಭೂತಗಳು, ದೇವತೆಗಳು ಮುಂತಾದ ಶಿಲ್ಪಗಳು ಬಹು ಸುಂದರವಾಗಿದ್ದು ಆ ಕಾಲದ ಧಾರ್ಮಿಕ ಜೀವನದ ಸುಂದರ ಪ್ರತೀಕಗಳೂ ಆಗಿವೆ. ಷಾರ್ಟ್ರ ಮತ್ತು ಆಮ್ಯನ್ಸ್ ಕತೀಡ್ರಲ್‌ಗಳ (1220–30) ಶಿಲ್ಪಗಳು ದೇವಲೋಕವನ್ನೇ ನಮ್ಮ ಮುಂದೆ ತೆರೆಯುತ್ತವೆ. 'ಕೊನೆಯ ತೀರ್ಪಿನ' ಶಿಲ್ಪ ಆಮ್ಯನ್ಸ್‌ನ ಮಧ್ಯ ದ್ವಾರದಲ್ಲೂ ವರ್ಜಿನ್ ಮೇರಿಯ ಶಿಲ್ಪ ಉತ್ತರದ ದ್ವಾರದಲ್ಲೂ ಆಮ್ಯನ್ಸ್ ಕತೀಡ್ರಲ್‌ನ ಪ್ರಧಾನ ದೇವತೆ ಸಂತ ಫಿರ್ಮಿನನ ಶಿಲ್ಪ ದಕ್ಷಿಣದಲ್ಲೂ ಇವೆ.



ಆಸರೆಗೋಡೆಗಳು ಮತ್ತು ಅವುಗಳ ಶೃಂಗಗಳಲ್ಲಿ ಅಳವಡಿಸಿರುವ ದೇವದೂತರ ವಿಗ್ರಹಗಳು. ರೀಮ್ಸ್ ನಗರದ (ಫ್ರಾನ್ಸ್) ಕತೀಡ್ರಲ್. 1255–1311

ಕತೀಡ್ರಲ್‌ನ ಉತ್ತರದ ಗೋಡೆಗಳಲ್ಲಿ ಹಳೆ ಒಡಂಬಡಿಕೆಯ ಶಿಲ್ಪ ಫಲಕಗಳಿದ್ದರೆ, ದಕ್ಷಿಣದಲ್ಲಿ ಹೊಸ ಒಡಂಬಡಿಕೆಯ ಚಿತ್ರ ಫಲಕಗಳಿವೆ. ಇಲ್ಲಿಯೇ ಪಶ್ಚಿಮ ದ್ವಾರದಲ್ಲಿರುವ ಬೋಧನೆ ಮಾಡುತ್ತಿರುವ ಕ್ರಿಸ್ತನ ಶಿಲ್ಪ ಪ್ರೌಢ ಗಾತಿಕ್ ಶೈಲಿಯಲ್ಲಿಯೇ ಅತ್ಯುತ್ತಮ ವಿಗ್ರಹ. ದಯಾಮಯನಾದ ಕ್ರಿಸ್ತನ ಭಾವನೆಗಳು ಬಹು ಸುಂದರವಾಗಿ ಇಲ್ಲಿ ರೂಪುಗೊಂಡಿವೆ. ಮಡಿಕೆಗಳಿಂದ ಆವೃತ್ತವಾದ ಬಟ್ಟೆಯ ವಿನ್ಯಾಸ, ನೆಟ್ಟಗೆ ನಿಂತಿರುವ ಭಂಗಿ, ಮೊದಲಾದವು ಈ ಶಿಲ್ಪದ ವೈಶಿಷ್ಟ್ಯಗಳು.

ಈ ಕತೀಡ್ರಲ್‌ಗಳ ಕಿಟಕಿಗಳಲ್ಲಿ ಬಣ್ಣದ ಗಾಜುಗಳು ಹೇರಳವಾಗಿವೆ. ಆಮ್ಯನ್ಸ್ ಮತ್ತು ರೀಮ್ಸ್‌ಗಳಲ್ಲಿ ಆ ಕಾಲದ ಬಣ್ಣದ ಗಾಜುಗಳು ಹೆಚ್ಚಾಗಿ ಉಳಿದಿಲ್ಲವಾದರೂ ಷಾರ್ಟ್ರ ಮತ್ತು ಬೋರ್ಗೆಸ್‌ಗಳಲ್ಲಿ ಅವು ವಿಶೇಷವಾಗಿ ಉಳಿದುಬಂದಿವೆ. ಬಣ್ಣದ

ಗಾಜುಗಳ ಬಳಕೆ ಹೆಚ್ಚಿದಂತೆ, ಬಣ್ಣದ ವೈವಿಧ್ಯವೂ ಹೆಚ್ಚಿದುದು ಸಹಜವೇ ಆಗಿದೆ. 12ನೆಯ ಶತಮಾನದಲ್ಲಿ ನೀಲಿ ಬಣ್ಣ ವಿಶೇಷವಾಗಿ ತಿಳಿಯಾಗಿದ್ದಿತು. 13ನೆಯ ಶತಮಾನದಲ್ಲಿ ಅದು ಗಾಢವಾಯಿತು. ಈ ಕಟ್ಟಡಗಳನ್ನು ಕಟ್ಟಲು ಧನಸಹಾಯ ಮಾಡಿದವರ ಚಿತ್ರಗಳನ್ನು ಷಾರ್ಟ್ರದ ಈ ಗಾಜುಗಳ ಮೇಲೆ ಕೆತ್ತಲಾಗಿದೆಯೆಂದು ಅನೇಕರು ಅಭಿಪ್ರಾಯಪಡುತ್ತಾರೆ.

13ನೆಯ ಶತಮಾನದ ಮಧ್ಯಭಾಗದಿಂದ 14ನೆಯ ಶತಮಾನದ ಅಂತ್ಯದವರೆಗೆ ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳಲ್ಲಿ ಸರ್ವತೋಮುಖವಾದ ಬೆಳವಣಿಗೆಯುಂಟಾಯಿತು. ಅದರಲ್ಲಿಯೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಈ ಎರಡು ದೇಶಗಳೂ ತಮ್ಮದೇ ಆದ ಸಂಸ್ಕೃತಿಯನ್ನು ರೂಢಿಸಿಕೊಂಡವು. ಇದರ ಜೊತೆಗೆ ಸೂಕ್ಷ್ಮಾಭಿರುಚಿ ಬೆಳೆಯಿತು. ಇವುಗಳೆಲ್ಲವೂ ಆ ಕಾಲದ ವಾಸ್ತುಶಿಲ್ಪದ ಮೇಲೂ ಪರಿಣಾಮವನ್ನು ಬೀರಿದುವು. 13ನೆಯ ಶತಮಾನದ ಮಧ್ಯಭಾಗದಿಂದ 14ನೆಯ ಶತಮಾನದ ಕೊನೆಯವರೆಗಿನ ವಾಸ್ತುಶಿಲ್ಪವನ್ನು ರಿಫೈನ್ಡ್ ಗಾತಿಕ್ ಎಂದು ಕರೆಯುತ್ತಾರೆ. ಗಾತಿಕ್ ವಾಸ್ತು ಶೈಲಿಯಲ್ಲೇ ಇದು ಅತ್ಯುತ್ತಮ ಮಟ್ಟದ್ದು ಎಂದು ವಿದ್ವಾಂಸರ ಮತ.



ಸ್ಟ್ರಾಸ್‌ಬರ್ಗ್ (ಫ್ರಾನ್ಸ್) ನಗರದ ಚರ್ಚು. ಆರಂಭ ಸು. 1277

ಅರೇಕಾಲಿನಂತ ತ್ರಿಜ್ಯ ಪಟ್ಟಿಗಳುಳ್ಳ ಗುಂಡು ಕಿಟಕಿಗಳು ಪ್ರಾರಂಭವಾದದ್ದು ಈ ಕಾಲದಲ್ಲಿ. ಕಿಟಕಿಯ ಮಧ್ಯದ ಬಿಂದುವಿನಿಂದ ಸೂರ್ಯನ ಕಿರಣಗಳಂತೆ ತ್ರಿಜ್ಯಪಟ್ಟಿಗಳು ಹೊರಹೊಮ್ಮಿ, ಈ ಶೈಲಿಗೆ ರೇಯನಂಟ್ ಎಂಬ ಹೆಸರನ್ನು ತಂದುಕೊಟ್ಟಿವೆ. ಒಂಬತ್ತನೆಯ ಲೂಯಿ ಪ್ಯಾರಿಸ್‌ನಲ್ಲಿ 1248ರಲ್ಲಿ ಕಟ್ಟಿಲಾದ ಸೇಂಟ್ ಚ್ಯಾಪೆಲ್‌ನಲ್ಲಿ ಈ ರೀತಿಯ ಗುಂಡು ಕಿಟಕಿಗಳು ಮೊದಲ ಬಾರಿಗೆ ಬಳಕೆಗೆ ಬಂದುವು. ಇಲ್ಲಿ ಊರೆಗಾಗಿ ಬಳಸಿರುವ ಕಲ್ಲನ್ನೂ ಬಿಟ್ಟರೆ ಮಿಕ್ಕೆಲ್ಲ ಕಡೆಗಳಲ್ಲಿಯೂ ಬಣ್ಣದ ಗಾಜು ವಿಶೇಷವಾಗಿದೆ. 19ನೆಯ ಶತಮಾನದಲ್ಲಿ ಈ ಕಟ್ಟಡವು ಪುನರುಜ್ಜೀವನಗೊಂಡಿದ್ದರೂ 13ನೆಯ ಶತಮಾನಕ್ಕೆ ಸೇರಿದ ಒಳಗಿನ ಅಲಂಕಾರಗಳು ಈ ಕಿಟಕಿಗಳಿಗೆ ಮಾಡಿರುವ ಹತ್ತಾರು ವರ್ಣಚಿತ್ರಗಳ ಅಲಂಕಾರಗಳು ಇಂದಿಗೂ ಅಚ್ಚಳಿಯದೆ ಉಳಿದು ಬಂದಿವೆ. ಒಳಭಾಗದಲ್ಲಿ ಕ್ರೈಸ್ತಗುರುಗಳ ವಿಗ್ರಹಗಳಿವೆ. ಇದಕ್ಕಿಂತಲೂ ಹೆಚ್ಚು ಆಕರ್ಷಕವಾದದ್ದು ಶೈಲಿಯ ದೃಷ್ಟಿಯಿಂದ ಹೆಚ್ಚು ಬೆಳವಣಿಗೆಯನ್ನು ತೋರ್ಪಡಿಸುವ ಕಟ್ಟಡವೆಂದರೆ ಬೋವೇ ಕತೀಡ್ರಲ್ 1247ರಲ್ಲಿ ಪ್ರಾರಂಭಿಸಲಾದ ಈ ಕಟ್ಟಡದ ಗೋಪುರ ಸು. 47ಮೀ. ಎತ್ತರದಾಗಿತ್ತು. 1272ರಲ್ಲಿ ಇದನ್ನು ಪೂರ್ಣಗೊಳಿಸಲಾಯಿತು. ಆದರೆ ಬಹು ಎತ್ತರವೂ ವಿಶಾಲವೂ ಆದ ಈ ಕಟ್ಟಡದ ತಳಪಾಯ ಭದ್ರವಿಲ್ಲದ್ದರಿಂದ 1284ರಲ್ಲಿ ಇಡೀ ಕಟ್ಟಡ ಕುಸಿದುಬಿತ್ತು. ಇದರ ಪುನರುಜ್ಜೀವನವಾದದ್ದು 16ನೆಯ ಶತಮಾನದಲ್ಲಿ. ವಿಲ್ಲರ್ಡ್ ಡಿ ಹೊನ್‌ಕೋರ್ಟ್ ಎಂಬ ಫ್ರೆಂಚ್ ಶಿಲ್ಪಿ ಸುಮಾರು ಇದೇ ಕಾಲದಲ್ಲಿ ಯುರೋಪಿನಲ್ಲೆಲ್ಲ ಸಂಚರಿಸಿ ತಾನೂ ನೋಡಿದ ಪೂರ್ಣಗೊಂಡಿದ್ದ, ಅಪೂರ್ಣವಾಗಿದ್ದ ಎಲ್ಲ ಕತೀಡ್ರಲ್‌ಗಳ ಚಿತ್ರಗಳನ್ನು ಸುಂದರವಾಗಿ ಬರೆದಿಟ್ಟಿದ್ದಾನೆ. ಈ ಚಿತ್ರಗಳಿಂದ ಆಗಿನ ಕಾಲದಲ್ಲಿ ಕಟ್ಟಡಗಳನ್ನು ಕಟ್ಟುತ್ತಿದ್ದ ಕ್ರಮ, ಶಿಲ್ಪಿಗಳು ಬಳಸುತ್ತಿದ್ದ ಸಲಕರಣೆಗಳು ಮುಂತಾದವುಗಳ ಬಗ್ಗೆ ವಿಶೇಷ ಮಾಹಿತಿ ದೊರಕುತ್ತವೆ.

ಈ ಕಾಲದ ಶಿಲ್ಪಕ್ಕೆ ಉದಾಹರಣೆಯಾಗಿ ರೀಮ್ಸ್ ಕತೀಡ್ರಲ್‌ನ ಪಶ್ಚಿಮ ಮಹಾದ್ವಾರವನ್ನು ನೋಡಬಹುದು. ಕ್ರಿಸ್ತ ಅವತಾರ ಮಾಡುವನೆಂದು ಗೇಬ್ರಿಯಲ್ ಮೇರಿ ಕನ್ಯೆಗೆ ಮುನ್ಸೂಚನೆ ಕೊಡುವ ಮತ್ತು ಮೇರಿ ಎಲಿಜಬೆತಳನ್ನು ಸಂದರ್ಶಿಸಿದ – ಈ ಎರಡು ಶಿಲ್ಪ ಫಲಕಗಳು ಬಹು ಸುಂದರವಾದವು.

ಗಾತಿಕ್ ಕಲೆ ಯುರೋಪಿನ ಎಲ್ಲ ಭಾಗಗಳಲ್ಲಿಯೂ ಕಂಡು ಬಂದರೂ ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಮತ್ತು ಇಟಲಿಗಳಲ್ಲಿ ಇದರ ಪ್ರಾಬಲ್ಯ ಹೆಚ್ಚು. ಇಲ್ಲೆಲ್ಲ ಶುದ್ಧ ಗಾತಿಕ್ ಶೈಲಿಯೊಂದಿಗೆ ಸ್ಥಳೀಯ ಶೈಲಿ ಬೆರೆತಿರುವುದನ್ನು ಕಾಣಬಹುದು. ಕ್ಯಾಂಟರ್‌ಬರಿ ಕತೀಡ್ರಲ್‌ನ ಪೂರ್ವಭಾಗ 1174ರಲ್ಲಿ ಬೆಂಕಿಗೆ ಆಹುತಿಯಾಗಿ, ಅದರ ಪುನರ್ನಿರ್ಮಾಣ ಕಾರ್ಯ ಈ ಕಾಲದಲ್ಲಿ ಪ್ರಾರಂಭವಾಯಿತು. ಇದರಲ್ಲಿ ಇಂಗ್ಲೆಂಡಿನ ಸ್ಥಳೀಯ ಲಕ್ಷಣಗಳು ವಿಶೇಷವಾಗಿ ಕಾಣಬರುತ್ತವೆ. 1220ರಲ್ಲಿ ಪ್ರಾರಂಭವಾಗಿ 1240ರಲ್ಲಿ ಪೂರ್ಣಗೊಳಿಸಲ್ಪಟ್ಟ ಸ್ಯಾಲಿಸ್‌ಬರಿ ಕತೀಡ್ರಲ್ ಇಂಗ್ಲಿಷ್ ಗಾತಿಕ್ ಶೈಲಿಗೆ ಉತ್ತಮ ಉದಾಹರಣೆ. ಇದರಲ್ಲಿ ಅಲಂಕಾರಕ್ಕೆ ಹೆಚ್ಚು ಗಮನ ಕೊಟ್ಟಿರುವುದು ಕಾಣಬರುತ್ತದೆ. ಇದೇ ಪ್ರವೃತ್ತಿ ಇಂಗ್ಲಿಷ್ ಗಾತಿಕ್ ಶೈಲಿಯಲ್ಲಿ ಎದ್ದು ಕಾಣುತ್ತದೆ.

ಜರ್ಮನಿಯಲ್ಲಿ ಮೊದಮೊದಲು ರೋಮನೆಸ್ಕ್ ಶೈಲಿಯೇ ವಿಶೇಷವಾಗಿ ಅಭಿವೃದ್ಧಿ ಹೊಂದಿದ್ದು, ಗಾತಿಕ್ ಶೈಲಿಯ ಕಟ್ಟಡಗಳಲ್ಲೂ ಇದನ್ನೇ ಅಳವಡಿಸಲಾಗಿತ್ತು. ಕಲೋನ್‌ನ ಕತೀಡ್ರಲ್‌ನ್ನು ಕಟ್ಟಿದ (1248) ಶಿಲ್ಪಿ ಫ್ರಾನ್ಸ್ ದೇಶದಲ್ಲಿ ಶಿಕ್ಷಣ ಪಡೆದವನಾದುದರಿಂದ ಇಲ್ಲಿ ಫ್ರೆಂಚ್ ಶೈಲಿಯೇ ವಿಶೇಷವಾಗಿ ಕಾಣುತ್ತದೆ. ಹಲೆನ್‌ಕರ್ಚ್ ಎಲಿಜಬೆತ್‌ಕರ್ಚ್‌ಗಳ ಅಂಗಳ, ಪೂಜಾಗೃಹಗಳಲ್ಲಿ ರಿಫೈನ್ಡ್ ಗಾತಿಕ್ ಶೈಲಿಯನ್ನು ಗಮನಿಸಬಹುದು. ಈ ಕಾಲದ ಜರ್ಮನ್ ಗಾತಿಕ್ ಶಿಲ್ಪಗಳಲ್ಲಿ ಕಾಣಬರುವ ಮುಖ್ಯ ಲಕ್ಷಣವೆಂದರೆ ಚಲನೆ. ಶಿಲ್ಪಗಳು ಚಲಿಸುತ್ತಿವೆಯೊ ಎನ್ನುವ ರೀತಿಯಲ್ಲಿ ಅವನ್ನು ಕೆತ್ತಿರುವುದು ಇಲ್ಲಿನ ವೈಶಿಷ್ಟ್ಯ.



ಮಿಲಾನ್ (ಇಟಲಿ) ನಗರದ ಒಂದು ಚರ್ಚು. ಆರಂಭ 1386. ಗಾತಿಕ್ ಶೈಲಿಯ ಕಲ್ಲುಕುಸುರಿ ಕೆಲಸಕ್ಕೊಂದು ಒಳ್ಳೆಯ ಉದಾಹರಣೆ

ಸ್ಪೇನಿನಲ್ಲಿ ಅವಿಲ ಕತೀಡ್ರಲ್‌ನಿಂದ ಪ್ರಾರಂಭವಾಗಿ ಗಾತಿಕ್ ಶೈಲಿ ಬೆಳೆದುಬಂತು. ಇಲ್ಲಿನ ಕಮಾನು ಛಾವಣಿ ಪ್ರಾರಂಭದೆಶೆಯ ಗಾತಿಕ್ ಶೈಲಿಗೆ ಸೇರಿದುದು. ಅಲ್ಲಿಂದ ಮುಂದೆ ಇದೇ ಶೈಲಿ ಬೆಳೆಯಿತು. ಟೊಲೆಡೊ ಮತ್ತು ಬರ್ಗೋಸ್ ಕತೀಡ್ರಲ್‌ಗಳಲ್ಲಿ ಎತ್ತರಕ್ಕಿಂತ ವಿಶಾಲತೆಗೆ ಹೆಚ್ಚು ಪ್ರಾಮುಖ್ಯ ಕೊಟ್ಟಿರುವುದು ಕಂಡು ಬರುತ್ತದೆ. ಪಲ್ಮ, ಸೆವಿಲ್ ಕತೀಡ್ರಲ್‌ಗಳು ಹೊರನೋಟದಿಂದ ಭಿನ್ನ ರೀತಿಯವೆಂದೂ ಕಂಡುಬಂದರೂ ಅವು ಗಾತಿಕ್ ಶೈಲಿಯ ಕಟ್ಟಡಗಳೆನ್ನುವುದರಲ್ಲಿ ಸಂದೇಹವೇ ಇಲ್ಲ. ಗಾತಿಕ್ ಶಿಲ್ಪಶೈಲಿ ಸ್ಪೇನಿನಲ್ಲಿ ಸುಮಾರು 18ನೆಯ ಶತಮಾನದವರೆಗೂ ಬಳಕೆಯಲ್ಲಿತ್ತು.

ಗಾತಿಕ್ ಶಿಲ್ಪ ಶೈಲಿಯನ್ನು ತನ್ನ ಹೆಚ್ಚಿನ ಅನುಕೂಲಕ್ಕೆ ಅಳವಡಿಸಿಕೊಂಡ ದೇಶಗಳಲ್ಲಿ ಇಟಲಿ ಬಹು ಪ್ರಮುಖವಾದುದು. ಸ್ಥಳೀಯ ಲಕ್ಷಣಗಳೂ ಗಾತಿಕ್ ಶಿಲ್ಪಲಕ್ಷಣಗಳೂ ಮಿಳಿತಗೊಂಡು ಪುನರುಜ್ಜೀವನ ಶೈಲಿಯ ಉದಯಕ್ಕೆ ಕಾರಣವಾದ

ಇಟಾಲಿಯನ್ ಗಾತಿಕ್‌ನಲ್ಲಿ ವೈವಿಧ್ಯ ವಿಶೇಷವಾಗಿ ಕಂಡುಬರುತ್ತದೆ. ವಾಸ್ತು ಮತ್ತು ಶಿಲ್ಪಕಲೆಗಳಿಗಿಂತ ವರ್ಣಚಿತ್ರಗಳಿಗೆ ಇಲ್ಲಿ ಪ್ರಾಧಾನ್ಯ ಬಂದಿದೆ.

14 ಮತ್ತು 15ನೆಯ ಶತಮಾನದ ವಾಸ್ತುಶಿಲ್ಪ ಕಲೆ ಅದರ ಹಿಂದೆ ಇದ್ದ ಕಲೆಗಿಂತ ಭಿನ್ನವಾಗಿದ್ದು, ಒಂದು ಹೊಸ ಪ್ರವೃತ್ತಿಯನ್ನೇ ವ್ಯಕ್ತಪಡಿಸುತ್ತದೆ. ಆದುದರಿಂದ ಈ ಕಾಲದ ಕಲೆಯನ್ನು ಲೇಟ್ ಗಾತಿಕ್ (ಅಂತ್ಯ ಗಾತಿಕ್) ಎಂದು ಕರೆಯಬಹುದು. 14ನೆಯ ಶತಮಾನದ ಆರಂಭದಲ್ಲಿ ಯುರೋಪು ಉಚ್ಛ್ರಾಯಸ್ಥಿತಿಯಲ್ಲಿದ್ದರೂ ಕೆಲವೇ ವರ್ಷಗಳಲ್ಲಿ ನಡೆದ ಯುದ್ಧಗಳು ಬಂದೊದಗಿದ ಕ್ಷಾಮ ಮುಂತಾದ ಪರಿಸ್ಥಿತಿಗಳಿಂದ ದೇಶದ ಆರ್ಥಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿ ಹದಗೆಟ್ಟಿತು. ಈ ರೀತಿಯ ಪರಿಸ್ಥಿತಿಯಲ್ಲಿ ಲೇಟ್ ಗಾತಿಕ್ ಶೈಲಿ ಹುಟ್ಟಿ ಬೆಳೆಯಿತು. ಇದರಲ್ಲಿ ಎರಡು ಭೇದಗಳನ್ನು ಗುರುತಿಸಬಹುದು. ಲಂಬತ್ವವನ್ನು ಉಳಿಸಿಕೊಂಡ ಇಂಗ್ಲಿಷ್ ಶೈಲಿ ಮತ್ತು ಫ್ರಾನ್ಸಿನ ಫ್ಲಾಂಬಾಯಂಟ್ ಶೈಲಿ. 13ನೆಯ ಶತಮಾನದಲ್ಲಿಯೇ ಉದ್ದುದ್ದನೆಯ ಗೋಪುರಗಳ ಬಳಕೆ ಕಂಡುಬಂದಿತ್ತು. ಈಗ ಇದಕ್ಕೆ ಅಲಂಕಾರಗಳೂ ಸೇರಿದವು. ಕಮಾನು ಚಾವಣಿ ಆಗಿನ ಕಾಲದಲ್ಲಿ ಎಷ್ಟು ಸರಳವಾಗಿತ್ತೋ ಈಗ ಅಷ್ಟೂ ಅಲಂಕಾರಯುಕ್ತವಾಯಿತು. ಫ್ಲಾಂಬಾಯಟ್ ಶೈಲಿಯಲ್ಲಿ ಚರ್ಚುಗಳಿಗಿಂತ ಜಾಸ್ತಿಯಾಗಿ ಇತರ ಕಟ್ಟಡಗಳು ಬೆಳೆದುಬಂದವು. ಈ ಶೈಲಿಯಲ್ಲಿ ಶಿಲ್ಪಕ್ಕಿಂತ ವರ್ಣಚಿತ್ರಗಳಿಗೆ ವಿಶೇಷ ಗಮನವನ್ನು ಕೊಡಲಾಯಿತು. ಕ್ರಿಸ್ತನ ಜೀವನಕ್ಕೆ ಸಂಬಂಧಿಸಿದ ಶಿಲ್ಪ ಅಥವಾ ವರ್ಣಚಿತ್ರಗಳ ಜೊತೆಗೆ ಅರಮನೆಯ ರಾಜ ರಾಣಿಯರ, ಮಂತ್ರಿಗಳ ಜೀವನಕ್ಕೆ ಸಂಬಂಧಿಸಿದ ವರ್ಣಚಿತ್ರಗಳೂ ಬೆಳೆದು ಬಂದವು.

ಸುಮಾರು ಇದೇ ಕಾಲಕ್ಕೆ ಇಟಲಿಯಲ್ಲಿ ಮತ್ತು ಇತರ ಕಡೆಗಳಲ್ಲಿ ಪುನರುಜ್ಜೀವನ ಶೈಲಿಯ ಉಗಮವಾಗುತ್ತಿತ್ತಾಗಿ ಗಾತಿಕ್ ಶೈಲಿ ಮಂಕಾಗಿ ಹೊಸ ಶೈಲಿಯ ಉಗಮಕ್ಕೆ ದಾರಿ ಮಾಡಿಕೊಟ್ಟಿತು. (ಎ.ವಿ.ಎನ್.)

**ಗಾತ್ರಾನುಗುಣ ಪ್ರತಿಫಲ :** ಒಂದು ಉದ್ಯಮ ಸಂಸ್ಥೆಯ ಉತ್ಪಾದನ ಗಾತ್ರದಲ್ಲಿ (ಸ್ಕೇಲ್ ಆಫ್ ಪ್ರೊಡಕ್ಷನ್) ವ್ಯತ್ಯಾಸ ಮಾಡಿದಾಗ ಅದರಿಂದಾಗಿ ಆ ಸಂಸ್ಥೆಯ ಪ್ರದಾನದ ಮೇಲೆ (ಔಟ್‌ಪುಟ್ : ಉತ್ಪತ್ತಿ) ಆಗುವ ಪರಿಣಾಮ (ರಿಟರ್ನ್ಸ್ ಟು ಸ್ಕೇಲ್). ಒಂದು ಪದಾರ್ಥದ (ಕಮಾಡಿಟಿ) ಉತ್ಪಾದನೆಗೆ ಬಳಸಲಾಗುವ ಆದಾನಗಳಲ್ಲಿ (ಇನ್‌ಪುಟ್) ಸ್ಥಿರ (ಫಿಕ್ಸೆಡ್) ಮತ್ತು ಚರ (ವೇರಿಯ ಬಲ್) ಎಂಬ ಎರಡು ವಿಧಗಳಿವೆ. ಯಂತ್ರಸ್ಥಾವರ, ಸಲಕರಣೆ ಮುಂತಾದವು ಆದಾನಗಳು, ಶ್ರಮ, ವಿದ್ಯುತ್ತು, ಕಚ್ಚಾ ಸಾಮಗ್ರಿ (ರಾ ಮೆಟೀರಿಯಲ್ಸ್) ಮುಂತಾದವು ಚರ ಆದಾನಗಳು. ಎಷ್ಟು ಸ್ಥಿರ ಆದಾನಗಳನ್ನು ಬಳಸಬೇಕೆಂಬ ನಿರ್ಧಾರಗಳು ಒಂದು ಉದ್ಯಮ ಸಂಸ್ಥೆಯ ದೀರ್ಘಕಾಲಿಕ ಉತ್ಪಾದನ ಯೋಜನೆಗೂ ಎಷ್ಟು ಚರ ಆದಾನಗಳನ್ನು ಬಳಸಬೇಕೆಂಬ ನಿರ್ಧಾರಗಳು ಅಲ್ಪಕಾಲಿಕ ಉತ್ಪಾದನ ಯೋಜನೆಗಳಿಗೂ ಸಂಬಂಧಿಸಿದವು. ಸ್ಥಿರ ಆದಾನಗಳು ಬದಲಾಗದಿದ್ದು, ಒಂದೇ ಗುಣಗಳುಳ್ಳವು ಆಗಿದ್ದು, ಚರ ಆದಾನಗಳು ಬದಲಾಗುತ್ತಿದ್ದರೆ ಪ್ರದಾನದ ಪರಿಮಾಣ ಬದಲಾಗುತ್ತದೆ. ಒಂದು ಪ್ರಕ್ರಿಯೆಯಲ್ಲಿ (ಪ್ರೋಸೆಸ್) ಒಂದು ಕಾಲದ ಒಂದು ನಿರ್ದಿಷ್ಟ ಏಕಮಾನದಲ್ಲಿ (ಯೂನಿಟ್) ದೊರಕುವ ಪ್ರದಾನದ (ಔಟ್‌ಪುಟ್) ಪರಿಮಾಣ $y$ ಆಗಿದ್ದು, ಚರ ಆದಾನದ ಪರಿಮಾಣ ಆಗಿದ್ದರೆ ಎಂಬುದು ಪ್ರದಾನ ಮತ್ತು ಆದಾನ ಇವುಗಳ ಸಂಬಂಧವನ್ನು ನಿರೂಪಿಸುತ್ತದೆ. ಅದೇ ಕಾಲದ ಏಕಮಾನದಲ್ಲಿ ಪ್ರದಾನದ ಪರಿಮಾಣ ಆಗಿದ್ದು, ಇವು ಚರ ಆದಾನಗಳ ಪರಿಮಾಣಗಳಾಗಿದ್ದರೆ

$$y = f(x_1, x_2)$$

ಎಂಬುದು ಪ್ರದಾನ ಮತ್ತು ಆದಾನಗಳ ಸಂಬಂಧವನ್ನು ನಿರೂಪಿಸುತ್ತದೆ.

ಒಂದೇ ಕಾಲದಲ್ಲಿ ಎಲ್ಲ ಆದಾನಗಳಲ್ಲೂ ಒಂದೇ ಪ್ರವಾಣದಲ್ಲಿ ಬದಲಾವಣೆಗಳನ್ನು ಮಾಡಿದಾಗ ಪ್ರದಾನದಲ್ಲಿ ಆಗುವ ಬದಲಾವಣೆಗಳೇ ಗಾತ್ರಾನುಗುಣ ಪ್ರತಿಫಲ. ಕೆಲವು ಪ್ರಕ್ರಿಯೆಗಳು ಏರುಮುಖದ, ಕೆಲವು ಸ್ಥಿರವಾಗಿರುವ, ಮತ್ತೆ ಕೆಲವು ಕಡಿಮೆಯಾಗುತ್ತಿರುವ ಗಾತ್ರಾನುಗುಣ ಪ್ರತಿಫಲಗಳನ್ನು ಪ್ರದರ್ಶಿಸುವುವು. ಇನ್ನೂ ಕೆಲವು ಪ್ರಕ್ರಿಯೆಗಳು ಉತ್ಪನ್ನದ ವಿವಿಧ ಹಂತಗಳಲ್ಲಿ ಮೂರು ಬಗೆಯ ಪ್ರತಿಫಲಗಳನ್ನೂ ಪ್ರದರ್ಶಿಸಬಹುದು. ಆದಾನಗಳನ್ನು a ದರದಲ್ಲಿ ಬದಲಾಯಿಸಿದಾಗ ಪ್ರದಾನ β ದರಲ್ಲಿ ಬದಲಾವಣೆ ಹೊಂದಿದರೆ $(\alpha > 1, \beta > 1)$ ಅವಲಂಬಿತ ಪರಿಮಾಣ ಆಗುತ್ತದೆ.

ಇದರಲ್ಲಿ > ಆಗಿದ್ದರೆ ಹೆಚ್ಚುತ್ತಿರುವ ಗಾತ್ರಾನುಗುಣ ಪ್ರತಿಫಲವಿರುತ್ತದೆ;
= ಆಗಿದ್ದರೆ ಸ್ಥಿರ ಗಾತ್ರಾನುಗುಣ ಪ್ರತಿಫಲವಿರುತ್ತದೆ;
< ಆಗಿದ್ದರೆ ಕಡಿಮೆಯಾಗುತ್ತಿರುವ ಗಾತ್ರಾನುಗುಣ ಪ್ರತಿಫಲವಿರುತ್ತದೆ.

ಉದಾಹರಣೆಗೆ ಒಂದು ಪ್ರಕ್ರಿಯೆಯಲ್ಲಿ ಆದಾನ ಪ್ರದಾನಗಳ ಮತ್ತು ಉತ್ಪನ್ನಗಳ ಪರಿಮಾಣಗಳು ಹೀಗಿರಲಿ :

| | **ಆದಾನ 1** | **ಆದಾನ 2** | **ಪ್ರದಾನ** |
|---|---|---|---|
| 1 | 10 | 6 | 20 |
| 2 | 15 | 9 | 35 |
| 3 | 20 | 12 | 40 |
| 4 | 25 | 15 | 45 |

ಒಂದನೆಯ ಸ್ಥಿತಿಯನ್ನು ಎರಡನೆಯ, ಮೂರನೆಯ ಮತ್ತು ನಾಲ್ಕನೆಯ ಸ್ಥಿತಿಗಳೊಡನೆ ಹೋಲಿಸಬಹುದು. ಒಂದನೆಯ ಸ್ಥಿತಿಯಿಂದ ಎರಡನೆಯ ಸ್ಥಿತಿಗೆ ಏರುಮುಖ ಗಾತ್ರಾನುಗುಣ ಪ್ರತಿಫಲವಿದೆ. ಒಂದನೆಯ ಸ್ಥಿತಿಯಿಂದ ಮೂರನೆಯ ಸ್ಥಿತಿಗೆ ಸ್ಥಿರ ಗಾತ್ರಾನುಗುಣ ಪ್ರತಿಫಲವಿದೆ. ಒಂದನೆಯ ಸ್ಥಿತಿಯಿಂದ ನಾಲ್ಕನೆಯ ಸ್ಥಿತಿಗೆ ಇಳಿಮುಖ ಗಾತ್ರಾನುಗುಣ ಪ್ರತಿಫಲವಿದೆ. (ಎಂ.ಎ.ಎಸ್.)

**ಗಾಥಾ[1] :** ಈ ಶಬ್ದ ವೇದಗಳಲ್ಲಿ ಸ್ತೋತ್ರರೂಪ ಶ್ಲೋಕವೆಂಬ ಅರ್ಥದಲ್ಲಿಯೂ ಸಂಸ್ಕೃತದಲ್ಲಿ ಹಾಡುವ ಗಾದೆಯಂಥ ಸೂಕ್ತಿಯೆಂಬ ಅರ್ಥದಲ್ಲಿಯೂ ಪ್ರಾಕೃತದಲ್ಲಿ ಆರ್ಯಾವೃತ್ತಕ್ಕೆ ಸಮಾನವಾದ ಒಂದು ಮಾತ್ರಾವೃತ್ತದ ಛಂದೋಬಂಧವೆಂದೂ ಬಳಕೆಯಲ್ಲಿದೆ (**ನೋಡಿ– ಗಾಥಾ[2]**). ಆದರೆ ಇದು ಬಹಳಷ್ಟು ಪ್ರಸಿದ್ಧಿಗೆ ಬಂದುದು ಪ್ರಾಚೀನ ಪಾರಸಿಕರ ಪವಿತ್ರ ಗ್ರಂಥವಾದ ಝೆಂಡ್ ಅವೆಸ್ತದ ಒಂದು ಭಾಗವಾಗಿರುವುದರಿಂದಲೇ ಎನ್ನಬಹುದು.

ಪ್ರಚಲಿತ ಶಕ ಪೂರ್ವ 7ನೆಯ ಶತಮಾನದ ವೇಳೆಗೆ ಆಕಿಮೋನಿಯನ್ ಚಕ್ರವರ್ತಿಗಳಾದ ಡೇರಿಯಸ್ ಮುಂತಾದವರ ಕಾಲದಲ್ಲಿ ಈ ಪವಿತ್ರಗ್ರಂಥ ಸಾಕಷ್ಟು ಪ್ರಚಾರಗೊಂಡು ಅಲೆಕ್ಸಾಂಡರನ ದಂಡಯಾತ್ರೆಯ ಹೊತ್ತಿಗೆ ಪ್ರಸಿದ್ಧಿಗೆ ಬಂದಾಗಿತ್ತು. ಭಾರತದಲ್ಲಿ ವೇದಗಳಿರುವ ಮಹತ್ತ್ವದ ಸ್ಥಾನವೇ ಅವೆಸ್ತಕ್ಕೆ ಅಂದಿನಿಂದ ಇಂದಿನವರೆಗೂ ಪಾರಸಿಕರಿಂದ ದತ್ತವಾಗಿದೆ. ಈ ಗ್ರಂಥ ಕಾಲದಿಂದ ಕಾಲಕ್ಕೆ ಬೆಳೆಯುತ್ತ ಬಂದು ಈಗ ಬಹು ವಿಸ್ತಾರವಾಗಿದೆ. ಅದರ ಪ್ರಾಚೀನತಮ ಭಾಗವೇ ಝೊರಾಸ್ಟರನ ಮೂಲ ಸಂದೇಶವನ್ನೊಳಗೊಂಡ ಪದ್ಯರೂಪವಾದ ಗಾಥೆಗಳೆಂದು ವಿದ್ವಾಂಸರು ಭಾವಿಸುತ್ತಾರೆ.

ಅವೆಸ್ತದ ಗಾಥೆಗಳು ಐದು ವೃತ್ತಜಾತಿಗಳನ್ನೊಳಗೊಳ್ಳುತ್ತವೆ : 1 ಅಹುನ ವೈತಿ, 2 ಉಷ್ಟವೈತಿ, 3 ಸ್ಪೆಂಟ ಮೆಯ್ನ್ಯು, 4 ವೊಹುಕ್ಷಥ್ರ ಮತ್ತು 5 ವಹಿಸ್ಟೋಯಿಸ್ಟಿ. ಮಿಕ್ಕ ಭಾಗಗಳಿಗಿಂತ ಗಾಥೆಗಳಲ್ಲಿ ಝೊರಾಸ್ಟರನ ವೈಯಕ್ತಿಕ ಉಪದೇಶಗಳೂ ಬೋಧನಗಳೂ ಎದ್ದು ಕಾಣುತ್ತವೆ. ಅಹುರಮಜ್ದ (ಒಳ್ಳೆಯದರ ಅಧಿದೈವ) ಮತ್ತು ಅಹ್ರಿಮನ್ (ಕೆಟ್ಟದರ ಅಧಿದೈವ)–ಇವುಗಳ ನಿತ್ಯಸ್ಪರ್ಧೆ, ಇದರಲ್ಲಿ ಮನುಷ್ಯನ ಸಂಬಂಧ, ಕಟ್ಟಕಡೆಗೆ ಅಧರ್ಮ ನಾಯಕನಾದ ಅಹ್ರಿಮನ್ನನ ವಿನಾಶ–ಇವು ಗಾಥೆಗಳಲ್ಲಿ ಬರುವ ಮುಖ್ಯಾಂಶಗಳು. (ಕೆ.ಕೆ.)

**ಗಾಥಾ[2] :** ಗೀಯತೇ ಇತಿ–ಎಂಬ ವಿವರಣೆಯುಳ್ಳದ್ದು. ಋಗ್ವೇದದಲ್ಲಿ ಗಾತವ್ಯಸ್ತೋತ್ರವೆಂಬ ಅರ್ಥದಲ್ಲಿ ಗಾಥಾ ಶಬ್ದವನ್ನು ಕಾಣಬಹುದು; ಋಕ್, ಸಾಮ, ಯಜುಸ್ ಎಂಬ ವೇದಮಂತ್ರಗಳಿಗಿಂತ ಬೇರೆಯಾಗಿರುವ ಛಂದೋಬದ್ಧ ರಚನೆ. ಸ್ವರ ಸಂಗೀತಯುಕ್ತವಾದ ವೈದಿಕವೃತ್ತಗಳು ಲಘು–ಗುರು ವಿನ್ಯಾಸಜನ್ಯ ಸಂಗೀತದಿಂದ ಕೂಡಿದ ವೃತ್ತಗಳಾಗಿ ಪರಿವರ್ತನೆ ಹೊಂದುತ್ತಿರುವಾಗ ಬ್ರಾಹ್ಮಣಗಳಲ್ಲಿ ಅನುಷ್ಟುಭ್ ಮುಂತಾದ ಕೆಲವು ವೃತ್ತಗಳು ಗಾನಯೋಗ್ಯವಾಗಿ ಪಡೆದಿರುವ ಹೆಸರಿದು. ಮುಖ್ಯವಾಗಿ ಪ್ರಾಕೃತಕಾವ್ಯದ ಒಂದು ಮಾತ್ರಾವೃತ್ತ; ಇದರ ಸಂಸ್ಕೃತರೂಪ ಆರ್ಯಾ ಎನಿಸಿಕೊಂಡಿದೆ. ಛಂದೋಗ್ರಂಥಗಳಲ್ಲಿ ನಿರ್ದೇಶಿಸದೆ ಬಿಟ್ಟಿರುವ ವೃತ್ತಗಳ ಸಾಮಾನ್ಯ ಹೆಸರು.

ಸಂಸ್ಕೃತದಲ್ಲಿ ಕಂಡುಬರುವ ಮತ್ತು ಸ್ವಲ್ಪ ಹೆಚ್ಚು ಕಡಿಮೆಯಾಗಿ ವೈದಿಕ ಛಂದಸ್ಸಿನ ಹಿನ್ನೆಲೆಯುಳ್ಳ ಅಕ್ಷರವೃತ್ತ, ವರ್ಣವೃತ್ತ, ಮಾತ್ರಾವೃತ್ತ–ಇವುಗಳಲ್ಲಿ ಕಡೆಯವು ಪ್ರಾಕೃತ ಛಂದಸ್ಸಿನ ಕೆಲವು ಜಾನಪದಗೀತೆಗಳ ಪ್ರಭಾವದಿಂದ ರೂಪುಗೊಂಡಿವೆಯೆಂದು ವಿದ್ವಾಂಸರ ಅಭಿಪ್ರಾಯ. ವೈದಿಕ ಛಂದಸ್ಸಿನಂತೆ ಅಕ್ಷರವಾಗಲಿ, ಸಂಸ್ಕೃತಕಾವ್ಯ ಛಂದಸ್ಸಿನ ವರ್ಣವಾಗಲಿ (ಲಘು – ಗುರುಯುಕ್ತ) ಪ್ರಾಕೃತ ಜನಪದ ಗೀತೆಗಳ ಕಾಲಮಾನವಾಗಲಿ (ಕಾಲಮಾತ್ರೆ) ಮಾತ್ರಾವೃತ್ತಗಳ ಆಧಾರಾಂಶಗಳಾಗಿಲ್ಲ. ಅವುಗಳ ವೈಲಕ್ಷಣ್ಯವೆಂದರೆ ಅಕ್ಷರಮಾತ್ರೆಗಳ ಅಂಶತ್ವ. ಅವನ್ನು ನಾಲ್ಕು ಮಾತ್ರೆಗಳ (ಚತುರ್ಮಾತ್ರೆ) ಮಾತ್ರಾಗಣದಿಂದ ವಿಭಾಗ ಮಾಡಿ ಗುರುತಿಸುವುದುಂಟು.

ಗಾಥಾ ಎಂಬ ಈ ಪ್ರಾಕೃತ ವೃತ್ತದಲ್ಲಿ ಎರಡು ಶ್ಲೋಕಾರ್ಧಗಳಿದ್ದು, ಒಂದೊಂದರ್ಧದಲ್ಲೂ ಎರಡು ಭಾಗಗಳಿರುತ್ತವೆ. ಎರಡು ಅರ್ಧಗಳ ಪ್ರಥಮ ಭಾಗಗಳಲ್ಲಿ 12 ಮಾತ್ರೆಗಳಿದ್ದು, ಒಂದನೆಯ ಅರ್ಧದ ದ್ವಿತೀಯ ಭಾಗದಲ್ಲಿ 18 ಮಾತ್ರೆಗಳೂ ಎರಡನೆಯ ಅರ್ಧದ ದ್ವಿತೀಯ ಭಾಗದಲ್ಲಿ 15 ಮಾತ್ರೆಗಳೂ ಇರುತ್ತವೆ. ಅಂದರೆ

ಒಟ್ಟಿನಲ್ಲಿ ಮೊದಲನೆಯ ಶ್ಲೋಕಾರ್ಧದಲ್ಲಿ 30 ಮಾತ್ರೆಗಳೂ ಎರಡನೆಯದರಲ್ಲಿ 27 ಮಾತ್ರೆಗಳೂ ಇದ್ದಂತಾಯಿತು. ಪ್ರಥಮ ಭಾಗಗಳಲ್ಲಿ ಒಂದೊಂದರ 12 ಮಾತ್ರೆಗಳೂ ಚತುರ್ಮಾತ್ರೆಯ ಮಾತ್ರಾಗಣದ ಐದು ರೂಪಗಳಲ್ಲಿ ಯಾವುದಾದರೂ ಮೂರೂ ಚತುರ್ಮಾತ್ರೆಗಳುಳ್ಳವು. ಮೊದಲರ್ಧದ ದ್ವಿತೀಯ ಭಾಗದಲ್ಲಿ ನಾಲ್ಕು ಚತುರ್ಮಾತ್ರೆಗಳೂ (ಇವುಗಳಲ್ಲಿ ಮೂರನೆಯ ಚತುರ್ಮಾತ್ರೆ ಜಗಣವೋ ಸರ್ವಲಘುವೋ ಆಗಿರಬೇಕು) ಅನಂತರ ಕಡೆಯಲ್ಲಿ ಒಂದು ಗುರುವೂ ಇದ್ದು, ಎರಡನೆಯ ಅರ್ಧದ ದ್ವಿತೀಯ ಭಾಗದಲ್ಲಿ ಯಾವುದಾದರೂ ಎರಡು ಚತುರ್ಮಾತ್ರೆಗಳು, ಅನಂತರ ಒಂದು ಲಘು, ಯಾವುದಾದರೂ ಒಂದು ಚತುರ್ಮಾತ್ರೆ ಮತ್ತು ಕಡೆಯಲ್ಲಿ ಒಂದು ಗುರು ಇರುತ್ತವೆ.

ಈ ಗಾಥಾ ವೃತ್ತದಲ್ಲಿ ಗಮನಿಸಬೇಕಾದ ಇನ್ನೆರಡು ವಿಷಯಗಳೆಂದರೆ– ಚತುರ್ಮಾತ್ರೆಗಳು ನಿರಂತರವಾಗಿ ಬಂದಾಗ ಒಂದು ಚತುರ್ಮಾತ್ರೆಯ ಕಡೆಯ ಮಾತ್ರೆಗೂ ಮುಂದಿನ ಚತುರ್ಮಾತ್ರೆಯ ಮೊದಲನೆಯದಕ್ಕೂ ಮಧ್ಯೆ ಏರ್ಪಡುವ ಸಂಧಿಸ್ಥಾನದಲ್ಲಿ ಅವೆರಡರ ಸಂಯೋಗವಾಗುವಂತೆ ದೀರ್ಘಾಕ್ಷರವನ್ನು ಬಳಸದಿರುವಿಕೆ ಮತ್ತು ಎಲ್ಲಿ ನಿರ್ದಿಷ್ಟವಾಗಿಲ್ಲವೋ ಅಂಥ ಕಡೆಗಳಲ್ಲಿ ಜಗಣದ ಪ್ರಯೋಗ ನಿಷೇಧ.

ಜ಼ೆಂಡ್ ಅವೆಸ್ತದ ಭಾಗವಾಗಿ ಬರುವ ಗಾಥಾ ಎಂಬ ಪದದ ವಿವರಗಳಿಗೆ **(ನೋಡಿ– ಗಾಥಾ[1])**. (ಬಿ.ಕೆ.ಎಸ್.)

**ಗಾದೆಗಳು :** ತಲೆಮಾರಿನಿಂದ ತಲೆಮಾರಿಗೆ ಪರಂಪರಾಗತವಾಗಿ ಹರಿದು ಬಂದಿರುವ ಸಾಂದ್ರವೂ ಬೋಧಪರವೂ ಆದ ಸೂಕ್ತಿಯೇ ಗಾದೆ (ಪ್ರಾವರ್ಬ್). ಕನ್ನಡದಲ್ಲಿ ಗಾದೆ ಪದಕ್ಕೆ ಸಂವಾದಿಯಾಗಿ ನಾಣ್ಣುಡಿ ಎಂಬ ಪದವೂ ಪ್ರಚಲಿತವಿದೆ. ಗಾದೆ ಸಂಸ್ಕೃತದ ಗಾಥಾ ಪದದಿಂದ ಬಂದಿದ್ದೆಂದು ಹೇಳುತ್ತಾರೆ. ಇದು ಗಾಥಾ ಪದದ ನೇರ ತದ್ಭವವೊ ಅಥವಾ ಪ್ರಾಕೃತದ ಗಾಹೆಯ ಮೂಲಕ ಬಂದುದೊ ಹೇಳಲು ಕಷ್ಟ. ಆದರೆ ಗಾಥಾ ಎಂಬುದು ಮೂಲದಲ್ಲಿ ಒಂದು ಛಂದಸ್ಸಿನ ಜಾತಿಯನ್ನು ಸೂಚಿಸುತ್ತದೆಯೆಂದು ಮಾತ್ರ ಹೇಳಬಹುದು. ಅಂತು 'ನಾಣ್ಣುಡಿ' ಯನ್ನು ಮರೆಸುವಷ್ಟರಮಟ್ಟಿಗೆ 'ಗಾದೆ' ಪ್ರಚಾರದಲ್ಲಿದೆ. ಗಾದೆಗೆ ಸಂವಾದಿಯಾಗಿ ಸಾಮತಿ, ಸೂಕ್ತಿ, ಸೂತ್ರ, ಉದ್ಧರಣೆ, ಲೋಕೋಕ್ತಿ, ಪ್ರಾಚೀನೋಕ್ತಿ ಇತ್ಯಾದಿಗಳು ಬಳಕೆಯಾಗಿದ್ದರೂ ಮೂಲಾರ್ಥದಲ್ಲಿ ಇವೆಲ್ಲವೂ ಒಂದೇ ಎನ್ನಲಾಗುವುದಿಲ್ಲ.

ಜನಪದ ಸಾಹಿತ್ಯದ ಉಳಿದೆಲ್ಲ ಪ್ರಕಾರಗಳಿಗಿಂತ ಗಾದೆ ವ್ಯಾಪಕವೂ ಜನ ಸಂಮುಖವೂ ಆಗಿದೆಯಲ್ಲದೆ, ಜನಸಾಮಾನ್ಯರ ಬದುಕು ಭಾಷೆಗಳಲ್ಲಿ ಹಾಸು ಹೊಕ್ಕಾಗಿದೆ. ಗ್ರಾಮೀಣ ಜನ ಮಾತನಾಡುವಾಗಲೆಲ್ಲ ಗಾದೆಗಳು ಪುಂಖಾನು ಪುಂಖವಾಗಿ ಬರುವುದನ್ನು ಕಾಣುತ್ತೇವೆ. ಅವಿಲ್ಲದೆ ಹೋದರೆ ಮಾತು ಸಪ್ಪೆಯಾಗುತ್ತದೆ. ಆದ್ದರಿಂದಲೆ ಸಮಯಕ್ಕೆ ಸರಿಯಾಗಿ ಗಾದೆ ಬಾರದೆ ಹೋದರೆ, ಹಿಂದಕ್ಕೆ ಏನೋ ಗಾದೆ ಹೇಳಿದ ಹಾಗಾಯ್ತು ಎಂದು ಹೇಳುವುದರ ಮೂಲಕ ಅದರ ಆವಶ್ಯಕತೆಯನ್ನು ಒತ್ತಿ ಹೇಳುತ್ತಾರೆ. ಗಾದೆ ಆಡುಮಾತಿನ ಜೀವಸತ್ತ್ವ ಎಂಬುದನ್ನು ಇದು ತೋರಿಸಿಕೊಡುತ್ತದೆ. ಊಟಕ್ಕೆ ಉಪ್ಪಿನಕಾಯಿಯಂತೆ ಗಾದೆ ಮಾತಿಗೆ ವ್ಯಂಜನಶಕ್ತಿಯನ್ನು ಒದಗಿಸುತ್ತದೆ. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಗಾದೆಯೇ ಗಾದೆಯ ಸ್ವರೂಪವನ್ನು ತಿಳಿಸುತ್ತದೆ. ಇದು ಆಕಾರದಲ್ಲಿ ವಾಮನನಾಗಿ ಅರ್ಥದಲ್ಲಿ ತ್ರಿವಿಕ್ರಮವೆನಿಸಿದೆ.

ಗಾದೆ ಜನಜೀವನದ ವ್ಯಾಪಕ ಸತ್ತ್ವ, ತತ್ತ್ವ : ನೂರು ಭಾವದ ನೂರು ವಿಷಯದ ನೂರು ಅಭಿವ್ಯಕ್ತಿ. ಇಲ್ಲಿ ವ್ಯಕ್ತಗೊಂಡಿರುವ ಅನುಭವಜಗತ್ತು ಅನ್ಯಾದೃಶವಾದುದು. ಹಾಗೆ ನೋಡಿದಾಗ ಇವುಗಳ ಕರ್ತಾರರನ್ನು ಅಸಂಸ್ಕೃತರೆನ್ನುವುದು ದೂರದ ಮಾತಾಗಿಯೇ ಉಳಿಯುತ್ತದೆ. ಗ್ರಾಮಜೀವನಕ್ಕೆ ಕಾಲಿರಿಸಿದ ಕೂಡಲೇ ಇಂಥ ಗಾದೆಗಳ ಬಿಸಿ ತಾಗುತ್ತದೆ. ಕೆಲವು ಬೆಳದಿಂಗಳಿನಂತೆ ತಂಪಾದರೆ, ಮತ್ತೆ ಕೆಲವು ಬಿಸಿಲಿನಂತೆ ಮೈ ಸುಡುತ್ತವೆ; ಬೆಂಕಿಯ ಕಿಡಿಗಳಂತೆ ಕೆಲವಾದರೆ, ಇಬ್ಬನಿಯಂಥವು ಮತ್ತೆ ಕೆಲವು; ಕೆಲವು ಮುತ್ತಿಕ್ಕಿದರೆ, ಮತ್ತೆ ಕೆಲವು ಮುತ್ತಿಗೆ ಹಾಕುತ್ತವೆ. ಇನ್ನು ಕೆಲವಂತೂ ಸಿಡಿಲಪೊಟ್ಟಣಗಳೇ ಸರಿ. ಇವಕ್ಕೆ ಅಪಮೌಲ್ಯದ ಭಯವಿಲ್ಲ, ಕೊಳೆಕಟ್ಟಿ ಮಾಸಿ ಹೋಗುತ್ತವೆ ಎಂಬ ಶಂಕೆಯಿಲ್ಲ. ಇವು ನೀರಸ ಕವಿಸಮಯಗಳಲ್ಲ, ವಿಚಾರದ ವಿಸ್ಫುಲಿಂಗಗಳು; ಸೂಕ್ತ ಸಂದರ್ಭಗಳಲ್ಲಿ ತಾಳಿದ ಯೋಗ್ಯ ನಿರ್ಣಯಗಳು.

ಗಾದೆ ಹಲವಾರು ಮಾತುಗಳ ಘಟಕ. ಆದ್ದರಿಂದಲೇ ಅದು ಸಾವಿರ ಮಾತಿನ ಸರದಾರ. ಅದು ಹಲವರ ಜ್ಞಾನ, ಒಬ್ಬನ ವಿವೇಕ ವ್ಯಾಖ್ಯಾನವನ್ನು ಅಪೇಕ್ಷಿಸುವ ಹೇಳಿಕೆ. ರಾಷ್ಟ್ರೀಯ ಮಣ್ಣಿನಲ್ಲಿ ಬೆಳೆದ ಬೆಳೆ. ಜರ್ಮನ್ ಗಾದೆಗಳ ಸಂಗ್ರಹಕಾರ ಇಸೆಲಿಯನ್ನನ ಪ್ರಕಾರ, ಗಾದೆಗಳೆಂದರೆ ಜನಸಾಮಾನ್ಯರಲ್ಲಿ ಚಲಾವಣೆಯಲ್ಲಿರುವ ಸಾರ್ವಜನಿಕ ಮುದ್ರೆ ಬಿದ್ದಿರುವ ಪ್ರಚಲಿತವೂ ಸ್ವೀಕೃತ ಮೌಲ್ಯಭರಿತವೂ ಆಗಿರುವ ನಾಣ್ಯ. ಎಸ್. ಜಿ. ಚಾಂಪಿಯನ್ ಎಂಬ ವಿದ್ವಾಂಸ ತನ್ನ ಜನಾಂಗಿಕ ಗಾದೆಗಳು ಎಂಬ ಬೃಹತ್ ಸಂಕಲನಕ್ಕೆ ಪ್ರಸ್ತಾವನೆ ಬರೆಯುತ್ತ ಹೀಗೆ ಹೇಳಿದ್ದಾನೆ : ನನ್ನ ಅಭಿಪ್ರಾಯದಲ್ಲಿ ಗಾದೆಯೆಂದರೆ ಜನರ ಬಳಕೆಯಲ್ಲಿದ್ದು, ಈಗಲೂ ಇರುವ, ಉಪದೇಶಾತ್ಮಕ ಅಥವಾ ಸಲಹೆಯನ್ನು ನೀಡುವ, ನಿಜವಾದ ಅರ್ಥವನ್ನು ಮರೆಸಿ ಅಲಂಕಾರಿಕವಾಗಿ ವ್ಯಕ್ತವಾಗಿರುವ, ರೂಪಕ ಅಥವಾ ಗೂಢಾರ್ಥದ್ಯೋತಕವಾಗಿ ಕಾಣಿಸಿಕೊಳ್ಳುವ ಜನಾಂಗವೊಂದರ ಸೂಕ್ತಿ. ಇನ್ನೊಬ್ಬ ವಿದ್ವಾಂಸ ಜೆ. ಎ. ಕೆಲ್ಲೊ ಗಾದೆಗಳಲ್ಲಿ ನಾಲ್ಕು ಗುಣಗಳನ್ನು ಹೆಸರಿಸುತ್ತಾನೆ : ಸಂಕ್ಷಿಪ್ತತೆ, ವಿವೇಕ ಪೂರ್ಣತೆ, ತೀಕ್ಷ್ಣತೆ ಮತ್ತು ಜನಪ್ರಿಯತೆ. ಇವುಗಳ ಒಂದೊಂದರ ವಿವರಣೆ ಅಗತ್ಯವೆನಿಸುತ್ತದೆ.

ಗಾದೆ ಆವಶ್ಯ ಪದಗಳ ಮಿತವ್ಯಯವೇ ಸರಿ. ಅಲ್ಲದೆ ಗಾದೆಯಲ್ಲಿ 20 ಪದಗಳಿಗಿಂತ ಹೆಚ್ಚು ಇರಬಾರದೆಂದು ವಿದ್ವಾಂಸರು ಹೇಳುತ್ತಾರೆ. ಯಾವ ಭಾಷೆ ಅವ್ಯಯ ಮತ್ತು ಪ್ರತ್ಯಯಗಳಲ್ಲಿ ಸಂಪದ್ಯುಕ್ತವಾಗಿರುತ್ತದೊ ಅದು ಗಾದೆ ನಿರ್ಮಾಣಗೊಳ್ಳುವಾಗಲೆ ಹೆಚ್ಚು ವಿಷಯಗಳನ್ನು ತನ್ನಲ್ಲಿ ಅಡಕಮಾಡಿಕೊಳ್ಳುತ್ತದೆ ಎಂದೂ ಒಂದು ಅಭಿಪ್ರಾಯವಿದೆ. ಗಾದೆ ಸಂಕ್ಷಿಪ್ತವಾಗಿರಬೇಕೆಂಬುದನ್ನು ಈ ಎಲ್ಲ ಮಾತುಗಳು ಸಮರ್ಥಿಸುತ್ತವೆ. ಆದರೆ ಕೆಲವು ಗಾದೆಗಳು ಸಹಜವಾಗಿ ನೀಡಿದಾಗಿರುವುದರಿಂದ ಸಂಕ್ಷಿಪ್ತತೆಗೆ ಇವನ್ನು ಅಪವಾದಗಳಾಗಿ ಪರಿಗಣಿಸಬೇಕಾಗುತ್ತದೆ. ಈ ದೀರ್ಘ ಗಾದೆಗಳು ಶಕ್ತನಿರೂಪಣೆ, ಸೂಕ್ಷ್ಮ ಭಾವುಕತೆ, ಪ್ರಾದೇಶಿಕತೆಗಳಿಗೆ ಹೆಸರಾಗಿದ್ದರೂ ಅನುಭವ ಸಾಂದ್ರತೆಯಲ್ಲಿ ಚಿಕ್ಕ ಗಾದೆಗಳ ಹಾಗೆ ವರ್ಚಸ್ವಿಯಾಗಲಾರವೆಂದು ತೋರುತ್ತದೆ.

ಗಾದೆಯ ಮತ್ತೊಂದು ಅಂಶ ವಿವೇಕಪೂರ್ಣತೆ. ಗಾದೆ ಜನಪ್ರಿಯವಾಗಬೇಕಾದರೆ ಬಹಳ ಕಾಲ ಬಾಳಿಕೆ ಬರಬೇಕಾದರೆ ಕಡೆಯ ಪಕ್ಷ ಅದು ವಿವೇಕಯುತವಾಗಿ ಇರಬೇಕಾಗುತ್ತದೆ. ಆದರೂ ಒಂದು ವಿಷಯ ಉಳಿಯುತ್ತದೆ. ವಿವೇಕಯುತವಾದ ಇಂಥ ಕೆಲವು ಸೂಕ್ತಿಗಳು ಮಾತ್ರ ಗಾದೆಗಳಾಗಿ ಉಳಿದವು ಆಗಲಾರವು. ಮುಂದೆ ಅವು ಕಳೆದುಹೋಗಬಹುದು ಅಥವಾ ಸಾಂದರ್ಭಿಕ ಉದ್ಧರಣೆಗಳಾಗಿ ಉಳಿಯ ಬಹುದು. ಇದಕ್ಕೆ ಕಾರಣ ಭಾಗಶಃ ಸಾಂದ್ರತೆ; ಇದರಿಂದಾಗಿಯೇ ಗಾದೆ ಸಾರ್ವಜನಿಕರ ಸ್ವೀಕಾರಾರ್ಹತೆಯನ್ನು ಪಡೆದುಕೊಂಡಿರುವುದು.

ಗಾದೆ ತೀವ್ರಾನುಭವದ ಪರಿಣಾಮಕಾರಿ ಅಭಿವ್ಯಕ್ತಿಯಾಗಿರುವುದೇ ಅದರ ತೀಕ್ಷ್ಣತೆ. ಸೂಕ್ಷ್ಮಸಂವೇದನಾಶೀಲತೆಯೇ ಇದಕ್ಕೆ ಕಾರಣ. ಒಮ್ಮೆಗೇ ನಮ್ಮ ಹೃದಯವನ್ನು ಆಕ್ರಮಿಸುವ ಸಾಮರ್ಥ್ಯ ಅದರದು. ಯಾವುದೇ ವಿಷಯವನ್ನು ಮನಮುಟ್ಟುವಂತೆ ಹೇಳುವ ಸ್ವಭಾವ ಅದರದು. ಗಾದೆಯ ಮತ್ತೊಂದು ಮಹತ್ವದ ಲಕ್ಷಣ ಜನಪ್ರಿಯತೆ. ನಿಜವಾದ ಅರ್ಥದಲ್ಲಿ ಅದು ಜನತೆಯದಾಗಿರಬೇಕೆಂಬುದೇ ಇದರ ತಾತ್ಪರ್ಯ. ಒಟ್ಟಿನಲ್ಲಿ ಗಾದೆಗಳು ಚಿಕ್ಕವು, ಪ್ರಸಕ್ತ ವಿಷಯಕ್ಕೆ ಮಾತ್ರ ಸಂಬಂಧಿಸಿದವು, ರಚನೆಯಲ್ಲಿ ಒಪ್ಪವಾದವು, ಜನರ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಯೂರುವಂಥವು.

ಗಾದೆಗಳಿಗೆ ಕೆಲವು ನಿರ್ದಿಷ್ಟ ಶೈಲಿಯ ತಂತ್ರಗಳಿವೆ : ಛಂದೋಬದ್ಧತೆ, ಪ್ರಾಸಾನು ಪ್ರಾಸ, ಯಮಕ, ಪುನರಾವೃತ್ತಿ, ನಾಟಕೀಯತೆ, ಅಲಂಕಾರ ಮುಂತಾದವು ಅವುಗಳಲ್ಲಿ ಕೆಲವು. ಇವುಗಳ ಯೋಜಿತ ಅಭಿವ್ಯಕ್ತಿಯೇ ಗಾದೆ. ಸುಲಭವಾಗಿ ನೆನಪಿರಿಸಿಕೊಳ್ಳುವುದಕ್ಕೆ ಇವು ನೆರವಾಗುತ್ತವೆ. ಇದಕ್ಕೆ ಯಾವುದೇ ಗಾದೆ ನಿದರ್ಶನವಾಗಬಲ್ಲುದು. ಇಂಥ ಗಾದೆಗಳಲ್ಲಿ ಅತ್ಯುಕ್ತಿ ಮತ್ತು ವಿರೋಧಾಭಾಸಗಳೆರಡೂ ದೊಡ್ಡ ಲಕ್ಷಣಗಳು. ಇಲ್ಲಿ ಅತ್ಯುಕ್ತಿಯೆಂದರೆ ಅತಿಶಯವಾದ ಮಾತೆಂದು ಅರ್ಥ ಮಾಡಿಕೊಳ್ಳಬೇಕು. ಧ್ವನಿ ಮಾರ್ಗವನ್ನು ಇದು ಸೂಚಿಸುತ್ತದೆ.

ಗಾದೆಯ ಒಂದು ವಿಶೇಷ ಲಕ್ಷಣ ಸಮತೋಲನ. ಇದು ಗಾದೆಯ ಸಹಜ ಗುಣವೆಂದು ತೋರುತ್ತದೆ. ಉದಾಹರಣೆಗೆ : ನಾಳೆ ನೋಡು ನಮ್ಮ ರಂಗನ ಮೋಟ, ತೆಗೆದು ನೋಡು ನಮ್ಮ ಅಮ್ಮಿಯ ಮುಸುಕ, ಆದಷ್ಟೇ ಆರಂಭ, ಹೂದಷ್ಟೇ ಮಳೆಗಾಲ – ಇತ್ಯಾದಿ. ಇಲ್ಲಿ ಎರಡು ಸಮಭಾಗಗಳು ಕಾಣಿಸಿಕೊಳ್ಳುತ್ತವೆ. ಪೂರ್ವೋತ್ತರ ಭಾಗಗಳೆರಡೂ ಛಂದಸ್ಸಿನಲ್ಲಿ ಕಡೆಗೆ ಅಕ್ಷರಗಳ ಸಂಖ್ಯೆಯಲ್ಲಿ ಸಮನಾಗಿ ಬಂದಿವೆ. ಸಮತೋಲನ ಚಿಕ್ಕ ಗಾದೆಗಳಲ್ಲಿ ಕಾಣಬರುವಂತೆ, ತೀರ ದೀರ್ಘ ಗಾದೆಗಳಲ್ಲಿ ಕಾಣಬರದು. ಇಷ್ಟಕ್ಕೂ ಚಿಕ್ಕ ಗಾದೆಗಳೇ ಅತ್ಯುತ್ತಮ ಗಾದೆಗಳೆಂದು ಹೆಸರಾಗಿವೆ.

ಗಾದೆಗಳಲ್ಲಿ ಹಾಸ್ಯ ಮತ್ತು ವಿಡಂಬನೆಗಳೂ ಬರುತ್ತವೆ. ಇವೆರಡೂ ಕೆಲವೊಮ್ಮೆ ಒಂದಾಗಿಯೂ ಕೆಲವೊಮ್ಮೆ ಬೇರೆ ಬೇರೆಯಾಗಿಯೂ ಬರುತ್ತದೆ. ಉದಾಹರಣೆಗೆ : ಮೋಜು ಬಂದಾದೆ ಮೊಗ ಕ್ವಾರೆ ಅಂದ, ನನ್ಗೂ ಮೋಜು ಬಂದಾದೆ ಕದಿನ ಮೂಲ್ಗೆ ಬಿಸ್ವಾಕಿ ಅಂದ್ಲು. ಯಾವುದೇ ಮರ್ಮವಿಲ್ಲದೆ ನಗಿಸಬಲ್ಲ ಗಾದೆಯಿದು. ಇಂಥ ಹಾಸ್ಯ ಚಿತ್ರಗಳಲ್ಲಿ ಸಂಭಾಷಣೆಯೊಂದು ವಿಶೇಷ. ಮತ್ತೊಂದು ಗಾದೆ : ದುಡುವಂತೆ ಧೂಪ ಹಾಕಿದ್ರೆ, ಗುಡಿಕಲ್ಲೆಲ್ಲ ದಡಾರ್ ಅಂದೊ – ಇಲ್ಲಿಯ ವಿಡಂಬನೆ ಅತ್ಯಂತ ಮೊನಚಾದುದು. ಕೆಲವೊಮ್ಮೆ ತಿಳಿ ಹಾಸ್ಯದಲ್ಲಿಯೇ ವಿಡಂಬನೆ ಮೈತಾಳಬಲ್ಲುದು. ಸಾಯ್ತೀನಿ ಸಾಯ್ತೀನಿ ಅಂಥ, ಸಾವಿರ ಕೋಳಿ ತಿಂದನಂತೆ. ಸಮಾಜವನ್ನು ಪ್ರತಿಬಿಂಬಿಸುವುದರಲ್ಲಿ ಗಾದೆಗಳ ಪ್ರಾಮುಖ್ಯ ಇದೆ. ಜನಪದ ತನ್ನ

ಸುತ್ತಮುತ್ತಲ ಸಾಮಗ್ರಿಯನ್ನು ದೃಷ್ಟಾಂತ ರೂಪಕಗಳನ್ನಾಗಿ ಮಾಡಿಕೊಳ್ಳುತ್ತದೆ. ಅನುಭವದ ಪ್ರಾಮಾಣಿಕತೆಗೆ ಕಾವ್ಯತೆಯ ಸೂಕ್ಷ್ಮ ದೃಷ್ಟಿಯನ್ನು ತೊಡಿಸುತ್ತದೆ.

ಸಾಮಾನ್ಯವಾಗಿ ಬಳಕೆಯಲ್ಲಿರುವ ಬಹುತೇಕ ಗಾದೆಗಳು ದೈನಂದಿನ ಜೀವನದಿಂದ ತೆಗೆದುಕೊಂಡ ಅಥವಾ ಪ್ರಕೃತಿ ಪರಿಶೀಲನದಿಂದ ಎತ್ತಿಕೊಂಡ ರೂಪಕಗಳು ಅಥವಾ ಅನುಭವದ ಘನೀಕರಣಗಳು. ಕೆಲವು ಗಾದೆಗಳು ಕೌಟುಂಬಿಕ ಕಸುಬುಗಳಿಗೆ ಸಂಬಂಧಿಸಿದ ಆಧಾರಗಳನ್ನು ಒದಗಿಸುತ್ತವೆ. ಸ್ವೀಕೃತ ನಂಬಿಕೆಯೊಂದು ಗಾದೆಯಾಗಿ ವ್ಯಕ್ತವಾಗಿರಬಹುದು. ಉದಾ : ಸೀಟಗಾಲಿ ಇದ್ದ ಮನೆ ಹಾಳು, ದಾಟಗಾಲ ಇದ್ದ ತೋಟ ಹಾಳು. ಗಾದೆಯೊಂದು ಒಗಟಾಗುವ ಸಾಧ್ಯತೆಯೂ ಉಂಟು. ಉದಾ : ಚಿಕ್ಕಕ್ಕನಿಗೆ ಪುಕ್ಕುದ್ದ. ಕೆಲವು ಗಾದೆಗಳು ಕಥೆಗಳ ಬಾಲಗಳಾಗಿರುತ್ತವೆ. ಉದಾ : ದಪ್ಪ ತರ ದಾ, ಆದಂಗಾಯ್ತು ಚೂ. ಅನ್ಯೋಕ್ತಿಯನ್ನು ಹೋಲುವಂಥ ಗಾದೆಗಳು ವಿರಳ.

ಕೆಲವು ಗಾದೆಗಳು ಪೌರಾಣಿಕ ವಿಷಯವನ್ನು ಆಧರಿಸಿ ರಚನೆಯಾಗಿರುತ್ತವೆ. ಉದಾಹರಣೆಗೆ, ಪಕ್ಷ ಪಾಂಡವರಲ್ಲಿ, ಊಟ ಕೌರವರಲ್ಲಿ : ಅಂತು ಇಂತು ಕುಂತಿಯ ಮಕ್ಕಳಿಗೆ ರಾಜ್ಯವಿಲ್ಲ – ಇತ್ಯಾದಿ. ಚಾರಿತ್ರಿಕ ಸಂದರ್ಭಗಳನ್ನು ಕುರಿತ ಗಾದೆಗಳೂ ಪ್ರಚಲಿತವಾಗಿವೆ. ಉದಾ : ಕೃಷ್ಣರಾಯ ಭೂಪ, ಮನೆಮನೆಗೆ ದೀಪ. ಕಾನೂನಿನ ಗಾದೆಗಳು ಕಾನೂನು ತತ್ತ್ವದ ಸಂಕ್ಷಿಪ್ತ ಹೇಳಿಕೆಗಳು. ವೈದ್ಯಕೀಯ ಗಾದೆಗಳು ಇನ್ನೊಂದು ಬಗೆಯವು. ಆರೋಗ್ಯವನ್ನು ಕುರಿತಾದ ಹಳೆಯ ನಿಯಮಗಳನ್ನು ಇವು ಹೇಳುತ್ತವೆ. ಹವಾಮಾನದ ಗಾದೆಗಳೂ ಸಾಂಪ್ರದಾಯಿಕವಾಗಿ ಬಂದಿವೆ. ಇವು ಋತುಮಾನಗಳ ವಿಷಯವನ್ನು ವ್ಯವಸಾಯ ವಿಷಯವನ್ನೂ ಕುರಿತು ಹೇಳುತ್ತವೆ. ಉದಾಹರಣೆಗೆ : ಅಶ್ವೀಜದಲ್ಲಿ ಹೊನ್ನು ಕರಗುವ ಬಿಸಿಲು, ಮಣ್ಣು ಕರಗುವ ಮಳೆ; ಅತ್ತದ ಮಳೆ ಎತ್ತಲಿಂದಾದರೂ ಬರುತ್ತದೆ; ರೋಹಿಣಿ ಮಳೆಯಲ್ಲಿ ಓಣಿಯೆಲ್ಲ ಜೋಳ, ಗೌರಿ ಹೊತ್ತಿಗೆ ಗಡಿಗೆ ಮುಳುಗಬೇಕು, ಇತ್ಯಾದಿ.

ಕೆಲವು ಸಾರಿ ಹೋಲಿಕೆಗಳೂ ಗಾದೆಗಳಾಗಬಹುದು. ಆದರೆ ಈ ಬಗೆಯ ಗಾದೆಗಳು ಕ್ರಮೇಣ ಜನಪ್ರಿಯತೆಯನ್ನು ಕಳೆದುಕೊಂಡು ಬಳಕೆಯಿಂದ ತಪ್ಪಿ ಹೋಗುವ ಸಾಧ್ಯತೆಯಿದೆ. ಸಂಪ್ರದಾಯದಲ್ಲಿ ಮತ್ತು ಸಾಹಿತ್ಯದಲ್ಲಿ ಕಂಡುಬರುವ ಅನೇಕ ಮಾತುಗಾರಿಕೆಗಳು ಗಾದೆಗಳಿಗೆ ಸಂಬಂಧಿಸಿವೆ. ಕೆಲವೊಮ್ಮೆ ಗಾದೆಗಳು ಮೊದಲೇ ಇದ್ದ ಮಾದರಿಗಳ ಮೇಲೆ ರಚಿತವಾಗಿರುತ್ತವೆ. ಗಾದೆಯ ಇನ್ನೊಂದು ವರ್ಗ ಕ್ಲೀಷೆಗಳು ಅಥವಾ ಚರ್ವಿತ ಚರ್ವಣಗಳು. ಇವು ಪೂರ್ಣ ವಾಕ್ಯವಾಗಿರುವುದಕ್ಕಿಂಥ ಹೆಚ್ಚಾಗಿ ವಾಕ್ಯಾಂಗಗಳಾಗಿರುತ್ತವೆ. ವಂಶಲಾಂಛನಗಳನ್ನು ಕುರಿತ ಗಾದೆಗಳು ಮತ್ತೊಂದು ಬಗೆಯವು. ಇವು ಜನರ ಮತ್ತು ಸ್ಥಳಗಳ ಗುಣ ವಿವರಣೆ ಮಾಡುವ ಹೆಸರುಗಳು, ನುಡಿಗಟ್ಟುಗಳು.

ಗಾದೆಗಳ ಒಂದು ವಿಶೇಷತೆಯೆಂದರೆ, ಅವು ಆಧ್ಯಾತ್ಮಿಕ ಭೂಮಿಕೆಗೆ ಪ್ರವೇಶಿಸದೆ ಇರುವುದು. ಧರ್ಮಬೋಧಕರ ಪ್ರವಚನಗಳಾಗಲಿ, ಉಪದೇಶಗಳಾಗಲಿ ಗಾದೆಗಳಾಗಿ ಪರಿವರ್ತಿತವಾಗುವುದಿಲ್ಲ. ಇವು ನೀತಿಯನ್ನೇನೋ ಹೇಳುತ್ತವೆ ನಿಜ; ಆದರೆ ಧಾರ್ಮಿಕ ಸಿದ್ಧಾಂತಗಳನ್ನಾಗಲಿ ವೇದಾಂತಪರ ವಿಚಾರಗಳನ್ನಾಗಲಿ ಒಳಗೊಂಡಿರುವುದಿಲ್ಲ. ಆದರೆ ಜನತೆ ಯಾವುದನ್ನು ಸತ್ಯವೆಂದು ಗೌರವಿಸಿದೆಯೋ ಅದಕ್ಕೆ ಸೂಚಿಯಾಗಿವೆ; ಲೋಕದಿಂದ ಪಡೆದುಕೊಂಡ ಅನುಭವದ ಒಟ್ಟು ಮೊತ್ತವಾಗಿದೆ.

ಈಗ ಗಾದೆಗಳ ಸಾಮ್ಯ ಮತ್ತು ಸಾರ್ವತ್ರಿಕತೆ, ಸಮಾನ ಗಾದೆಗಳು ಜಗತ್ತಿನ ಎಲ್ಲಾ ಭಾಷೆಗಳಲ್ಲಿಯೂ ಕಾಣಸಿಗುತ್ತವೆ. ಭಾಷೆ ಬೇರೆಯಾದರೂ ಭಾಷಿತ ಒಂದೇ ಇದಕ್ಕೆ ಕಾರಣವನ್ನು ಹುಡುಕುತ್ತ ಕೆಲವರು, ಅವನ್ನು ಅಂತಾರಾಷ್ಟ್ರೀಯ ಅಲೆಮಾರಿ ಎಂದು ಕರೆದರು. ಗಾದೆಗಳು ಪ್ರಯಾಣ ಮಾಡುತ್ತವೆ ಎಂಬುದು ಇದರ ಅರ್ಥ. ಗಾದೆಗಳ ದೇಶಾತೀತ ಭಾಷಾತೀತ ಲಕ್ಷಣಕ್ಕೆ ಈ ವಿವರಣೆ ಸಮಂಜಸವೆಂದು ತೋರಲಾರದು. ಮೂಲಭೂತವಾಗಿ ಮಾನವರೆಲ್ಲ ಒಂದೇ ರೀತಿ ಆಲೋಚಿಸು ತ್ತಾರೆಂಬುದು ಇದಕ್ಕೆ ಕಾರಣವಿರಬೇಕೆಂದು ತೋರುತ್ತದೆ. ಮೂಲಪ್ರವೃತ್ತಿಗಳಾದ ಪ್ರೀತಿ, ಹಸಿವು, ಭಯಗಳು ಅಸಂಸ್ಕೃತ ಸುಸಂಸ್ಕೃತರೆನ್ನದೆ ಸಮಾನವಾಗಿರುವ ವಿಷಯಗಳು– ಈ ಪ್ರವೃತ್ತಿಗಳನ್ನು ನಾಗರಿಕತೆಗಳಾಗಲಿ, ವಾತಾವರಣಗಳಾಗಲಿ ನಿವಾರಿಸಲಾರವು, ಮಾರ್ಪಡಿಸಲಾರವು, ಆದ್ದರಿಂದ ಗಾದೆಯ ಜ್ಞಾನ ಜಗತ್ತಿನಲ್ಲೆಲ್ಲ ಒಂದೆಯೇ ಭಿನ್ನತೆಯೇ ನಿದ್ದರೂ ಅದರ ಪ್ರಕಟಣೆಯಲ್ಲಿ. ಹೀಗೆ ಗಾದೆಯ ಸಾಮ್ಯತೆ ಮತ್ತು ಸಾರ್ವತ್ರಿಕತೆಗೆ ಸ್ವತಂತ್ರ ಮೂಲ ಸಿದ್ಧಾಂತವನ್ನು ಕಾರಣವಾಗಿ ಕೊಡಬಹುದು. ಇಷ್ಟಾದರೂ ಗಾದೆಗಳನ್ನು ಸ್ವೀಕರಣ ಮಾಡಿಕೊಂಡಿರುವ ಉದಾಹರಣೆಗಳನ್ನು ತೆಗೆದು ಹಾಕುವಂತಿಲ್ಲ. ದೇಶಗಳ ಆಕ್ರಮಣ, ಅಂತರ್ಜಾತಿ ವಿವಾಹ, ರಾಜಕೀಯ ಸಾಂಸ್ಕೃತಿಕ ಸಂಬಂಧ ಮೊದಲಾದವುಗಳಿಂದ ಗಾದೆ ದೇಶದಿಂದ ದೇಶಕ್ಕೆ ಹೋಗಿರಲು ಸಾಧ್ಯವಿದೆ.

ಗಾದೆಯ ಉಗಮವನ್ನು ಕುರಿತು ನಿರ್ದಿಷ್ಟವಾಗಿ ಹೇಳಲಾಗದು. ಇದು ಜನಪದ ಸಂಸ್ಕೃತಿಯಲ್ಲಿ ಹುಟ್ಟಿ ಬೆಳೆದುದು. ಸಮಾಜದಷ್ಟು ಹಳೆಯದು. ಒಂದು ಕಡೆ ಗಾದೆ ಯಾರೊಬ್ಬ ಜನ್ಮದಾತನೂ ಇಲ್ಲದೆ ಕ್ರಮೇಣ ಜನತೆಯ ನಡುವೆ, ಜನತೆಯದಾಗಿ ವಿಕಾಸವಾದುದಾಗಿರಬೇಕು. ಇನ್ನೊಂದು ಕಡೆ, ಸುತ್ತಮುತ್ತಲ ಜಗತ್ತಿನೊಡನೆ ಸಂಪರ್ಕ ಕಲ್ಪಿಸಿಕೊಳ್ಳುವಾಗ ಸಂದರ್ಭ ಸೂತ್ರವಾಗಿ ಬುದ್ಧಿವಂತನೊಬ್ಬನಿಂದ ಜಗಿದಿರಬೇಕು. ಹಲವರ ಅನ್ನಿಸಿಕೆ ಜ್ಞಾನಾನುಭವಗಳು ಒಬ್ಬನ ಸೃಷ್ಟಿವಿವೇಕದಲ್ಲಿ ಮೂಡಿ ಗಾದೆಯಾಯಿತು. ಆದರೆ ಸಂಪ್ರದಾಯ ಇದನ್ನು ಕೈಗೆತ್ತಿಕೊಳ್ಳುವ ತನಕ ಇದು ಕೇವಲ ವಸ್ತುಸ್ಥಿತಿಯೊಂದರ ಸೂತ್ರಮಯ ಹೇಳಿಕೆಯಾಗಿತ್ತು ಅಥವಾ ಬೋಧಪ್ರದ ದೃಷ್ಟಾಂತವಾಗಿತ್ತು. ಸಂಪ್ರದಾಯ ಸ್ವೀಕರಿಸಿದಾಗ, ಅನುಕರಿಸಲಾಗದ ರೀತಿಯಲ್ಲಿ ಅದನ್ನು ಹೊಂದಿಸಿಕೊಂಡಿತು, ಮಾರ್ಪಡಿಸಿಕೊಂಡಿತು. ಆದ್ದರಿಂದ ಸೃಷ್ಟಿ ಮತ್ತು ಸ್ವೀಕಾರಗಳೆರಡೂ ಗಾದೆಯೊಂದು ರೂಪ ತಾಳುವುದಕ್ಕೆ ಅವಶ್ಯಾಂಶಗಳಾಗುತ್ತವೆ. ಈ ಕ್ರಿಯೆಯಲ್ಲಿ ಮೂಲ ಮರೆತುಹೋಗುತ್ತದೆ. ಒಂದೇ ವಸ್ತು ಹಾಗೂ ಒಂದೇ ಸೂತ್ರರೂಪ ಒಬ್ಬನಿಗಿಂತ ಹೆಚ್ಚಿನವರಲ್ಲಿ ದೊರೆಯುವುದರಿಂದ ಗಾದೆಗಳ ಮೂಲ ತೊಡಕಾಗಿದೆ. ಆದ್ದರಿಂದ ವೈಯಕ್ತಿಕತೆಯನ್ನು ಒಟ್ಟುಗೂಡಿಸಿಕೊಂಡ ಸಾಮೂಹಿಕ ಸೃಷ್ಟಿ ಇದೆಂದು ಹೇಳಬಹುದಾಗಿದೆ. ಹೀಗೆ ಗಾದೆ ಸಮಷ್ಟಿಯ ಸ್ವತ್ತಾದ ಮೇಲೆ, ಅದು ಬಾಯಿಂದ ಬಾಯಿಗೆ, ತಲೆಮಾರಿನಿಂದ ತಲೆಮಾರಿಗೆ ಬೆಳೆಯಿತು. ಉಳಿಯಿತು. ಈ ರೀತಿ ಪ್ರಯಾಣ ಮಾಡುವಾಗ ಗಾದೆ ಹರಿತವಾಯಿತು, ರೂಪಾಂತರಗಳನ್ನು ಪಡೆಯಿತು. ಸಾರ್ವತ್ರಿಕ ಜನಪ್ರಿಯತೆಯ ಮುದ್ರೆಯೊಂದು ಅದರ ಮೇಲೆ ಬಿತ್ತು.

ಗಾದೆಗಳು ವ್ಯಕ್ತಿಯೊಬ್ಬನಿಂದ ರಚಿತವಾಗಿದ್ದು, ಅವನ ಆಲೋಚನೆಗಳು ಬರೆವಣಿಗೆಯಲ್ಲಿ ದೊರೆತರೆ, ಆಗ ಕೆಲವೇಳೆ ಮೂಲವನ್ನು ಹುಡುಕಲು ಸಾಧ್ಯವಾಗುತ್ತದೆ. ಬೈಬಲ್, ವೇದ, ಉಪನಿಷತ್ತು, ಧಮ್ಮಪದ ಮುಂತಾದ ಧಾರ್ಮಿಕ ಗ್ರಂಥಗಳಲ್ಲಿ, ಮಹಾ ಕವಿಗಳ ಕಾವ್ಯಗಳಲ್ಲಿ ಇವು ಕಾಣಬರುವುದಾದರೂ ಸಾಹಿತ್ಯಿಕ ದಾಖಲೆಗೆ ಇಳಿಯುವ ಮುನ್ನ ಇವು ವಾಕ್‌ಸಂಪ್ರದಾಯದಲ್ಲಿರಲಿಲ್ಲವೆಂದು ಹೇಳಲು ಹೇಗೆ ಸಾಧ್ಯ. ಆ ಕಾಲದಲ್ಲಿ ಪ್ರಚಲಿತವಿದ್ದ ಗಾದೆಗಳು ಹಲಕೆಲವು ಮಾರ್ಪಾಡುಗಳೊಡನೆ ಸಾಹಿತ್ಯದಲ್ಲಿ ಸೇರಿಕೊಂಡಿರಬಹುದು. ಯಾವುದೇ ಸಂದರ್ಭದಲ್ಲಿ ಜನಪ್ರಿಯ ಹಾಗೂ ಸಾಹಿತ್ಯಿಕ ಮೂಲಗಳೆರಡೂ ಬೆಳವಣಿಗೆಯ ಹಂತಗಳಲ್ಲಿ ಬೆರೆಯುತ್ತವೆ. ಇದರಿಂದಾಗಿ ಗಾದೆಯೊಂದರ ನಿರ್ದಿಷ್ಟ ಕರ್ತೃತ್ವ ಗೊತ್ತಾಗುವುದಿಲ್ಲ.

ಗಾದೆಗಳ ಅಸ್ತಿತ್ವ ಮತ್ತು ಉಪಯೋಗ ಪ್ರಾಚೀನ ಕಾಲದಿಂದಲೂ ಕಾಣಬರುತ್ತದೆ. ಪ್ರಾಚೀನ ಸಾಹಿತ್ಯ ಗ್ರಂಥಗಳಲ್ಲಿ, ಧರ್ಮಗ್ರಂಥಗಳಲ್ಲಿ, ಚರಿತ್ರ ಲೇಖನಗಳಲ್ಲಿ ಇವು ದೊರೆಯುತ್ತವೆ. ಬರೆದಿರಿಸಿದ ನ್ಯಾಯಶಾಸ್ತ್ರಗಳಿಲ್ಲದ ಜನತೆಗಳಲ್ಲಿ ಅವರ ವ್ಯಾಜ್ಯಗಳ ಮೇಲೆ ಪರಿಣಾಮವನ್ನುಂಟುಮಾಡುವಂತೆ ಗಾದೆಗಳನ್ನು ಉದಾಹರಿಸಲಾಗುತ್ತದೆ. ಸಂದರ್ಭೋಚಿತವಾಗಿ ಉಪಯೋಗಿಸಿದ ಗಾದೆಯೊಂದು ನ್ಯಾಯವೊಂದರ ತೀರ್ಮಾನಕ್ಕೆ ಕಾರಣವಾಗಬಹುದು ಅಥವಾ ಪ್ರಮುಖ ನಿರ್ಣಯವೊಂದಕ್ಕೆ ನೆರವಾಗ ಬಹುದು. ಕೆಲವು ಆಫ್ರಿಕನ್ ಸಮಾಜಗಳಲ್ಲಿ ನಿರ್ಣಯ ಕೈಗೊಳ್ಳುವಾಗ ಜನ ಸಾಂಪ್ರದಾಯಿಕವಾಗಿ ಗಾದೆಗಳನ್ನು ಪಠಿಸುತ್ತಾರಂತೆ.

ಭಾರತೀಯ ವೈದಿಕ ಬರೆಹಗಳು ತತ್ತ್ವಶಾಸ್ತ್ರೀಯ ಭಾವನೆಗಳನ್ನು ಪ್ರತಿಪಾದಿಸಲು ಗಾದೆಗಳನ್ನು ಬಳಸುತ್ತಿದ್ದವು. ಪ್ರಾಚೀನ ಚೀನದಲ್ಲಿ ನೈತಿಕ ಶಿಕ್ಷಣಕ್ಕಾಗಿ ಗಾದೆಗಳನ್ನು ಉಪಯೋಗಿಸುತ್ತಿದ್ದವು. ಇಂಗ್ಲೆಂಡಿನಲ್ಲಿ ಲ್ಯಾಟಿನ್ ಬೋಧಿಸಲು ಗಾದೆಗಳನ್ನು ಬಳಸುತ್ತಿದ್ದರು. ಭಾಷಣಕಲೆಯಲ್ಲಿ ಮಾತಿಗೆ ಅಲಂಕಾರ ಕಟ್ಟಲು ಗಾದೆಗಳನ್ನು ಬಳಸುವುದುಂಟು. ಮಧ್ಯಕಾಲೀನ ಪಠ್ಯಗಳು ಮತ್ತು ಅರಿಸ್ಟಾಟಲ್ ಇದಕ್ಕೆ ನಿದರ್ಶನ. ಗಾದೆಗಳಲ್ಲಿ ಸಂವಾದವನ್ನು ಬರೆದವರಿದ್ದಾರೆ, ಸಾನೆಟ್ಟನ್ನು ರಚಿಸಿದವರಿದ್ದಾರೆ. 16ನೆಯ ಶತಮಾನದಲ್ಲಿ ಇಂಗ್ಲೆಂಡಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಗಾದೆಯ ಭಾಷಣವೊಂದು ನಡೆದಿತ್ತಂತೆ. ಗಾದೆಗಳನ್ನು ಶಿರೋನಾಮೆಗಳಾಗಿ, ಆಡುಭಾಷೆಯ ವಾತಾವರಣವನ್ನು ಕೊಡುವುದಕ್ಕಾಗಿ ಬಳಸಲಾಗಿದೆ. ಹೀಗೆ ಹಲವು ರೀತಿಯಲ್ಲಿ ಗಾದೆಗಳ ಉಪಯೋಗ ಆಗಿದೆ.

ಗಾದೆ ಜ್ಞಾನದ ಅನಂತ ಆಕಾಶವನ್ನು ನಿಂತಲ್ಲಿಯೇ ನೋಡಬಲ್ಲ ನೀತಿ ನಿರ್ಣಯಗಳ ದೂರದರ್ಶಕ. ಇದರಲ್ಲಿ ಎದ್ದುಕಾಣುವುದು ಜನಸಾಮಾನ್ಯರ ಸಾಮಾನ್ಯ ಜ್ಞಾನ. ಜೀವನದ ನಾನಾ ಭಾಗಗಳಲ್ಲಿ ಅವರಿಗಿರುವ ಜ್ಞಾನಾನುಭವಗಳನ್ನು ಇಲ್ಲಿ ವಿವೇಕದ ಒರೆಗಲ್ಲಿಗೆ ಹಚ್ಚಿ ನೋಡಿದೆ. ಗಾದೆ ಸಾಮಾನ್ಯ ಜನತೆಯ ವೇದ, ಗಾದೆ ವೇದಕ್ಕೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಲ್ಲ. ವೇದ ಕೆಲವರ ಮಾತು, ಗಾದೆ ಹಲವರ ನುಡಿ. ಇಂಗ್ಲಿಷ್ ಗಾದೆಯೊಂದು ಹೇಳುವ ಹಾಗೆ ಕೆಲವರು ಹೇಳುವುದು ನಿಜವಾಗಬಹುದು, ಆದರೆ ಎಲ್ಲರೂ ಹೇಳುವುದು ನಿಜವಾಗೇ ಆಗುತ್ತದೆ.

ಗಾದೆಗಳು ಜನಪ್ರಿಯ ಅಭಿಪ್ರಾಯದ ಮೇಲೆ ಸೂಕ್ಷ್ಮವೂ ವ್ಯಾಪಕವೂ ಆದ ಪ್ರಭಾವವನ್ನು ಹೊಂದಿರುತ್ತದೆ. ಇವುಗಳ ಸೃಷ್ಟಿಗೆ ಹಾಗೂ ಪ್ರಸಾರಕ್ಕೆ ಕಾರಣರಾದ ಜನರ ಸಾಮಾಜಿಕ, ರಾಜಕೀಯ, ನೈತಿಕ ಹಾಗೂ ಧಾರ್ಮಿಕ ಆದರ್ಶಗಳಿಗೆ

ನಂಬಲರ್ಹವಾದ ಸಾಕ್ಷ್ಯಗಳಾಗಿವೆ. ಗಾದೆಗಳ ಮೌಲ್ಯ ಮತ್ತು ಮಹತ್ತ್ವವನ್ನು ಈ ಮಾತುಗಳು ತಿಳಿಸುತ್ತವೆ.

**ಕನ್ನಡದಲ್ಲಿ ಗಾದೆಗಳು :** ಕನ್ನಡದಲ್ಲಿ ಗಾದೆಗಳ ಕ್ಷೇತ್ರದಲ್ಲಿ ತಕ್ಕಮಟ್ಟಿಗೆ ಕೆಲಸ ನಡೆದಿದೆ. ಇದಕ್ಕೆ ಏನಿಲ್ಲವೆಂದರೂ ನೂರು ವರ್ಷಗಳ ಇತಿಹಾಸವಿದೆ. ಈ ಕ್ಷೇತ್ರದಲ್ಲಿಯೂ ಮೊದಲು ಕೆಲಸ ಮಾಡಿದವರು ಕ್ರೈಸ್ತ ಮಿಷನರಿಗಳೇ. 1894ರಲ್ಲಿ ಪ್ರಕಟವಾದ ಕಿಟ್ಟೆಲ್ ಅವರ ಶಬ್ದಕೋಶದಲ್ಲಿಯೇ ಅಪಾರ ಸಂಖ್ಯೆಯ ಗಾದೆಗಳನ್ನು ಕಾಣುತ್ತೇವೆ. ಈ ಎಲ್ಲ ಗಾದೆಗಳನ್ನು ಒಂದು ಕಡೆ ಕಲೆಹಾಕಿ ಕಿಟ್ಟೆಲ್ ಕೋಶದ ಗಾದೆಗಳು ಎಂಬ ಹೆಸರಿನಲ್ಲಿ ರಾಗೌ ಹೊರತಂದಿದ್ದಾರೆ. ಇದರಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಗಾದೆಗಳಿರುವ ವಿಷಯ ಗೊತ್ತಾಗುತ್ತದೆ. ಒಂದು ಶತಕದ ಹಿಂದೆಯೇ ಕಿಟ್ಟೆಲ್ ಅವರು ಕರ್ಣಾಟಕದ ನಾನಾ ಭಾಗಗಳಿಂದ ಗಾದೆಗಳನ್ನು ಸಂಗ್ರಹಿಸಿದ್ದರೆಂಬುದು ಗಮನಾರ್ಹ ಸಂಗತಿ. ಅವರು ತಮ್ಮ ಅರ್ಥಕೋಶದ ಗ್ರಾಮ್ಯಶಬ್ದಗಳ ಅರ್ಥ ಸ್ಪಷ್ಟೀಕರಣಕ್ಕಾಗಿ ಈ ಗಾದೆಗಳನ್ನು ಬಳಸಿಕೊಂಡಿದ್ದಾರೆ. ಒಟ್ಟಿನಲ್ಲಿ ಅವರ ಸಂಗ್ರಹ ಬಹಳ ಮಹತ್ತ್ವದ್ದಾಗಿದೆ ಮತ್ತು ಅದಕ್ಕೆ ವಿಶೇಷ ಐತಿಹಾಸಿಕ ಮೌಲ್ಯವಿದೆ. ಇದರ ತರವಾಯ ಮಂಗಳೂರಿನ ಬಾಸೆಲ್ ಮಿಷನ್ ಪ್ರೆಸ್ಸಿನವರು ಕರ್ಣಾಟಕ ಲೋಕೋಕ್ತಿನಿಧಾನ ಎಂಬ ಗ್ರಂಥವೊಂದನ್ನು 1912ರಲ್ಲಿ ಪ್ರಕಟಿಸಿದರು. ಪುಸ್ತಕರೂಪದಲ್ಲಿ ಪ್ರಕಟವಾದ ಗಾದೆಗಳ ಸಂಕಲಗಳಲ್ಲಿ ಇದು ಮೊದಲನೆಯದು. 1919ರಲ್ಲಿ ಮರುಮುದ್ರಣವನ್ನು ಕಂಡ ಇದು ಈಗ ದೊರೆಯದಾಗಿದೆ. ಇದರಲ್ಲಿ 1500 ರೂಢಿಯ ಗಾದೆಗಳಿದ್ದು, ಕೆಲವಕ್ಕೆ ಜೊತೆಯಲ್ಲಿಯೇ ಅರ್ಥವಿವರಣೆಯನ್ನೂ ಕೊಡಲಾಗಿದೆ.

ಇದರ ಅನಂತರ ಪ್ರಕಟವಾದ ಪ್ರಮುಖ ಸಂಗ್ರಹವೆಂದರೆ ಎಚ್.ಎಸ್.ಅಚ್ಚಪ್ಪನವರ ಕನ್ನಡ ಗಾದೆಗಳು. 1944ರಲ್ಲಿ ಪ್ರಕಟವಾದ ಈ ಕೃತಿ 1959ರಲ್ಲಿ ಎರಡನೆಯ ಮುದ್ರಣವನ್ನೂ ಕಂಡಿತು. ಇದೊಂದು ಉತ್ತಮ ಸಂಕಲನವಾಗಿದ್ದು, ಜನಪ್ರಿಯವಾಗಿದೆ. ಗಾದೆಗಳ ಕೆಲಸಕ್ಕೆ ತಮ್ಮನ್ನು ಅರ್ಪಿಸಿಕೊಂಡ ಅಚ್ಚಪ್ಪನವರು 1969ರಲ್ಲಿ ಗ್ರಂಥಸ್ಥ ಗಾದೆಗಳು ಎಂಬ ಗಾದೆಗಳ ಬೃಹತ್‌ಕೋಶವೊಂದನ್ನು ಹೊರತಂದಿದ್ದಾರೆ. ಕನ್ನಡ ಪ್ರಸಿದ್ಧ ಕವಿಗಳ ಕಾವ್ಯಗಳಲ್ಲಿ ಉಕ್ತವಾಗಿರುವ ಎಲ್ಲ ಗಾದೆಗಳನ್ನೂ ಒಂದು ಕಡೆ ಕಲೆಹಾಕುವ ಕಾರ್ಯ ಇಲ್ಲಿ ನಡೆದಿದೆ. ನೃಪತುಂಗನ ಕವಿರಾಜಮಾರ್ಗದಿಂದ ಮುದ್ದಣನ ಶ್ರೀರಾಮ ಪಟ್ಟಾಭಿಷೇಕದವರೆಗಿನ ಗಾದೆಗಳು ಇಲ್ಲಿ ಸಂಕಲನಗೊಂಡಿವೆ. ಇದರಲ್ಲಿ ಅನುಸರಿಸಿರುವ ಕ್ರಮವೆಂದರೆ, ಕವಿ–ಕಾವ್ಯಾದಿ ಆಕರವನ್ನು ಕೊಟ್ಟು, ಅದರಲ್ಲಿ ಬಂದಿರುವ ಗಾದೆಗಳನ್ನು ಅಕಾರಾದಿಯಾಗಿ ಪಟ್ಟಿ ಮಾಡಿರುವುದು. ಕೆಲವೊಮ್ಮೆ ಗಾದೆಗಳಂತೆ ತೋರುವ ಉದ್ಧರಣೆಗಳು, ಸಾಮತಿಗಳು, ಜಾಣ್ಣುಡಿಗಳು, ಸೂಕ್ತಿಗಳು, ರೂಪಕಗಳು ಮುಂತಾದವೂ ಇಲ್ಲಿ ಸೇರಿಹೋಗಿವೆ. ಜನಪದದಿಂದ ಕವಿಕೃತಿಗಳಿಗೆ ಹೋಗಿ ನೆಲೆಗೊಂಡಿರುವ ಶುದ್ಧ ಗಾದೆಗಳನ್ನು ಮಾತ್ರ ಆಯ್ದುಕೊಂಡಿದ್ದರೆ ಚೆನ್ನಾಗಿರುತ್ತಿತ್ತೇನೋ ಎನಿಸುತ್ತದೆ. ಆದರೂ ಇದೊಂದು ಉಪಯುಕ್ತವೂ ಉತ್ತಮವೂ ಆದ ಕೆಲಸವೆನ್ನುವುದರಲ್ಲಿ ಸಂಶಯವಿಲ್ಲ. ಗ್ರಂಥದ ಕಡೆಯಲ್ಲಿ ಕೊಟ್ಟಿರುವ ಶಬ್ದಕೋಶವೊಂದು ಉಪಯುಕ್ತ ಭಾಗ.

ಮುಂದಿನ ಗಮನಾರ್ಹ ಕೃತಿಯೆಂದರೆ 1959ರಲ್ಲಿ ಪ್ರಕಟವಾದ ಜಂಗಮಕೋಟಿ ಕೃಷ್ಣಶಾಸ್ತ್ರಿ ಅವರ ಗಾದೆಗಳ ಭಂಡಾರ ಭಾಗ 1 ಎಂಬ ಸಂಕಲನ. ಇದು ಬೆಂಗಳೂರಿನ ಸತ್ಯಶೋಧನ ಪ್ರಕಟನ ಮಂದಿರದಿಂದ ಪ್ರಕಾಶನಗೊಂಡಿದೆ. ಇದರಲ್ಲಿ ಮೂರು ಸಾವಿರಕ್ಕೂ ಹೆಚ್ಚು ಗಾದೆಗಳಿದ್ದು, ಅವನ್ನು ವಿಷಯಾನುಸಾರವಾಗಿ ವಿಂಗಡಿಸಿ ಅಕಾರಾದಿಯಾಗಿ ಕೊಡಲಾಗಿದೆ. ಈ ವಿಂಗಡಣೆ ಸಮಂಜಸವಾಗಿದೆಯೆಂದು ಹೇಳಲಾಗುವುದಿಲ್ಲ. ಕೆಲವು ಗಾದೆಗಳಿಗೆ ಅಡಿ ಟಿಪ್ಪಣಿಯಲ್ಲಿ ಅರ್ಥವನ್ನೂ ವಿವರಣೆಯನ್ನೂ ನೀಡಿದ್ದಾರೆ. ಸಂಸ್ಕೃತದ ನೂರಾರು ಗಾದೆಗಳನ್ನು ಕನ್ನಡದ ಅನುವಾದದೊಡನೆ ಸೇರಿಸಲಾಯಿತು ಎಂದಿದ್ದಾರೆ.

ಈ ಸಂದರ್ಭದಲ್ಲಿ ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯ ಆಶ್ರಯದಲ್ಲಿ 1962ರಲ್ಲಿ ಪ್ರಕಟವಾದ ನಾಲ್‌ನುಡಿ – ನಾಣ್ಣುಡಿ ಎಂಬ ಗ್ರಂಥವನ್ನು ಅಗತ್ಯವಾಗಿ ನೆನೆಯಬೇಕು. ಕನ್ನಡ, ತೆಲುಗು, ತಮಿಳು, ಮಲಯಾಳ ಭಾಷೆಗಳಲ್ಲಿನ 467 ಸಮಾನ ಗಾದೆಗಳು ಇಲ್ಲಿ ಸಂಗ್ರಹಗೊಂಡಿವೆ. ಇದರ ಸಂಪಾದಕರಲ್ಲಿ ಕನ್ನಡವನ್ನು ಪ್ರತಿನಿಧಿಸಿ ಎಂ.ಮರಿಯಪ್ಪ ಭಟ್ಟರಿದ್ದಾರೆ. ಎನ್.ವೆಂಕಟರಾವ್, ಆರ್.ಪಿ.ಸೇತುಪಿಳ್ಳೆ ಮತ್ತು ಎಸ್.ಕೆ.ನಾಯರ್ ಅವರು ಉಳಿದ ಭಾಷೆಗಳ ಪ್ರತಿನಿಧಿಗಳಾಗಿದ್ದಾರೆ. ದ್ರಾವಿಡ ಭಾಷೆಗಳ ಗಾದೆಗಳ ತೌಲನಿಕ ಅಧ್ಯಯನಕ್ಕೆ ಈ ಗ್ರಂಥ ಸಾಮಗ್ರಿ ಒದಗಿಸುತ್ತದೆ.

1963ರಲ್ಲಿ ಪ್ರಕಟವಾದ ಟಿ.ವಿ.ವೆಂಕಟರಮಣಯ್ಯನವರ ಕನ್ನಡ ಗಾದೆಗಳ ಕೋಶ ಒಂದು ಉಲ್ಲೇಖನೀಯ ಕೃತಿಯಾಗಿದೆ. ಇದರ ಪರಿಷ್ಕೃತ ಹಾಗೂ ವಿಸ್ತೃತ ಆವೃತ್ತಿ 1969ರಲ್ಲಿ ಪ್ರಕಟಗೊಂಡಿದೆ. ಮೊದಲ ಮುದ್ರಣದಲ್ಲಿದ್ದ ಗಾದೆಗಳು ನಾಲ್ಕು ಸಾವಿರವಾದರೆ, ಎರಡನೆಯ ಮುದ್ರಣದಲ್ಲಿ ಎಂಟು ಸಾವಿರಕ್ಕೂ ಹೆಚ್ಚಿವೆ. ಈಗಾಗಲೇ ಪ್ರಕಟವಾಗಿದ್ದ ಹಲವಾರು ಗಾದೆಗಳು ಇಲ್ಲಿ ಮತ್ತೆ ಪುನರಾವರ್ತನಗೊಂಡಿವೆ. ಕನ್ನಡ ಕವಿಗಳ ಕಾವ್ಯಗಳಿಂದ ತೆಗೆದ ಗಾದೆಗಳೂ ಸಂಸ್ಕೃತದ ಗಾದೆಗಳೂ ಕೆಲವು ಸೇರಿವೆ. ಗಾದೆಗಳನ್ನು ವಿಷಯಾನುಸಾರವಾಗಿ ವಿಭಾಗಿಸಿದ್ದರೂ ಸಮರ್ಪಕವೆನಿಸುವಂತಿಲ್ಲ. ಮೊಟ್ಟಮೊದಲಿಗೆ ಪ್ರಕಟವಾದ ಗಾದೆಗಳೂ ಇಲ್ಲಿರುವುದರಿಂದ ಇದೊಂದು ಗಮನಾರ್ಹ ಕೃತಿಯಾಗಿದೆ. ಇದಲ್ಲದೆ ಗ್ರಂಥದ ಕಡೆಯಲ್ಲಿ ಕೆಲವು ಸಮಾನಾರ್ಥಕ ಕನ್ನಡ – ಇಂಗ್ಲೀಷ್ ಗಾದೆಗಳನ್ನು ಕೊಟ್ಟಿರುವುದು ಉಪಯುಕ್ತವಾಗಿದೆ.

ಇಲ್ಲಿ ಹೇಳಬೇಕಾದ ಮತ್ತೊಂದು ಗಾದೆಗಳ ಸಂಗ್ರಹವೆಂದರೆ ರಾಗೌ ಅವರ ನಮ್ಮ ಗಾದೆಗಳು. ಇದು 1968ರಲ್ಲಿ ಪ್ರಕಟಗೊಂಡಿತು. ಇದರಲ್ಲಿ ಎರಡು ಸಾವಿರಕ್ಕೂ ಹೆಚ್ಚು ಗಾದೆಗಳಿದ್ದು ಅವೆಲ್ಲ ಮೊದಲಬಾರಿಗೆ ಪ್ರಕಟವಾಗಿವೆ. ಇಲ್ಲಿಯ ಗಾದೆಗಳೆಲ್ಲ ಪ್ರಾದೇಶಿಕ ಸ್ವರೂಪದವು. ಕೆಲವು ಗಾದೆಗಳು ಪುನರುಕ್ತವಾದಂತೆ ಕಂಡರೂ ಪಾಠಾಂತರ ಅಥವಾ ವಿಶೇಷ ಪದಪ್ರಯೋಗ ಅಥವಾ ಧ್ವನಿಹೆಚ್ಚಳ ಅಥವಾ ಗಾದೆಯ ಪೂರ್ಣರೂಪಕ್ಕಾಗಿ ಅಂಥವನ್ನು ಉಳಿಸಿಕೊಳ್ಳಲಾಗಿದೆ. ಈ ಕೃತಿಯ ಇನ್ನೆರಡು ಆಕರ್ಷಣೆಗಳೆಂದರೆ ಪ್ರಸ್ತಾವನೆ ಮತ್ತು ಅರ್ಥಕೋಶಗಳು. ಗಾದೆಯ ಸ್ವರೂಪ ಲಕ್ಷಣ, ಉಗಮ ವಿಕಾಸ, ಸಾಹಿತ್ಯಮೌಲ್ಯ ಮುಂತಾದ ವಿಷಯಗಳನ್ನು ಕುರಿತ ಪ್ರಸ್ತಾವನೆ ತುಂಬ ಉಪಯುಕ್ತವೆನಿಸಿದೆ.

1971ರಲ್ಲಿ ಪ್ರಕಟವಾದ ಬಿ.ಎ.ವಿವೇಕ ರೈ ಅವರ ತುಳು ಗಾದೆಗಳು ಇಲ್ಲಿ ಗಮನಿಸಬೇಕಾದ ಮತ್ತೊಂದು ಗ್ರಂಥ. ಇದರಲ್ಲಿ 704 ತುಳು ಗಾದೆಗಳಿವೆ. ಪ್ರತಿಯೊಂದು ಗಾದೆಯನ್ನೂ ಕನ್ನಡ ಲಿಪಿಯಲ್ಲಿ ಕೊಟ್ಟು, ಅದರ ಕನ್ನಡಾನುವಾದವನ್ನು, ದೊರೆತಾಗ ಕನ್ನಡ ಸಮಾನ ಗಾದೆಗಳನ್ನು ಕೆಳಗಡೆ ಕೊಡುತ್ತಾರೆ. ಅಗತ್ಯ ಬಿದ್ದಲ್ಲಿ ಗಾದೆಗಳಿಗೆ ಹಿನ್ನೆಲೆ ಹಾಗೂ ವಿವರಣೆಗಳನ್ನೂ ನೀಡಿದ್ದಾರೆ. ಗಾದೆಗಳಿಗೆ ಬರೆದಿರುವ ಅಭ್ಯಾಸಪೂರ್ಣ ಪ್ರಸ್ತಾವನೆ, ಕೊಟ್ಟಿರುವ ತುಳು – ಕನ್ನಡ ಅರ್ಥಕೋಶ ಈ ಪುಸ್ತಕದ ಉಪಯುಕ್ತತೆಯನ್ನು ಮತ್ತಷ್ಟು ಹೆಚ್ಚಿಸಿವೆ.

ಈ ಸಂದರ್ಭದಲ್ಲಿ ಸ್ವತಂತ್ರ್ಯಗಾದೆಗಳ ರಚನೆಯನ್ನು ಕುರಿತು ಕೆಲವು ಮಾತುಗಳನ್ನು ಬರೆಯಬಹುದು. ಕನ್ನಡದಲ್ಲಿ ಕೆಲವರು ಸ್ವಂತ ಗಾದೆಗಳನ್ನು ರಚಿಸಿರುವ ನಿದರ್ಶನಗಳಿವೆ. ಕೊರವಂಜಿ ಪತ್ರಿಕೆಯಲ್ಲಿ ಬಂದ ನಾ. ಕಸ್ತೂರಿಯವರ ಸಾವಿರಾರು ಹೊಸ ಗಾದೆಗಳನ್ನು ಇಲ್ಲಿ ನೆನೆಯಬಹುದು. ಸಮಾಜದ ಕುಂದು ಕೊರತೆಗಳನ್ನು ವಿಡಂಬಿಸುವುದರಲ್ಲಿ ಇವು ಪರಿಣಾಮಕಾರಿಯಾದವು. ಇತ್ತೀಚೆಗೆ ಎರಡು ಸ್ವತಂತ್ರ್ಯ ಗಾದೆಗಳ ಸಂಕಲನಗಳು ಪ್ರಕಟಗೊಂಡಿವೆ. ಅವುಗಳಲ್ಲಿ 1969ರಲ್ಲಿ ಪ್ರಕಟವಾದ ಎಸ್. ವಿ. ಪರಮೇಶ್ವರಭಟ್ಟರ ಮಂಥನ ಒಂದು. ಇದರಲ್ಲಿ ಏಳುನೂರು ಹೊಸಗಾದೆಗಳಿವೆ. ಎಷ್ಟೋ ರೂಢಿಯ ಗಾದೆಗಳು ತಮ್ಮ ಮೂಲ ರೂಪದಲ್ಲಿಯೋ ಅಥವಾ ಅಲ್ಪಸ್ವಲ್ಪ ಬದಲಾವಣೆ ಹೊಂದಿಯೋ ಇಲ್ಲಿ ಬಂದು ಸೇರಿಕೊಂಡಿವೆ. ಕೆಲವು ಗಾದೆಗಳಂತೂ ಮೊದಲೆ ಜನಪದದಲ್ಲಿ ಇದ್ದ ಗಾದೆಗಳ ಸಾದೃಶ್ಯದ ಮೇಲೆ ರಚಿತವಾದವು. ತೀರ ಹೊಸದೆನ್ನುವ ಗಾದೆಗಳೂ ಇಲ್ಲಿವೆ. ಈ ಎಲ್ಲ ಗಾದೆಗಳೂ ರೂಪ ಮತ್ತು ಶೈಲಿಗಳಲ್ಲಿ ಜನಪದ ಗಾದೆಗಳಂತೆಯೇ ಇವೆ; ಆದರೆ ವಸ್ತುವಿಷಯದಲ್ಲಿ ಕೆಲಮಟ್ಟಿಗೆ ಬೇರೆಯಾಗಿವೆ, ಆಧುನಿಕವಾಗಿವೆ. ಈ ಬಗೆಯ ಇನ್ನೊಂದು ಸಂಕಲನವೆಂದರೆ 1970ರಲ್ಲಿ ಪ್ರಕಟವಾದ ಎಚ್.ಜೆ.ಲಕ್ಕಪ್ಪಗೌಡರ ಇಬ್ಬನಿ. ಇದರಲ್ಲಿ ಸಾವಿರದ ಇನ್ನೂರು ಸ್ವತಂತ್ರ್ಯ ಗಾದೆಗಳಿವೆ. ಆದರೆ ಇವು ಹೆಚ್ಚು ಗ್ರಾಮೀಣ ಸ್ವರೂಪದ್ದಾಗಿವೆ. ಮೇಲಿನ ಕೃತಿಗೆ ಹೇಳಿದ ಮಾತುಗಳೇ ಇದಕ್ಕೂ ಅನ್ವಯಿಸುತ್ತವೆ.

ಇವನ್ನು ಓದಿದಾಗ ಇಂಥ ಗಾದೆಗಳ ಅಗತ್ಯವಾದರೂ ಏನಿತ್ತು ಎಂಬ ಪ್ರಶ್ನೆ ಏಳುತ್ತದೆ. ನಾಗರಿಕತೆಯ ಪರಿಣಾಮದಿಂದ ಬದಲಾಗುತ್ತಿರುವ ಇಂದಿನ ಸಮಾಜದಲ್ಲಿ ಪರಂಪರಾಗತವಾದ ಗಾದೆಗಳು ಉಳಿಯುತ್ತಿಲ್ಲ; ಹಾಗೆಯೇ ನಾಗರಿಕವಾದ ಹೊಸ ಗಾದೆಗಳು ಜನಪದದಲ್ಲಿ ಸೃಷ್ಟಿಗೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಮಧ್ಯೆ ಇಂಥ ಸ್ವತಂತ್ರ್ಯ ಗಾದೆಗಳು ಜನಪದ ಸಮುದಾಯದಲ್ಲಿ ರೂಢಿಯ ಗಾದೆಗಳಂತೆ ಜನಪ್ರಿಯವಾಗುವುದು ತೀರ ಅಪರೂಪ. ಆದರೂ ಇವನ್ನು ಓದಿ ಸಂತೋಷಪಡಬಹುದು. ಒಟ್ಟಿನಲ್ಲಿ ಕನ್ನಡದ ದೃಷ್ಟಿಯಿಂದ ಗಾದೆಗಳ ಕ್ಷೇತ್ರದಲ್ಲಿ ಇವು ಹೊಸ ಪ್ರಯೋಗಗಳು. ಬೇರೆ ಬೇರೆ ದೇಶಗಳಲ್ಲಿ ಬಹಳ ಹಿಂದೆಯೇ ಇಂಥ ಪ್ರಯೋಗಗಳು ನಡೆದುದಕ್ಕೆ ನಿದರ್ಶನಗಳಿವೆ.

ಗಾದೆಗಳ ಸಂಗ್ರಹ ಪ್ರಕಟಣೆಗಳ ಜೊತೆಯಲ್ಲಿಯೇ ವಿಮರ್ಶನಕಾರ್ಯವೂ ಕನ್ನಡದಲ್ಲಿ ನಡೆದಿದೆ. ಬಿಡಿ ಲೇಖನಗಳ ರೂಪದಲ್ಲಿ, ಮುನ್ನುಡಿ, ಪ್ರಸ್ತಾವನೆಗಳಲ್ಲಿ ಇದರ ಅನೇಕ ವಿಷಯಗಳು ಚರ್ಚಿತವಾಗಿವೆ. ಆದರೆ ಇವೆಲ್ಲವನ್ನೂ ಇಲ್ಲಿ ಹೇಳಲು ಸಾಧ್ಯವಾಗುವುದಿಲ್ಲ. ಪುಸ್ತಕರೂಪದಲ್ಲಿ ಪ್ರಕಟವಾಗಿರುವುದನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಬಹುದು. ಇಲ್ಲಿಯವರೆಗೆ ಇಂಥ ಮೂರು ವಿಮರ್ಶನ ಗ್ರಂಥಗಳು ಮಾತ್ರ ಬಂದಿವೆ. ಮೊದಲನೆಯದು 1936ರಲ್ಲಿ

ಪ್ರಕಟಗೊಂಡ ಕುಲಕರ್ಣಿ ಪ್ರಹ್ಲಾದರ ನಾಣ್ಣುಡಿ. ಗಾದೆಗಳ ಉಗಮ ವಿಕಾಸ, ಸ್ವರೂಪಗಳನ್ನು ಕುರಿತು ಇದರಲ್ಲಿ ವಿಚಾರ ಮಾಡಲಾಗಿದೆ. ಬಹಳ ವರ್ಷಗಳ ಹಿಂದೆಯೇ ಗಾದೆಗಳ ಶಾಸ್ತ್ರೀಯ ಅಧ್ಯಯನದ ಆವಶ್ಯಕತೆಯನ್ನು ಕಂಡುಕೊಂಡುದು ಕುಲಕರ್ಣಿಯವರ ವೈಶಿಷ್ಟ್ಯವಾಗಿದೆ.

ಈ ಬಗೆಯ ಎರಡನೆಯ ಗ್ರಂಥವೆಂದರೆ ಎ.ಕೆ.ರಾಮಾನುಜನ್ ಅವರ ಗಾದೆಗಳು ಎಂಬ ಪುಸ್ತಿಕೆ. ಕರ್ನಾಟಕದ ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಮಾಲೆಯ ಗ್ರಂಥವಾದ ಇದು 1955ರಲ್ಲಿ ಪ್ರಕಟಗೊಂಡಿತು. ಗಾದೆಗಳ ವಿವರಣಾತ್ಮಕ ವಿಮರ್ಶೆ ಹಾಗೂ ಸೈದ್ಧಾಂತಿಕ ಪ್ರಸ್ತಾಪಗಳು ಇದರಲ್ಲಿ ಮೇಳವಿಸಿವೆ. ಆದರೂ ಗಾದೆಯ ಸಮಗ್ರ ಮೀಮಾಂಸೆ ಇದರಿಂದ ದೊರಕಲಾರದು; ಮಾತ್ರವಲ್ಲ, ಅಂಥ ಒಂದು ದೊಡ್ಡ ಕೆಲಸದ ಕಡೆಗೆ ಬೆರಳು ತೋರಿಸುತ್ತದೆ.

ಇಂಥ ಕೊರತೆಯನ್ನು ತಕ್ಕಮಟ್ಟಿಗಾದರೂ ತುಂಬಿಸಿಕೊಟ್ಟುದು ನಂ. ತಪಸ್ವೀ ಕುಮಾರ್ ಅವರ ಕನ್ನಡ ಗಾದೆಗಳ ಸಮೀಕ್ಷೆ ಎಂಬ ಪುಸ್ತಕ. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಗೃಹಸರಸ್ವತಿ ಗ್ರಂಥಮಾಲೆಯ ಪ್ರಕಟಣೆ ಇದು. ಇಲ್ಲಿ ಗಾದೆಗಳ ಹುಟ್ಟು ಬೆಳವಣಿಗೆ, ಸ್ವರೂಪಲಕ್ಷಣ ಮೊದಲಾದವನ್ನು ಚರ್ಚಿಸಿರುವುದಲ್ಲದೆ, ಗಾದೆಗಳ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಮೌಲ್ಯಗಳನ್ನು ವಿಶ್ಲೇಷಿಸಲಾಗಿದೆ. ಗಾದೆಗಳ ಅಧ್ಯಯನದ ಇತಿಹಾಸದ ಸ್ಥೂಲ ಪರಿಚಯವೂ ಕಡೆಯಲ್ಲಿ ಸೇರಿದೆ. ವಿಷಯ ಸಮೃದ್ಧವೂ ವಿಚಾರಸಂಪನ್ನವೂ ಆದ ಈ ಕೃತಿ, ಈ ದಿಕ್ಕಿನಲ್ಲಿ ಕೆಲಸಮಾಡುವವರಿಗೆ ಅತ್ಯುಪಯುಕ್ತವೂ ಮಾರ್ಗದರ್ಶಕವೂ ಆದುದಾಗಿದೆ.

ಹೀಗೆ ಗಾದೆಗಳನ್ನು ಕುರಿತ ವಿವೇಚನೆ ಕೆಲಮಟ್ಟಿಗೆ ನಡೆದಿದ್ದರೂ ಆಗಬೇಕಾದುದು ಇನ್ನೂ ಬಹಳವಿದೆ. ಇದಲ್ಲದೆ ಗಾದೆಗಳ ಸಂಗ್ರಹಕಾರ್ಯವೇ ಸಮಗ್ರವಾಗಿ ಆಗಿಲ್ಲ. ಗಾದೆಗಳು ನಿತ್ಯ ಹುಟ್ಟುತ್ತವೆ, ನಿತ್ಯ ಸಾಯುತ್ತವೆ ಎಂಬ ಮಾತೊಂದಿದೆ. ಈಗ ಗಾದೆಗಳು ಹುಟ್ಟುತ್ತಿಲ್ಲ, ಹುಟ್ಟಿದ ಗಾದೆಗಳು ಸಾಯುತ್ತಿರುವುದಂತೂ ಖಂಡಿತ. ಹಾಗೆ ಸಾಯುವುದಕ್ಕಿಂತ ಮುಂಚೆ ಅವನ್ನು ಉಳಿಸಿಕೊಳ್ಳಬೇಕಾದುದು ನಾಡಿನ ಆದ್ಯ ಕರ್ತವ್ಯವಾಗಿದೆ. (ಆರ್.ಜಿ.)

**ಗಾನರೀಯ** : ನೈಸೀರಿಯ ಗಾನರೀಯೀ ಎಂಬ ಏಕಾಣುಜೀವಿಯಿಂದ ಉಂಟಾಗುವ ಒಂದು ತೆರನ ಗುಹ್ಯರೋಗ. ಅಂಟುರೋಗವೂ ಹೌದು. ರೋಗಗ್ರಸ್ತ ಅಂಗಗಳಲ್ಲಿ ಕೀವು ಸ್ರವಿಸುವುದು ಇದರ ಮುಖ್ಯಗುಣ. ಮೂತ್ರನಾಳಗಳಿಂದ ಹೊರಸೂಸುವ ಕೀವು ವೀರ್ಯವೆಂದೂ ಹೀಗೆ ಹೊರಸೂಸಲು ಶುಕ್ಲಗ್ರಂಥಿಯ ದೋಷವೇ ಕಾರಣವೆಂದೂ ಬಗೆದು ಗಾನರೀಯವನ್ನು ಶುಕ್ಲದೋಷವೆಂಬ ಹೆಸರಿನಿಂದ ಕರೆಯುವುದುಂಟು. ಮನುಷ್ಯರಲ್ಲಿ ಮಾತ್ರ ಈ ರೋಗ ಸಹಜವಾಗಿ ಕಾಣಿಸುತ್ತದೆ. ಬೇರಾವ ಪ್ರಾಣಿಗಳಲ್ಲೂ ಕಂಡುಬರುವುದಿಲ್ಲ. ಆದರೆ ಪ್ರಯೋಗಶಾಲೆಗಳಲ್ಲಿ ಕೋತಿ, ಮೊಲ ಮುಂತಾದವಕ್ಕೆ ಈ ರೋಗ ಅಂಟುವಂತೆ ಮಾಡಬಹುದು. ಸಾಮಾನ್ಯವಾಗಿ ಗಂಡಸರಲ್ಲಿ ಮೂತ್ರನಾಳದಲ್ಲಿಯೂ ಹೆಂಗಸರಲ್ಲಿ ಹೆಚ್ಚಾಗಿ ಗರ್ಭಕೋಶ ಕಂಠ (ಸರ್ವಿಕ್ಸ್) ಇಲ್ಲವೆ ಮೂತ್ರನಾಳದಲ್ಲಿಯೂ ಕಾಣಿಸಿಕೊಳ್ಳುತ್ತದೆ.

ರೋಗಚರಿತ್ರೆ: ಪುರಾತನ ಕಾಲದಿಂದಲೂ ಮಾನವನಿಗೆ ತಿಳಿದಿದ್ದ ಮೇಹ ರೋಗವಿದು. ಚೀನೀಯರಿಗೆ 5,000 ವರ್ಷಗಳ ಹಿಂದೆಯೇ ಇದರ ಬಗ್ಗೆ ಗೊತ್ತಿತ್ತು. ಪ್ರಾಚೀನ ಗ್ರೀಕರಿಗೆ, ರೋಮನರಿಗೆ, ಅರಬ್ಬರಿಗೆ ಇದರ ಪರಿಚಯ ಇತ್ತು. ಆದರೆ ಈ ರೋಗ ಲೈಂಗಿಕ ಸಂಬಂಧವಾದುದು ಎಂಬುದು ಬಹಳ ಕಾಲ ಗೊತ್ತಿರಲಿಲ್ಲ. ಅಲ್ಲದೆ ಇದನ್ನು ಇನ್ನೊಂದು ಬಗೆಯ ಮೇಹರೋಗವಾದ ಸಿಫಿಲಿಸ್ ಎಂಬುದರ ಒಂದು ಬಗೆಯೆಂದು ತಿಳಿಯಲಾಗಿತ್ತು. 1831ರ ಅನಂತರ ಇವೆರಡೂ ಭಿನ್ನ ಬಗೆಯ ರೋಗಗಳೆಂದು ಪತ್ತೆ ಹಚ್ಚಲಾಯಿತು. ಜರ್ಮನಿಯ ವೈದ್ಯ ನೈಸರ್ ಗಾನರೀಯ ರೋಗಕಾರಕ ಕ್ರಿಮಿಯನ್ನು 1884ರಲ್ಲಿ ಕಂಡುಹಿಡಿದ ಅನಂತರ ಈ ರೋಗ ಸಿಫಿಲಿಸ್ ರೋಗದಿಂದ ಭಿನ್ನವಾದುದೆಂದು ಖಚಿತವಾಯಿತು.

ರೋಗ ನಿದಾನ: ನೈಸೀರಿಯ ಗಾನರೀಯೀ ಎಂಬ ಏಕಾಣುಜೀವಿಯೇ ಈ ರೋಗಕ್ಕೆ ಕಾರಣ ಎಂದು ಮೇಲೆ ಹೇಳಿದೆ. ಇದು ಗ್ರಾಮನ ವರ್ಣಪರೀಕ್ಷೆಗೆ ನಿಷೇಧಾರ್ಥಕ ಫಲಿತಾಂಶ ನೀಡುತ್ತದೆ. ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಿದಾಗ ಒಂದೊಂದು ಸೂಕ್ಷ್ಮಜೀವಿಯೂ ಒಂದು ಜೋಡಿ ಅವರೆಬೀಜದಾಕಾರದ ರಚನೆಯಂತೆ ಕಾಣುತ್ತದೆ. ಇದನ್ನು ಏಕಾಣುಜೀವಿ ಪ್ರಯೋಗಶಾಲೆಗಳಲ್ಲಿ ಚಾಕಲೇಟ್ ಅಗಾರ್ ಎಂಬ ಮಾಧ್ಯಮದಲ್ಲಿ ಬೆಳೆಸಬಹುದು. ಜನನೇಂದ್ರಿಯಗಳಿಂದ ಸ್ರವಿಸುವ ಕೀವಿನಲ್ಲಿ ಅನೇಕ ಕ್ರಿಮಿಗಳಿರುವುದರಿಂದ ರೋಗ ಒಬ್ಬರಿಂದ ಇನ್ನೊಬ್ಬರಿಗೆ ಸಂಭೋಗದ ಕಾಲದಲ್ಲಿ ಹರಡುತ್ತದೆ. ಅಲ್ಲದೆ ಕೀವು ತಗಲಿದ ಕಕ್ಕಸಿನ ಪೀಠ, ಕೀವನ್ನು ಮುಟ್ಟಿದ ಬೆರಳು, ಕೀವನ್ನು ಒರಸಿದ ಬಟ್ಟೆ ಮುಂತಾದವುಗಳಿಂದ ಕನ್ಯೆಯರಿಗೆ ಮತ್ತು ಮಕ್ಕಳಿಗೆ ರೋಗ ಹರಡಬಹುದು. ಕ್ರಿಮಿ ದೇಹವನ್ನು ಹೊಕ್ಕ ಅನಂತರ 3–14 ದಿವಸಗಳಲ್ಲಿ ರೋಗದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

ರೋಗಲಕ್ಷಣಗಳು: ಜನನೇಂದ್ರಿಯಗಳ ಒಳರಚನಾಕ್ರಮದ ವ್ಯತ್ಯಾಸದ ದೆಸೆಯಿಂದ ಇದರ ಲಕ್ಷಣಗಳು ಪುರುಷರಲ್ಲಿ ಮತ್ತು ಸ್ತ್ರೀಯರಲ್ಲಿ ಬೇರೆ ಬೇರೆಯಾಗಿರುತ್ತವೆ.

ಪುರುಷ ಗಾನರೀಯ: $100^0$–$104^0$ ಫ್ಯಾ.ವರೆಗೂ ಜ್ವರ ಬರುವುದು, ಆಗಾಗ್ಗೆ ಮೂತ್ರ ವಿಸರ್ಜಿಸುವುದು, ಮೂತ್ರವನ್ನು ವಿಸರ್ಜಿಸುವಾಗ ನೋವು, ಮೂತ್ರ ವಿಸರ್ಜನೆಯ ಅನಂತರ ಮತ್ತೊಮ್ಮೆ ಮೂತ್ರ ಮಾಡಬೇಕೆಂಬ ಇಚ್ಛೆ, ಮೂತ್ರನಾಳದಿಂದ ಕೀವು ಇಲ್ಲವೆ ರಕ್ತಮಿಶ್ರಿತವಾದ (ಹಳದಿ) ಕೀವು ಬೀಳುವುದು, ಮೊದಮೊದಲು ಮೂತ್ರದ ಜೊತೆಯಲ್ಲಿ ಹರಿದುಬರುವ ಕೀವು ಅನಂತರ ಮೂತ್ರನಾಳದಲ್ಲಿ ಯಾವಾಗಲೂ ಸ್ರವಿಸುತ್ತಿರುವುದು, ಶುಕ್ಲಗ್ರಂಥಿಯಲ್ಲಿ ಕೀವು ಸಂಗ್ರಹಗೊಂಡು ಮೂತ್ರ ಹೊರಬಾರದೆ ಹೊಟ್ಟೆನೋವುಂಟಾಗುವುದು – ಇವು ಕೆಲವು ಮುಖ್ಯ ಲಕ್ಷಣಗಳು. ಮೂತ್ರನಾಳದ ಹೊರ ಮತ್ತು ಒಳಭಾಗದಲ್ಲಿ ಗ್ರಂಥಿ ಮತ್ತು ಮೂಲೆಗಳಿದ್ದು ಗಾನರೀಯ ಕ್ರಿಮಿಗಳು ಗೂಡುಕಟ್ಟಿ ಬೆಳೆಯಲು ಅನುಕೂಲವಿರುವುದರಿಂದ ಟೈಸನನ ಗ್ರಂಥಿ, ಲಿಟ್ಟರ್ ಗ್ರಂಥಿ, ಕೌಪರ್ ಗ್ರಂಥಿ, ಶುಕ್ಲ ಗ್ರಂಥಿ ಮತ್ತು ಲ್ಯಾಕುನೇ ಮಾರ್ಗಾನಿಗಳಲ್ಲಿ ಉದ್ರೇಕವಾಗಿ ಗುಳ್ಳೆಗಳೇಳಬಹುದು. ಲಿಟ್ಟರ್ ಗ್ರಂಥಿ ಮತ್ತು ಲ್ಯಾಕುನೇ ಮಾರ್ಗಾನಿಗಳಲ್ಲಿ ಹಲವು ವೇಳೆ ಉರಿಯೂತವುಂಟಾಗಿ ಮೂತ್ರನಾಳವು ಸಂಕುಚಿತವಾಗಿ ಮೂತ್ರವಿಸರ್ಜನೆ ಕುಂಠಿತವಾಗುವುದುಂಟು. ಎಪಿಡಿಡೈಮಸ್, ವೃಷಣ ನಾಳ ಮತ್ತು ವೀರ್ಯಕೋಶಗಳಲ್ಲಿ ಉರಿಯೂತವಾಗಿ ರೋಗ ತೊಡಕುಗಳುಂಟಾಗಬಹುದು. ಎಪಿಡಿಡೈಮಸ್ ಉಬ್ಬಿ ಅಂಡಕೋಶದಲ್ಲಿ ತೀವ್ರ ನೋವು, ಜ್ವರ ಬರುತ್ತದೆ. ಸ್ಖಲನನಾಳದ ಸುತ್ತ ಬಾವುಂಟಾಗಿ ವೀರ್ಯ ಹೊರಬರಲು ಅಡ್ಡಿಯಾಗಿ ಪುರುಷರಲ್ಲಿ ಅನೇಕ ತೊಂದರೆಗಳಾಗಬಹುದು. ರಕ್ತಚಲನೆಯಿಂದ ಈ ಕ್ರಿಮಿ ದೇಹದ ಬೇರೆ ಬೇರೆ ಅಂಗಗಳಿಗೆ ಸಂಚರಿಸಿ ಕಣ್ಣು ಮತ್ತು ಕೀಲುಗಳಲ್ಲಿ ಉರಿಯೂತವನ್ನು ಉಂಟುಮಾಡುತ್ತದೆ. ಕಣ್ಣಿನ ಪಾಪೆ ಮತ್ತು ಕನೀನಿಕೆಗಳಲ್ಲಿ ನೋವು, ಹುಣ್ಣು ಮತ್ತು ರಕ್ತಾವರೋಧ ಮುಂತಾದ ತೊಂದರೆಗಳುಂಟಾಗುತ್ತವೆ. ಮೊದಲು ದೇಹದ ಎಲ್ಲ ಕೀಲುಗಳಲ್ಲಿ ನೋವುಂಟಾಗಿ ಅನಂತರ ಯಾವುದಾದರೂ ಒಂದು ದೊಡ್ಡ ಕೀಲಿನಲ್ಲಿ ನೋವು ಬಾವುಗಳಾಗುತ್ತವೆ. ಸಾಮಾನ್ಯವಾಗಿ ಮೊಣಕಾಲಿನ ಕೀಲಿನಲ್ಲಿ ಕೀವು ಸಂಗ್ರಹಗೊಂಡು ನಡೆಯಲು ಬಾರದಂತಾಗುತ್ತದೆ. ಕೀಲು ಗಟ್ಟಿಯಾಗಿ ಮಡಚಲಾಗದಂತೆ ಇಲ್ಲವೆ ಮಡಚುವಾಗ ವಿಪರೀತ ನೋವು ಬರುವಂತೆ ಆಗುತ್ತದೆ.

ಸ್ತ್ರೀ ಗಾನರೀಯ: ಸ್ತ್ರೀಯರಲ್ಲಿ ಈ ರೋಗ ಪುರುಷನಲ್ಲಿದ್ದಷ್ಟು ತೀವ್ರವಾಗಿರದೆ ಜನನೇಂದ್ರಿಯ ಮತ್ತು ಮೂತ್ರಾಂಗಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಮೂತ್ರನಾಳ, ಗರ್ಭಕೋಶಕಂಠ ಮತ್ತು ಭಗಗ್ರಂಥಿಗಳ ಮೇಲಿದ್ದ ಅಂಟು ಪೊರೆಯನ್ನು ಗಾನರೀಯ ಕ್ರಿಮಿ ಹೊಕ್ಕು ಅನೇಕ ರೀತಿಯ ಲಕ್ಷಣಗಳನ್ನು ಪ್ರದರ್ಶಿಸುತ್ತದೆ. ಪದೇಪದೇ ಮೂತ್ರವಿಸರ್ಜನೆ, ರಜಸ್ಸು ಚಕ್ರ ಬದಲಾಗುವಿಕೆ, ಒಂದು ಮಗುವಾದ ಬಳಿಕ ಬಂಜೆತನ ಮತ್ತು ಯೋನಿಯೊಳಗಿಂದ ಬಿಳಿಸ್ರಾವವಾಗುವುದು – ಇವು ಹೆಂಗಸರಲ್ಲಿ ಕಾಣಬರುವ ಮುಖ್ಯ ಲಕ್ಷಣಗಳು. ಇವೆಲ್ಲಕ್ಕಿಂತಲೂ ಮುಖ್ಯವಾಗಿ ರೋಗಿ ಅನಿಶ್ಚಿತ ಅಸ್ವಸ್ಥತೆಯಿಂದ ನರಳುತ್ತಾಳೆ. ಭಗೋಷ್ಠಗಳ ಬಾಯುವಿಕೆ, ಯೋನಿಯ ಹಿಂಭಾಗದ ಮೂಲೆಯಲ್ಲಿ ಉರಿಯೂತ, ಗರ್ಭಕೋಶ ಕಂಠದ ಮೇಲೆ ಗಾಯ ಮತ್ತು ಅದರ ದ್ವಾರ ತೆರೆದು ಬಿರಿತು ಕೀವು ಸ್ರವಿಸುವುದು ಇನ್ನಿತರ ಲಕ್ಷಣಗಳು. ಗರ್ಭಕೋಶ ಕಂಠದ ಅಂಟುಪೊರೆಯಲ್ಲಿ ಕ್ರಿಮಿಗಳು ಬಹಳ ಕಾಲ ಇರಬಹುದಾದ್ದರಿಂದ ಗಾನರೀಯ ಹೆಂಗಸರಲ್ಲಿ ದೀರ್ಘಕಾಲದ ರೋಗವಾಗುತ್ತದೆ. ಗರ್ಭಕೋಶಕಂಠನಾಳದಿಂದ ಅಂಡನಾಳವನ್ನು ಕ್ರಿಮಿ ಪ್ರವೇಶಿಸಿದಾಗ ಉರಿಯೂತ ಉಂಟಾಗಿ, ಅಂಡನಾಳ ಉಬ್ಬಿ ಹೊಟ್ಟೆನೋವು ಬರಬಹುದು. ಹೀಗೆ ಅನೇಕ ಸಲ ಉರಿಯೂತವಾಗಿ ಕೊನೆಗೆ ಅಂಡನಾಳ ಸಂಕುಚಿತವಾಗಬಹುದು. ಸಂಕುಚಿತವಾದರೆ ವೀರ್ಯಾಣು ಚಲಿಸಲು ಅಡ್ಡಿಯಾಗಿ ಗರ್ಭಧಾರಣೆಗೆ ಆತಂಕವಾಗಿ ಹೆಂಗಸು ಬಂಜೆಯಾಗಬಹುದು.

ಎಳೆಗೂಸು ಮತ್ತು ಮಕ್ಕಳ ಗಾನರೀಯ: ಜನನ ಕಾಲದಲ್ಲಿ ತಾಯಿಯ ಯೋನಿಯಲ್ಲಿ ಸ್ರವಿಸುವ ಕೀವು ಶಿಶುವಿನ ಕಣ್ಣಿಗೆ ತಗುಲಿದರೆ ಕಣ್ಣಿನ ಬಿಳಿಪೊರೆಯ ಉರಿಯೂತ ಉಂಟಾಗುತ್ತದೆ. ಇದರಿಂದ ಕುರುಡು ಸಂಭವಿಸಬಹುದು. ಮಗು ಹುಟ್ಟಿದ 21 ದಿವಸಗಳೊಳಗೆ ಕಣ್ಣಿಗೆ ಉರಿಯೂತವಾದರೆ ಸಾಮಾನ್ಯವಾಗಿ ಅದು ಗಾನರೀಯದಿಂದ ಉಂಟಾದುದು ಎಂದು ತಿಳಿಯಬಹುದು. ಕನ್ಯೆಯರ ಭಗೋಷ್ಠಗಳ ಮೇಲೆ ಇರುವ ಪೊರೆಯನ್ನು ಗಾನರೀಯ ಕ್ರಿಮಿ ಅತಿ ಸುಲಭವಾಗಿ ಆಕ್ರಮಿಸುತ್ತದೆ. ಭಗೋಷ್ಠ ಉರಿಯೂತ ಕನ್ಯೆಯರಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಲೈಂಗಿಕ ಅಕೃತ್ಯ ಮತ್ತು ಬಲಾತ್ಕಾರ

ಸಂಪರ್ಕಗಳಿಂದ ಇದು ಉದ್ಭವಿಸುತ್ತದೆ. ಕೊನೆಯದಾಗಿ ಲೈಂಗಿಕ ವಿಕಾರಗಳಿಂದ ಎಂದರೆ ಗುದಲಿಂಗ ಸಂಪರ್ಕದಿಂದ ಗುದದಲ್ಲಿ ಗಾನರೀಯ ರೋಗ ಬರುತ್ತದೆ.

ರೋಗವನ್ನು ಗುರುತಿಸುವ ವಿಧಾನ: ಕೀವನ್ನು ಗಾಜಿನ ಸ್ಲೈಡಿನ ಮೇಲೆ ಲೇಪಿಸಿ ಗ್ರಾಮನ ವರ್ಣೀಕರಣ ವಿಧಾನದಿಂದ ಬಣ್ಣಕೊಟ್ಟು ಕ್ರಿಮಿಯನ್ನು ಸೂಕ್ಷ್ಮದರ್ಶಕದಲ್ಲಿ ಗುರುತಿಸಬಹುದು. 1960ರಿಂದೀಚೆಗೆ ಕ್ರಿಮಿಯನ್ನು ಪತ್ತೆಹಚ್ಚಲು ಪ್ರತಿರೋಧಿ ಕಿರಣಸ್ಫುರಣ ಪರೀಕ್ಷೆ ಎಂಬುದನ್ನು ಬಳಸುತ್ತಿದ್ದಾರೆ.

ಚಿಕಿತ್ಸೆ: ಪುರುಷನಲ್ಲಿ ರೋಗ ತೀವ್ರವಿದ್ದಾಗ ಪಿಎಎಮ್ ಚುಚ್ಚುಮದ್ದನ್ನು ಕೊಟ್ಟರೆ ಗುಣವಾಗುತ್ತದೆ. ದೀರ್ಘಕಾಲದ ರೋಗವಿದ್ದರೆ ದಿವಸವೂ 1 ಸಿಸಿ.ಯಂತೆ ನಾಲ್ಕು ದಿವಸ ಕೊಡಬೇಕು. ಹೆಂಗಸರಲ್ಲಿ ರೋಗವನ್ನು ಗುಣಪಡಿಸುವುದು ಬಹಳ ಕಷ್ಟ. ಪಿಎಎಮ್‌ಅನ್ನು ಕೊಟ್ಟರೂ ರೋಗ ಗುಣವಾಗುವುದೆಂದು ಹೇಳಲಾಗದು. ಸ್ಟ್ರೆಪ್ಟೊಮೈಸಿನನ್ನು ದಿವಸಕ್ಕೆ 1 ಗ್ರಾಮಿನಂತೆ 5 ದಿವಸ ಚುಚ್ಚುಮದ್ದಾಗಿ ಕೊಡಬೇಕು. ಆದರೆ ಕ್ರಿಮಿ ಸ್ಟ್ರೆಪ್ಟೊಮೈಸಿನಿಗೆ ಪ್ರತಿರೋಧ ಶಕ್ತಿಯನ್ನು ವೃದ್ಧಿ ಮಾಡಿಕೊಳ್ಳಬಹುದಾದ್ದರಿಂದ ಅಕ್ರೊಮೈಸಿನ್ ಮುಂತಾದ ಜೀವಿರೋಧಕ ಮದ್ದುಗಳನ್ನು ದಿನಕ್ಕೆ 2 ಗ್ರಾಮಿನಂತೆ 1 ಇಲ್ಲವೆ 2 ದಿವಸ ಕೊಡಬೇಕು. ಹುಟ್ಟುವ ಎಲ್ಲ ಶಿಶುಗಳ ಕಣ್ಣಲ್ಲಿ ಸಿಲ್ವರ್ ನೈಟ್ರೇಟ್ ದ್ರಾವಣ ಇಲ್ಲವೆ ಪೆನಿಸಿಲಿನ್ ದ್ರಾವಣವನ್ನು ಹಾಕಬೇಕು. ಕಣ್ಣಿನ ಉರಿಯೂತವಿದ್ದರೆ ಪೆನಿಸಿಲಿನ್ ದ್ರಾವಣವನ್ನು ಕಣ್ಣುಗಳಲ್ಲಿ ಆಗಾಗ್ಗೆ ಹಾಕುತ್ತಿರಬೇಕು. ಮತ್ತು ಕೊನೆಯ ಪಕ್ಷ 2 ಲಕ್ಷ ಯೂನಿಟ್ ಪ್ರೊಕೇನ್ ಪೆನಿಸಿಲಿನ್ ಚುಚ್ಚುಮದ್ದನ್ನು ಪ್ರತಿದಿವಸ ಗುಣವಾಗುವವರೆಗೆ ಕೊಡಬೇಕು, ಭಗೋಷ್ಠ ಉರಿಯೂತವಿದ್ದರೆ ಪೆನಿಸಿಲಿನ್ ದ್ರಾವಣದಿಂದ ದಿವಸವೂ ತೊಳೆದು ಪಿಎಎಮ್‌ನ್ನು ದಿನಕ್ಕೆ 1 ಸಿಸಿ.ಯಂತೆ ಗುಣವಾಗುವವರೆಗೆ ಕೊಡಬೇಕು. ಗುಣವಾದ ಮೇಲೂ ರೋಗಿಗಳನ್ನು 3 ರಿಂದ 6 ತಿಂಗಳವರೆಗೆ ಕಣ್ಗಾವಲಿನಲ್ಲಿಟ್ಟು ಸಂಪೂರ್ಣ ಚಿಕಿತ್ಸೆ ಕೊಡಬೇಕು.

ರೋಗ ನಿರೋಧ: ಸಂಭೋಗವಾದ ಕೂಡಲೆ ಪಿಎಎಮ್ ಚುಚ್ಚುಮದ್ದನ್ನು ತೆಗೆದುಕೊಂಡರೆ ಇಲ್ಲವೆ ಸಂಭೋಗ ಕಾಲದಲ್ಲಿ ಲಿಂಗ ಕವಚ ಧರಿಸಿದ್ದರೆ ರೋಗ ಬರಲಾರದು. ಕನಿಷ್ಠ 2 ಲಕ್ಷ ಯೂನಿಟ್ ಪೆನಿಸಿಲಿನ್ ಉಳ್ಳ ಮಾತ್ರೆಯನ್ನು ಸಂಭೋಗದ ಮುಂಚೆ ಇಲ್ಲವೆ ಸಂಭೋಗದ ಅನಂತರ 15 ಗಂಟೆಯೊಳಗೆ ಸೇವಿಸಿದರೆ ರೋಗ ಬರುವ ಸಂಭವ ಕಡಿಮೆ. (ಎನ್.ಕೆ.ಎಂ.)

**ಗಾಫ್, ಹ್ಯೂ :** 1779–1869. ಐರಿಷ್ ಸೈನಿಕ. ಲಿಮರಿಕ್‌ನ ವೂಡ್ಸ್ ಡೌನನಲ್ಲಿ 1779ರ ನವೆಂಬರ್ 3ರಂದು ಹುಟ್ಟಿದ. ಈತ ಸೈನ್ಯಕ್ಕೆ ಸೇರಿದ್ದು 1794ರಲ್ಲಿ. ಎರಡು ವರ್ಷಗಳ ಅನಂತರ ಗುಡ್ ಹೋಪ್ ಭೂಶಿರದ ಆಕ್ರಮಣ ಕಾರ್ಯಾಚರಣೆಯಲ್ಲೂ 1797–1800ರಲ್ಲಿ ವೆಸ್ಟ್ ಇಂಡೀಸಿನಲ್ಲಿ ನಡೆದ ಆಕ್ರಮಣ ಯುದ್ಧಗಳಲ್ಲೂ ಭಾಗವಹಿಸಿದ. 15ನೆಯ ವಯಸ್ಸಿಗೆ ಅಡ್ಜುಟಂಟ್ ಆಗಿ 25ನೆಯ ವಯಸ್ಸಿನಲ್ಲಿ ಮೇಜರ್ ಆಗಿಯೂ ಮೇಲೇರಿದ ಈತ ಪೋರ್ಚುಗಲ್–ಸ್ಪೇನ್‌ಗಳಲ್ಲಿ ವೆಲಿಂಗ್ಟನ್ ಡ್ಯೂಕನ ಸೇನೆಯ 87ನೆಯ ರೆಜಿಮೆಂಟಿನ ಸೇನಾನಿಯಾಗಿದ್ದ. ಈ ಯುದ್ಧದಲ್ಲಿ ತೀವ್ರವಾಗಿ ಗಾಯ ಗೊಂಡರೂ ವಿಜಯ ಸಾಧಿಸಿದ. ಇದಕ್ಕೆ ಪ್ರತಿಫಲವೂ ಕಾದಿತ್ತು. ಗಾಫ್‌ಗೆ ಲೆಫ್ಟಿನೆಂಟ್ ಕರ್ನಲ್ ದರ್ಜೆಗೆ ಬಡ್ತಿ ಸಿಕ್ಕಿತು. ಅನಂತರ ವಿಟೋರೀಯದ ಟಾರೀಫಾ ಬಂದರಿನ ರಕ್ಷಣೆಗಾಗಿ ಈತ ನಡೆಸಿದ ಕದನದಲ್ಲಿ ಮತ್ತೆ ಗಾಯಗೊಂಡ. ಧೈರ್ಯ ಸಾಹಸ ಸಂಘಟನೆ ನಿರ್ದೇಶನಗಳಿಗಾಗಿ 1815ರಲ್ಲಿ ಈತನಿಗೆ ನೈಟ್ ಪದವಿ ಲಭ್ಯವಾಯಿತು.


1821–24ರಲ್ಲಿ ದಕ್ಷಿಣ ಐರ್ಲೆಂಡಿನ ರೈತರ ವಿರುದ್ಧ ನಡೆಸಲಾಗುತ್ತಿದ್ದ ಕಾರ್ಯಾಚರಣೆಯಲ್ಲಿ ಗಾಫ್ ನಿರತನಾಗಿದ್ದ. 1830ರಲ್ಲಿ ಈತನಿಗೆ ಮೇಜರ್ ಜನರಲ್ ದರ್ಜೆ ದೊರಕಿತು. ಗಾಫ್ 1837ರಲ್ಲಿ ಮೈಸೂರಿನಲ್ಲಿ ಸೇನಾಧಿಪತಿಯಾದ. 1840ರಲ್ಲಿ ಚೀನದ ವಿರುದ್ಧ ನಡೆಸಿದ ಓಪಿಯಂ ಯುದ್ಧದ ನೇತೃತ್ವ ವಹಿಸಿದ. 1843ರಲ್ಲಿ ಭಾರತದ ದಂಡನಾಯಕನಾಗಿ ನೇಮಕಗೊಂಡು ಆ ವರ್ಷದ ಡಿಸೆಂಬರಿನಲ್ಲಿ ಮರಾಠರ ಸೈನ್ಯವನ್ನೂ 1845–46ರಲ್ಲಿ ಸಿಖ್ ಸೈನ್ಯವನ್ನೂ ಸೋಲಿಸಿದ. ಎರಡನೆಯ ಸಿಖ್ ಯುದ್ಧದಲ್ಲೂ (1848–49) ವಿಜಯ ಬ್ರಿಟಿಷರದಾಯಿತಾದರೂ ಈ ಎರಡು ಯುದ್ಧಗಳಲ್ಲೂ ಬ್ರಿಟಿಷರಿಗೆ ಆದ ನಷ್ಟ ಅಗಾಧ. ಇವನ ನಾಯಕತ್ವದ ಹಲವು ದೋಷಗಳು ಆಗ ಟೀಕೆಗೆ ಒಳಗಾದವು. ಇವನ ಸ್ಥಾನದಲ್ಲಿ ಚಾರ್ಲ್ಸ್ ನೇಪಿಯರನ ನೇಮಕವಾಯಿತು. 1862ರಲ್ಲಿ ಗಾಫ್ ಫೀಲ್ಡ್–ಮಾರ್ಷಲ್ ಆದ. ಈತ ತೀರಿಕೊಂಡದ್ದು 1869ರ ಮಾರ್ಚ್ 2 ರಂದು. (ಎಸ್.ಕೆ.ಎಸ್.)

**ಗಾಬಿ ಚುಕ್ಕೆ (ಕುರುಡು ತಾಣ (ಬ್ಲೈಂಡ್‌ಸ್ಪಾಟ್) :** ಕಣ್ಣಿನ ದೃಷ್ಟಿಪಟಲದಲ್ಲಿ (ರೆಟಿನ) ಅದರ ಕೇಂದ್ರದಿಂದ ಸುಮಾರು ಅರ್ಧ ಮಿಮೀ. ಕೆಳಗಡೆ ಮತ್ತು 3 ಮಿಮೀ. ಒಳಕ್ಕೆ ಇರುವ ಸುಮಾರು 3 ಮಿ.ಮೀ. ವ್ಯಾಸವುಳ್ಳ ಸ್ವಲ್ಪ ಅಂಡಾಕಾರವಾಗಿರುವ ಭಾಗ ಕುರುಡುತಾಣ–(ಬ್ಲೈಂಡ್‌ಸ್ಪಾಟ್). ಈ ಭಾಗದಲ್ಲಿ ದೃಷ್ಟಿಪಟಲದ ಎಲ್ಲ ಕಡೆಗಳಿಂದಲೂ ನರತಂತುಗಳು ಬಂದು ಕೂಡಿಕೊಂಡು ದೃಕ್ (ಆಪ್ಟಿಕ್) ನರವಾಗುತ್ತದೆ ಮತ್ತು ಇಲ್ಲಿ ಬೆಳಕಿಗೆ ಪ್ರತಿಕ್ರಿಯೆ ತೋರಬಲ್ಲ ಜೀವಾಣುಗಳಾಗಲಿ ನರಕೋಶ ಗಳಾಗಲಿ ಇರುವುದಿಲ್ಲ. ಹೊರ ವಸ್ತುಗಳು ಈ ಸ್ಥಳದಲ್ಲಿ ಬಿಂಬವನ್ನು ಉಂಟುಮಾಡಿದರೆ ಅದು ದೃಷ್ಟಿಪಟಲದಲ್ಲಿ ಯಾವ ಪ್ರತಿಕ್ರಿಯೆಯನ್ನೂ ಉಂಟುಮಾಡುವುದಿಲ್ಲ ಮತ್ತು ಸಹಜವಾಗಿ ಆ ವಸ್ತು ದೃಷ್ಟಿಗೋಚರಕ್ಕೆ ಬರಲಾರದು. ಆದರೆ ಎರಡು ಕಣ್ಣುಗಳ ಕುರುಡುತಾಣಗಳು ಪರಸ್ಪರ ಸಮಾನ ಸ್ಥಳಗಳಲ್ಲಿ ಇಲ್ಲದಿರುವುದರಿಂದ ವಸ್ತು ಇನ್ನೊಂದು ಕಣ್ಣಿನಲ್ಲಿ ಪ್ರತಿಬಿಂಬ ವನ್ನು ಬೇರೆ ಸ್ಥಳದಲ್ಲಿ ಉಂಟುಮಾಡಿ ಆ ಕಣ್ಣಿನ ಮೂಲಕ ದೃಷ್ಟಿಗೋಚರಕ್ಕೆ ಬರುತ್ತದೆ. ಈ ಕಾರಣದಿಂದ ಸಾಮಾನ್ಯವಾಗಿ ಎರಡು ಕಣ್ಣುಗಳ ಏಕಕಾಲಿಕ ದೃಷ್ಟಿ ಲಾಭವುಳ್ಳವರಲ್ಲಿ ಕುರುಡುತಾಣದಿಂದ ಯಾವ ಅನನುಕೂಲತೆಯೂ ಇರುವುದಿಲ್ಲ. ಕಾರಣಾಂತರದಿಂದ ವ್ಯಕ್ತಿಯಲ್ಲಿ ಒಂದು ಕಣ್ಣಿನಲ್ಲಿ ಮಾತ್ರ ದೃಷ್ಟಿ ಇದ್ದರೆ ಆಗ ವಸ್ತುಗಳು ಒಂದೊಂದು ಸಲ ಕಾಣಿಸದೆ ಇರುವ ಸಾಧ್ಯತೆ ಉಂಟು. ಆದರೆ ದೃಷ್ಟಿಸುವಾಗ ಕಣ್ಣು ಯಾವಾಗಲೂ ಸ್ವಲ್ಪ ಚಲಿಸುತ್ತಲೇ ಇರುವುದರಿಂದ ಇದೂ ಗಮನಕ್ಕೆ ಬರುವುದಿಲ್ಲ. (ಎಸ್.ಆರ್.ಆರ್.)



ಎಡಗಣ್ಣನ್ನು ಮುಚ್ಚಿ ಬಲಗಣ್ಣಿನಿಂದ X ಗುರುತನ್ನೇ ನೋಡುತ್ತ ಪುಸ್ತಕವನ್ನು ದೂರದಿಂದ ಹತ್ತಿರ ನಿಧಾನವಾಗಿ ತರಬೇಕು. ಕಣ್ಣಿನಿಂದ ಸುಮಾರು 15–20 ಸೆಂಮೀ ದೂರದಲ್ಲಿ ಬಲಗಡೆಯ ಕಪ್ಪು ಚುಕ್ಕೆ ಅದೃಶ್ಯವಾಗುತ್ತದೆ.

**ಗಾಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್ :** 1927–. ಕೊಲಂಬಿಯದ ಅರಕಾಟಕಾದಲ್ಲಿ 6ನೆಯ ಮಾರ್ಚ್, 1928ರಲ್ಲಿ ಹುಟ್ಟಿದ ಗಾಬ್ರಿಯಲ್ ಗಾರ್ಸಿಯಾ ಮಾರ್ಕೆಜ್ ತಂದೆ ತಾಯಿಯರಿಗಿಂತ ಹೆಚ್ಚಾಗಿ ಹಿಂದೊಮ್ಮೆ ಯುದ್ಧದಲ್ಲಿ ಉದಾರವಾದಿಗಳ ಯೋಧನಾಗಿದ್ದ ಅಜ್ಜ ಮತ್ತು ಅಜ್ಜಿಯರ ಸಹವಾಸದಲ್ಲಿ ಬೆಳೆದ. 1946ರಲ್ಲಿ ಕಾನೂನು ಕಾಲೇಜಿಗೆ ಸೇರಿಕೊಂಡಿದ್ದರೂ ಸಾಹಿತ್ಯದಲ್ಲಿ ಆಸಕ್ತಿ ಬೆಳೆಸಿಕೊಂಡ.



ಮುಂದೆ 1958ರಲ್ಲಿ ಮದುವೆ ಯಾಗಲಿದ್ದ 13ರ ಹುಡುಗಿಯನ್ನು ಆಗ ಮೆಚ್ಚಿಕೊಂಡಿದ್ದ. ಓದಿನಲ್ಲಿ ಮನಸ್ಸಿರದೆ ಪತ್ರಕರ್ತನಾಗಿ ಕೆಲಸ ಮಾಡುತ್ತಿದ್ದರೂ ಕೊಲಂಬಿಯದಲ್ಲಿ ಜರುಗುತ್ತಿದ್ದ ರಾಜಕೀಯದ ಏರುಪೇರುಗಳಿಗೆ ತೆರೆದುಕೊಂಡು ಕೆಲವು ಕಾಲ ಸೋಷಲಿಸ್ಟರ ಸಂಗ ಹೊಂದಿದ್ದ. ಅವನು ಎಲ್ ಸ್ಪೆಕ್ಟೇಟರ್ ಪತ್ರಿಕೆಗೆ ತನ್ನ ದೇಶಕ್ಕೆ ಸಂಬಂಧಿಸಿದ ಭಾರಿ ನೌಕಾಘಾತದ ಬಗ್ಗೆ ಬರೆದ ಲೇಖನಗಳು ಅವನಿಗೆ ಅಪಾರ ಖ್ಯಾತಿಯನ್ನು ತಂದು ಕೊಟ್ಟಿತು. ಅವನು 1950ರಲ್ಲಿ ಕಾನೂನು ಅಭ್ಯಾಸವನ್ನು ಸಂಪೂರ್ಣವಾಗಿ ತ್ಯಜಿಸಿ ಬರೆವಣಿಗೆಯಲ್ಲಿ ತೊಡಗಿದ. ಅನಂತರ ಇಡೀ ಯುರೋಪಿನಲ್ಲಿ ಅಲೆಮಾರಿಯಾಗಿ ದೇಶದಿಂದ ದೇಶಕ್ಕೆ ತಿರುಗಾಡಿದ. ವಿಲಿಯಂ ಫಾಕ್ನರ್ ಊರೊಂದನ್ನು ಕಲ್ಪಿಸಿಕೊಂಡಂತೆ ಮಕಾಂದೋವನ್ನು ಕಲ್ಪಿಸಿದ. ಕೊಲಂಬಿಯದ ಸ್ಥಳೀಯ ಭಾಷೆಗಳಲ್ಲಿ ಒಂದಾದ ಬಂಟು ಎಂಬ ಭಾಷೆಯಲ್ಲಿ ಮಕಾಂದೋ ಎಂದರೆ ಬಾಳೆ. ಉತ್ತರ ಕೊಲಂಬಿಯದ ಪ್ರಮುಖ ಬೆಳೆಯೂ ಬಾಳೆ ಆಗಿದ್ದು ಅವನ ಕಲ್ಪನೆಗೆ ಬೆಂಬಲವಾಗಿರಬೇಕೆಂದು ಊಹಿಸಲು ಕಾರಣವಿದೆ. ಅದನ್ನು 1955ರಲ್ಲಿ ಪ್ರಕಟವಾದ ತನ್ನ ಕಿರು ಕಾದಂಬರಿ ಲೀಫ್ ಸ್ಟಾರ್ಮ್‌ನಲ್ಲಿ ಮೊದಲು ಬಳಸಿದ. ಆ ಕೃತಿಯ ಮೇಲೆ ಫಾಕ್ನರ್‌ನ ಪ್ರಭಾವ ಗಾಢವಾಗಿದೆಯೆಂದು ಪರಿಗಣಿತವಾದದ್ದರಿಂದ ಆಗಲೇ ಕೆಲವು ಪುಸ್ತಕಗಳು ಪ್ರಕಟವಾಗಿದ್ದರೂ ಕಾಫ್ಕನ ಮೆಟಮಾರ್ಫಸಿಸ್ ಓದಿದ ಮೇಲೆ ಅದು ಅವನಿಗೆ ಅವನ ಅಜ್ಜಿ ತನ್ನ ಅನುಭವಕ್ಕೆ ಸಿಕ್ಕ ಮತ್ತು ಕೇಳಿದ ಕಥೆಗಳನ್ನು ಹೇಳುತ್ತಿದ್ದ ರೀತಿಯಲ್ಲಿ ಇದ್ದಂತೆ ಕಂಡಿತು. ಅದರಿಂದ ಅವನಿಗೆ ಬರೆವಣಿಗೆಯಲ್ಲಿ ನೇರ ಕಥನದ ಮಾರ್ಗ ಮತ್ತು ಸಾಂಪ್ರದಾಯಿಕ ವಸ್ತು ಅನಿವಾರ್ಯವಿಲ್ಲವೆಂದು ಅರಿವಾಯಿತು. ಅಲ್ಲಿಯ ತನಕ ತಾನು ಬರೆದಿದ್ದರಲ್ಲಿ ಅಸಮಾಧಾನಗೊಂಡು ತನಗೆ ಸಹಜವಾದ ಮಾಂತ್ರಿಕ ವಾಸ್ತವತೆ ಎಂದು ಹೆಸರಿಸಲಾಗಿರುವ ಪರಿಕಲ್ಪನೆಯೊಂದಿಗೆ ಬರೆಯತೊಡಗಿದ. ಅಭಿವ್ಯಕ್ತಿಯ ಮಾರ್ಗಕ್ಕೆ

ತನ್ನ ಅಜ್ಜಿ ಹೇಳುತ್ತಿದ್ದ ರೀತಿಯೇ ಅತ್ಯಂತ ಸಮರ್ಪಕವೆಂದು ಭಾವಿಸಿ ಹದಿನೆಂಟು ತಿಂಗಳ ಸಂಪೂರ್ಣ ಏಕಾಗ್ರತೆಯಿಂದ "ನೂರು ವರ್ಷದ ಏಕಾಂತ" (ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್) ಕಾದಂಬರಿಯನ್ನು ಬರೆದ. ಆ ಅವಧಿಯಲ್ಲಿ ಬಡತನದಲ್ಲಿದ್ದ ಅವನ ಸಂಸಾರದ ನಿರ್ವಹಣೆಗೆ ಮನೆಯಲ್ಲಿ ಇದ್ದದ್ದನ್ನೆಲ್ಲ ಮಾರಬೇಕಾಯಿತು. ಅವನಿಗೆ ಮದುವೆಯಾಗಿ ಇಬ್ಬರು ಮಕ್ಕಳಿದ್ದಾರೆ.

ಹಸ್ತ ಪ್ರತಿಯಲ್ಲಿಯೇ ಲ್ಯಾಟಿನ್ ಅಮೆರಿಕದ ಪ್ರಖ್ಯಾತ ಬರೆಹಗಾರ ಕಾರ್ಲೋಸ್ ಫಿಂತಸ್‍ನ ಪ್ರಶಂಸೆಗೆ ಒಳಗಾದ ನೂರು ವರ್ಷದ ಏಕಾಂತ 1967ರಲ್ಲಿ ಪ್ರಕಟವಾಯಿತು. 1969ರಿಂದ 1982ರ ನೊಬೆಲ್ ಪ್ರಶಸ್ತಿಯೂ ಸೇರಿದಂತೆ ಅನೇಕ ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಗಳಿಸಿದೆ ಮತ್ತು ಪ್ರಪಂಚದ ಅನೇಕ ಭಾಷೆಗಳಿಗೆ ಭಾಷಾಂತರಗೊಂಡಿದೆ.

ನೂರು ವರ್ಷದ ಏಕಾಂತ ಬ್ಯುಂಡಿಯಾ ವಂಶದ ಮೂರು ತಲೆಮಾರುಗಳ ಕಥಾ ಹಂದರದಲ್ಲಿ ಮಾಂತ್ರಿಕ ವಾಸ್ತವತೆ ಎಂದು ಕರೆಯಲಾದ ಪರಿಕಲ್ಪನೆಯಲ್ಲಿ ನಿರೂಪಿತವಾದ ಮಾನವ ಸಂಸ್ಕೃತಿಯ ದಾಖಲೆ ಎಂದು ವ್ಯಾಖ್ಯಾನಿಸಲಾಗಿದೆ. 19ನೆಯ ಶತಮಾನದಲ್ಲೇ ಸ್ವಾತಂತ್ರ್ಯ ಗಳಿಸಿದರೂ ರಾಜಕೀಯ ಏರಿಳಿತಕ್ಕೆ ಒಳಗಾದ ಕೊಲಂಬಿಯದ ಸ್ಥಿತಿಯ ಪ್ರತಿಫಲನ ಕಾದಂಬರಿಯಲ್ಲಿ ವ್ಯಕ್ತವಾಗಿದೆ. ವಿವಿಧ ರಾಜಕೀಯ ಸಿದ್ಧಾಂತಗಳಿಗೆ ಒಪ್ಪುವ ಅಂಶಗಳು ಇದರಲ್ಲಿ ದೊರಕುತ್ತದೆ. ಇಡೀ ಕಾದಂಬರಿ ಮಕಾಂದೋವನ್ನು ಹುಟ್ಟು ಹಾಕುವ ಬ್ಯುಂಡಿಯಾ ಮನೆತನ ಊರಿನೊಂದಿಗೆ ಅಭಿವೃದ್ಧಿ ಹೊಂದಿ ಕ್ರಮೇಣ ಸಂಪೂರ್ಣವಾಗಿ ನಾಶವಾಗುವ ದುರಂತವನ್ನು ತೆರೆದಿಡುತ್ತದೆ. ಹೀಗೆ ಮಾಡುವ ಪ್ರಕ್ರಿಯೆಯಲ್ಲಿ ಪಾತ್ರಗಳ ಮಾನಸಿಕ ನೆಲೆಯಲ್ಲಿ ಸ್ಥಿರ ಗೊಂಡಿರುವ ಮಾಂತ್ರಿಕ ಅಂಶಗಳನ್ನು ವಾಸ್ತವತೆಯೊಂದಿಗೆ ಹೊಂದಿಸಿ ಮಾನವನ ಮೂಲ ಪ್ರವೃತ್ತಿಗಳ ಅನಾವರಣವಾಗುತ್ತದೆ. ಇಡೀ ಕಾದಂಬರಿಯಲ್ಲಿ ಹಸಿವು, ಕಾಮ, ಪ್ರೇಮ, ಮಾತ್ಸರ್ಯ, ಸಾಹಸ ಇತ್ಯಾದಿಗಳ ಜೊತೆ ರಸವಾದ, ಸುಳ್ಳು, ಸೂಳೆಗಾರಿಕೆ, ಹಾದರ, ಅತೀಂದ್ರಿಯ ಶಕ್ತಿ, ಮೂಢನಂಬಿಕೆ, ದೆವ್ವಗಳು, ದಂತ ಕಥೆ ಮುಂತಾದವುಗಳೂ ಇವೆ.

ಪುರಾಣಗಳಲ್ಲಿ, ಮಹಾ ಕಾವ್ಯಗಳಲ್ಲಿ ಹಾಗೂ ಜಾನಪದ ಕಥೆಗಳಲ್ಲಿರುವ ಅದ್ಭುತ ರಮ್ಯದ ಬಳಕೆಯನ್ನು ಎಂದಿನಿಂದಲೂ ಸ್ವೀಕರಿಸಿರುವ ಭಾರತೀಯರಿಗೆ ಮಾಂತ್ರಿಕ ವಾಸ್ತವತೆಯನ್ನು ಅದರ ನಿಜವಾದ ನೆಲೆಯಲ್ಲಿ ಸ್ವೀಕರಿಸುವುದಲ್ಲದೆ, ಅರ್ಥೈಸಿಕೊಳ್ಳುವುದು ಮತ್ತು ಅಭಿವ್ಯಕ್ತಿಗೊಳಿಸುವುದು ಅವರ ಮನೋಭೂಮಿಕೆಗೆ ಸಹಜವಾದದ್ದು ಎಂದು ಭಾವಿಸಲಾಗಿದೆ.

ಗಾಬ್ರಿಯಲ್ ಗಾರ್ಸಿಯಾ ಮಾರ್ಕೆಜ಼್‍ನ ಹಸ್ತ ಪ್ರತಿಗೆ ಅಪಚಾರವಾಗದ ರೀತಿಯಲ್ಲಿ 1966ರಲ್ಲಿ ಪ್ರಕಟವಾದ ಇನ್ ಇವಿಲ್ ಅವರ್ ಕೃತಿಯಲ್ಲಿ ಅವನ ದೇಶದಲ್ಲಿ ನಡೆದ ಕ್ರೌರ್ಯ ಮತ್ತು ಹಿಂಸೆಯ ತಾಂಡವ ನೃತ್ಯವನ್ನು ಚಿತ್ರಿಸಿದ್ದಾನೆ. ಆ ಕೃತಿಗೆ ಅವನಿಗೆ ಕೊಲಂಬಿಯದ ಸಾಹಿತ್ಯ ಪ್ರಶಸ್ತಿ ದೊರಕಿತು. ಅವನ ತಂದೆಯ ಪ್ರೇಮ ಪ್ರಕರಣವನ್ನು ಆಧರಿಸಿದ್ದೆಂದು ಪರಿಗಣಿತವಾಗಿರುವ ಲವ್ ಇನ್ ದ ಟೈಮ್ ಆಫ್ ಕಾಲರ ಎಂಬ ಕಾದಂಬರಿ 1983ರಲ್ಲಿ ಪ್ರಕಟವಾಗಿ ಹೆಚ್ಚಿನ ಮನ್ನಣೆ ಪಡೆಯಿತು. 1999ರಿಂದ ಕ್ಯಾನ್ಸರ್‍ಗೆ ಒಳಗಾಗಿರುವ ಮಾರ್ಕೆಜ಼್‍ನ ಇತರ ಪ್ರಮುಖ ಕೃತಿಗಳೆಂದರೆ ಆಟಮ್ ಆಫ್ ದ ಪೇಟ್ರಿಯಾರ್ಕ್ [1975], 1996ರಲ್ಲಿ ಪ್ರಕಟವಾದ ನ್ಯೂಸ್ ಆಫ್ ಕಿಡ್‍ನ್ಯಾಪಿಂಗ್, "ಲವ್ ಅಂಡ್ ಅದರ್ ಡೆಮನ್ಸ್ [1994] ಮತ್ತು ಕಥಾ ಸಂಕಲನಗಳಾದ ಇನ್ನೊಸೆಂಟ್ ಎರಿಂಡಾ ಅಂಡ್ ಅದರ್ ಸ್ಟೋರೀಸ್ ಹಾಗೂ ಸ್ಟ್ರೇಂಜ್ ಪಿಲಿಗ್ರಿಮ್ಸ್ [1992]. ಆತ್ಮ ಕಥನದ ಮೊದಲ ಭಾಗವಾದ ಲಿವಿಂಗ್ ಟು ಟೆಲ್ ದ ಟೇಲ್ ಮತ್ತು ಎರಡನೆಯ ಭಾಗವಾದ ಮೆಮೊರೀಸ್ ಆಫ್ ಮೈ ಮೆಲಾಂಖಲಿ ವೋರ್ಸ್ [2004] ಎಂಬ ಕೃತಿ ಪ್ರಕಟವಾಗಿದೆ. ಇವನು 1999ರಲ್ಲಿ ಕೊಲಂಬಿಯದ "ಕಾಂಬಿಯೋ" ಪತ್ರಿಕೆಯನ್ನು ಖರೀದಿಸಿ ಅದಕ್ಕೊಂದು ಹೊಸ ರೂಪ ಕೊಟ್ಟಿದ್ದಾನೆ. (ಟಿ.ಆರ್.ಎ.)

**ಗಾಬ್ರಿಯೇಲ್ ದಾನೂನ್ ಟ್ಸ್ಯೊ :** 1863–1938. ಹತ್ತೊಂಬತ್ತನೆಯ ಶತಮಾನದ ಇಟಲಿಯ ಸಾಹಿತ್ಯದ ಮೇಲೆ ಅತ್ಯಂತ ಪರಿಣಾಮಕಾರಿಯಾದ ಪ್ರಭಾವವನ್ನು ಬೀರಿದ ಕವಿ, ನಾಟಕಕಾರ, ಕಥೆಗಾರ, ಹಾಗೂ ಸಾಹಸಿ. ಏಡ್ರಿಯಾಟಿಕ್ ಕಡಲುತೀರದ ಅಬ್ರೂಸಿ ಪ್ರಾಂತದ ಪೆಸ್ಕಾರಾದಲ್ಲಿ ಹುಟ್ಟಿ 1881ರಿಂದ 1915ರವರೆಗೆ ರೋಮ್, ನೇಪಲ್ಸ್, ಅಬ್ರೂಸಿಗಳಲ್ಲಿ ತಿರುಗುತ್ತ ಅಸಾಧಾರಣ ಪ್ರತಿಭೆಯನ್ನು ಈತ, ತನ್ನ ವಿವಿಧ ಕೃತಿಗಳಲ್ಲಿ ಪ್ರದರ್ಶಿಸಿದ.

ಕ್ಯಾಂಟೋನೋ (ನ್ಯೂ ಸಾಂಗ್) ಎಂಬ ಕೃತಿ ಇವನಿಗೆ ಅಪಾರ ಕೀರ್ತಿಯನು ಗಳಿಸಿಕೊಟ್ಟಿತು. ಆಮೇಲೆ ಪ್ರಕಟಿಸಿದ ಇಂಟರ್‍ಮೆಸ್ಸೊ ಡಿ ರೈಂ ಮುಂತಾದ ಕಾವ್ಯಗಳಲ್ಲಿ ಇವನ ಕಾವ್ಯಭಾಷೆ ಹುಚ್ಚು ಹೊಳೆಯಂತೆ ಹರಿದು ಇಳಿಗತಿಯತ್ತ ಸಾಗುವುದನ್ನು ಗಮನಿಸಬಹುದು. ಓಡಿ ನವಲಿ ಎಂಬ ಕೃತಿಯಲ್ಲಿ ಕಡಲು ಹಾಗೂ ನೌಕಾ ಜೀವನಗಳ ವರ್ಣನೆಯಿದೆ. ಇಟಲಿ ತನ್ನ ನೌಕಾಪಡೆಯನ್ನು ಬಲಪಡಿಸಿಕೊಳ್ಳಬೇಕೆಂದು ಸಾರುವ ಪ್ರಚಾರ ಗೀತೆಗಳೂ ಇದರಲ್ಲಿ ಸೇರಿವೆ. 1893–1900ರ ಸುಮಾರಿನಲ್ಲಿ ಈತ ಆಕಾಶ, ಸಮುದ್ರ, ಭೂಮಿ ಮತ್ತು ವೀರರನ್ನು ಕುರಿತ ಪ್ರಸಂಸೆ ಎಂಬ ನೀಳ್ಗವನವನ್ನು ಬರೆದ. ಇದರಲ್ಲಿ ಜೀವನ ಕಲೆ ಕಾವ್ಯ ಮತ್ತು ಪುರಾಣ ಕಥೆಗಳಲ್ಲಿನ ರಸನಿಮಿಷಗಳನ್ನು ವರ್ಣಿಸಲಾಗಿದೆ. ಆದರೆ ಈ ವರ್ಣನೆಗಳು ಸ್ವಾರ್ಥಿ, ಸ್ವೇಚ್ಛಾಚಾರಿ ವ್ಯಕ್ತಿಯೊಬ್ಬನ ಮನೋವಿಕಾರಗಳ ರಾಶಿಗಳಂತೆ ಕಾಣುತ್ತವೆ.

ಅನಂತರ ಪೆಸ್ಕಾರಾದ ಕಥೆಗಳು ಎಂಬ ಕಥಾಸಂಗ್ರಹ ಹೊರಬಂತು (1882). ಇದರಲ್ಲಿ ತನ್ನ ಊರಾದ ಅಬ್ರೂಸಿ ಪ್ರಾಂತದ ರೈತರ ವಾಸ್ತವಿಕ ಜೀವನವನ್ನು ಕವಿ ಮಾರ್ಮಿಕವಾಗಿ ಚಿತ್ರಿಸಿದ್ದಾನೆ. ಆದರೆ ಈ ಚಿತ್ರಣ ಯಾವ ವ್ಯಕ್ತಿತ್ವವೂ ಇಲ್ಲದೆ ಸ್ವಾರಸ್ಯರಹಿತವಾಗಿದೆ. ಅಂತಃಕರಣವನ್ನು ಅರಳಿಸಿ ಅನುಕಂಪೆಯನ್ನು ಪ್ರಚೋದಿಸುವ, ಜೀವನದ ಯಾವ ಮೌಲ್ಯವನ್ನೂ ಇಲ್ಲಿ ನಾವು ಕಾಣಲಾರೆವು. 1889ರಲ್ಲಿ ಈತ ಇಲ್ ಪಿಯಾಸೆರೊ (ಭೋಗಗಳು) ಫಾರ್ಸೆ ಚೆ ಸಿ, ಪಾರ್ಸೆ ಚೆ ನೊ (ಇದ್ದರೂ ಇರಬಹುದು, ಇಲ್ಲದಿರಬಹುದು) ಮುಂತಾದ ಏಳು ಕಾದಂಬರಿಗಳನ್ನು ಬರೆದ. ನೀಚೆಯ ತತ್ತ್ವಗಳಿಂದ ಪ್ರಭಾವಿತನಾಗಿ ಈತ ಟ್ರಿಯಾನ್ಫೊ ಡೆಲ ಮಾರ್ಟೆ ಎಂಬ ಸತ್ತ್ವಶಾಲಿ ಕಾದಂಬರಿಯನ್ನು ಬರೆದ. ಮನಃಕ್ಲೇಶ, ಸ್ವಾರ್ಥ, ನಿಷ್ಕಾರುಣ್ಯ, ಕ್ರೌರ್ಯ, ಭ್ರಷ್ಟಾಚಾರ, ವಿಷಯಲೋಲುಪ್ತಿ– ಇಂಥ ಮಾನವ ವಿಕಾರಗಳನ್ನು ವರ್ಣಿಸುವುದರಲ್ಲಿ ಈತನಿಗೆ ಆಸಕ್ತಿ ಹೆಚ್ಚು. ಈ ಎಲ್ಲ ಕಾದಂಬರಿಗಳಲ್ಲಿನ ಪಾತ್ರಗಳು–ನಿರುತ್ಸಾಹಿಗಳು, ಧರ್ಮಬಾಹಿರರು. ಉಲ್ಲಾಸವನ್ನರಿಯದ ಅಂಥ ಜೀವಿಗಳು.


1898ರಲ್ಲಿ ಇವನಿಗೆ ನಾಟಕದಲ್ಲಿ ಅಭಿರುಚಿ ಹುಟ್ಟಿ, ಸಿಟ್ಟ ಮಾರ್ಟ (ಮೃತನಗರ) ಎಂಬ ನಾಟಕ ಬರೆದ. ಆಮೇಲೆ ವರ್ಷಕ್ಕೊಂದರಂತೆ ಇಟಾಲಿಯನ್ ಅಥವಾ ಫ್ರೆಂಚ್‍ನಲ್ಲಿ ಹಲವು ನಾಟಕಗಳನ್ನು ಪ್ರಕಟಿಸಿದ. ಲ ಫಿಗ್ಲಿಯ ಡಿ ಲಾರಿಯೊ ಎಂಬ ನಾಟಕ ಹಿರಿಯಸ್ಥಾನ ಗಳಿಸಿತು.

ಒಂದನೆಯ ಮಹಾಯುದ್ಧ ಪ್ರಾರಂಭವಾದಾಗ ಇಟಲಿ ಮಿತ್ರರಾಷ್ಟ್ರಗಳೊಡನೆ ಸೇರಬೇಕೆಂದು ಈತ ಪದೇ ಪದೇ ಒತ್ತಾಯಮಾಡಿ ಪ್ರಚಾರಲೇಖನಗಳನ್ನು ಬರೆದ. ಯುದ್ಧಕ್ಕೆ ತನ್ನ ದೇಶವೂ ಕಾಲಿಟ್ಟಾಗ ನೌಕಾ ಇಲಾಖೆಯಲ್ಲಿ ಲೆಫ್ಟಿನೆಂಟ್ ಆಗಿ ಕೆಲಸಮಾಡಿದ. ಏಡ್ರಿಯಾಟಿಕ್ ತೀರದ ವಿಮಾನ, ಕಡಲು, ಭೂ ಸೈನ್ಯಗಳ ಕಾರ್ಯಾಚರಣೆಯ ನಾನಾ ರಂಗಗಳಲ್ಲಿ ಕಾದಾಡಿ ಶತ್ರು ಶಿಬಿರಗಳ ಜೊತೆ ಹೋರಾಡಿ, ತನ್ನ ಅಸಾಧಾರಣ ಶೌರ್ಯವನ್ನು ಪ್ರದರ್ಶಿಸಿದ. 1910ರಲ್ಲಿ ಫ್ಯೂಮೆ ಪಟ್ಟಣ ಇಟಲಿಗೆ ದಕ್ಕಲಾರದೆಂದು ಖಚಿತವಾದಾಗ ಮೇಲಧಿಕಾರಿಗಳ ಆಜ್ಞೆಯನ್ನು ಉಲ್ಲಂಘಿಸಿ ಸುಮಾರು 300 ಜನ ಅನುಯಾಯಿಗಳೊಡನೆ ಮುನ್ನುಗ್ಗಿ ಆ ಪಟ್ಟಣವನ್ನು ಹಿಡಿದು ಎರಡು ವರ್ಷಗಳ ಕಾಲ ಅಲ್ಲಿ ಸರ್ವಾಧಿಕಾರಿಯಾಗಿ ಅಧಿಕಾರ ನಡೆಸಿದ. ಆಗ ಈತ ತನ್ನ ಉಜ್ವಲಶೈಲಿಯಲ್ಲಿ ಹಲವಾರು ಭಾಷಣಗಳನ್ನು ಮಾಡಿದ. ಯುದ್ಧಕ್ಕೆ ಸಂಬಂಧಿಸಿದ ಮತ್ತು ರಾಜಕೀಯ ವಿಷಯಗಳನ್ನು ಕುರಿತ ಕಥೆ, ಕವನ, ಪ್ರಚಾರ ಲೇಖನಗಳನ್ನೂ ಬರೆದು ನಿರಂಕುಶ ಪ್ರಭುತ್ವದ ತತ್ತ್ವವನ್ನು ಸಾರಿದ. 1921ರಲ್ಲಿ ಇಟಲಿಯ ಸೈನ್ಯ ಫ್ಯೂಮೆ ಪಟ್ಟಣವನ್ನು ಮುತ್ತಲು ಬಂದಾಗ ಈತ ಅಧಿಕಾರವನ್ನು ತ್ಯಜಿಸಿ, ನಿವೃತ್ತನಾದ. ಗರ್ದ ಸರೋವರ ತೀರದ ಭವ್ಯ ಸೌಧವೊಂದರಲ್ಲಿ ವಾಸಿಸುತ್ತಿದ್ದು 1938ರಲ್ಲಿ ಕಾಲವಾದ.

ಕೇವಲ ಬುದ್ಧಿ ಪ್ರಧಾನವಾಗಿದ್ದು, ಶುಷ್ಕ ಪಾಂಡಿತ್ಯದ ಅಸಹಜತೆಯಿಂದ ಕೂಡಿದ ಅಂದಿನ ಇಟಲಿಯ ಕಾವ್ಯ ಶೈಲಿಯನ್ನು ಬದಲಾಯಿಸಿ ಈತ ಭಾವ ಪ್ರಧಾನವಾಗುವಂತೆ ಮಾಡಿದ. ಅದು ಮಾನವ ವಿಕಾರಗಳನ್ನೂ ಸಂವೇದನೆಗಳನ್ನೂ ರಾಗೋದ್ವೇಗಗಳನ್ನೂ ಅಭಿವ್ಯಕ್ತಗೊಳಿಸುವಂತೆ ಮಾಡಿ ಇಟಾಲಿಯನ್ ಭಾಷೆಯ ಸಂಪತ್ತನ್ನು ಹೆಚ್ಚಿಸಿದ. (ಎಚ್.ಕೆ.ಆರ್.)

**ಗಾಮ :** 1888–1953. ಭಾರತಕ್ಕೆ 1910ರಲ್ಲಿ ವಿಶ್ವಕುಸ್ತಿ ಪ್ರಶಸ್ತಿಯನ್ನು ದೊರಕಿಸಿದ ಪ್ರಸಿದ್ಧ ಕುಸ್ತಿಪಟು. ಈತ ಹುಟ್ಟಿದ್ದು ಪಂಜಾಬಿನ ಅಮೃತಸರದಲ್ಲಿ. ಇವನ ನಿಜವಾದ ಹೆಸರು ಗುಲಾಮ್ ಮೊಹಮದ್. ಎಳೆಯ ವಯಸ್ಸಿನಿಂದಲೂ ಕುಸ್ತಿ ಮಾಡುವುದೆಂದರೆ ಇವನಿಗೆ ತುಂಬಾ ಆಸಕ್ತಿ. ಇದಕ್ಕೆ ತಕ್ಕಂತೆ ಮನೆಯವರಿಂದಲೂ ಇವನಿಗೆ ಪ್ರೋತ್ಸಾಹ. ಇವನ ತಂದೆ ಅಜೀಜ್ ಪೈಲ್ವಾನನಾಗಿದ್ದ. ಸೋದರ ಇಮ್ರಾನ್ ಕೂಡ ಕುಸ್ತಿ ಪಟುವಾಗಿದ್ದ. ಹೀಗಾಗಿ ಕುಸ್ತಿಪಟುವೆಂದು ಹೆಸರು ಗಳಿಸಿದ. ಭಾರತದಲ್ಲಿ ಬಹುಬೇಗ ಪ್ರಸಿದ್ಧನಾದ. ಇವನಿಗಿದ್ದ ಶಕ್ತಿಯಂತೂ ಹೇಳಲಸದಳ. ಈತ ಬಾದಾಮಿಕಾಯಿಯನ್ನು ಬೆರಳಿನಿಂದ ಹೊಸಕಿ ಸಿಪ್ಪೆ ತೆಗೆದು ತಿನ್ನುತ್ತಿದ್ದನಂತೆ. ಕಬ್ಬಿಣದ ದಪ್ಪ ದಪ್ಪ ಮೊಳೆಗಳನ್ನು ಅಂಗೈ ಹಾಗೂ ಮಧ್ಯದ ಬೆರಳು ಎರಡಕ್ಕೂ ಸಿಕ್ಕಿಸಿಕೊಂಡು ಬಗ್ಗಿಸುತ್ತಿದ್ದನಂತೆ. ವ್ಯಾಯಾಮ ಮಾಡುವಾಗ ದಮ್ಮು ಕಟ್ಟಿ ನಿಂತು ತನ್ನ ಶರೀರದ ಭುಜ, ಎದೆ, ಬೆನ್ನು, ತೋಳುಗಳಿಗೆ ನಾಲ್ಕಾರು ಜನ ಪೈಲ್ವಾನರುಗಳಿಂದ ಡಂಬಲ್ಸ್‍ಗಳಿಂದ ಏಟು ಹಾಕಿಸಿಕೊಳ್ಳುತ್ತಿದ್ದುದೂ, ವ್ಯಾಯಾಮ ಮುಗಿದ ಮೇಲೆ ಧಾರಾಳವಾಗಿ ಹಾಲು ಸೇವಿಸುತ್ತಿದ್ದ.

ಭಾರತದಲ್ಲಿ ಕೀರ್ತಿಗಳಿಸಿದ್ದ ಈತ ಅಂತಾರಾಷ್ಟ್ರೀಯ ಕುಸ್ತಿಯಲ್ಲಿ ಭಾಗವಹಿಸಿ ಭಾರತಕ್ಕೆ ಕೀರ್ತಿ ತಂದೇ ತರುತ್ತಾನೆ ಎಂಬ ಅಚಲ ವಿಶ್ವಾಸ ಬಂಗಾಲದ ದೊಡ್ಡ ಶ್ರೀಮಂತ ಸರತ್‌ಕುಮಾರ್ ಮಿತ್ರನಿಗೆ ಇತ್ತು. 1910ರಲ್ಲಿ ಲಂಡನ್ನಿನಲ್ಲಿ ಜಾನ್ ಬುಲ್ ವಿಶ್ವಕುಸ್ತಿ ಚಾಂಪಿಯನ್‌ಶಿಪ್ ಸ್ಪರ್ಧೆ ನಡೆಯುವುದಿತ್ತು. ಈ ಸ್ಪರ್ಧೆಯಲ್ಲಿ ಭಾಗವಹಿಸಲು ಸರತ್‌ಕುಮಾರ್‌ಮಿತ್ರ ಅವರು ಗಾಮ ಮತ್ತು ಇಮಾಂ ಭಕ್ಷ್ ಇವರಿಬ್ಬರ ಖರ್ಚಿನ



ಹೊಣೆಯನ್ನು ತಾವೇ ಪೂರ್ಣ ವಹಿಸಿಕೊಂಡು ಲಂಡನ್ನಿಗೆ ಕರೆದೊಯ್ದರು. ಲಂಡನ್ನಿನಲ್ಲಿ ವಿಶ್ವಕುಸ್ತಿ ಸ್ಪರ್ಧೆಯಲ್ಲಿ ಭಾಗವಹಿಸಲು ಅತ್ಯಂತ ಉತ್ಸಾಹದಿಂದ ಹೋದ ಗಾಮನಿಗೆ ಆ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ದೊರೆಯಲಿಲ್ಲ. ಇದಕ್ಕೆ ಕಾರಣ ಗಾಮ 5' 7" ಮಾತ್ರ ಎತ್ತರವಿದ್ದು ತೂಕದಲ್ಲಿ 250 ಪೌಂಡು ಇದ್ದುದು. ಇವನು ಇತರ ಖ್ಯಾತ ಪೈಲ್ವಾನರ ಜೊತೆ ಸೆಣಸಾಡಲಾರನೆಂಬುದೇ ಅವರು ಕೈಗೊಂಡ ತೀರ್ಮಾನ. ಇದರಿಂದಾಗಿ ಇವನಿಗೆ ಅವಮಾನವಾದಂತಾಯಿತು. ಅಸಾಧಾರಣ ಕೋಪದಿಂದ ಸ್ಪರ್ಧೆ ನಡೆಯಲಿದ್ದ ಕ್ರೀಡಾಂಗಣದಲ್ಲಿ ನಿಂತು ಇಡೀ ಇಂಗ್ಲೆಂಡಿನಲ್ಲಿ ಯಾರೇ ಆದರೂ ಸರಿ ತನ್ನನ್ನು ಗೆಲ್ಲುವುದಿರಲಿ ತನ್ನ ಜೊತೆ 5 ನಿಮಿಷಗಳ ಕಾಲ ನಿಂತು ಹೋರಾಡಿದರೆ ಅವರಿಗೆ ತಾನೇ 15 ಪೌಂಡುಗಳನ್ನು ಬಹುಮಾನವಾಗಿ ಕೊಡುವುದಾಗಿ ಸವಾಲು ಹಾಕಿದ. ಇವನ ಸವಾಲನ್ನು ಇಂಗ್ಲೆಂಡಿನ ಪೈಲ್ವಾನರು ಎದುರಿಸಲೇಬೇಕಾಯಿತು. ಮೊದಲ ದಿನ ಇವನ ಜೊತೆ ಹೋರಾಡಲು ಬಂದ ಮೂರು ಜನ ಪೈಲ್ವಾನರನ್ನು 2 ನಿಮಿಷದೊಳಗೆ ಸೋಲಿಸಿದ. ಎರಡನೆಯ ದಿನ ತನ್ನ ಜೊತೆ ಕುಸ್ತಿ ಮಾಡಲು ಬಂದ 12 ಜನ ಪೈಲ್ವಾನರುಗಳಿಗೂ ಅದೇ ಗತಿ ಕಾಣಿಸಿ, ಪ್ರೇಕ್ಷಕರಿಗೆ ದಿಗ್ಭ್ರಮೆ ಹಿಡಿಸಿದ.

ಇದಾದ ಅನಂತರ ವಿಶ್ವಕುಸ್ತಿ ಸ್ಪರ್ಧೆಯ ವ್ಯವಸ್ಥಾಪಕರು ಇವನಿಗೆ ವಿಶ್ವಕುಸ್ತಿ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ನೀಡಲೇಬೇಕಾಯಿತು. 1910ರ ಸೆಪ್ಟೆಂಬರ್ 10 ರಂದು ಈತ ಖ್ಯಾತಿವೆತ್ತ ಅಮೆರಿಕದ ಕುಸ್ತಿಪಟು ಇ. ರೋಲರ್‌ನನ್ನು ಎದುರಿಸಬೇಕಾಯಿತು. ರೋಲರ್‌ನನ್ನು 15 ನಿಮಿಷಗಳಲ್ಲಿ 12 ಸಾರಿ ಕೆಡವಿ ಪ್ರೇಕ್ಷಕರು ಹುಚ್ಚೆದ್ದು ಕುಣಿಯುವಂತೆ ಮಾಡಿದ. ಅನಂತರ ವಿಶ್ವಚಾಂಪಿಯನ್ ಎನಿಸಿಕೊಂಡಿದ್ದ ಆಸ್ಟ್ರೇಲಿಯದ ಜಿಬಿಸ್ಕೊನನ್ನು ಎದುರಿಸಿದ. ದಿಗ್ಗಜಗಳಂತೆ ಇಬ್ಬರೂ ಹೋರಾಡಿದರು. ಸತತವಾಗಿ ಮೂರು ಗಂಟೆಗಳ ಕಾಲ ನಡೆದ ಈ ಪಂದ್ಯದಲ್ಲಿ ಈತ ಜಿಬಿಸ್ಕೊನನ್ನು ಹಲವಾರು ಬಾರಿ ಸೋಲಿಸಿದ್ದ. ಕುಸ್ತಿಪಂದ್ಯದ ನೀತಿನಿಯಮಗಳನ್ನು ರೆಫರಿಗಳು ಸರಿಯಾಗಿ ಪಾಲಿಸದೆ ಪಕ್ಷಪಾತ ತೋರಿಸಿದರಂತೆ. ಪಂದ್ಯ ಅಂತ್ಯವಾಗಲಿಲ್ಲವೆಂದು ಹೇಳಿ ಮಾರನೆಯ ದಿವಸಕ್ಕೆ ಪಂದ್ಯವನ್ನು ಮುಂದೂಡಲಾಯಿತು. ಮಾರನೆಯ ದಿನ ಗಾಮ ಅತ್ಯಂತ ಉತ್ಸಾಹದಿಂದ ಕುಸ್ತಿಯ ಕಣಕ್ಕೆ ಹಾಜರಾದ. ಆದರೆ, ಹಿಂದಿನ ದಿವಸ ಗಾಮನಿಂದ ಮೈಮೂಳೆ ಮುರಿಸಿಕೊಂಡಿದ್ದ ಜಿಬಿಸ್ಕೊ ಹಾಸಿಗೆಯಿಂದ ಏಳುವುದು ಸಾಧ್ಯವಾಗದೆ ಸ್ಪರ್ಧೆಗೆ ಗೈರುಹಾಜರಾದ. ಅಂದೇ ಈತ ವಿಶ್ವಕುಸ್ತಿ ಪ್ರಶಸ್ತಿಯನ್ನು ಗೆದ್ದುಕೊಂಡು ವಿಶ್ವ ಚಾಂಪಿಯನ್ ಬಿರುದಿನೊಡನೆ ಭಾರತದ ಕೀರ್ತಿಪತಾಕೆಯನ್ನು ಎತ್ತಿಹಿಡಿದ. ಕೆಲವು ತಿಂಗಳ ಅನಂತರ ಈತ ಜಿಬಿಸ್ಕೊನನ್ನು ಪಾಟಿಯಾಲದಲ್ಲೂ ಎದುರಿಸಿದ. ಜಿಬಿಸ್ಕೊಗೆ ಇವನ ಜೊತೆ ಮತ್ತೆ ಕುಸ್ತಿ ಮಾಡುವುದು ಇಷ್ಟವಿರಲಿಲ್ಲ. ಆದರೆ ಅವನ ದೇಶದ ಜನ ವಿಶ್ವ ಚಾಂಪಿಯನ್‌ಶಿಪ್ ಬಿರುದನ್ನು ಮತ್ತೆ ಪಡೆಯುವಂತೆ ಜಿಬಿಸ್ಕೊನನ್ನು ಪ್ರೇರೇಪಿಸಿದರು. ಆದರೆ ಈ ಸಾರಿ ಗಾಮ ಕೇವಲ ಎರಡು ಸೆಕೆಂಡುಗಳಲ್ಲಿ ಜಿಬಿಸ್ಕೊನನ್ನು ಸೋಲಿಸಿ ಇಡೀ ವಿಶ್ವದಲ್ಲಿ ಅಜೇಯನೆನಿಸಿಕೊಂಡ. ಆರಂಭಿಕ ಪಂದ್ಯಗಳು ಸಮವಾದರೂ ಸು. 5,000 ಪಂದ್ಯಗಳಲ್ಲಿ ಈತ ಅಜೇಯನಾಗಿದ್ದ.

1919ರಲ್ಲಿ ಜಲಿಯನ್‌ವಾಲಾ ಪ್ರಕರಣದ ಸಂದರ್ಭದಲ್ಲಿ ಬಂಧಿಸಲ್ಪಟ್ಟವರಲ್ಲಿ ಇವನೂ ಒಬ್ಬ. ಕಾರಾಗೃಹ ವಾಸದ ಅವಧಿಯಲ್ಲಿ ಇವನೊಂದಿಗೆ ಜೈಲಿನ ಸಿಬ್ಬಂದಿ ಸಾಧಾರಣ ವ್ಯಕ್ತಿಯೊಂದಿಗೆ ವ್ಯವಹರಿಸುವಂತೆಯೇ ವ್ಯವಹರಿಸಿತು. ಆದ್ದರಿಂದ ಇವನ ಬಾಳಿನ ನಿಯಮಬದ್ಧತೆಗೆ ಭಂಗ ಬಂತು. ಕಸರತ್ ಹಾಗೂ ಮಾಲಿಗಳ ಅಭಾವದಿಂದ ಇವನಿಗೆ ಸಾಧಾರಣ ಜ್ವರ ಕಾಣಿಸಿಕೊಂಡಿತು. ಮೈಕೈಯಲ್ಲಿ ನೋವು ಕಾಣಿಸಿತು. ಇನ್ನು ಆಹಾರದ ವಿಷಯವಂತೂ ಹೇಳುವ ಹಾಗೇ ಇರಲಿಲ್ಲ. ಈ ಸಂದರ್ಭದ ದುರುಪಯೋಗ ಪಡೆಯಲು ಅಧಿಕಾರಿಗಳು ಎಷ್ಟೇ ಆಸೆ ತೋರಿಸಿದರೂ ಈತ ಅದಾವುದಕ್ಕೂ ಬಗ್ಗಲಿಲ್ಲ. ತನ್ನ ಇತರ ರಾಜಕೀಯ ಚಳವಳಿಗಾರರ ವಿಷಯ ಹೇಳಲಿಲ್ಲ. ಬೇಸತ್ತ ಅಧಿಕಾರಿಗಳು ಕೊನೆಗೆ ಇವನನ್ನು ಬಿಡುಗಡೆಗೊಳಿಸಬೇಕಾಯಿತು.

ಈತ ತನ್ನ ಬದುಕಿನ ಕೊನೆಯ ದಿನಗಳಲ್ಲಿ ಪಡಬಾರದ ಕಷ್ಟಗಳನ್ನು ಎದುರಿಸಬೇಕಾಯಿತು. ಭಾರತ ಸರ್ಕಾರದಿಂದ ಯಾವ ಪುರಸ್ಕಾರವೂ ಇವನಿಗೆ ಸಿಗಲಿಲ್ಲ. ಅನ್ನ ಆಹಾರಗಳಿಲ್ಲದೆ ಸಾಯುವ ದುರ್ಗತಿ ಬಂತು. ಇವನಿಗೆ ಒದಗಿದ ಈ ದುರ್ಗತಿಯನ್ನು ಕಂಡು ಪಾಕಿಸ್ತಾನದ ಸರ್ಕಾರ ಧನಸಹಾಯ ಮಾಡುವುದಾಗಿ ಭರವಸೆಯಿತ್ತು ಗಾಮರನ್ನು ತನ್ನಲ್ಲಿಗೆ ಕರೆಸಿಕೊಂಡಿತು. ಕೊನೆ ಕೊನೆಯ ದಿನಗಳಲ್ಲಿ ತನ್ನ ಮೂಗಿನ ಮೇಲೆ ಕುಳಿತ ನೊಣವನ್ನು ಕೂಡ ಕೈಯಿಂದ ಹೊಡೆದು ಓಡಿಸಲಾಗದಷ್ಟು ನಿಶ್ಶಕ್ತನಾಗಿದ್ದ ಸ್ಥಿತಿಯಲ್ಲಿ ಈತ ಪಾಕಿಸ್ತಾನದಲ್ಲಿ 1953ರಲ್ಲಿ ನಿಧನನಾದ.

(ಎಚ್.ಕೆ.ಎಸ್.)

**ಗಾಮ, ವಾಸ್ಕೋ ಡ :** ಸು. 1460-1524. ಪೋರ್ಚುಗೀಸ್ ನಾವಿಕ. ಭಾರತಕ್ಕೆ ಸಮುದ್ರಮಾರ್ಗ ಕಂಡುಹಿಡಿದವ. ಜನನ, ಆಲೇಂತೇಜೂ ಪ್ರಾಂತದ ಸ್ವೈನ್ಸ್‌ನಲ್ಲಿ. ಗಾಮನ ಬಾಲ್ಯದ ಬಗ್ಗೆ ವಿವರಗಳು ತಿಳಿದುಬಂದಿಲ್ಲ. 1492ರಲ್ಲಿ ಕೆಲವು ಫ್ರೆಂಚ್ ಹಡಗುಗಳನ್ನು ವಶಪಡಿಸಿಕೊಳ್ಳುವ ಸೈನ್ಯಕಾರ್ಯಾಚರಣೆಯಲ್ಲಿ ಈತ ಪಾತ್ರವಹಿಸಿದ್ದ. ಗುಡ್‌ಹೋಪ್ ಭೂಶಿರವನ್ನು ಕಂಡುಹಿಡಿದ ಬಾರ್ತಲೋಮ್ಯು ಡೀಯಷನ ಕಾರ್ಯವನ್ನು ಮುಂದುವರಿಸಿ ಭಾರತಕ್ಕೆ ಸಮುದ್ರ ಮಾರ್ಗವನ್ನು ಕಂಡುಹಿಡಿಯುವ ಕಾರ್ಯದಲ್ಲಿ ಪೋರ್ಚುಗಲ್ ದೊರೆ ಎರಡನೆಯ ಜಾನನಿಂದ ನಿಯುಕ್ತನಾದ. ಈ ಅನ್ವೇಷಣ ಯಾತ್ರೆ 1497ರ ಜುಲೈ 8 ರಂದು ಲಿಸ್ಬನಿನಿಂದ ಹೊರಟಿತು. ಗಾಮನ ವಶದಲ್ಲಿ ನಾಲ್ಕು ಹಡಗುಗಳಿದ್ದುವು. ಇವನ ಯಾತ್ರೆ ಕ್ಯಾನರೀ ದ್ವೀಪಗಳನ್ನು ತಲುಪಿದ್ದು ಜುಲೈ 15 ರಂದು. ನಾವಿಕರ ತಂಡ ಆ ತಿಂಗಳ 26ರಂದು ಕೇಪ್‌ವರ್ಡ್ ದ್ವೀಪಗಳನ್ನು ತಲುಪಿತು. ಆಗಸ್ಟ್ 3 ರವರೆಗೂ ಅಲ್ಲೇ ತಂಗಿದ್ದು, ಗಿನೀ ಕೊಲ್ಲಿಯ ಪ್ರವಾಹಕ್ಕೆ ಸಿಲುಕದಂತೆ ದಕ್ಷಿಣ ಅಟ್ಲಾಂಟಿಕ್ ಮೂಲಕ ಬಳಸು ದಾರಿಯಲ್ಲಿ, ಗುಡ್‌ಹೋಪ್ ಭೂಶಿರದ ಕಡೆಗೆ ಸಾಗಿ, ನವೆಂಬರ್ 7 ರಂದು ಸೇಂಟ್ ಹೆಲೀನಾ ಕೊಲ್ಲಿ ಸೇರಿತು. ನವೆಂಬರ್ 16ರ ವರೆಗೂ ಅಲ್ಲೇ ಇದ್ದು ಅನಂತರ ಮುಂದುವರಿದ ಪ್ರಯಾಣ ಪ್ರತಿಕೂಲ ಮಾರುತಗಳಿಂದಾಗಿ ತಡವಾಗಿ ಗುಡ್‌ಹೋಪ್ ಭೂಶಿರವನ್ನು ಬಳಸಿ ಮಾಸೆಲ್ ಕೊಲ್ಲಿ ತಲುಪಿ, ಡಿಸೆಂಬರ್ 8ರಂದು ಅಲ್ಲಿಂದ ಹೊರಟು 25 ರಂದು ನಟ್ಯಾಲ್ ತೀರವನ್ನು ಸೇರಿತು. ಮರುವರ್ಷದ ಮಾರ್ಚ್ 2ರಂದು ಮೊಝಾಂಬಿಕ್ ತಲುಪಿತು. ಗಾಮ ಮತ್ತು ಇವನ ಸಹಪ್ರಯಾಣಿಕರು ಮುಸ್ಲಿಮರೆಂದು ನಂಬಿ ಅಲ್ಲಿನ ಸುಲ್ತಾನ ಗಾಮನಿಗೆ ಇಬ್ಬರು ಚಾಲಕರ ನೆರವು ನೀಡಿದ. ಪೋರ್ಚುಗೀಸರು ಕ್ರೈಸ್ತರೆಂಬುದನ್ನು ತಿಳಿದು ಆ ಚಾಲಕರಲ್ಲೊಬ್ಬ ಇವರನ್ನು ತ್ಯಜಿಸಿದ. ಗಾಮ ಮೊಂಬಾಸವನ್ನು ತಲುಪಿದ್ದು ಏಪ್ರಿಲ್ 7ರಂದು. ಮಲಿಂಡಿಯಲ್ಲಿ ತಂಗಿ, ಕಲ್ಲಿಕೋಟೆಗೆ ಹಾದಿ ಗೊತ್ತಿದ್ದ ಚಾಲಕನೊಬ್ಬನ ನೆರವಿನಿಂದ ಈತ ಯಾನ ಮುಂದುವರಿಸಿದ. 23 ದಿನಗಳ ಕಾಲ ಹಿಂದೂಸಾಗರದಲ್ಲಿ ಸಾಗಿದ ಮೇಲೆ ಘಟ್ಟಗಳು ಕಾಣಿಸಿದುವು. ಮೇ 20ರಂದು ಗಾಮ ಕಲ್ಲಿಕೋಟೆ ತಲುಪಿದ. ಭಾರತವನ್ನು ತಲುಪಿದ್ದರ ಕುರುಹಾಗಿ ಗಾಮ ಅಲ್ಲೊಂದು ಶಿಲಾಸ್ತಂಭ ನೆಟ್ಟ, ಅಲ್ಲಿಯ ಝಾಮೊರಿನ್ ದೊರೆಯಿಂದ ಗಾಮನಿಗೆ ಸ್ವಾಗತ ದೊರಕಿತು. ಆದರೆ ಅಲ್ಲಿಯ ಕೆಲವು ಮುಸ್ಲಿಂ ವ್ಯಾಪಾರಿಗಳ ವಿರೋಧದಿಂದಾಗಿ ದೊರೆಯೊಂದಿಗೆ ಯಾವ ಒಪ್ಪಂದವನ್ನೂ ಇವನಿಗೆ ಮಾಡಿಕೊಳ್ಳಲಾಗಲಿಲ್ಲ.

ಆಗಸ್ಟ್ ತಿಂಗಳ ಕೊನೆಯಲ್ಲಿ ಗಾಮ ಭಾರತದಿಂದ ಹಿಂದಕ್ಕೆ ಹೊರಟ. ಅಂಜೆದಿವ ದ್ವೀಪಕ್ಕೆ ಹೋಗಿ ಅಲ್ಲಿಂದ ಮಲಿಂಡಿಗೆ ಪ್ರಯಾಣ ಬೆಳೆಸಿದ. ಮಾರುತಗಳು ಅನುಕೂಲಪ್ರದವಾಗಿರಲಿಲ್ಲವಾದ್ದರಿಂದ ಅರಬ್ಬೀ ಸಮುದ್ರವನ್ನು ದಾಟಲು ಇವನಿಗೆ ಮೂರು ತಿಂಗಳುಗಳ ಕಾಲ ಬೇಕಾಯಿತು. ನಾವಿಕರಲ್ಲಿ ಅನೇಕರು ಕಾಯಿಲೆಯಿಂದ ಸತ್ತರು. ಮರುವರ್ಷ ಮಾರ್ಚ್ ತಿಂಗಳಲ್ಲಿ ಗುಡ್‌ಹೋಪ್ ಭೂಶಿರವನ್ನು ಬಳಸಿ ಮುಂದುವರಿಯುವಾಗ ಬಿರುಗಾಳಿಯಿಂದ ತೊಂದರೆಯಾಯಿತು. ಉಳಿದಿದ್ದ ಎರಡು ಹಡಗುಗಳೂ ಪರಸ್ಪರ ಬೇರ್ಪಟ್ಟವು. ಗಾಮ ಟರ್ಸೇಯಿರ ದ್ವೀಪವನ್ನು ತಲುಪಿ ತನ್ನ ಹಡಗನ್ನು ಲಿಸ್ಬನಿಗೆ ಮುಂದಾಗಿ ಕಳಿಸಿದ. ಅವನು ಲಿಸ್ಬನ್ ತಲಪಿದ್ದು ಸೆಪ್ಟೆಂಬರ್ 9ರಂದು. ಟರ್ಸೇಯಿರದಲ್ಲಿ ತೀರಿಕೊಂಡಿದ್ದ ಸೋದರನಿಗಾಗಿ ಶೋಕವನ್ನಾಚರಿಸಿ ಸೆಪ್ಟೆಂಬರ್ 18ರಂದು ಗಾಮ ವಿಜಯ ಮೆರವಣಿಗೆಯಲ್ಲಿ ಲಿಸ್ಬನ್ ಪ್ರವೇಶಿಸಿದ. ದೊರೆ 1ನೆಯ ಮ್ಯಾನ್ಯುಯೆಲ್ ಇವನಿಗೆ ಡಾಂ ಎಂಬ ಬಿರುದನ್ನೂ ವರ್ಷಾಶನವನ್ನೂ ನೆಲದ ಉಂಬಳಿಯನ್ನೂ ಕೊಟ್ಟು ಗೌರವಿಸಿದ.

ಅನಂತರ ದೊರೆಯ ಆದೇಶದಂತೆ ಕಬ್ರಾಲ್ ಎಂಬುವನು ಭಾರತಕ್ಕೆ ಬಂದು ಕಲ್ಲಿಕೋಟೆಯಲ್ಲಿ ಕೋಠಿಯೊಂದನ್ನು ಸ್ಥಾಪಿಸಿದ. ಅಲ್ಲಿ ಉಳಿದಿದ್ದ ಪೋರ್ಚುಗೀಸರು ಕಬ್ರಾಲನ ನಿರ್ಗಮನಾನಂತರ ಕೊಲೆಗೆ ಈಡಾದರು. ಇದಕ್ಕೆ ಪ್ರತೀಕಾರ ಮಾಡಬೇಕೆಂಬ

ಸೂಚನೆಯೊಂದಿಗೆ ದೊರೆ ಗಾಮನನ್ನು ಮತ್ತೆ ಭಾರತಕ್ಕೆ ಕಳುಹಿಸಿದ. ಇವನಿಗೆ ಭಾರತ ಸಮುದ್ರದ ಅಡ್ಮಿರಲ್ ಎಂಬ ಬಿರುದು ದತ್ತವಾಯಿತು. ದೊರೆ ಇವನಿಗೆ ಹಲವಾರು ವ್ಯಾಪಾರ ಸವಲತ್ತುಗಳನ್ನೂ ನೀಡಿದ. ಗಾಮ ಭಾರತವನ್ನು ತಲುಪಿ ದೊಡನೆಯೇ ಕಲ್ಲಿಕೋಟೆಯನ್ನು ಉಡಾಯಿಸಿ, ಭಾರತದ ಯುದ್ಧನೌಕೆಗಳನ್ನು ನಿರ್ನಾಮ ಮಾಡಿದ. ಅನಂತರ ಕೊಚ್ಚಿಗೆ ಹೋಗಿ ಅಲ್ಲಿ ತನ್ನ ದೇಶಕ್ಕೆ ಅನುಕೂಲವಾದ ವ್ಯಾಪಾರ ಒಪ್ಪಂದ ಮಾಡಿಕೊಂಡು ಸ್ವದೇಶಕ್ಕೆ ಹಿಂದಿರುಗಿದ (1503). ಇವನ ವ್ಯಾಪಾರದಿಂದಾಗಿ ಗಾಮ ಪೋರ್ಚುಗಲಿನಲ್ಲಿಯೇ ಅತ್ಯಂತ ಶ್ರೀಮಂತನಾದ. ಇವನು ಅನಂತರ ವಿಶ್ರಾಂತ ಜೀವನ ನಡೆಸಿದರೂ ಭಾರತಕ್ಕೆ ಸಂಬಂಧಿಸಿದ ವ್ಯವಹಾರಗಳಲ್ಲಿ ದೊರೆಗೆ ಸಲಹೆ ನೀಡುತ್ತಿದ್ದ. 1519ರಲ್ಲಿ ಇವನಿಗೆ ವಿಡಿಗ್ಯೆರಿರದ ಕೌಂಟ್ ಪದವಿ ದೊರಕಿತು. 1524ರಲ್ಲಿ ಈತ ಭಾರತದ ವೈಸ್‌ರಾಯ್ ಆದ. ಇವನು ನಿಧನನಾದ 1524ರ ಡಿಸೆಂಬರ್ 24ರಂದು ಈತ ನಿಧನ ಹೊಂದಿದ. (ಬಿ.ಎಂ.)

**ಗಾಯ :** ಅಂಗಾಂಶಗಳ ಅವಿಚ್ಛಿನ್ನತೆಗೆ ಉಂಟಾಗುವ ತಡೆ (ವೂಂಡ್). ಕೆಲವರು ಇದನ್ನು ಸಮರಕ್ಕೆ ಮತ್ತು ಶಾಂತಿಗೆ ಸಂಬಂಧಿಸಿದ ಗಾಯ ಎಂಬ ಎರಡು ಬಗೆಗಳಾಗಿ ವಿಂಗಡಿಸಿ ಇವು ಪರಸ್ಪರ ವಿಭಿನ್ನವಾದವುಗಳೆಂದು ಪರಿಗಣಿಸುವುದುಂಟು. ಆದರೆ ಇವುಗಳ ರೋಗಲಕ್ಷಣಗಳಲ್ಲಿ ಮತ್ತು ಚಿಕಿತ್ಸೆಯಲ್ಲಿ ವ್ಯತ್ಯಾಸವೇನಿಲ್ಲ. ಹೀಗೆ ಇವನ್ನು ಬೇರ್ಪಡಿಸುವುದರಲ್ಲಿ ಯಾವ ಸ್ಪಷ್ಟ ಉದ್ದೇಶವನ್ನೂ ಸಾಧಿಸಿದಂತಾಗುವುದಿಲ್ಲ. ಈ ಕೆಳಗಿನ ವರ್ಗೀಕರಣ ಇವೆರಡನ್ನೂ ಒಳಗೊಳ್ಳುತ್ತದೆ– 1 ಮುಚ್ಚುಗಾಯಗಳು ಅಥವಾ ನಿರ್ಭೇದಕ ಗಾಯಗಳು: ಜಜ್ಜುಗಾಯ, ರಕ್ತಹೆಪ್ಪುಗಟ್ಟುವಿಕೆ, ಉಜ್ಜುಗಾಯ; 2 ಬಿಚ್ಚು ಅಥವಾ ತೆರೆಗಾಯಗಳು ಅಥವಾ ಭೇದಕ ಗಾಯಗಳು: ಕಚ್ಚು ಇರಿತ, ಚುಚ್ಚು, ಹರಿಯುವಿಕೆ, ಹೊರಗಾಣಿಸದ ಸರಳಭೇದಕ ಗಾಯ, ತೂತುಗೊರೆದು ಹೊರಹಾಯುವ ಭೇದಕ ಗಾಯ, ಚೂರು ಚೂರಾಗುವಿಕೆ ಅಥವಾ ಸಿಡಿಯುವಿಕೆ.

1 ಮುಚ್ಚುಗಾಯಗಳು : ಮುಚ್ಚುಗಾಯಗಳು ಚರ್ಮದ ಪೂರ್ಣ ಪದರವನ್ನು ಭೇದಿಸಿರುವುದಿಲ್ಲ. ಒರಟಾದ ಆಯುಧದಿಂದ ಬಲವಾಗಿ ಹೊಡೆದಾಗ ಜಜ್ಜು ಗಾಯ ಉಂಟಾಗುತ್ತದೆ. ಇದರಿಂದ ರಕ್ತನಾಳಗಳು ಒಡೆದು ಹೋಗುವುದಲ್ಲದೆ ಚರ್ಮದ ಕೆಳಭಾಗದಲ್ಲಿರುವ ಮೃದುವಾದ ಅಂಗಾಂಶಗಳಿಗೆ ಅನೇಕ ಬಗೆಯ ಹಾನಿ ಉಂಟಾಗುತ್ತದೆ. ರಕ್ತನಾಳಗಳಿಂದ ಹೊರಹರಿದ ರಕ್ತ ಚರ್ಮದೊಳಗೆ ಪ್ರವೇಶಿಸಿದಾಗ ಚರ್ಮ ವಿವರ್ಣವಾಗುತ್ತದೆ. ನೋವು, ಊತ, ವಿವರ್ಣತೆಗಳು ಜಜ್ಜುಗಾಯದ ಚಿಹ್ನೆಗಳು. ಹಾನಿಗೆ ಒಳಗಾದ ಅಂಗಾಂಶಕ್ಕೆ ಅನುಗುಣವಾಗಿ ನೋವು ಮತ್ತು ಊತಗಳು ವಿಪರ್ಯಯವಾಗುತ್ತವೆ. ಕಣ್ಣುರೆಪ್ಪೆ ಮತ್ತು ವೃಷಣಕೋಶಗಳಂತಹ ಸಡಿಲಚರ್ಮವುಳ್ಳ ಭಾಗಗಳಿಗೆ ಜಜ್ಜುಗಾಯ ಉಂಟಾದಾಗ ಊತ ಜಾಸ್ತಿಯಾಗಿದ್ದರೂ ನೋವು ಕಡಿಮೆ ಯಿರುತ್ತದೆ. ಇದಕ್ಕೆ ವಿರುದ್ಧವಾಗಿ ಬೆರಳುಗಳಿಗೆ ಅಥವಾ ನೆತ್ತಿಗೆ ಗಾಯವಾದಾಗ ಊತ ಕಡಿಮೆಯಾಗಿ ನೋವು ಹೆಚ್ಚಾಗಿರುತ್ತದೆ. ಕೆಂಪುರಕ್ತಕಣಗಳು ಒಡೆದು ಹೀಮೋಗ್ಲಾಬಿನ್ ಬಿಡುಗಡೆಯಾಗುವುದರಿಂದ ವಿವರ್ಣತೆಯುಂಟಾಗುತ್ತದೆ. ಇದು ಮೊದಲು ದಟ್ಟ ನೇರಳೆ ಬಣ್ಣದಾಗಿದ್ದು ಅನಂತರ ನೀಲಿ, ಕೆಂಪು, ಕಂದು, ಹಸಿರು ಬಣ್ಣಗಳಾಗಿ ಕೊನೆಯಲ್ಲಿ ಹಳದಿ ಕಲೆಯಾಗಿ 14–20 ದಿವಸಗಳೊಳಗೆ ಅದೃಶ್ಯವಾಗುತ್ತದೆ. ಹೀಮೋಗ್ಲಾಬಿನ್ ಹೀರಿಕೆಯ ಸಮಯದಲ್ಲಿ ನಡೆಯುವ ಕೆಲವು ರಾಸಾಯನಿಕ ಕ್ರಿಯೆಗಳೇ ಈ ವರ್ಣ ಬದಲಾವಣೆಗೆ ಕಾರಣ. ದೇಹದ ಒಳಪದರಗಳಲ್ಲಿ ಜಜ್ಜು ಗಾಯವಾದಾಗ ಊತ ಮತ್ತು ವಿವರ್ಣತೆಗಳು ಏಟುಬಿದ್ದ ಜಾಗದಿಂದ ದೂರದಲ್ಲಿಯೂ ಕಾಣಿಸಿಕೊಳ್ಳಬಹುದು.

ಹೆಚ್ಚು ರಕ್ತಸ್ರಾವವಾಗಿ ಅದು ತಂತುರೂಪದ ಅಂಗಾಂಶ ಕೋಶದ ಪದರಗಳ ಮತ್ತು ಮಾಂಸಖಂಡಗಳ ನಡುವೆ ಹೆಪ್ಪುಗಟ್ಟುತ್ತದೆ. ಮೊದಮೊದಲು ಇದು ಗುಂಡಾಗಿ, ಹುಣ್ಣಿನಂತೆ ಮೆತ್ತಗಿದ್ದು ಅನಂತರ ಗಟ್ಟಿಯಾಗುತ್ತದೆ. ಕ್ರಮೇಣ ಗಾಯ ವ್ಯವಸ್ಥಿತವಾಗಿ ಕರಗಿಹೋಗುತ್ತದೆ. ಆದರೆ ಎಲ್ಲ ಹೆಪ್ಪುಗಟ್ಟುಗಳೂ ಇಷ್ಟು ಸರಳವಾಗಿ ಮುಕ್ತಾಯವಾಗುವುದಿಲ್ಲ. ಕೆಲವು ಗಂಟುಗಳಾಗಿ ಮತ್ತೆ ಕೆಲವು ರಸಿಕೆಯ ಕೋಶಗಳಾಗಿ ಉಳಿಯಬಹುದು. ಸಾಮಾನ್ಯವಾಗಿ ಮಿದುಳಿನ ಮೇಲ್ಮೈಯಲ್ಲಿ, ನಡುವಿನ ಭಾಗದಲ್ಲಿ, ತೊಡೆಯ ಪಕ್ಕಗಳಲ್ಲಿ ರಸಿಕೆಯ ಕೋಶಗಳು ಉಂಟಾಗುತ್ತವೆ. ಇವುಗಳ ಸುತ್ತಲೂ ತಂತುದ್ರವ್ಯ (ಫೈಬ್ರಿನ್) ಶೇಖರಗೊಂಡು, ಹೀಮೋಗ್ಲಾಬಿನ್ ಕರಗಿಹೋಗಿ ಮೇಲೆ ನಸುಹಳದಿಬಣ್ಣದ ದ್ರವ ಉಳಿಯುತ್ತದೆ. ಸರಿಯಾದ ಚಿಕಿತ್ಸೆ ನಡೆಸದಿದ್ದಲ್ಲಿ ಈ ಕೋಶದಲ್ಲಿ ಒಳಪೊರೆಯೊಂದು ಬೆಳೆದು ಅನಂತರ ಅದನ್ನು ತೆಗೆಯುವುದು ಕಷ್ಟವಾಗುತ್ತದೆ. ಕ್ರಿಮಿಗಳ ಬೆಳವಣಿಗೆಗೆ ರಕ್ತ ಒಳ್ಳೆಯ ಮಾಧ್ಯಮ. ಆದ್ದರಿಂದ ದುರ್ಬಲಶರೀರಿಗಳಲ್ಲಿ ಕೆಲವು ಸಲ ಈ ಹೆಪ್ಪುಗಟ್ಟಿಗೆ ಸೋಂಕು ತಗಲಬಹುದು. ಮಾಂಸಖಂಡ ಮತ್ತು ಇತರ ಮೇಲ್ಮೈಯ ಅಂಗಾಂಶಗಳಂತೆಯೇ ಒಳಾಂಗಗಳಾದ ಮಿದುಳು, ಪಿತ್ತಕೋಶ, ಗುಲ್ಮ, ಮೂತ್ರಜನಕಾಂಗ, ಪುಪ್ಪುಸ ಮತ್ತು ಅನ್ನನಾಳ ಮುಂತಾದವುಗಳಿಗೂ ಜಜ್ಜು ಗಾಯವುಂಟಾಗಿ ರಕ್ತ ಹೆಪ್ಪುಗಟ್ಟಬಹುದು. ಇವುಗಳ ಚಿಕಿತ್ಸೆಗೆ ವಿಶ್ರಾಂತಿ ಆವಶ್ಯಕ. ಆವಿಯಾಗುವ ದ್ರವಗಳ ಲೇಪನ, ಶಾಖ ಕೊಡುವಿಕೆ ಮತ್ತು ಬಿಸಿನೀರಿನ ಸ್ನಾನ ನೋವನ್ನು ಕುಗ್ಗಿಸುತ್ತದೆ. ಬಿಗಿಯಾಗಿ ಒತ್ತುವುದರಿಂದ ರಕ್ತಹೊರಸೋರುವುದು ಕಡಿಮೆಯಾಗುತ್ತದೆ. ಉಜ್ಜುವಿಕೆಯಿಂದ ಹೊರ ಬಂದ ರಕ್ತ ಬೇಗನೆ ಕರಗಿಹೋಗುತ್ತದೆ. ರಕ್ತದ ಹೀರುವಿಕೆ ತಡವಾದಲ್ಲಿ ಅದನ್ನು ಹೊರತೆಗೆದು ಬಿಗಿಯಾದ ಕಟ್ಟುಪಟ್ಟಿಯನ್ನು ಕಟ್ಟುವುದರಿಂದ ರಸಿಕೆಯ ಕೋಶ ಉಂಟಾಗುವುದನ್ನು ತಡೆಯಬಹುದು.

ಯಾವುದಾದರೂ ದೇಹದ ಭಾಗ ಒರಟು ಮೇಲ್ಮೈಗೆ ಉಜ್ಜಿದಾಗ ಉಜ್ಜು ಗಾಯ ಉಂಟಾಗುತ್ತದೆ. ಇದರಿಂದ ಚರ್ಮದ ಮೇಲ್ಪದರಗಳು ಕಿತ್ತುಹೋಗಿ, ನರಗಳ ತುದಿಗಳು ಹೊರಕಾಣಿಸಿಕೊಂಡು ತುಂಬ ನೋವುಂಟಾಗುತ್ತದೆ. ಗಾಯದ ಮೂಲಕ ದೂಳು ಪ್ರವೇಶಿಸಿ ಸೋಂಕು ಉಂಟಾಗುತ್ತದೆ. ಗಾಯವನ್ನು ತೊಳೆದು ಮುಲಾಮನ್ನು ಹಚ್ಚುವುದರಿಂದ ಇದನ್ನು ಗುಣಪಡಿಸಬಹುದು.

ಮರದ ತುಂಡು ಅಥವಾ ಗಾರೆಯ ಗಟ್ಟಿಗಳಿಂದ ದೇಹದ ಭಾಗವನ್ನು ಹೆಚ್ಚು ಕಾಲ ಅಮುಕಿದಾಗ ವಿಶೇಷವಾದ ಜಜ್ಜುಗಾಯ ಉಂಟಾಗುತ್ತದೆ. ಜಜ್ಜಿದ ಭಾಗದಿಂದ ಒಳಹೊಗುವ ಜೀವಾಣು ವಿಷವಸ್ತುಗಳು (ಟಾಕ್ಸಿನ್ಸ್) ಮೂತ್ರಜನಕಾಂಗಗಳ ರಕ್ತ ಪರಿಚಲನೆಯ ಮೇಲೆ ಪರಿಣಾಮವನ್ನು ಉಂಟುಮಾಡುತ್ತವೆ. ಇದರಿಂದ ಮೂತ್ರಜನಕಾಂಗದ ಹೊರಭಾಗಕ್ಕೆ (ಕಾರ್ಟೆಕ್ಸ್) ರಕ್ತಚಲನೆ ಇಲ್ಲದಂತಾಗುತ್ತದೆ. ಇದಕ್ಕೆ ಪರಿಣಾಮಕಾರಿಯಾದ ಚಿಕಿತ್ಸಾವಿಧಾನ ಇನ್ನೂ ತಿಳಿಯಬರದಿದ್ದರೂ ಜಜ್ಜಿದ ಭಾಗಕ್ಕೆ ಸಂಪೀಡನೆ ಉಂಟುಮಾಡುವುದರಿಂದ ಜೀವಾಣುವಿಷದ ಹೀರುವಿಕೆಯನ್ನು ತಡೆಗಟ್ಟಿ ಮೂತ್ರಜನಕಾಂಗದ ರಕ್ತಪರಿಚಲನೆಯನ್ನು ಸರಿಯಾಗಿ ನಡೆಯುವಂತೆ ನೋಡಿಕೊಳ್ಳಬಹುದು.

2 ಬಿಚ್ಚು ಅಥವ ತೆರೆಗಾಯಗಳು: ಬಿಚ್ಚು ಅಥವಾ ತೆರೆಗಾಯಗಳಲ್ಲಿ ಚರ್ಮದ ಅಥವಾ ಲೋಳೆಪೊರೆಯ ಅವಿಚ್ಛಿನ್ನತೆಗೆ ತಡೆಯುಂಟಾಗಿ ಒಳಭಾಗದ ಮೃದು ಅಂಗಾಂಶಗಳಿಗೆ ಹಾನಿ ತಗಲುತ್ತದೆ. ಇದರ ತೀವ್ರತೆ ಪೀಡಕವಸ್ತುವಿನ ಗುಣ ಮತ್ತು ಬಲವನ್ನು ಅವಲಂಬಿಸಿರುತ್ತದೆ. ಹಾನಿಗೆ ಒಳಗಾದ ಮಾಂಸಖಂಡದ ತಂತುಗಳ ರಕ್ತಸಂಚಾರಕ್ಕೆ ಅಡ್ಡಿಯುಂಟಾಗಿ ಅವು ತಮ್ಮ ಸಂಕುಚನ ಸಾಮರ್ಥ್ಯ ಮತ್ತು ಸೋಂಕು ನಿರೋಧಕ ಸಾಮರ್ಥ್ಯಗಳನ್ನು ಕಳೆದುಕೊಳ್ಳುತ್ತವೆ. ಅಲ್ಲದೆ ಅವಾಯುಶ್ವಸನ ಜೀವಿಗಳ ಬೆಳವಣಿಗೆಗೆ ಇವು ಉತ್ತೇಜನಕಾರಿಯಾಗಿರುತ್ತವೆ. ತತ್‌ಕ್ಷಣವೇ ಉರಿತದ ಕ್ರಿಯೆ ಪ್ರಾರಂಭ ವಾಗಿ ಶರೀರ ತನ್ನ ರಕ್ಷಣೆಗೆ ತೊಡಗುತ್ತದೆ. ಸ್ರಾವದಿಂದಾಗಿ ಊತ ಕಾಣಿಸಿಕೊಳ್ಳುತ್ತದೆ. ಊತ ಕೆಲವು ಸಲ ವಿಪರೀತವಾಗಿ ಆ ಅಂಗದ ರಕ್ತ ಚಲನೆಗೆ ತಡೆಯುಂಟಾಗಬಹುದು. ಚರ್ಮ ಅಶುದ್ಧವಾಗಿದ್ದು ದೂಳಿನ ಕಣಗಳು ಗಾಯದೊಳಕ್ಕೆ ಪ್ರವೇಶಿಸುತ್ತವೆ. ಗಾಯ ಉಂಟಾದ ಮೇಲೆ ಆರರಿಂದ ಹನ್ನೆರಡು ಗಂಟೆಯವರೆಗೆ ಈ ಕ್ರಿಮಿಗಳು ಹಾನಿಗೆ ಒಳಗಾದ ಅಂಗಾಂಶದ ಮೇಲೆಯೇ ಇದ್ದು ಇನ್ನೂ ನಂಜನ್ನು ಉತ್ಪತ್ತಿ ಮಾಡಿರುವುದಿಲ್ಲ. ಈ ಅವಧಿ ಕಳೆದ ಬಳಿಕ ಗಾಯ ಸೋಂಕಿಗೊಳಗಾಗಿದೆ ಎಂದರ್ಥ.

ಕಚ್ಚುಗಾಯ ಸಾಮಾನ್ಯವಾಗಿ ಗಾಜಿನಚೂರು, ಚಾಕು ಮೊದಲಾದ ಹರಿತವಾದ ವಸ್ತುಗಳಿಂದ ಉಂಟಾಗುತ್ತದೆ. ಅಪೂರ್ವವಾಗಿ ನೆತ್ತಿಯ ಬಿಗಿಗೊಂಡ ಚರ್ಮವಿರುವ ಭಾಗದಲ್ಲಿ ಮೊಂಡು ಆಯುಧ ಸಹ ಕಚ್ಚುಗಾಯವನ್ನು ಉಂಟುಮಾಡಬಲ್ಲದು. ಕಚ್ಚುಗಾಯದಲ್ಲಿ ಬಿರುಕು ಕಾಣಿಸುತ್ತದೆ. ಇದರ ಉದ್ದ ಆಳಕ್ಕಿಂತ ಹೆಚ್ಚು. ಗಾಯದ ಅಂಚುಗಳು ಕ್ರಮವಾಗಿರುತ್ತವೆ. ರಕ್ತಸ್ರಾವ ಹೆಚ್ಚಾಗಿದ್ದು, ಸಂವೇದನ ನರಗಳು ಕತ್ತರಿಸಿಹೋಗುವುದರಿಂದ ನೋವಿರುತ್ತದೆ. ಸೋಂಕು ತಗಲಿರದಿದ್ದಲ್ಲಿ ಗಾಯದ ಅಂಚುಗಳನ್ನು ಸೇರಿಸಿದಾಗ ಅವು ಸರಿಯಾಗಿ ಕೂಡಿಕೊಳ್ಳುತ್ತವೆ.

ರಕ್ತನಾಳಗಳು, ನರಗಳು, ಮಾಂಸಖಂಡಗಳು ಮುಂತಾದ ಮುಖ್ಯ ಅಂಗಗಳಿಗೆ ಆಕಸ್ಮಿಕ ಚುಚ್ಚುಗಾಯದಿಂದ ಉಂಟಾಗುವ ಹಾನಿಯನ್ನು ತಿಳಿಯಲು ಗಾಯದ ಪೂರ್ಣ ಹರವನ್ನು ಪರೀಕ್ಷಿಸಬೇಕು. ಸೋಂಕು ತಗುಲದಿದ್ದಲ್ಲಿ ನರ, ಮಾಂಸಖಂಡ ಮತ್ತು ಮೂಳೆಗಳ ಪುನರ್ನಿರ್ಮಾಣ ಚೆನ್ನಾಗಿ ಆಗುತ್ತದೆ. ಕೊಬ್ಬು ಮತ್ತು ಸ್ರಾವಕ ಗ್ರಂಥಿಗಳಲ್ಲಿ ಈ ಪುನರ್ನಿರ್ಮಾಣ ಅಷ್ಟು ಚೆನ್ನಾಗಿ ಆಗುವುದಿಲ್ಲ. ಕೇಂದ್ರ ನರಮಂಡಲದಲ್ಲಂತೂ ಇದು ಸಾಧ್ಯವೇ ಇಲ್ಲ.

ಸೂಜಿ ಮೊದಲಾದ ಹರಿತವಾದ ಮೊನೆಯುಳ್ಳ ವಸ್ತುಗಳಿಂದ ಇರಿತ ಮತ್ತು ಚುಚ್ಚುಗಾಯಗಳು ಉಂಟಾಗುತ್ತವೆ. ಇವು ಹೊರನೋಟಕ್ಕೆ ಸಣ್ಣವಾಗಿದ್ದರೂ ಅನ್ಯವಸ್ತುಗಳು ಅಥವಾ ಸೋಂಕು ಇವುಗಳೊಳಕ್ಕೆ ಪ್ರವೇಶಿಸಬಹುದು; ಒಳಾಂಗಗಳಿಗೆ ಹಾನಿಯುಂಟಾಗಿದ್ದು ಅದನ್ನು ಸುಲಭವಾಗಿ ತಿಳಿಯಲು ಸಾಧ್ಯವಾಗದೆ ಹೋಗಬಹುದು.

ಯಾವುದೇ ತೊಡಕಿಲ್ಲದಿದ್ದಲ್ಲಿ ಈ ಚುಚ್ಚುಗಾಯದಿಂದ ಉಂಟಾಗುವ ರಕ್ತಸ್ರಾವ ಮತ್ತು ನೋವು ಕಡಿಮೆಯಾಗಿದ್ದು ಬೇಗನೇ ಗುಣವಾಗುತ್ತದೆ. ಅವು ಸೋಂಕಿಗೊಳಗಾದಾಗ ಶಸ್ತ್ರಚಿಕಿತ್ಸೆಯ ಮೂಲಕ ಗುಣಪಡಿಸಬೇಕಾಗುತ್ತದೆ.

ಹಾವಿನ ಕಡಿತವೂ ಒಂದು ಬಗೆಯ ಚುಚ್ಚುಗಾಯವೇ. ಊತ, ನೋವು, ವಿವರ್ಣತೆ, ಮೂರ್ಛೆ, ನಾಡಿಮಿಡಿತ ಕ್ಷೀಣವಾಗುವುದು, ಕಣ್ಣುಪಾಪೆ ಅಗಲ ಗೊಳ್ಳುವುದು–ಇವು ಇದರ ಮುಖ್ಯ ಲಕ್ಷಣಗಳು. ಉಗ್ರಪರಿಸ್ಥಿತಿಯಲ್ಲಿ ನರಗಳು ಮತ್ತು ಸ್ನಾಯುಗಳು ನಿಶ್ಚೇತನಗೊಂಡು ಕೆಲವೇ ಗಂಟೆಗಳಲ್ಲಿ ಸಾವು ಸಂಭವಿಸಬಹುದು. ಕಡಿದ ಜಾಗಕ್ಕೆ ತೀವ್ರವಾದ ಚಿಕಿತ್ಸೆ ಮಾಡಬೇಕು. ಗಾಯದಿಂದ ಕೊಂಚ ಮೇಲಕ್ಕೆ ಕಟ್ಟನ್ನು ಕಟ್ಟಿ, ಗಾಯವನ್ನು ಕೊಯ್ದು ರಕ್ತಸ್ರಾವವಾಗಲು ಬಿಡಬೇಕು. ಅನಂತರ ಅಮೋನಿಯ ಅಥವಾ ಹೈಡ್ರೊಜನ್ ಪೆರಾಕ್ಸೈಡಿನಿಂದ ತೊಳೆಯಬೇಕು. ಬ್ರಾಂಡಿ ಮತ್ತು ಹೃದಯೋತ್ತೇಜಕಗಳನ್ನು ಕೊಡಬೇಕು. ಹಾವು ಕಚ್ಚಿದ ಒಂದು ಗಂಟೆಯೊಳಗೆ ವಿಷನಿರೋಧಕಗಳನ್ನು ಕೊಟ್ಟಲ್ಲಿ ಒಳ್ಳೆಯ ಪರಿಣಾಮ ಕಾಣಿಸುತ್ತದೆ.

ಜೇನು, ಕಣಜ, ಸೊಳ್ಳೆ, ಚೇಳು, ಮುಂತಾದವುಗಳ ಕಡಿತದಿಂದ ಸೋಂಕು ರೋಗಗಳು ಹರಡಬಹುದು. ನಾಲಿಗೆ ಮತ್ತು ಗಂಟಲಲ್ಲಿ ಇವು ಕಚ್ಚಿದಾಗ ಊತವುಂಟಾಗಿ ಜೀವಕ್ಕೇ ಅಪಾಯ ಒದಗಬಹುದು. ಕೊಂಡಿ ಸೇರಿದ್ದಲ್ಲಿ ಅದನ್ನು ಹೊರತೆಗೆದು ಕ್ಷಾರವಸ್ತುಗಳಿಂದ ಕಟ್ಟುಪಟ್ಟಿಯನ್ನು ಕಟ್ಟಿದಲ್ಲಿ ಗಾಯ ಗುಣವಾಗುತ್ತದೆ.

ಹರಿಗಾಯಗಳು ಯುದ್ಧರಂಗದಲ್ಲಿ ಆಗಬಹುದು ಇಲ್ಲವೇ ಯಂತ್ರಗಳಿಂದ ಆಗಬಹುದು. ಸಿಡಿಯುವ ಅಥವಾ ಹರಿಯುವ ಶಕ್ತಿಗಳಿಂದ ಈ ವಿಧವಾದ ಗಾಯಗಳು ಉಂಟಾಗುವುದರಿಂದ ಇವು ಆಕಾರರಹಿತವಾಗಿರುತ್ತವೆ. ಸಾಮಾನ್ಯವಾಗಿ ಚರ್ಮ ಹರಿದು ಒಳಭಾಗಕ್ಕೆ ಹೆಚ್ಚು ಪೆಟ್ಟಾಗಿರುತ್ತದೆ. ಗಾಯದ ಅಂಚುಗಳು ಚಿಂದಿಚಿಂದಿಯಾಗಿ, ನೇರಳೆ ಬಣ್ಣದವಾಗಿರುತ್ತವೆ. ಚರ್ಮದ ಕೆಳಭಾಗದಲ್ಲಿರುವ ಕೊಬ್ಬು, ಆಳದಲ್ಲಿರುವ ತಂತುರೂಪದ ಅಂಗಾಂಶದ ಕೋಶಗಳು ಮತ್ತು ಮಾಂಸಖಂಡಗಳು ಹಾನಿಗೊಳಗಾಗಿ ಊದಿಕೊಳ್ಳುತ್ತವೆ. ಸಾಮಾನ್ಯವಾಗಿ ರಕ್ತ ನಾಳಗಳಲ್ಲಿ ಹೆಪ್ಪುಗಟ್ಟುವುದರಿಂದ ಅದರ ಸ್ರಾವ ಹೆಚ್ಚಾಗಿರುವುದಿಲ್ಲ. ಹರಿಗಾಯದ ಬಾಯಿಯನ್ನು ಸಾಮಾನ್ಯವಾಗಿ ರಕ್ತದ ಗೆಡ್ಡೆಗಳು ಮುಚ್ಚಿರುತ್ತವೆ. ನರಗಳಿಗೆ ಹಾನಿ ಉಂಟಾದಲ್ಲಿ ಸಂವೇದನ ಸಾಮರ್ಥ್ಯ ಕುಗ್ಗುತ್ತದೆ. ಈ ಬಗೆಯ ಗಾಯಗಳಲ್ಲಿ ಸೋಂಕು ಖಚಿತ.

ಕೆಲವು ಭೇದಕ ಗಾಯಗಳಿಗೆ ಪ್ರವೇಶದ್ವಾರ ಮಾತ್ರ ಇರುತ್ತದೆ. ಇವು ಕಚ್ಚು, ಚುಚ್ಚು ಅಥವಾ ಹರಿಗಾಯಗಳಾಗಿರಬಹುದು. ಇವು ಒಳಗಿನ ಅಂಗಗಳಿಗೆ ಹೆಚ್ಚು ಅಪಾಯವನ್ನು ಉಂಟುಮಾಡುತ್ತವೆ. ಅನೇಕ ಯುದ್ಧಗಾಯಗಳು ಈ ಬಗೆಯವು.

ತೂತು ಕೊರೆದು ಹೊರಹಾಯುವ ಭೇದಕಗಾಯಗಳಿಗೆ ಪ್ರವೇಶ, ನಿರ್ಗಮನ ಗಳೆರಡೂ ಉಂಟು. ಇಂಥ ಗಾಯಗಳಲ್ಲಿ ಅನ್ಯವಸ್ತುಗಳು ಶರೀರದಲ್ಲಿ ಉಳಿಯುವುದಿಲ್ಲ. ಸಿಡಿತದಿಂದ ಉಂಟಾಗುವ ಗಾಯಗಳಲ್ಲಿ ಸ್ಪಷ್ಟವಾದ ಯಾವುದೇ ಬಾಹ್ಯವಸ್ತು ಅಂಗಾಂಶವನ್ನು ಪ್ರವೇಶಿಸಿರುವುದಿಲ್ಲ.

ಗಾಯಚಿಕಿತ್ಸೆಯ ಸಾಮಾನ್ಯ ನಿಯಮಗಳು: 1 ಪ್ರತಿಯೊಂದು ಗಾಯವನ್ನೂ ಸ್ಪರ್ಶಜ್ಞಾನರಹಿತ ಮತ್ತು ವಿಷಾಣುರಹಿತ ಸ್ಥಿತಿಗಳಲ್ಲಿ ಚಿಕಿತ್ಸೆ ಮಾಡುವುದು. 2 ಗಾಯಕ್ಕೆ ತೊಂದರೆಯಾಗದಂತೆ ಚರ್ಮವನ್ನು ತೊಳೆಯುವುದು. 3 ಗಾಯದ ಅಂಚನ್ನು ಕತ್ತರಿಸುವುದು. 4 ಗಾಯವನ್ನು ಸರಿಯಾಗಿ ಪರೀಕ್ಷಿಸುವುದು. 5 ತೀವ್ರ ಹಾನಿಗೆ ಒಳಗಾದ ಅಂಗಾಂಶಗಳನ್ನು ತೆಗೆದುಹಾಕುವುದು. 6 ರಕ್ತಸ್ರಾವವನ್ನು ತಡೆಗಟ್ಟುವುದು. 7 ಹರಿದ ನರ ಮತ್ತು ಮಾಂಸಖಂಡಗಳನ್ನು ಹೊಲಿಯುವುದು. 8 ಪ್ರತಿಯೊಂದು ಬಿರುಕಿಗೂ ಸಲ್ಫೊನಮೈಡ್ ಮತ್ತು ಪೆನ್‌ಸಿಲಿನ್ ಪುಡಿಯನ್ನು ಹಾಕುವುದು. 9 ಬಿಗಿತವುಂಟಾಗದಿದ್ದಲ್ಲಿ ಹೊಲಿಗೆಯನ್ನು ಹಾಕುವುದು. 10 ಕಟ್ಟುಪಟ್ಟಿ ಹಾಕುವುದು. 11 ಗಾಯಗೊಂಡ ಭಾಗ ಚಲಿಸದಂತೆ ನೋಡಿಕೊಳ್ಳುವುದು. (ಜಿ.ಇ.ಎಚ್.ಸಿ.)

**ಗಾಯಕವಾಡ :** ಪೇಷ್ವೆ ಒಂದನೆಯ ಬಾಜಿರಾಯನ ಆಡಳಿತದ ಕಾಲದಲ್ಲಿ (1720–40) ಅಧಿಕಾರಗಳಿಸಿದ ಮರಾಠಾ ರಾಜಮನೆತನ. ಇದರ ಸ್ಥಾಪಕ 1ನೆಯ ದಾಮಾಜಿ. ಅವನ ಸೋದರನ ಮಗ ಪಿಲಾಜಿ ಎಂಬುವನು ಖಂಡೇರಾವ್ ದಾಬಡೆಯ ಅನುವರ್ತಿಯಾಗಿದ್ದ. 1720ರಲ್ಲಿ ಸೂರತ್ತಿನ ಪೂರ್ವಕ್ಕೆ 80 ಕಿಮೀ ದೂರದಲ್ಲಿದ್ದ ಸೋನ್‌ಗಢದಲ್ಲಿ ಕೋಟೆ ಕಟ್ಟಿಕೊಂಡು ಪ್ರಬಲನಾಗುತ್ತಿದ್ದ. ಖಂಡೇರಾಯನ ಮಗನಾದ ತ್ರಿಯಂಬಕರಾಯನಿಗೂ ಬಾಜಿರಾಯನಿಗೂ ಭಿಲಾಪುರದಲ್ಲಿ ನಡೆದ ಯುದ್ಧದಲ್ಲಿ ಪಿಲಾಜಿ ಗಾಯಕವಾಡ ತ್ರಿಯಂಬಕರಾಯನ ಪಕ್ಷ ವಹಿಸಿದ್ದ. ಕದನದಲ್ಲಿ ತ್ರಿಯಂಬಕ ರಾಯ ಮಡಿದ. ಬಾಜಿರಾಯನೊಂದಿಗೆ ಪಿಲಾಜಿ ಸಂಧಿ ಮಾಡಿಕೊಂಡ. ಗುಜರಾತಿನಲ್ಲಿ ಮರಾಠರಿಗೆ ಸೇರಿದ್ದ ಭಾಗದ ಮೇಲ್ವಿಚಾರಣೆಯ ಅಧಿಕಾರವನ್ನು ಬಾಜಿರಾಯ ಪಿಲಾಜಿಗೆ ವಹಿಸಿಕೊಟ್ಟ. ಬರೋಡೆಯೇ ಪಿಲಾಜಿಯ ರಾಜಧಾನಿಯಾಯಿತು.

1732ರಲ್ಲಿ ಪಿಲಾಜಿ ಕೊಲೆ ಹೊಂದಿದಾಗ ಅವನ ಮಗ ಎರಡನೆಯ ದಾಮಾಜಿ ಪಟ್ಟಕ್ಕೆ ಬಂದ. 1761ರಲ್ಲಿ ನಡೆದ ಪಾಣಿಪಟ್ ಯುದ್ಧದಲ್ಲಿ ದಾಮಾಜಿ ಭಾಗವಹಿಸಿದ್ದು ಅಲ್ಲಿಂದ ತಪ್ಪಿಸಿಕೊಂಡು ಬಂದ. ಅವನು 1768ರಲ್ಲಿ ತೀರಿಕೊಂಡಾಗ ಅವನ ಹಲವಾರು ಮಕ್ಕಳು ಅಧಿಕಾರಕ್ಕಾಗಿ ಹಲವು ವರ್ಷಗಳ ಕಾಲ ಪರಸ್ಪರ ಬಡಿದಾಡಿದರು. ಕೊನೆಗೆ (1800) ದಾಮಾಜಿಯ ಹಿರಿಯ ಮಗನಾದ ಗೋವಿಂದರಾಯನ ಪುತ್ರ ಆನಂದರಾವ್ ಸಿಂಹಾಸನವನ್ನೇರಿ 1819ರ ವರೆಗೆ ರಾಜ್ಯವಾಳಿದ. ಗಾಯಕವಾಡ ಮನೆತನದ ಅರಸರು ಮೊದಲಿಂದಲೂ ಇಂಗ್ಲಿಷರೊಂದಿಗೆ ಸ್ನೇಹದಿಂದ ವರ್ತಿಸುತ್ತಿದ್ದರು. ಆನಂದರಾಯ ನಿಗೂ ಇಂಗ್ಲಿಷರಿಗೂ ನಡುವೆ 1805ರಲ್ಲಿ ಒಪ್ಪಂದವಾಗಿ ಗಾಯಕವಾಡ ದೊರೆ ಇಂಗ್ಲಿಷರ ಆಶ್ರಿತ ರಾಜನಾದ. ಗಾಯಕವಾಡರು ಇಂಗ್ಲಿಷರಿಗೆ ವಿಧೇಯವಾಗಿದ್ದುದರಿಂದ ಅನಂತರ ನಡೆದ ಎರಡು ಮೂರನೆಯ ಇಂಗ್ಲಿಷ್ ಮರಾಠಾ ಯುದ್ಧಗಳಲ್ಲಿ ಬರೋಡ ಸಂಸ್ಥಾನಕ್ಕೆ ಏನೂ ಕಷ್ಟನಷ್ಟಗಳು ಸಂಭವಿಸಲಿಲ್ಲ.

ಗಾಯಕವಾಡ ಮನೆತನ

ದಾಮಾಜಿ I — ಝಿಂಗೋಜಿ

ಪಿಲಾಜಿ (1721–1732)

ದಾಮಾಜಿ II (1732–1768)

ಗೋವಿಂದರಾವ್ (1768–1771; 1793–1800) — ಸಯಾಜಿರಾವ್ I (1771–1778) — ಫತೇಸಿಂಗ್ (1778–1789) — ಮಾನಾಜಿ (1789–1793) — ಇತರರು

ಆನಂದರಾವ್ (1800–1819) — ಖಂಡೇರಾವ್ (1819–1847)

ಗಣಪತ್‌ರಾವ್ (1847–1856) — ಖಂಡೇರಾವ್ (1856–1870) — ಮಲ್ಹಾರ್‌ರಾವ್ (1870–1875)

ದತ್ತು: ಸಯಾಜಿರಾವ್ III (1875–1939)

ಆನಂದರಾಯನ ಅನಂತರ ಅಧಿಕಾರಕ್ಕೆ ಬಂದವನು ಅವನ ತಮ್ಮ ಎರಡನೆಯ ಸಯಾಜಿರಾವ್ (ಆ. 1819–47). ಅನಂತರ ಸಯಾಜಿರಾಯನ ಮೂವರು ಮಕ್ಕಳಾದ ಗಣಪತರಾವ್ (ಆ.1847–56), ಖಂಡೇರಾವ್ (ಆ. 1856–70) ಮತ್ತು ಮಲ್ಹಾರ್‌ರಾವ್ (ಆ. 1870–75) ಅನುಕ್ರಮವಾಗಿ ರಾಜ್ಯವಾಳಿದರು. ಆಡಳಿತವನ್ನು ಹದಗೆಡಿಸಿದನೆಂದೂ ಬ್ರಿಟಿಷ್ ರೆಸಿಡೆಂಟನಿಗೆ ವಿಷ ಹಾಕಿ ಅವನನ್ನು ಕೊಲ್ಲಲು ಯತ್ನಿಸಿದನೆಂದು ಮಲ್ಹಾರಿ ರಾಯನ ಮೇಲೆ ಆಪಾದನೆ ಹೊರಿಸಿ ಅವನನ್ನು ಬ್ರಿಟಿಷರು ವಿಚಾರಣೆಗೆ ಗುರಿಪಡಿಸಿದರು. ವಿಷಪ್ರಯೋಗದ ಆಪಾದನೆಯನ್ನು ಸ್ಥಿರೀಕರಿಸಲಾಗಲಿಲ್ಲ. ಆದರೆ ದುರ್ನಡತೆ ದುರಾಡಳಿತ ಗಳ ಕಾರಣದ ಮೇಲೆ ಅವನನ್ನು ಪದಚ್ಯುತಿಗೊಳಿಸಲಾಯಿತು. ಮಲ್ಹಾರಿ ರಾಯನಿಗೆ ಮಕ್ಕಳಿರಲಿಲ್ಲ. ಗಾಯಕವಾಡ ಮನೆತನದ ದೂರದ ಸಂಬಂಧ ಹೊಂದಿದ್ದ ಸಯಾಜಿರಾಯ ನನ್ನು ಬ್ರಿಟಿಷರು ಸಿಂಹಾಸನಕ್ಕೆ ತಂದರು (1875–1939). 3ನೆಯ ಸಯಾಜಿರಾವ್ ಬರೋಡ ಸಂಸ್ಥಾನದ ಪ್ರಗತಿಪರ ರಾಜನೆಂದು ಖ್ಯಾತಿ ಗಳಿಸಿದ. (ಎಚ್.ಜಿ.ಆರ್.)

**ಗಾಯಿತ್ರೀ :** ಒಂದು ದಿವ್ಯ ಮಂತ್ರ. ಗಾಯಂತಂ ತ್ರಾಯತೇ ಯಸ್ಮಾತ್ ಗಾಯತ್ರೀ ತು ತತಃ ಸ್ಮೃತಾ ಎಂದಿರುವಂತೆ ತನ್ನ ಉಪಾಸಕರನ್ನು ರಕ್ಷಿಸುವುದರಿಂದ ಈ ಮಂತ್ರಕ್ಕೆ ಗಾಯತ್ರೀ ಎಂಬ ಹೆಸರು ಬಂದಿದೆ. ಗಾಯತ್ರೀ ಛಂದಸ್ಸಿನಲ್ಲಿರುವುದ ರಿಂದಲೂ ಇದಕ್ಕೆ ಅದೇ ಹೆಸರು ಬರಲು ಕಾರಣವಾಗಿದೆ. ಛಂದಸ್ಸಿಗೆಲ್ಲ ಮಾತೃಸ್ವರೂಪವಾದದ್ದು ಈ ಗಾಯತ್ರೀ. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಗಾಯತ್ರೀ ಛಂದಸಾಮಹಂ (ಛಂದಸ್ಸುಗಳಲ್ಲಿ ನಾನು ಗಾಯತ್ರೀ) ಎಂದಿರುವುದರಿಂದ ಈ ಛಂದಸ್ಸು ಅತ್ಯುತ್ತಮವಾದದ್ದು. ಗಾಯತ್ರೀ ಮಂತ್ರ ಉಪನಿಷತ್ತುಗಳಿಗಿಂತ ಶ್ರೇಷ್ಠವಾದುದು. ಈ ಮಂತ್ರದಲ್ಲಿ ಇಪ್ಪತ್ತನಾಲ್ಕು ಅಕ್ಷರಗಳಿವೆ. ಎಂಟು ಅಕ್ಷರಗಳಿಗೆ ಒಂದು ಪಾದ ವ್ಯವಸ್ಥೆಯಂತೆ ಈ ಮಂತ್ರ ಮೂರು ಪಾದಗಳಿಂದ ಕೂಡಿದೆ. ಉಪನಯನ ಸಂಸ್ಕಾರದಲ್ಲಿ ಉಪನೀತನಿಗೆ ಈ ಮಂತ್ರವನ್ನು ಉಪದೇಶಿಸುತ್ತಾರೆ. ಬ್ರಹ್ಮೋಪದೇಶ ರೂಪವಾದ ಈ ಮಂತ್ರದಿಂದ ಉಪನೀತ ವಿಪ್ರನಾಗುತ್ತಾನೆ. ಮನುಸ್ಮೃತಿಯಲ್ಲಿ ತಿಳಿಸಿರುವಂತೆ ಗಾಯತ್ರಿ ಸಕಲ ವೇದಗಳ ಸಾರವಾದುದು, ಪರಬ್ರಹ್ಮ ಸ್ವರೂಪವುಳ್ಳದ್ದು. ಓಂಕಾರಪೂರ್ವಕ ಸಂಧ್ಯಾಕಾಲಗಳಲ್ಲಿ

ವೇದಮಾತೃವಾದ ಈ ಮಂತ್ರವನ್ನು ಜಪಿಸುವುದರಿಂದ ವೇದಪಠನ ಪುಣ್ಯ ಲಭಿಸುತ್ತದೆ, ಮಹಾಪಾತಕಗಳು ನಶಿಸುತ್ತವೆ.

ವಹ್ನಿಪುರಾಣದಂತೆ ಈ ಮಂತ್ರ ಸವಿತೃದೇವತಾತ್ಮಕವಾದುದು; ಛಂದಸ್ಸು, ಗಾಯತ್ರೀ; ಋಷಿ, ವಿಶ್ವಾಮಿತ್ರ, ಕರ್ಮೇಂದ್ರಿಯಗಳು ಐದು, ಬುದ್ಧೀಂದ್ರಿಯಗಳು ಐದು, ಇಂದ್ರಿಯಾರ್ಥಗಳು ಐದು, ಪಂಚಭೂತಗಳು, ಮನಸ್ಸು ಬುದ್ಧಿ ಆತ್ಮ ಅವ್ಯಕ್ತ – ಈ ಇಪ್ಪತ್ತನಾಲ್ಕು ಗಾಯತ್ರಿಯ ಅಕ್ಷರಗಳು. ಸಪ್ತಲೋಕಗಳು ವ್ಯಾಹೃತಿಗಳು. ಇದಕ್ಕೆ ಶಿರಸ್ಸಾಗಿರುವವ ಪರಮೇಶ್ವರ. ಈ ವಿಧವಾದ ಗಾಯತ್ರಿಯನ್ನು ಜಪಿಸಬೇಕು. ಪ್ರಾತಃಕಾಲದಲ್ಲಿ ಗಾಯತ್ರೀ, ಮಧ್ಯಾಹ್ನದಲ್ಲಿ ಸಾವಿತ್ರಿ, ಸಾಯಂಕಾಲದಲ್ಲಿ ಸರಸ್ವತಿಯನ್ನು ಧ್ಯಾನಿಸಬೇಕು. ಗಾಯತ್ರೀ ಸಾವಿತ್ರೀ ಸರಸ್ವತಿಯರನ್ನು ಆವಾಹನೆ ಮಾಡಿಕೊಂಡು ಋಷಿ ಛಂದಸ್ಸು ದೇವತೆಗಳನ್ನು ಸ್ಮರಿಸಿ ಬಳಿಕ ಈ ಮಂತ್ರವನ್ನು ಜಪಿಸುವುದು ಕ್ರಮ.

ಗಾಯತ್ರೀಮಂತ್ರದೊಡನೆ ಒಂದು ಲಕ್ಷ ತಿಲಹೋಮ ಮಾಡಿದರೆ ಸರ್ವಪಾತಕಗಳೂ ನಶಿಸುತ್ತವೆ. ತುಪ್ಪದಿಂದ ಹೋಮ ಮಾಡಿದರೆ ಆಯಸ್ಸು ಹೆಚ್ಚುತ್ತದೆ. ದಧಿಯಿಂದ ಹೋಮ ಮಾಡಿದರೆ ಮಕ್ಕಳಾಗುತ್ತಾರೆ. ಸಮಿತ್ತಿನಿಂದ ಹೋಮ ಮಾಡಿದರೆ ಗ್ರಹಪೀಡೆ ನಿವಾರಣೆಯಾಗುತ್ತದೆ. ಇದು ಸರ್ವಾಭೀಷ್ಟ ಸಿದ್ಧಿಕರ ಮಂತ್ರ. ಇದನ್ನು ಜಪಿಸಿದವರಿಗೆ ಯಾವ ವಿಧವಾದ ಭಯವೂ ಇರುವುದಿಲ್ಲ. ಪ್ರತಿ ವರ್ಷ ಶ್ರಾವಣ ಮಾಸ ಕೃಷ್ಣ ಪಕ್ಷ ಪಾಡ್ಯದ ದಿವಸ ಮಿಥ್ಯಾಧೀತ (ದೋಷ) ಪ್ರಾಯಶ್ಚಿತ್ತಕ್ಕಾಗಿ ಒಂದು ಸಾವಿರ ಸಂಖ್ಯೆಯಲ್ಲಿ ಗಾಯತ್ರೀ ಜಪ ಅಥವಾ ಹೋಮವನ್ನು ಮಾಡುವುದು ರೂಢಿಯಲ್ಲಿದೆ.

ಗಾಯತ್ರೀ ಬ್ರಹ್ಮನ ಪತ್ನಿ. ಯಾಗದೀಕ್ಷಾಕಾಲದಲ್ಲಿ ಬ್ರಹ್ಮ ತನ್ನ ಪತ್ನಿಯನ್ನು ಯಜ್ಞವಾಟಿಕೆಗೆ ಬರುವಂತೆ ಹೇಳಿಕಳುಹಿಸುತ್ತಾನೆ. ತನ್ನ ಒಡನಾಡಿಯರಿಗಾಗಿ ಕಾಯುತ್ತಿದ್ದ ಆಕೆ ಸಕಾಲಕ್ಕೆ ಬರದೆ ಮುಹೂರ್ತ ಮಿಂಚುತ್ತ ಬರಲು ಕುಪಿತನಾದ ಬ್ರಹ್ಮ ಬೇರೆ ಪತ್ನಿಯನ್ನು ಕರೆತರುವಂತೆ ಇಂದ್ರನಿಗೆ ಆಜ್ಞಾಪಿಸುತ್ತಾನೆ. ಇಂದ್ರ ಕೂಡಲೇ ಭೂಲೋಕಕ್ಕೆ ಹೋಗಿ ಒಬ್ಬ ಸುಂದರಿಯನ್ನು ಕರೆತರಲು ಆಕೆಗೆ ಗಾಯತ್ರೀ ಎಂದು ಹೆಸರಿಟ್ಟು ಗಾಂಧರ್ವ ವಿಧಿಯಿಂದ ಬ್ರಹ್ಮ ವಿವಾಹವಾಗುತ್ತಾನೆ. ಹೀಗೆಂದು ಒಂದು ಪೌರಾಣಿಕ ಕತೆ ಇದೆ.

ಕೆಂಪು ಬಿಳುಪು ಹಳದಿ ನೀಲ ಬಣ್ಣಗಳ ಕಾಂತಿಯಿಂದ ಕೂಡಿರುವವಳೂ ಉಜ್ವಲವಾದ ಮೂರು ಕಣ್ಣುಳ್ಳವಳೂ ಕೆಂಪು ವಸ್ತ್ರವನ್ನು ಧರಿಸಿರುವವಳೂ ವರದಾಭಯ ಹಸ್ತಗಳನ್ನುಳ್ಳವಳೂ ಶಂಖಚಕ್ರಧಾರಣಿಯೂ ಕೈಯಲ್ಲಿ ಕಪಾಲ ಅಂಕುಶ ಜಪಮಾಲೆ ಕಮಲಗಳನ್ನು ಹಿಡಿದಿರುವವಳೂ ಕುಮಾರಿಯೂ ಆಗಿರುವಂತೆ ಗಾಯತ್ರಿ ಸ್ವರೂಪವನ್ನು ಧ್ಯಾನಿಸಬೇಕು.

ವೀರಶೈವ ಪಂಥದ ಕೆರೆಯ ಪದ್ಮರಸನ ದೀಕ್ಷಾಬೋಧೆ ಎಂಬ ಗ್ರಂಥದ ದ್ವಿತೀಯ ಸ್ಥಲದಲ್ಲಿ

ಇನ್ನು ಕೇಳು ಗಾಯತ್ರಿಯ ನಿಜಮಂ
ಸನ್ನುತ ಭೂತಿರುದ್ರಾಕ್ಷಿಗಳಿರಮಂ
ನಿಟಿಲ ತ್ರಿಪುಂಡ್ರಾಂಕಿತಯುಕ್ತಾಂಗಿಯ
ಜಟೆರುದ್ರಾಕ್ಷಭಸಿತ ಸರ್ವಾಂಗಿಯ
ಅಕ್ಷಮಾಲೆ ಜಪಕರದ ಕಮಂಡಲ
ನಿಕ್ಷೇಪಿನಿಸಿದಾಗಮಹೃನ್ಮಂಡಲ
ಋಗ್ಯಜುಸ್ಸಾಮಂ ನಿಜಮೂರುತಿಯ
ಭರ್ಗಭಕ್ತಿಯ ನಿಷ್ಠೆಯ ಮನದರ್ಥಿಯ
ಇದು ಗಾಯತ್ರಿಯ ನಿಜದಾಕಾರಂ

– ಎಂದು ಗಾಯತ್ರಿಯ ಸ್ವರೂಪದ ವಿವರಣೆ ಇದೆ.

ಗಾಯತ್ರೀಯ ಅಕ್ಷರಗಳಲ್ಲಿ ಒಂದೊಂದು ಅಕ್ಷರವೂ ಒಂದೊಂದು ಶ್ಲೋಕದಲ್ಲಿರುವುದನ್ನು ಶ್ರೀಮದ್ವಾಲ್ಮೀಕಿ ರಾಮಾಯಣದಿಂದ ಉದ್ಧರಿಸಿ 24 ಶ್ಲೋಕಗಳುಳ್ಳ ಈ ಗ್ರಂಥ ಭಾಗಕ್ಕೆ ಗಾಯತ್ರೀರಾಮಾಯಣ ಎಂದು ಅಂಕಿತ ಮಾಡಿದ್ದಾರೆ. ಇದನ್ನು ಪ್ರತಿದಿನ ಪಠಿಸುವುದರಿಂದ ಸರ್ವಪಾಪಗಳೂ ನಶಿಸುತ್ತವೆ ಎಂದು ಫಲಶ್ರುತಿ. (ಎಸ್.ಎನ್.ಕೆ.)

**ಗಾಯತ್ರೀ ಛಂದಸ್ಸು :** ಮುಖ್ಯವಾದ ವೈದಿಕ ಛಂದಸ್ಸುಗಳಲ್ಲಿ ಒಂದು. ಋಗ್ವೇದದ 1/4ಭಾಗ ಋಕ್ಕುಗಳು ಈ ಛಂದಸ್ಸಿನಲ್ಲಿವೆ. ಇತರ ವೈದಿಕ ಛಂದಸ್ಸುಗಳಂತೆ ಗಾಯತ್ರಿಯೂ ಉದಾತ್ತಾನುದಾತ್ತಸ್ವರಿತಳೆಂಬ ಸ್ವರಗಳೊಡನೆ ಹೇಳಲ್ಪಡುತ್ತದೆ. ಇದರ ಸಾಮಾನ್ಯ ಲಕ್ಷಣ ಹೀಗೆ: 3 ಪಾದಗಳು: ಪಾದಕ್ಕೆ 8 ಅಕ್ಷರಗಳು: ಪ್ರತಿಯೊಂದು ಪಾದವನ್ನು 4 ಅಕ್ಷರಗಳ 2 ಗಣಗಳನ್ನಾಗಿ ವಿಭಜಿಸಬಹುದು. ಹೀಗೆ ವಿಭಜಿಸಿದಾಗ 2ನೆಯ ಗಣದಲ್ಲಿ 2 ಬಾರಿ ಹ್ರಸ್ವದೀರ್ಘಾಕ್ಷರಗಳ ಅನುಕ್ರಮವಾದ ವಿನ್ಯಾಸ (∪–,∪–) ಸಾಮಾನ್ಯವಾಗಿ ಕಂಡಬರುತ್ತದೆ.

ಉದಾಹರಣೆಗೆ ಋಗ್ವೇದದ ಮೊದಲ ಮಂತ್ರವನ್ನೇ ನೋಡಬಹುದು.

ಅಗ್ನಿಮೀಳೇ ಪುರೋಹಿತಂ
ಯಜ್ಞಸ್ಯ ದೇವಮೃತ್ವಿಜಂ
ಹೋತಾರಂ ರತ್ನಧಾತಮಂ (ಸೂಕ್ತ 1 ಮಂತ್ರ 1)

ಇದೇ ಮಂತ್ರವನ್ನು ಗಣ ವಿಭಜಿಸಿ 2ನೆಯ ಗಣದಲ್ಲಿ ಲಘುಗುರುಗಳ ವಿನ್ಯಾಸವನ್ನು ಪರಿಶೀಲಿಸಿದಾಗ ಹೀಗಿರುತ್ತದೆ:

∪– ∪–
ಅಗ್ನಿಮೀಳೇ । ಪುರೋಹಿತಂ
∪– ∪–
ಯಜ್ಞಸ್ಯ ದೇ । ವಮೃತ್ವಿಜಂ
∪– ∪–
ಹೋತಾರಂ ರ । ತ್ನ ಧಾತಮಂ

ಇನ್ನೂ ಒಂದು ಉದಾಹರಣೆಯನ್ನು ನೋಡಬಹುದು.

∪– ∪–
ತದ್ವಿಷ್ಣೋಃ ಪ । ರಮಂ ಪದಂ
∪– ∪–
ಸದಾ ಪಶ್ಯಂ । ತಿ ಸೂರಯಃ
∪– ∪–
ದಿವೀವ ಚ । ಕ್ಷುರಾತತಂ

ಹೀಗೆಯೇ ಗಾಯತ್ರಿಯ ಇನ್ನೂ ಅನೇಕ ಉದಾಹರಣೆಗಳನ್ನು ನೋಡಿದರೂ ಪ್ರತಿ ಪಾದದ ಉತ್ತರಾರ್ಧದ 4 ಅಕ್ಷರಗಳಲ್ಲಿ ಎಂದರೆ 2ನೆಯ ಗಣದಲ್ಲಿ ಮೇಲೆ ತೋರಿಸಿರುವಂಥ ರೀತಿಯಲ್ಲಿ ದ್ವಿಲಗ ವಿನ್ಯಾಸ (∪–, ∪–) ಕಂಡುಬರುತ್ತದೆ. ಹೀಗೆ ಬರಲೇಬೇಕೆಂಬ ನಿರ್ಬಂಧವಿಲ್ಲದೆಯೂ ಆ ವಿನ್ಯಾಸ ಬಲುಮಟ್ಟಿಗೆ ಕ್ರಮ ತಪ್ಪದೆ ಬಂದಿರುವುದು ಗಮನಿಸತಕ್ಕದ್ದಾಗಿದೆ.

ಒಮ್ಮೊಮ್ಮೆ ಈ ಕ್ರಮ ವಿಪರ್ಯಾಯಗೊಂಡು ದೀರ್ಘಹ್ರಸ್ವಲಯವೂ (–∪ ) ದೀರ್ಘ ದೀರ್ಘಲಯವೂ (– –) ಬರುವುದುಂಟು.

ಉದಾಹರಣೆಗೆ ಒಂದು ಅಂಥ ಗಾಯತ್ರಿಯನ್ನು ನೋಡಬಹುದು.

– ∪∪ –
ಸ ಘಾ ನಃ ಸೂ । ನುಃ ಶವಸಾ
– ∪ – –
ಪೃಥುಪ್ರಗಾ । ಮಾ ಸುಶೇವಃ
– ∪ – –
ಮೀಢ್ವಾ ಅಸ್ಮಾ । ಕಂ ಬಭೂಯಾತ್


ಹೀಗಿದ್ದರೂ ಇಂಥ ವ್ಯತ್ಯಾಸಗಳಿಂದ ಉದಾತ್ತಾದಿಯಾದ ಸ್ವರಸಂಗೀತಕ್ಕೆ ಯಾವ ಆತಂಕವೂ ಉಂಟಾಗುವುದಿಲ್ಲ. ಅಲ್ಲದೆ ಅಕ್ಷರ ನಿಯಮ ಸರಿಹೋಗದ ಕಡೆಗಳಲ್ಲಿ, ಹೆಚ್ಚುಕಡಿಮೆಯ ಅಕ್ಷರ ಸಂಖ್ಯೆಯಿದ್ದಲ್ಲಿ, ಕೆಲವು ಹೊಂದಾಣಿಕೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ.

ಪಾದಕ್ಕೆ 8 ಅಕ್ಷರಗಳ 3 ಪಾದಗಳನ್ನುಳ್ಳ ಉಕ್ತಪಾದ ಗಾಯತ್ರಿಯಲ್ಲದೆ ಅಕ್ಷರ ಸಂಖ್ಯೆಯಲ್ಲಿ ಪಾದಪಾದಕ್ಕೆ ಉಂಟಾಗುವ ವ್ಯತ್ಯಾಸಗಳಿಗೆ ಅನುಗುಣವಾಗಿ ನಾಗೀ ಗಾಯತ್ರಿ, ವಾರಾಹೀ ಗಾಯತ್ರಿ ಮುಂತಾದ ಭೇದಗಳನ್ನು ಮಾಡಿರುವುದು ಕೂಡ ಕಂಡುಬರುತ್ತದೆ: (i) ಚತುಷ್ಪಾದ್ಗಾಯತ್ರಿ : 6×4 (ii) ಪಾದನಿಚೃದ್ಗಾಯತ್ರಿ: 7×3 (iii) ಅತಿಪಾದ ನಿಚೃದ್ಗಾಯತ್ರಿ : 6,8,7=21 (iv) ನಾಗೀಗಾಯತ್ರಿ: 9,9,6=24 (v) ವಾರಾಹೀ ಗಾಯತ್ರಿ: 6,9,9=24 (vi) ವರ್ಧಮಾನಾ ಗಾಯತ್ರಿ: 6,7,8=21 (vii) ಪ್ರತಿಷ್ಠಾ ಗಾಯತ್ರಿ: 8,7,6=21

ಮಾದರಿಗೆ ಪಾದನಿಚೃದ್ಗಾಯತ್ರಿ :
ಪವಸ್ವ ವಿಶ್ವಚರ್ಷ
ಣೇsಭಿ ವಿಶ್ವಾನಿ ಕಾವ್ಯಾ
ಸಖಾ ಸಖಿಭ್ಯಃ ಈಡ್ಯ ॥ (ಋಗ್ವೇದ್ 9–3–66)

ಗಾಯತ್ರಿ ಸಂಬಂಧವಾದ ಇನ್ನೊಂದು ವೈಲಕ್ಷಣ್ಯವೆಂದರೆ, ಗಾಯತ್ರಿಯ ಒಂದು ಅಥವಾ ಒಂದಕ್ಕಿಂತ ಹೆಚ್ಚು ಪಾದಗಳನ್ನು ತ್ರಿಷ್ಟುಪ್, ಜಗತಿ ಮುಂತಾದವುಗಳ ಪಾದಗಳೊಡನೆ ಕೂಡಿಸಿರುವುದು. ಉದಾಹರಣೆಗೆ : (i) ಕಕುಭೋಷ್ಣಿಕ್–ಗಾಯತ್ರಿ, ಜಗತಿ, ಗಾಯತ್ರಿ: ಪುರೋಷ್ಣಿಕ್–ಜಗತಿ, ಗಾಯತ್ರಿ, ಗಾಯತ್ರಿ; ಪರೋಷ್ಣಿಕ್–ಗಾಯತ್ರಿ, ಗಾಯತ್ರಿ, ಜಗತಿ (ii) 4 ಪಾದಗಳ ಬೃಹತಿ–1 ಜಗತಿ+3 ಗಾಯತ್ರಿ, (iii) 4 ಪಾದಗಳ ಪಂಕ್ತಿ–2 ಜಗತಿ + 2 ಗಾಯತ್ರಿ, ಇದೇ ರೀತಿಯಲ್ಲಿ ತ್ರಿಷ್ಟುಪ್ ಮತ್ತು ಗಾಯತ್ರಿಯ ಪಾದಗಳನ್ನೂ ಕೂಡಿಸಿ ಪುರಸ್ತಾಜ್ಜ್ಯೋತಿ (1 ತ್ರಿ + 4 ಗಾ), ಮಧ್ಯೇಜ್ಜ್ಯೋತಿ (2 ಗಾ + 1 ತ್ರಿ + 2 ಗಾ). ಉಪರಿಷ್ಟಾಜ್ಜ್ಯೋತಿ (4 ಗಾ + 1 ತ್ರಿ) ಎಂಬುದಾಗಿ ಭೇದಗಳನ್ನು ಕಲ್ಪಿಸಿರುವುದೂ ಉಂಟು. (ಟಿ.ವಿ.ವಿ.)

**ಗಾರ್ ಮೀನು :** ಬೆಲೋನಿಫಾರ್ಮೀಸ್ ಗಣದ ಬೆಲೋನಿಡೀ ಕುಟುಂಬಕ್ಕೆ ಸೇರಿದ ಕೆಲವು ಜಾತಿಯ ಮೀನುಗಳಿಗಿರುವ ಸಾಮಾನ್ಯ ಹೆಸರು. ಸುರಳಿ, ಕೊಂಟಿ, ಕೊಕ್ಕರೆ ಮೀನು ಎಂದು ಸ್ಥಳೀಯವಾಗಿ ಕರೆಯುತ್ತಾರೆ. ಸ್ಟ್ರಾಂಗಿಲ್ಯೂರ ಸ್ಟ್ರಾಂಗಿಲ್ಯೂರ, ಸ್ಟಾ. ಕ್ರೊಕೊಡೈಲಸ್, ಸ್ಟಾ. ಇನ್ಸಿಸ, ಸ್ಟಾ. ಸಿಕೋನಿಯ, ಕ್ಸಿನೆಂಟಡಾನ್ ಕ್ಯಾನಸಿಲ, ಬೆಲೋನಿ ಮುಂತಾದವು ಪ್ರಮುಖ ಗಾರ್‌ಮೀನುಗಳು. ಇವುಗಳಲ್ಲಿ ಹೆಚ್ಚಿನವು ಸಾಗರವಾಸಿಗಳು. ಕೆಲವು ಸಿಹಿನೀರಿನ ಕೊಳದಲ್ಲೂ, ನದಿಗಳಲ್ಲೂ ವಾಸಿಸುತ್ತವೆ. ಬಲು ಉದ್ದವಾದ ದೇಹ, ಕೊಕ್ಕಿನಂತೆ ಉದ್ದವಾದ ಮೂತಿ, ಸಣ್ಣ ಕಣ್ಣುಗಳು,




ಸಣ್ಣದಾದ ಈಜುರೆಕ್ಕೆಗಳು, ಅಷ್ಟಾಗಿ ಕವಲೊಡೆದಿರದ ಬಾಲದ ಈಜು ರೆಕ್ಕೆ (ಟ್ರಂಕೇಟೆಡ್), ಪಾರ್ಶ್ವರೇಕೆ ಹೆಚ್ಚುಕಡಿಮೆ ಉದರ ಭಾಗದಲ್ಲಿರುವುದು. ಗುದದ ಮತ್ತು ಬೆನ್ನು ಈಜುರೆಕ್ಕೆಗಳು ಬಾಲದ ಈಜುರೆಕ್ಕೆಗೆ ಸಮೀಪದಲ್ಲಿರುವುದು. – ಇವು ಗಾರ್ ಮೀನುಗಳ ಪ್ರಮುಖ ಲಕ್ಷಣಗಳು. ವಿಚಿತ್ರ ಲಕ್ಷಣವೆಂದರೆ ಇವುಗಳ ಮೂಳೆ ಹಸಿರುಬಣ್ಣಕ್ಕಿರುವುದು. ಮೂತಿ ಬಲು ಉದ್ದವಾಗಿ ಚೂಪಾಗಿರುವುದರಿಂದ ಈ ಮೀನನ್ನು ಸೂಜಿ ಮೀನು (ನೀಡಲ್ ಫಿಶ್), ಕೊಕ್ಕು ಮೀನು (ಬಿಲ್ ಫಿಶ್) ಎಂದೂ ಕರೆಯುವುದುಂಟು. ಇವು ಸಾಮಾನ್ಯವಾಗಿ ನೀರಿನ ಮೇಲ್ಮಟ್ಟದಲ್ಲಿ ಈಜುತ್ತ ಇದ್ದು ಆಗಿಂದಾಗ್ಗೆ ನೀರಿನಿಂದ ಮೇಲಕ್ಕೆ ನೆಗೆಯುತ್ತಿರುತ್ತವೆ. ಕ್ಸಿನೆಂಟಡಾನ್ ಕ್ಯಾನಸಿಲ, ಜಾತಿಯ ಮೀನು ಕರ್ನಾಟಕದ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳಲ್ಲಿ ಕಾಣಸಿಗುತ್ತವೆ, ಇದನ್ನು ಸಿಹಿನೀರಿನ ಗಾರ್ ಮೀನು, ಕೊಕ್ಕರೆ ಮೀನು ಎಂದು ಕರೆಯುತ್ತಾರೆ.

ಗಾರ್‌ಮೀನುಗಳು ಮಾಂಸಾಹಾರಿಗಳು; ಹೆರ್ರಿಂಗ್, ಮ್ಯಾಕರಲ್, ಪಿಲ್ಚರ್ಡ್ ಮುಂತಾದ ಇತರ ಜಾತಿಯ ಮೀನುಗಳ ಮರಿಗಳನ್ನು ಹಿಡಿದು ತಿನ್ನುತ್ತವೆ. ಆಹಾರವನ್ನು ಹಿಡಿಯಲು ತಮ್ಮ ಉದ್ದವಾದ ಮೂತಿಯನ್ನು ಕೊಕ್ಕಿನಂತೆ ಬಳಸುತ್ತವೆ. ಕಡಲಿನಿಂದ ಗಾರ್ ಮೀನುಗಳನ್ನು ಅಲ್ಪ ಪ್ರಮಾಣದಲ್ಲಿ ಹಿಡಿಯಲಾಗುತ್ತದೆ. ಗಾರ್ ಮೀನುಗಳ ಮಾಂಸ ಸಾಕಷ್ಟು ರುಚಿಯಾಗಿದ್ದರೂ ಅಷ್ಟಾಗಿ ಹೆಸರುವಾಸಿಯಲ್ಲ. ತಾಜಾ ರೂಪದಲ್ಲಿ ಮಾರಾಟ ಮಾಡಲಾಗುತ್ತದೆ. (ಬಿ.ಎಚ್.ಎಂ.)

**ಗಾರಿಬಾಲ್ಡಿ, ಜೂಸೆಪ್ಪೆ :** 1807–82. ಇಟಲಿಯ ರಾಷ್ಟ್ರಪ್ರೇಮಿ, ಹೋರಾಟಗಾರ, ಗಣರಾಜ್ಯವಾದಿ, ನಾಡಿನ ಏಕೀಕರಣವನ್ನು ಸಾಧಿಸಲು ಬಹು ಮಟ್ಟಿಗೆ ಕಾರಣರಾದವರ ಲ್ಲೊಬ್ಬ. ಇವನು 1807ರ ಜುಲೈ 4ರಂದು ಇಟಲಿ ದೇಶದಲ್ಲಿದ್ದ ಫ್ರಾನ್ಸ್ ಚಕ್ರಾಧಿಪತ್ಯಕ್ಕೆ ಸೇರಿದ ನೀಸ್ ನಗರದಲ್ಲಿ ಜನಿಸಿದ ಮಗ ಪಾದ್ರಿಯಾಗಬೇಕೆಂಬುದು ತಂದೆತಾಯಿಯರ ಅಭಿಲಾಷೆಯಾಗಿತ್ತು. ಆದರೆ ಇವನನ್ನು ಕಡಲು ಆಕರ್ಷಿಸಿತು. ಇವನು ವ್ಯಾಪಾರ ಹಡಗೊಂದರಲ್ಲಿ ಬಹುಕಾಲ ನಾವಿಕನಾಗಿದ್ದ. ಇಟಲಿಯ ಕ್ರಾಂತಿ ನಾಯಕ ಜೂಸೆಪ್ಪೆ ಮಾಟ್ಸೀನಿಯ ಪ್ರಭಾವಕ್ಕೊಳಗಾಗಿ, ಅವನ (ಯಂಗ್ ಇಟಲಿ) ಯುವ ಇಟಲಿ ಸಂಘದ ಸದಸ್ಯನಾದ. ಪೈಮಾಂತೆಯಲ್ಲಿ ಜನರ ಬಂಡಾಯವನ್ನೆಬ್ಬಿಸುವ ಸಂಚೊಂದರಲ್ಲಿ (1834) ಭಾಗವಹಿಸಿದ್ದನೆಂಬುದು ಬಯಲಾದಾಗ ಅವನು ತಪ್ಪಿಸಿಕೊಂಡು ಓಡಿ ಹೋಗಿ ದಕ್ಷಿಣ ಅಮೆರಿಕ ತಲಪಿ, ಅಲ್ಲಿ 1836 ರಿಂದ 1848ರವರೆಗೆ ಅಲೆದಾಡಿದ ಅವನ ಗೈರುಹಾಜರಿಯಲ್ಲಿ ಅವನ ಮೇಲೆ ಮರಣದಂಡನೆಯ ಶಿಕ್ಷೆ ವಿಧಿಸಿತು.

ದಕ್ಷಿಣ ಅಮೆರಿಕದಲ್ಲೂ ಇವನು ಸುಮ್ಮನಿರಲಿಲ್ಲ; ಬ್ರೆಜಿಲ್ ವಿರುದ್ಧ ಬಂಡೆದ್ದಿದ್ದ ರೀಯೊ ಗ್ರಾಂಡೆ ದೂ ಸೂಲ್ ಪರವಾಗಿ ಕಡಲುಗಳ್ಳನಾಗಿ ಕಾರ್ಯಾಚರಣೆ ನಡೆಸಿದ. ಅರ್ಜೆಂಟೀನದ ವಿರುದ್ಧ ಉರುಗ್ವೆಯ ಪರವಾಗಿ ಹೋರಾಡಿದ. ಇವನ ನೆರವಿನಿಂದ 1843ರಲ್ಲಿ ಇಟಾಲಿಯನ್ ರೆಡ್‌ಷರ್ಟ್ ಸೈನ್ಯದಳವೊಂದನ್ನು (ಕೆಂಪಂಗಿಗಳು) ನಿರ್ಮಿಸ ಲಾಯಿತು. ಗೆರಿಲ್ಲಾ ಯುದ್ಧಕಾರ್ಯಾಚರಣೆಯಲ್ಲಿ ಗಾರಿಬಾಲ್ಡಿ ವಿಶೇಷಾನುಭವವನ್ನು ಸಂಪಾದಿಸಿದ್ದು ದಕ್ಷಿಣ ಅಮೆರಿಕದಲ್ಲಿದ್ದಾಗ ಇವನು ಆನ ಮೇರಿಯ ರಿಬೇರೊ ದ ಸಿಲ್ವ ಎಂಬವಳನ್ನು ಎತ್ತಿಕೊಂಡು ಹೋಗಿ, ಆಕೆಯ ಮೊದಲ ಗಂಡ ತೀರಿಕೊಂಡ ಮೇಲೆ ಮದುವೆಯಾದ (1842). ಗಾರಿಬಾಲ್ಡಿಯ ಹೋರಾಟಗಳಲ್ಲಿ ಅವಳೂ ಇವನೊಡನೆ ಇರುತ್ತಿದ್ದಳು. ಆಕೆ 1849ರಲ್ಲಿ ನಿಧನಳಾದಳು.

ಇಟಲಿಯಲ್ಲಿ ಕ್ರಾಂತಿ ಪರಿಸ್ಥಿತಿ ಏರ್ಪಟ್ಟಿದೆಯೆಂಬ ಸುದ್ದಿ ಕೇಳಿ ಗಾರಿಬಾಲ್ಡಿ ತನ್ನ ಕೆಲವು ಅನುಯಾಯಿಗಳೊಂದಿಗೆ 1848ರಲ್ಲಿ ತನ್ನ ನಾಡಿಗೆ ಹಿಂದಿರುಗಿದ. ಇಟಲಿಯ ಎಲ್ಲ ರಾಜ್ಯಗಳಲ್ಲೂ ಬಂಡಾಯಸ್ಥಿತಿಯಿತ್ತು. ಸಾರ್ಡೀನ್ಯಾ ಆಸ್ಟ್ರಿಯಗಳ ನಡುವೆ ಯುದ್ಧ ಆರಂಭವಾಗಿತ್ತು. ಗಾರಿಬಾಲ್ಡಿ ಗಣತಂತ್ರವಾದಿಯಾಗಿದ್ದರೂ ಸಾರ್ಡೀನ್ಯಾದ ದೊರೆಗೆ ನೆರವು ನೀಡಲು ಮುಂದೆ ಬಂದ. ಆದರೆ ದೊರೆ ಇದರಲ್ಲಿ ಉತ್ಸಾಹ ತೋರಲಿಲ್ಲ. ಆದ್ದರಿಂದ ಇವನು ಮಿಲಾನಿನ ನೆರವಿಗೆ ಹೋದ. ಸಾರ್ಡೀನ್ಯ ಮಿಲಾನ್‌ಗಳು ಸೋತವು. ಮಿಲಾನ್ ಶರಣಾಗತವಾಯಿತು. ಗಾರಿಬಾಲ್ಡಿ ಸಣ್ಣ ಪಡೆಯೊಂದಿಗೆ ಬೆಟ್ಟಗಾಡು ಸೇರಿ ಆಸ್ಟ್ರಿಯನರಿಗೆ ಕಿರುಕುಳ ಕೊಡಲು ಯತ್ನಿಸಿದ.



ಆದರೆ ವಿಫಲನಾಗಿ, ಗಡಿ ದಾಟಿ ಸ್ವಿಟ್ಜರ್ಲೆಂಡಿಗೆ ಹೋಗಿ ಅಲ್ಲಿಂದ ನೀಸ್ ತಲುಪಿದ. ಇಟಲಿಯಲ್ಲಿ ಆಗ ಇನ್ನೂ ಕ್ರಾಂತಿಕಾರಿ ಸರ್ಕಾರಗಳು ಉಳಿದಿದ್ದುವು. ಆದರೆ ಅವು ಯಾವುವೂ ಗಾರಿಬಾಲ್ಡಿಯ ನೆರವನ್ನು ಬಯಸಲಿಲ್ಲ. 1848ರ ನವೆಂಬರಿನಲ್ಲಿ 9ನೆಯ ಪೋಪ್ ಪಯಸ್ ರೋಮಿನಿಂದ ಓಡಿ ಹೋದಾಗ ಗಾರಿಬಾಲ್ಡಿ ರೋಮಿನ ಜನರಿಂದ ಆಹ್ವಾನಿತನಾಗಿ ಅದನ್ನು ಪ್ರವೇಶಿಸಿ ಫ್ರೆಂಚರ ಆಕ್ರಮಣ ವನ್ನೆದುರಿಸಿದ. ಆಗ ಇವನ ಧೈರ್ಯಸಾಹಸಗಳೂ ನಾಯಕತ್ವ ಗುಣವೂ ಸಂಘಟನೆಯ ಚಾತುರ್ಯವೂ ಪ್ರಕಾಶಕ್ಕೆ ಬಂದುವು. ಆದರೂ ಕೊನೆಗೆ ಆ ನಗರ ಶತ್ರುಗಳ ವಶವಾಯಿತು. ಫ್ರಾನ್ಸ್, ಆಸ್ಟ್ರಿಯ, ಸ್ಪೇನ್, ನೇಪಲ್ಸ್ ಪಡೆಗಳು ಇವನನ್ನು ಬೆನ್ನಟ್ಟಿದುವು. ಗಾರಿಬಾಲ್ಡಿ ಹೆದರದೆ, ಶರಣಾಗದೆ ಹಿನ್ನಡೆದು ತಪ್ಪಿಸಿಕೊಂಡು ಅಮೆರಿಕಕ್ಕೆ ಹೋದ. ಸ್ವಾತಂತ್ರ್ಯ ಯೋಧನೆಂದೂ ಎರಡು ಪ್ರಪಂಚಗಳ ವೀರನೆಂದೂ ಗಾರಿಬಾಲ್ಡಿ ಪ್ರಖ್ಯಾತನಾದ. 1854ರಲ್ಲಿ ಇಟಲಿಗೆ ಹಿಂದಿರುಗಲು ಇವನಿಗೆ ಅವಕಾಶ ದೊರಕಿತು. ಕಾರ್ಸಿಕ ಸಾರ್ಡೀನ್ಯಾಗಳ ನಡುವಣ ಕಾಪ್ರೇರಾ ದ್ವೀಪದ ಒಂದು ಭಾಗವನ್ನು ಕೊಂಡ. ಅಲ್ಲೆ ನೆಲಸುವುದು ಇವನ ಉದ್ದೇಶ ವಾಗಿತ್ತು. ಅಷ್ಟರಲ್ಲಿ ಮತ್ತೆ ಹೋರಾಟಕ್ಕೆ ಕರೆ ಬಂತು. ಸಾರ್ಡೀನ್ಯಾಗೆ ಆಗ ಕಾವೂರ್ ಪ್ರಧಾನಿಯಾಗಿದ್ದ. ಆಸ್ಟ್ರಿಯದ ವಿರುದ್ಧ ವಾಗಿ ಮಾಡಲಿದ್ದ ಯುದ್ಧದಲ್ಲಿ ಗಾರಿಬಾಲ್ಡಿಯ ನೆರವು ಬಯಸಿದ. ಅಲ್ಲಿಯ ದೊರೆಗೆ ನೆರವು ನೀಡಲು ಗಾರಿಬಾಲ್ಡಿ ಸಿದ್ಧನಿದ್ದನಾದರೂ ದೇಶಭ್ರಷ್ಟನೆನಿಸಿದ್ದ ಇವನಿಗೆ ಮನ್ನಣೆ ನೀಡುವುದು ಕಷ್ಟವಾಗಿತ್ತು. ಅಲ್ಲದೆ ಕಾವೂರ್ ಗಾರಿಬಾಲ್ಡಿಗಳ ಉದ್ದೇಶ ಗಳು ಪರಸ್ಪರ ಭಿನ್ನವಾಗಿದ್ದುವು. ಆದರೂ ಕೊನೆಗೆ ಇವರ ನಡುವೆ ಒಪ್ಪಂದವಾಯಿತು. ದೊರೆ ವಿಕ್ಟರ್ ಇಮ್ಯಾನ್ಯುಯಲ್‌ನ ಅಡಿಯಲ್ಲಿ ಗಾರಿಬಾಲ್ಡಿ

ಮೇಜರ್ ಜನರಲ್ ಆದ. ಇವನ ಸ್ವಯಂಯೋಧರ ಪಡೆ ಆಸ್ಟ್ರಿಯನ್ ಸೇನೆಯ ಹಾದಿ ತಪ್ಪಿಸಿ ಕಾದಿ ಅದನ್ನು ಸೋಲಿಸಿತು. ಆಲ್ಪ್ಸ್ ಪ್ರದೇಶ ವಿಮೋಚನೆಗೊಂಡಿತು. ಶಾಂತಿ ಕೌಲು ಏರ್ಪಟ್ಟಿತು. ಅನಂತರ ಗಾರಿಬಾಲ್ಡಿ ಟಸ್ಕನಿಯ ಕ್ರಾಂತಿಕಾರಿ ಸರ್ಕಾರಕ್ಕೆ ಸಹಾಯ ಸಲ್ಲಿಸಿದ. ಪೋಪ್ ರಾಜ್ಯದ ಮೇಲೂ ಏರಿಹೋಗಲು ಇವನು ಸಿದ್ಧನಾದ. ಅಷ್ಟರಲ್ಲಿ ದೊರೆ ಇಮ್ಯಾನ್ಯುಯಲನಿಂದ ತಡೆ ಬಂತು. ಗಾರಿಬಾಲ್ಡಿ ಮೇಜರ್ ಜನರಲ್ ಹುದ್ದೆಗೆ ರಾಜೀನಾಮೆ ನೀಡಿದ. ಸವಾಯನ್ನೂ ಗಾರಿಬಾಲ್ಡಿಯ ಜನ್ಮ ಸ್ಥಳವಾದ ನೀಸನ್ನೂ ಸಾರ್ಡಿನ್ಯಾ ಸರ್ಕಾರ ಫ್ರಾನ್ಸಿಗೆ ಒಪ್ಪಿಸಿದ್ದರಿಂದ ಇವನಿಗೆ ಕೋಪ ಬಂತು. ಅಲ್ಲಿಯ ಪಾರ್ಲಿಮೆಂಟನ್ನು ಪ್ರವೇಶಿಸಿ ಈ ಕ್ರಮವನ್ನು ಪ್ರತಿಭಟಿಸಿದ.

ನೇಪಲ್ಸ್ ಸಿಸಿಲಿಗಳ ರಾಜನಾಗಿದ್ದ ಎರಡನೆಯ ಫ್ರಾನ್ಸಿಸನ ವಿರುದ್ಧ ಸಿಸಿಲಿಯ ಪ್ರಜೆಗಳು ಬಂಡಾಯ ಹೂಡಿದ್ದರು. ಗಾರಿಬಾಲ್ಡಿ 1860ರ ಮೇ ತಿಂಗಳಲ್ಲಿ ಸಿಸಿಲಿಯ ದಂಡಯಾತ್ರೆಗೆ ಎರಡು ಹಡಗುಗಳಲ್ಲಿ ಸುಮಾರು 1150 ಸ್ವಯಂ ಯೋಧರ ಮುಂದಾಳಾಗಿ ಜಿನೀವದಿಂದ ಹೊರಟ. ಅನಂತರ ಇವರು ಸಹಸ್ರರು ಎಂದು ಪ್ರಸಿದ್ಧರಾದರು. ಕೆಂಪಂಗಿ ಇವರ ಸಮವಸ್ತ್ರ. ವಿಕ್ಟರ್ ಎಮ್ಯಾನ್ಯುಯಲನ ಹೆಸರಿನಲ್ಲಿ ಸಿಸಿಲಿ ದ್ವೀಪದ ಸರ್ವಾಧಿಕಾರಿಯೆಂದು ಗಾರಿಬಾಲ್ಡಿ ಘೋಷಿತನಾದ. ಸಿಸಿಲಿಯಲ್ಲಿದ್ದ ಫ್ರಾನ್ಸಿಸನ 24000 ಸೈನಿಕರನ್ನು ದಿಟ್ಟ ಹೋರಾಟದಿಂದ ಗಾರಿಬಾಲ್ಡಿ ಸೋಲಿಸಿದ. ಅನಂತರ ನೇಪಲ್ಸಿನ ಆಕ್ರಮಣಕ್ಕೆ ಹೋದ. ಅದೂ ಬಹುತೇಕ ಇವನ ವಶವಾಯಿತು. ವಿಕ್ಟರ್ ಎಮ್ಯಾನ್ಯುಯಲ್ ನೇಪಲ್ಸ್ ಪ್ರವೇಶಿಸಿದಾಗ ಅವನೊಂದಿಗೆ ಗಾರಿಬಾಲ್ಡಿಯೂ ಇದ್ದ. ಆದರೆ ದೊರೆಯ ಸನ್ಮಾನವನ್ನು ಸ್ವೀಕರಿಸಲೊಲ್ಲದೆ ಕಾಪ್ರೇರಾಗೆ ಹಿಂದಿರುಗಿದ.

ಗಾರಿಬಾಲ್ಡಿಗೆ ಅಧಿಕಾರದ ಆಸೆ ಸ್ವಲ್ಪವೂ ಇರಲಿಲ್ಲವಾದರೂ ಇವನ ಬಗ್ಗೆ ಇಟಲಿಯ ಸರ್ಕಾರ ಎಂದಿಗೂ ನೆಮ್ಮದಿಯಾಗಿರಲಿಲ್ಲ. ಗಾರಿಬಾಲ್ಡಿಯ ಅನುಯಾಯಿ ಗಳನ್ನು ಸರ್ಕಾರ ಅತ್ಯಂತ ನಿಕೃಷ್ಟವಾಗಿ ಕಾಣುತ್ತಿದ್ದದ್ದು ಗಾರಿಬಾಲ್ಡಿಗೆ ಕೋಪವನ್ನುಂಟು ಮಾಡಿತು. ಗಾರಿಬಾಲ್ಡಿ ಗೆದ್ದ ಪ್ರಾಂತ್ಯಗಳ ಆಡಳಿತ ಸಮರ್ಪಕವಾಗಿರಲಿಲ್ಲ. ಆದ್ದರಿಂದ ಗಾರಿಬಾಲ್ಡಿ ಸರ್ಕಾರವನ್ನು ಕಟುವಾಗಿ ಟೀಕಿಸುತ್ತಿದ್ದ. ಇಟಲಿಯ ಏಕೀಕರಣ ಕಾರ್ಯವನ್ನು ಪೂರ್ಣಗೊಳಿಸುವುದು ಅವನ ಇಚ್ಛೆಯಾಗಿತ್ತು. ರೋಂ ವೆನಿಸ್‍ಗಳ ವಿರುದ್ಧ ಕಾರ್ಯಾಚರಣೆಯಲ್ಲಿ ಇಟಲಿಯ ಸರ್ಕಾರ ಇವನಿಗೆ ಹೆಚ್ಚಿನ ನೆರವು ನೀಡಲಿಲ್ಲ. ಗಾರಿಬಾಲ್ಡಿಯನ್ನೂ ಇವನ ಅನುಯಾಯಿಗಳನ್ನೂ ಅದು ಬಂಧಿಸಿ ವಿಮೋಚನೆಗೊಳಿಸಿತು. ಗಾರಿಬಾಲ್ಡಿ 1864ರಲ್ಲಿ ಲಂಡನಿಗೆ ಹೋದಾಗ ಇವನಿಗೆ ಅದ್ಭುತವಾದ ಸ್ವಾಗತ ದೊರಕಿತು. 1867ರಲ್ಲಿ ಇವನು ಇನ್ನೊಮ್ಮೆ ರೋಮಿನ ಮೇಲೆ ಏರಿ ಹೋದ. ಸರ್ಕಾರ ಇವನನ್ನು ದಸ್ತಗಿರಿ ಮಾಡಿ ಕಾಪ್ರೇರಾಗೆ ಕಳುಹಿಸಿಕೊಟ್ಟಿತು. ಇಟಲಿಯ ಸರ್ಕಾರ ಇವನಿಗೆ ದಿಗ್ಬಂಧನ ವಿಧಿಸಲು ಹವಣಿಸುತ್ತಿದ್ದಾಗ ಇವನು ತಪ್ಪಿಸಿಕೊಂಡು ರೋಂ ಪ್ರದೇಶವನ್ನು ಹೊಕ್ಕ. ಇವನ ಪಡೆಗಳಿಗೆ ಸೋಲಾಯಿತು. ಇವನು ಇಟಲಿಯ ಎಲ್ಲೆಯನ್ನು ದಾಟಿ ಬಂದಾಗ ಸರ್ಕಾರ ಇವನನ್ನು ಮತ್ತೆ ದಸ್ತಗಿರಿ ಮಾಡಿ ಕಾಪ್ರೇರಾಗೆ ಕಳುಹಿಸಿತು. 1870ರಲ್ಲಿ ಗಾರಿಬಾಲ್ಡಿ ಇನ್ನೊಂದು ಸೇನೆಯನ್ನು ಸಜ್ಜುಗೊಳಿಸಿದ. ಫ್ರಾನ್ಸ್ – ಜರ್ಮನಿ ಯುದ್ಧದಲ್ಲಿ ಪರ್ಷಿಯ ವಿರುದ್ಧ ಫ್ರಾನ್ಸಿಗೆ ನೆರವು ನೀಡುವುದು ಉದ್ದೇಶವಾಗಿತ್ತು. ಇವನ ನೆರವು ತುಂಬ ಉಪಯುಕ್ತವೆನಿಸಿತು. ಬಾರ್ಡೋದ ರಾಷ್ಟ್ರೀಯ ಸಭೆಗೆ ಗಾರಿಬಾಲ್ಡಿ ಆಯ್ಕೆ ಹೊಂದಿದ. ಆದರೆ ಅದರಲ್ಲಿರಲಾರದೆ ರಾಜೀನಾಮೆ ಕೊಟ್ಟ. ಅನಂತರ ಇವನು ರಾಜಕೀಯದಲ್ಲಿ ವಿಶೇಷವಾದ ಪಾತ್ರ ವಹಿಸಲಿಲ್ಲ. ಗಾರಿಬಾಲ್ಡಿ ಕಾ ಪ್ರೇರಾದಲ್ಲಿ 1882ರ ಜೂನ್ 2ರಂದು ತೀರಿಕೊಂಡ.

ಗಾರಿಬಾಲ್ಡಿ ಚಿಂತನಪರನಾಗಿರಲಿಲ್ಲ. ಇವನು ಆವೇಶ ಭರದಲ್ಲಿ ಪರಸ್ಪರ ವಿರುದ್ಧವಾದ ಭಾವನೆಗಳನ್ನು ಬೋಧಿಸುತ್ತಿದ್ದದ್ದುಂಟು. ಶಾಸನಸಭೆಗಳಲ್ಲಿ ಇವನಿಗೆ ಹೆಚ್ಚಿನ ನಂಬಿಕೆ ಇರಲಿಲ್ಲ. ಶಾಸನಸಭೆಗಳಲ್ಲಿ ಇವನು ಹೆಚ್ಚು ಕಾಲ ಇರುತ್ತಿರಲಿಲ್ಲ. ಕೆಲವು ವಿಷಯಗಳು ಇವನಿಗೆ ಅರ್ಥವಾಗುತ್ತಿರಲಿಲ್ಲ. ಯುರೋಪಿನಲ್ಲಿ ಶೀಘ್ರವಾಗಿ ಸಂಭವಿಸುತ್ತಿದ್ದ ರಾಜಕೀಯ ಬದಲಾವಣೆಗಳನ್ನು ಇವನು ಅರಿತುಕೊಳ್ಳಲಾರದೆ ಹೋದ. ಇವನು ಮೂಲತಃ ಯೋಧ. ಅಧಿಕಾರಕ್ಕೆ ಆಸೆ ಪಡದೆ ಇಟಲಿಯ ಏಕೀಕರಣ ಸಾಧನೆಗಾಗಿ ನಿರಂತರವಾಗಿ ಶ್ರಮಿಸಿ ಬಹುಮಟ್ಟಿಗೆ ಸಫಲನಾದ ಗಾರಿಬಾಲ್ಡಿಗೆ ಇಟಲಿಯ ಇತಿಹಾಸದಲ್ಲಿ ಹಿರಿಯ ಸ್ಥಾನವಿದೆ. (ಎ.ಎಂ.ಎ.)

**ಸಾಹಿತ್ಯ ಕೃತಿಗಳು :** ಹರಿದು ಹಂಚಿ ಹೋಗಿದ್ದ ಇಟಲಿಯನ್ನು ಸಮಗ್ರ ರಾಷ್ಟ್ರವನ್ನಾಗಿ ಒಂದುಗೂಡಿಸಿದ ಅಪ್ರತಿಮ ಯೋಧ ಗಾರಿಬಾಲ್ಡಿ ತಾನಾಗಿ ಸಾಹಿತಿಯಾಗ ಬಯಸಿದವನಲ್ಲ; ಕತ್ತಿ ಹಿರಿದು ಹೋರಾಡಿದಷ್ಟು ಸುಲಭವಾಗಿ ಲೇಖನಿ ಹಿಡಿದು ಬರೆದವನಲ್ಲ. ಆದರೂ ಈ ಶೂರ ಸೈನಿಕ ಎರಡು ಬಾರಿ ಸಾಹಿತ್ಯ ರಚನೆಗೆ ಕೈಹಾಕಿದ್ದುಂಟು. ಇವನು ತನ್ನ ಸಾಹಸಮಯ ಬದುಕಿನ ವೈವಿಧ್ಯಪೂರ್ಣ ಕಥೆಯನ್ನು ಹೇಳಲು ಒಮ್ಮೆ ಕಾವ್ಯವನ್ನು, ಇನ್ನೊಮ್ಮೆ ಗದ್ಯವನ್ನು ಮಾಧ್ಯಮವಾಗಿ ಬಳಸಿದ. ಗಾರಿಬಾಲ್ಡಿಯ ಆತ್ಮಕಥೆಯಲ್ಲಿ ಎಷ್ಟು ಲೋಪದೋಷಗಳಿದ್ದರೂ ಅದ್ಭುತರಮ್ಯ ವೆನಿಸುವಂಥ ನೂರಾರು ಘಟನೆಗಳಿರುವ ಆ ಗ್ರಂಥ ಓದುಗರ ಕುತೂಹಲವನ್ನು ಕೆರಳಿಸುತ್ತದೆ. ಲೇಖಕ ವಿರಾಮವಾಗಿ ಕುಳಿತು ಸುಸಂಬದ್ಧವಾಗಿ ಬರೆದ ಸಾಹಿತ್ಯಕೃತಿಯಲ್ಲ ಅದು. ಗಾರಿಬಾಲ್ಡಿ ಅದನ್ನು ತನ್ನ ವ್ಯಾಪಕವಾದ ಸಮರ ಚಟುವಟಿಕೆಗಳ ನಡುವೆ ಅಲ್ಪಸ್ವಲ್ಪ ಬಿಡುವು ಸಿಕ್ಕಾಗ ಆಗಾಗ ಬರೆದು ಮುಗಿಸಬೇಕಾಯಿತು. ಇದರಲ್ಲಿ ಇವನು ದಕ್ಷಿಣ ಅಮೆರಿಕ, ಇಟಲಿ ಮತ್ತು ಫ್ರಾನ್ಸ್‍ಗಳಲ್ಲಿ ಕೈಕೊಂಡ ಅಸಾಧಾರಣ ದಂಡಯಾತ್ರೆಗಳನ್ನು, ಸಮರ ಸಾಹಸಗಳನ್ನು, ನೂರೆಂಟು ವೈವಿಧ್ಯಮಯ ಅನುಭವಗಳನ್ನು ನೇರ, ಸರಳ ಶೈಲಿಯಲ್ಲಿ ನಿರೂಪಿಸಿದ್ದಾನೆ. ಈ ಕಥನದಲ್ಲಿ ಇವನ ಉತ್ಕಟ ಸ್ವಾತಂತ್ರ್ಯಾಭಿಲಾಷೆ, ನಿರಂತರ ರಾಷ್ಟ್ರಾಭಿಮಾನ ಇವು ಎದ್ದು ಕಾಣುತ್ತವೆ. ಸೋಲು ಗೆಲುವುಗಳ ಏರಿಳಿತಕ್ಕೆ ಸಿಕ್ಕಿ ಹೊಯ್ದಾಡುತ್ತಿದ್ದ ಇವನ ಜೀವನದಲ್ಲಿ ಸಂಭವಿಸಿದ ಘಟನೆಗಳ ನಿರೂಪಣೆ ಇವನ ಮಾನಸಿಕ ತುಯ್ತವನ್ನು, ವ್ಯಗ್ರತೆಯನ್ನು ಯಥಾವತ್ತಾಗಿ ಪಡಿಮೂಡಿಸುವಂತಿವೆ. ಅತಿಭಾವುಕನೂ ಭಾವೋದ್ವಿಗ್ನನೂ ಆದ ಯೋಧನ ಚಿಂತನಶೀಲತೆ ಅಲ್ಲಲ್ಲಿ ಪುಟಿದೆದ್ದು ನಿರೂಪಣೆಯ ಶೈಲಿಯನ್ನೂ ಕಾವ್ಯಮಯಗೊಳಿಸಿದೆ. ಆತ್ಮವೃತ್ತಾಂತವನ್ನು ತಿಳಿಸುವ ದಿ ಪೊಯೆಮ ಆಟೊಬಯೋಗ್ರಾಫಿಕೊ ಎಂಬ ಸರಳ ರಗಳೆಯ ನೀಳ್ಗವನದಲ್ಲಿ ಗಾರಿಬಾಲ್ಡಿ ತನ್ನ ಹಲವು ವೈಯಕ್ತಿಕ ಅನುಭವಗಳನ್ನು ತೋಡಿಕೊಂಡಿದ್ದಾನೆ. ಅದನ್ನು ಇವನು 1862ರಲ್ಲಿ ಕ್ಯಾಪ್ರೇರಾ ದ್ವೀಪದಲ್ಲಿದ್ದಾಗ ಬರೆದ. ರೋಮ್ ನಗರವನ್ನು ಶತ್ರುಗಳಿಂದ ವಿಮುಕ್ತಿಗೊಳಿಸಲು ಸ್ವಂತ ಪ್ರೇರಣೆಯಿಂದ ನಡೆಸಿದ ಹೋರಾಟ ವಿಫಲಗೊಂಡಾಗ ಇವನಿಗೆ ಉಂಟಾದ ಅತೀವ ನಿರಾಶೆ, ವೇದನೆ, ಕೋಪೋದ್ವೇಗಗಳನ್ನು ಇಲ್ಲಿ ವಿವರಿಸಿದ್ದಾನೆ. ಇದಲ್ಲದೆ ಇವನು ಬೇರೆ ಬೇರೆ ಕವನಗಳನ್ನೂ ಬರೆದನೆಂದು ಹೇಳುವುದುಂಟು. ಆದರೆ ಅವುಗಳಲ್ಲಿ ಹೆಚ್ಚು ಸಾಹಿತ್ಯಕ ಮೌಲ್ಯಗಳಿಲ್ಲವೆಂಬುದು ಸ್ಪಷ್ಟವಾಗಿದೆ. ಇವನು ತನ್ನ ನೀಳ್ಗವನವನ್ನು ಬರೆದದ್ದು ಸಹ ಮನರಂಜನೆಗಲ್ಲ. ಅದರಲ್ಲಿ ಉತ್ಕಟ ಸನ್ನಿವೇಶಗಳಲ್ಲಿ ಸೈನಿಕರನ್ನು ಹುರಿದುಂಬಿಸಲು ಬರೆದ ಯುದ್ಧ ಘೋಷಣೆಗಳಂಥ ಮಾತುಗಳು ಬರುತ್ತವೆ. ರಣದುಂದುಭಿಗಳ ಮೊರೆತವನ್ನು, ಉಕ್ಕುವ ಕಡಲಿನ ಕುದಿತವನ್ನು ಅಲ್ಲಿ ಕೇಳಬಹುದು. ಈ ಕವನದಲ್ಲಿ ಅವನ ರಾಗರಂಜಿತ ಶೈಲಿ ಆಗಾಗ ಭವ್ಯ ಔನ್ನತ್ಯ ಸಾಧಿಸುತ್ತದೆ. ಇವನು ಅಪಾಯದ ಪ್ರಪಾತದಲ್ಲಿ ತೂಗಾಡುತ್ತಿದ್ದರೂ ತನ್ನ ಧೈರ್ಯಶೌರ್ಯಗಳನ್ನು ಪ್ರದರ್ಶಿಸುತ್ತ ತನ್ನ ಸೈನಿಕರನ್ನು, ಅನುಯಾಯಿಗಳನ್ನು ಹೇಗೆ ತನ್ನ ಸಮ್ಮೋಹಕ ವಾಕ್‍ಶಕ್ತಿಯಿಂದ ಸೆಳೆಯುತ್ತಿದ್ದನೆಂಬು ದನ್ನು ಇವನ ಆತ್ಮಕಥೆಯ ನಿರೂಪಣೆಯಲ್ಲಿ ಗುರುತಿಸಬಹುದು. ಸೋತು ಹಿಮ್ಮೆಟ್ಟುತ್ತಿದ್ದ ಸೈನಿಕರನ್ನು ಕುರಿತು ಇವನು 'ನನ್ನ ಹಿಂದೆ ಬರುವ ನೀವು ಹಸಿವು, ನೀರಡಿಕೆ, ಮುಗಿಯದ ಅಲೆತ, ಯುದ್ಧಗಳು, ಸಾವು – ಇವಕ್ಕೆ ಸಿದ್ಧರಾಗಿ ಬನ್ನಿ. ನಾನು ಬೇರೆ ಏನನ್ನೂ ನಿಮಗೆ ನೀಡಲಾರೆ' – ಎಂದು ಘೋಷಿಸಿದ್ದು ಲೋಕವಿಖ್ಯಾತವಾಗಿದೆ. ಗತ್ಯಂತರವಿಲ್ಲದೆ ಕಠೋರ ಸ್ಥಿತಿಯಲ್ಲಿ, ಹತಾಶನಾಗಿ ಮೆಂಟಾನಾ ನಗರವನ್ನು ಕೊನೆಯ ಸಲ ಮುತ್ತುವಾಗ ಇವನ ಸೈನಿಕರಿಗೆ 'ಬನ್ನಿ ನನ್ನ ಜತೆ, ಸಾಯಲು ಸಿದ್ಧರಾಗಿ ಬನ್ನಿ, ಕಾದಿ ಸಾಯೋಣ ಬನ್ನಿ. ಸಾಯಲು ಹೆದರುತ್ತೀರಾ? ಏಕೆ?' – ಎಂದು ಹೇಳಿದ ಮಾತುಗಳಲ್ಲಿ ಕಾವ್ಯದ ಅಸಾಧಾರಣ ಮಿಂಚಿದೆ. (ಎಚ್.ಕೆ.ಆರ್.)

**ಗಾರೇಗಿಡ: ನೋಡಿ – ಇಂಗುದಿ**

**ಗಾರ್ಕಿ :** ರಷ್ಯನ್ ಸೋವಿಯೆತ್ ಸಂಯುಕ್ತ ಸಮಾಜವಾದೀ ಗಣರಾಜ್ಯದ ಒಂದು ಆಡಳಿತವಿಭಾಗ (ಆಬ್ಲಾಸ್ಟ್); ಅದರ ಆಡಳಿತಕೇಂದ್ರ. ಹಿಂದೆ ಇದಕ್ಕೆ ಇದ್ದ ಹೆಸರು ನಿಷ್ನಿನೊವ್‍ಗೊರಾಡ್. ಈ ನಗರದಲ್ಲಿ ಮ್ಯಾಕ್ಸಿಂ ಗಾರ್ಕಿ 1868ರಲ್ಲಿ ಜನಿಸಿದ ಕಾರಣ ಅವನ ಗೌರವಾರ್ಥಕವಾಗಿ 1932ರಲ್ಲಿ ಇದಕ್ಕೆ ಅವನ ಹೆಸರಿಟ್ಟರು. ಇದು ಮಾಸ್ಕೋ ನಗರದ ಪೂರ್ವಕ್ಕೆ 416 ಕಿಮೀ ದೂರದಲ್ಲಿ ವೋಲ್ಗ ಮತ್ತು ಓಕ ನದಿಗಳ ಸಂಗಮ ಸ್ಥಳದಲ್ಲಿದೆ. ವೋಲ್ಗ ಬಯಲಲ್ಲಿ ರಷ್ಯನರ ವಸಾಹತುಗಳು ಸ್ಥಾಪಿತವಾದ ಕಾಲದಲ್ಲಿ 1221ರಲ್ಲಿ ಈ ನಗರವನ್ನು ವ್ಲಾಡಿಮೀರ್ ದೊರೆ ಯೂರಿ ಸೆವೊಲೊಡೋವಿಚ್ ಸ್ಥಾಪಿಸಿದ. ಈ ನಗರ ಬಾಲ್ಟಿಕ್ ಪ್ರದೇಶದಿಂದ ಮಧ್ಯ ಏಷ್ಯಕ್ಕೆ ಹೋಗುವ ಹೆದ್ದಾರಿಯ ಪ್ರಮುಖ ಸ್ಥಳದಲ್ಲಿದೆ. ವೋಲ್ಗ ನದಿಯ ಮೂಲಕ ಮಾಸ್ಕೋ ಪ್ರದೇಶಕ್ಕೂ ಕಾಮಾ ನದಿಯ ಮೂಲಕ ಯೂರಲ್ ಸೈಬೀರಿಯ ಪ್ರಾಂತ್ಯಗಳಿಗೂ ಸಂಪರ್ಕವಿದೆ. 1392ರಲ್ಲಿ ಇದನ್ನು ಮಾಸ್ಕೋ ನಗರಪಾಲಿಕೆಯೊಡನೆ ಸಂಘಟಿಸಲಾಯಿತು.

ಈ ನಗರವನ್ನು ಕೇಂದ್ರವನ್ನಾಗಿ ಮಾಡಿಕೊಂಡು 1469ರಲ್ಲಿ 3ನೆಯ ಇವಾನನೂ 1552ರಲ್ಲಿ 4ನೆಯ ಇವಾನನೂ ಟಾರ್ಟರರ ಮೇಲೆ ದಾಳಿ ನಡೆಸಿದರು. 16ನೆಯ ಶತಮಾನದಲ್ಲಿ ರಷ್ಯನರು ವೋಲ್ಗ ಬಯಲನ್ನು ವಶಮಾಡಿಕೊಂಡ ಮೇಲೆ ನಗರದ ವಾಣಿಜ್ಯ ಅಭಿವೃದ್ಧಿ ಹೊಂದಿತು. 1817ರಲ್ಲಿ ಇಲ್ಲಿ ಪ್ರಾರಂಭವಾದ ವಾರ್ಷಿಕ ಜಾತ್ರೆ

ರಷ್ಯದ ಅತ್ಯಂತ ದೊಡ್ಡ ಜಾತ್ರೆಯಾಗಿ ರಷ್ಯನ್ ಕ್ರಾಂತಿಯವರೆಗೆ ಮುಂದುವರಿಯಿತು. ಇಲ್ಲಿಗೆ ಯುರೋಪ್ ಮತ್ತು ಏಷ್ಯ ಖಂಡಗಳಿಂದ ವ್ಯಾಪಾರಿಗಳು ಬರುತ್ತಿದ್ದರು.

20ನೆಯ ಶತಮಾನದ ಎರಡು ಮಹಾಯುದ್ಧಗಳಿಂದ ಈ ನಗರಕ್ಕೆ ಕೈಗಾರಿಕಾ ಪ್ರಾಮುಖ್ಯ ಪ್ರಾಪ್ತವಾಗಿ ಅನೇಕ ದೊಡ್ಡ ಕಾರ್ಖಾನೆಗಳು ಇಲ್ಲಿ ಸ್ಥಾಪನೆಯಾದವು. ಗಾರ್ಕಿ ಮೋಟಾರುವಾಹನಗಳ ಕಾರ್ಖಾನೆಯಲ್ಲಿ ವೋಲ್ಗ ಮೋಟಾರುಗಳು ತಯಾರಾಗುತ್ತವೆ. 1849ರಲ್ಲಿ ಸ್ಥಾಪಿತವಾದ ಹಡಗುಕಟ್ಟೆಯಲ್ಲಿ ಆವಿ ಮತ್ತು ಡೀಸೆಲ್ ಎಂಜಿನ್ನುಗಳನ್ನು ಜೋಡಿಸಿದ ನೌಕೆಗಳು ನಿರ್ಮಾಣವಾಗುತ್ತವೆ. ಭಾರವಾದ ಸರಕುಗಳನ್ನು ಎತ್ತುವ ಯಂತ್ರ, ಮಂಜುಗಡ್ಡೆ ಒಡೆಯುವ ಯಂತ್ರ, ಚೌಬೀನೆ ಕತ್ತರಿಸುವ ಮತ್ತು ಕಾಗದ ತಯಾರಿಕೆಯ ಯಂತ್ರ ಮೊದಲಾದವು ಈ ನಗರದಲ್ಲಿ ತಯಾರಾಗುತ್ತವೆ. ಬಟ್ಟೆ, ಪಾದರಕ್ಷೆ, ಪ್ಲಾಸ್ಟಿಕ್ ಸಾಮಾನು, ಪೀಠೋಪಕರಣ, ಮೋಟಾರು ವಾಹನಗಳಿಗೆ ಉಪಯೋಗಿಸುವ ಗಾಜು ಇವು ಇಲ್ಲಿಯ ಇತರ ಉತ್ಪನ್ನಗಳು. ನಗರದಲ್ಲಿ ಎರಡು ಉಷ್ಣ ವಿದ್ಯುತ್ ಉತ್ಪಾದನ ಕೇಂದ್ರಗಳುಂಟು. ನಗರಕ್ಕೆ ರೈಲು, ನದಿ, ರಸ್ತೆ ಮತ್ತು ವಿಮಾನಗಳ ಮೂಲಕ ಪ್ರಯಾಣಸೌಲಭ್ಯವಿದೆ. ಪ್ರವ್‌ಡಿನ್ಸ್ಕ್, ಪವ್‌ಲೋವೊ ಮತ್ತು ಬೋರ್ ಉಪನಗರಗಳಿಗೆ ರೈಲುಮಾರ್ಗಗಳಿವೆ.

ಗಾರ್ಕಿ ನಗರದಲ್ಲಿ 1918ರಲ್ಲಿ ಲೋಬಚೆಫ್ಸ್ ಕಿ ರಾಜ್ಯ ವಿಶ್ವವಿದ್ಯಾಲಯ ಸ್ಥಾಪಿತವಾಯಿತು. ಕೃಷಿ, ವೈದ್ಯ ಹಾಗೂ ಎಂಜಿನಿಯರಿಂಗ್ ಉಚ್ಚ ಶಿಕ್ಷಣ ಸಂಸ್ಥೆಗಳೂ ರಾಜ್ಯದ ಕಲಾ ವಸ್ತುಸಂಗ್ರಹಾಲಯವೂ ಇಲ್ಲಿವೆ. ಇಲ್ಲಿಯ ನಾಟಕಶಾಲೆ 1798ರಲ್ಲಿ ಸ್ಥಾಪಿತವಾಯಿತು. 14ನೆಯ ಶತಮಾನದ ಕೋಟೆ (ಕ್ರೆಮ್ಲಿನ್) ಈ ನಗರದ ಇತಿಹಾಸ ಪ್ರಸಿದ್ಧ ಕಟ್ಟಡಗಳಲ್ಲಿ ಒಂದು.

ಗಾರ್ಕಿ ಆಬ್ಲಾಸ್ಟಿನ ವಿಸ್ತೀರ್ಣ 72200 ಚ.ಕಿಮೀ ವೋಲ್ಗ ನದಿ ಇದರ ನಡುವೆ ಹರಿಯುತ್ತದೆ. ಉತ್ತರಾರ್ಧ ಮೈದಾನ. ಇಲ್ಲಿ ವೆಟ್ಲುಗ, ಕರ್ಜೆನೆಟ್ಸ್ ಪ್ರವಹಿಸುತ್ತವೆ. ದಕ್ಷಿಣಾರ್ಧ ಹೆಚ್ಚು ಎತ್ತರ. ಇಲ್ಲಿ ವಾಯುಗುಣ ಖಂಡಾಂತರ ಮಾದರಿಯದು. ರೈ, ಓಟ್ಸ್, ವಸಂತಗೋದಿ, ಬಕ್‌ವ್ಹೀಟ್, ಆಲೂಗಡ್ಡೆ, ಫ್ಲಾಕ್ಸ್, ಮೆಕ್ಕೆಜೋಳ ಮುಖ್ಯ ಧಾನ್ಯಗಳು. (ವಿ.ಜಿ.ಕೆ.)

**ಗಾರ್ಕಿ, ಮ್ಯಾಕ್ಸಿಂ :** 1868 – 1936. ಸೋವಿಯೆತ್ ರಷ್ಯದ ಅತಿ ಸಾಮಾನ್ಯ ಕುಟುಂಬದಲ್ಲಿ ಬಡಗಿಯೊಬ್ಬನ ಮಗನಾಗಿ ಜನಿಸಿ ಕೀರ್ತಿಯ ಶಿಖರವನ್ನೇರಿದ ಪ್ರತಿಭಾವಂತ ಸಾಹಿತಿ. ಮ್ಯಾಕ್ಸಿಂ ಗಾರ್ಕಿ ಎಂಬುದು ಕಾವ್ಯನಾಮ; ನಿಜವಾದ ಹೆಸರು ಅಲೆಕ್ಸಿಮ್ಯಾಕ್ಸಿಮೋವಿಚ್ ಪೆಷ್ಕೋವ್. ಇವನು ರಷ್ಯದ ನಿಷ್ನಿನೊವ್‌ಗೊರಾಡ್‌ನಲ್ಲಿ 1868ರ ಮಾರ್ಚ್ 28ರಲ್ಲಿ ಜನಿಸಿದ. ತಂದೆ ಕಾಲರ ರೋಗದಿಂದ ಅಸುನೀಗಿದಾಗ ಈತನಿನ್ನೂ ಮೂರು ವರ್ಷದ ಹುಡುಗ. ಇದರಿಂದಾಗಿ ಗಾರ್ಕಿ ಬಾಲ್ಯದ ದಿನಗಳನ್ನು ತನ್ನ ಅಜ್ಜನ ಮನೆಯಲ್ಲಿ ಕಳೆದ. ತನ್ನ ಎಳೆಯ ವಯಸ್ಸಿನಿಂದಲೇ ಗಾರ್ಕಿ ಜೀವನೋಪಾಯಕ್ಕಾಗಿ ದುಡಿಯಲು ಪ್ರಾರಂಭಿಸಬೇಕಾಯಿತು. ತಾರುಣ್ಯದಲ್ಲಿ ಅಲೆಮಾರಿಯಾಗಿ ವೋಲ್ಗಾ ನದಿಯ ಮಧ್ಯಪ್ರದೇಶಗಳಿಂದ ಹಿಡಿದು ಕಾಕಸಸ್ ಪ್ರದೇಶದವರೆಗೆ ತಿರುಗಾಡಿದ. ಈ ಪರ್ಯಟನೆಗಳಲ್ಲಿ ನಾನಾ ಉದ್ಯೋಗಗಳನ್ನು ಕೈಗೊಂಡ. ಪಾತ್ರೆ ತೊಳೆಯುವವನಾಗಿ, ವಕೀಲನ ಕಾರಕೂನನಾಗಿ, ರೊಟ್ಟಿ ಬೇಯಿಸುವವನಾಗಿ ತನ್ನ ಪಾಲಿಗೆ ಬಂದ ಎಲ್ಲ ಉದ್ಯೋಗಗಳಲ್ಲೂ ದುಡಿದ. ಇದೇ ಕಾಲದಲ್ಲಿ ನಾನಾ ರೀತಿಯ ಜನಗಳ, ಬೀದಿಹೋಕರ, ಹೊಲಸುಕೇರಿ ನಿವಾಸಿಗಳ, ಕೂಲಿಕಾರರ, ಬುದ್ಧಿಜೀವಿಗಳ – ನಿಕಟ ಪರಿಚಯವನ್ನು ಪಡೆದ. ಕಜ಼ಾನ್ ನಗರದಲ್ಲಿ ಈತ ಕೆಲವು ಬುದ್ಧಿಜೀವಿಗಳು ನಡೆಸುತ್ತಿದ್ದ ರಾಜಕೀಯ ವಿಚಾರಗೋಷ್ಠಿಯನ್ನು ಸೇರಿ ಮಾರ್ಕ್ಸ್‌ವಾದದ ಮೂಲಸೂತ್ರದ ದರ್ಶನವನ್ನಲ್ಲದೆ ಅರ್ಥಶಾಸ್ತ್ರದ ಅರಿವನ್ನೂ ಪಡೆದುಕೊಂಡ. ಈ ಅಲೆಮಾರಿ ಜೀವನದಲ್ಲಿ ಪಡೆದ ಅನುಭವಗಳೇ ಮುಂದಿನ ಸಾಹಿತ್ಯ ಜೀವನದ ಮೂಲಾಧಾರವಾದುವು. ಉದ್ದಾಮ ವ್ಯಕ್ತಿತ್ವ, ಅದ್ಭುತ ಪ್ರತಿಭೆ ಮತ್ತು ತೀವ್ರ ಕಾಲ್ಪನಿಕ ಶಕ್ತಿಗಳೊಂದಿಗೆ ಜೀವನದ ಬಹುಮುಖವೂ ಆಳವಾದ ಅನುಭವವೂ ಸೇರಿತಾಗಿ ಗಾರ್ಕಿ ಉತ್ತಮ ಸಾಹಿತ್ಯವನ್ನು ನಿರ್ಮಾಣ ಮಾಡಿದ.



ಗಾರ್ಕಿ ತನ್ನ ಲೇಖನ ಜೀವನವನ್ನು ಪ್ರಾರಂಭಿಸಿದ ಕಾಲ ಅತ್ಯಂತ ಕ್ರಾಂತಿಕಾರಿ ಸನ್ನಿವೇಶಗಳಿಂದ ಕೂಡಿತ್ತು. ಕಾರ್ಮಿಕ ಚಟುವಟಿಕೆಗಳು ಚುರುಕಿನಿಂದ ಮುನ್ನಡೆಯುತ್ತಿದ್ದವು. ಲೆನಿನ್ ಪಕ್ಷ ತನ್ನ ಚಟುವಟಿಕೆಗಳನ್ನು ಪ್ರಾರಂಭಿಸಿತ್ತು. ಗಾರ್ಕಿ ತನ್ನ ಪರ್ಯಟನೆಯ ಕಾಲದಲ್ಲಿ ಟಿಫ್ಲಿಸ್ ನಗರದಲ್ಲಿದ್ದಾಗ ಅಲ್ಲಿನ ರೈಲ್ವೆ ವರ್ಕ್‌ಷಾಪಿನಲ್ಲಿ ಕೆಲಸಕ್ಕೆ ಸೇರಿದ. ಅಲ್ಲಿನ ಶ್ರಮಜೀವಿಗಳ ಕ್ರಾಂತಿಕಾರಿ ತಂಡದ ಸದಸ್ಯನಾಗಿ ಕೈಗಾರಿಕಾ ಕೂಲಿಕಾರರ ಜೀವನದ ಪರಿಚಯ ಪಡೆದ. ಇಲ್ಲಿ ಈತನಿಗೆ ಕಾಲುಜ್ನಿ ಎಂಬ ಜನನಾಯಕನ ಪರಿಚಯವಾಯಿತು. ಗಾರ್ಕಿ ತನ್ನ ಅನುಭವಗಳನ್ನೆಲ್ಲ ಬರೆಯಲು ಈತ ಪ್ರೇರೇಪಿಸಿದ. ಗಾರ್ಕಿಯ ಮೊದಲ ಕತೆಯಾದ ಮಕರಚುದ್ರಾ ಪ್ರಕಟವಾದದ್ದು ಟಿಫ್ಲಿಸ್‌ನ ಕಾವ್‌ಕಾಜ಼್ ಪತ್ರಿಕೆಯಲ್ಲಿ. ಈ ಕತೆ ಗಾರ್ಕಿ (ಗಾರ್ಕಿ ಎಂದರೆ ಕಟು ಎಂದು ಅರ್ಥ) ಎಂಬ ಗುಪ್ತನಾಮದಲ್ಲಿ ಪ್ರಕಟವಾಯಿತು. ಅನಂತರ ಇದೇ ಇವನ ಶಾಶ್ವತ ನಾಮವಾಗಿ ಉಳಿಯಿತು.

ಟಿಫ್ಲಿಸ್ ನಗರ ಬಿಟ್ಟಮೇಲೆ ಗಾರ್ಕಿ ತನ್ನ ಹುಟ್ಟು ಊರಾದ ನಿಷ್ನಿನೊವ್ ಗೊರಾಡ್‌ಗೆ ವಾಪಸಾದ (ಇದರ ಈಗಿನ ಹೆಸರು ಗಾರ್ಕಿ). ಇಲ್ಲಿ ಈತನಿಗೆ ರಷ್ಯದ ಸುಪ್ರಸಿದ್ಧ ಸಾಹಿತಿ ಕೊರೆಲೆಂಕೊನ ಪರಿಚಯವಾಯಿತು. ಆತ ಗಾರ್ಕಿಯ ಲೇಖನ ಕಲೆ ಮುಂದೆ ಸಾಗಲು ಬಹಳ ಸಹಾಯ ಮಾಡಿದ. ಗಾರ್ಕಿಯ ಕಥೆಗಳು ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗಲು ಪ್ರಾರಂಭವಾಯಿತು. ಮೊತ್ತ ಮೊದಲ ಕಥಾಸಂಕಲನ ಪ್ರಕಟವಾದದ್ದು 1898ರಲ್ಲಿ. ಹೀಗೆ ರಷ್ಯನ್ ಸಾಹಿತ್ಯ ಕ್ಷೇತ್ರದಲ್ಲಿ ಗಾರ್ಕಿಯ ಹೆಸರು ಅಡಿಯೂರಿತು.

ಗಾರ್ಕಿಯ ಕತೆಗಳೆಲ್ಲವೂ ಪ್ರಚಂಡ ಕಾರ್ಮಿಕ ಮುನ್ನಡೆಯಿಂದ ಸಚೇತನಗೊಂಡ ಜನತೆಯ ಮನೋಭಾವದ ಚಿತ್ರಗಳಿಂದ ತುಂಬಿವೆ. ಇವನ ಮೊದಲ ಕೃತಿಗಳು ಸಮಾಜದ ಅತ್ಯಂತ ಕೀಳುವರ್ಗದ ಜನತೆಯ – ಅಂದರೆ ದಿನಗೂಲಿಯವರ, ಅಲೆಮಾರಿಗಳ, ಸ್ವಪ್ನಜೀವಿಗಳ ಮತ್ತು ಬಂಡಾಯಕೋರರ – ಉಜ್ವಲವಾದ ಭಾವನಾತ್ಮಕ ಚಿತ್ರಗಳಿಂದ ಕೂಡಿವೆ. ಗಾರ್ಕಿ ದೀನದಲಿತರ ಜೀವನದ ಕಷ್ಟಕಾರ್ಪಣ್ಯಗಳ ವಾಸ್ತವಚಿತ್ರಣದಿಂದ ತೃಪ್ತನಾಗುವುದಿಲ್ಲ. ಮಾನವ ಜೀವನದ ಘನೋದ್ದೇಶವನ್ನು, ಮಾನವ ವಿಕಾಸದ ನೀತಿನಿಯಮಗಳನ್ನು ಕುರಿತು ಆಳವಾಗಿ ವಿಚಾರ ಮಾಡುತ್ತಾನೆ. ಜೀವನದ ಸತ್ಯಸಂಗತಿಗಳ ಗ್ರಹಿಕೆ, ವ್ಯಾಪಕತೆಗಳಿಗಷ್ಟೇ ಗಮನ ಕೊಡದೆ ಈ ರೀತಿಯ ಜೀವನಕ್ಕೆ ಕಾರಣವೇನು ಅದರಿಂದ ಪಾರಾಗಲು ಮಾರ್ಗವೇನು ಎಂಬುದನ್ನು ಕುರಿತು ವಿಶ್ಲೇಷಿಸುತ್ತಾನೆ. ಈ ಸೌಂದರ್ಯರಹಿತ ಜೀವನವನ್ನು ಈ ವಾತಾವರಣದಿಂದ ಮೇಲೆತ್ತಿ ಅವರಲ್ಲಿ ಜೀವನದ ಸೌಂದರ್ಯ ಮತ್ತು ಸದ್ಗುಣಗಳ ಬಗೆಗೆ ಅರಿವನ್ನುಂಟು ಮಾಡಿ ಅವರನ್ನು ಕ್ರಿಯಾಶೀಲರಾಗುವಂತೆ ಹುರಿದುಂಬಿಸುವ ಹೊಸ ಮಾರ್ಗವನ್ನು ಪ್ರತಿಪಾದಿಸುತ್ತಾನೆ. ಆದುದರಿಂದಲೇ ಅನೇಕ ವೇಳೆ ಗಾರ್ಕಿಯ ಕಥಾವ್ಯಕ್ತಿಗಳು ಜೀವನದ ಧ್ಯೇಯವನ್ನು ಕುರಿತು ಉದ್ದುದ್ದ ಭಾಷಣಗಳನ್ನು ಮಾಡುವುದಲ್ಲದೆ ಓದುಗರಿಗೆ ಅನೇಕ ಪ್ರಶ್ನೆಗಳನ್ನು ಕೇಳಿ ಅವುಗಳಿಗೆ ತಾವೇ ಉತ್ತರ ನೀಡುತ್ತವೆ.

ಇವನ ಪ್ರಖ್ಯಾತ ನಾಟಕವಾದ ದಿ ಲೋಯರ್ ಡೆಪ್ತ್ಸ್‌ನಲ್ಲಿ (1902) ಕ್ರಾಂತಿಯ ಭಾವನೆ ಅತ್ಯಂತ ಪ್ರಭಾವಯುತವಾಗಿ ಮೂಡಿಬಂದಿದೆ. ಜ಼ಾರನ ರಷ್ಯದಲ್ಲಿ ಇದರ ಪ್ರದರ್ಶನವನ್ನು ಬಹಿಷ್ಕರಿಸಲಾಗಿತ್ತಾದರೂ ಇದನ್ನು ಜಗತ್ತಿನ ಎಲ್ಲ ಮಹಾನಗರಗಳಲ್ಲೂ ಪ್ರದರ್ಶಿಸಲಾಗಿದೆ. ಇದರಲ್ಲಿ ಬರುವ ಪಾತ್ರಗಳು – ಕಳ್ಳರು, ವೇಶ್ಯೆಯರು, ವರ್ಗಬಾಹಿರ ಶ್ರೀಮಂತರು – ಒಂದು ಕಿಕ್ಕಿರಿದ ವಠಾರದಲ್ಲಿ, ದುರ್ಗಂಧ ವಾತಾವರಣದಲ್ಲಿ, ಜೀವಿಸುತ್ತಿರುವ ದೃಶ್ಯ ಪ್ರೇಕ್ಷಕರನ್ನು ಕುರಿತು ಇಂಥ ಪರಿಸ್ಥಿತಿ ಖಂಡಿತ ಮುಂದುವರಿಯಕೂಡದು ಎಂದು ಒಕ್ಕೊರಲಿನಲ್ಲಿ ಸಾರಿ ಹೇಳುತ್ತದೆ. ಪಾಲಿಗೆ ಬಂದದ್ದು ಪಂಚಾಮೃತವೆಂದು ನಮ್ರರಾಗಿ ತೃಪ್ತಿಕರ ಜೀವನವನ್ನು ನಡೆಸಿರಿ ಎಂದು ಬೋಧಿಸುತ್ತಿದ್ದ ಲೂಕನನ್ನು ವಠಾರದ ನಿವಾಸಿಗಳು ಅದರಲ್ಲೂ ವಿಶೇಷವಾಗಿ ತನ್ನ ದುರದೃಷ್ಟವನ್ನು ಹೋರಾಟವಿಲ್ಲದೆ ಒಪ್ಪಿಕೊಳ್ಳುವ ಭಾವನೆಯೇ ಇಲ್ಲದಿದ್ದ ಸ್ಯಾಟಿನ್ ಎಂಬ ದಂಗೆಕೋರ ಕುಡುಕ ವಿರೋಧಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ.

ಇದರಷ್ಟೇ ಪ್ರಖ್ಯಾತವಾದ ಗಾರ್ಕಿಯ ಕಾದಂಬರಿ 'ತಾಯಿ' (ಮದರ್) ಕೂಡ ಇದೇ ರೀತಿಯ ಭಾವಪೂರ್ಣ ವಿಚಾರಗಳಿಂದ ಕೂಡಿದೆ. ಈ ಕಾದಂಬರಿ ರಷ್ಯದ ಕಾರ್ಮಿಕ ಜೀವನವನ್ನು ಮತ್ತು ಅಲ್ಲಿನ ಕಾರ್ಮಿಕರು ನಡೆಸಿದ ಹೋರಾಟವನ್ನು ಕುರಿತದ್ದು. ಕಾರ್ಮಿಕರು ಕ್ರಾಂತಿಕಾರಿ ಹೋರಾಟದಲ್ಲಿ ಹೇಗೆ ಆಧ್ಯಾತ್ಮಿಕ ಮನೋಭಾವನೆಗಳನ್ನು ವ್ಯಕ್ತಪಡಿಸುತ್ತಾರೆ ಎಂಬುದೇ ಈ ಕಾದಂಬರಿಯ ಗುರಿ. ಇದರಲ್ಲಿ ಪಾವೆಲ್ ವ್ಲಾಸೋವ್ ಮತ್ತು ಅವನ ತಾಯಿ ನಿಲೋವ್ನ ತಮ್ಮ ಹೋರಾಟದ ಜೀವನದಲ್ಲಿ ಹೇಗೆ ಸತ್ಯ ಮತ್ತು ಸೌಂದರ್ಯದ ಅರಿವನ್ನು ಪಡೆಯುತ್ತಾರೆ, ಹೋರಾಟ ಹೇಗೆ ಅವರ ನೀರಸ ಕಷ್ಟಮಯ ಜೀವನವನ್ನು ಶ್ರೀಮಂತವಾಗಿ ಮಾರ್ಪಡಿಸುತ್ತದೆ – ಎಂಬುದರ ಚಿತ್ರಣವಿದೆ.

ಈ ಕೃತಿಯಿಂದ ಸಮಾಜವಾದೀ ವಾಸ್ತವತೆಯ ನಾಂದಿಯಾಯಿತು.

ರಷ್ಯದ ಎರಡು ಸಾಹಿತ್ಯಕ ಯುಗಗಳ ನಡುವಣ ಜೀವಂತ ಸೇತುವೆಯಂತೆ ತೋರುವ ಗಾರ್ಕಿಯ ಪಾತ್ರ 'ತಾಯಿ' ಕಾದಂಬರಿಯಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ, ಐತಿಹಾಸಿಕ ಮುನ್ನಡೆಯೆಂದರೆ ಮಾನವನ ಹಿತಸಾಧನೆ ಎಂಬುದನ್ನು ಸ್ಪಷ್ಟಪಡಿಸಿರುವುದೇ ಈ ಕಾದಂಬರಿಯ ಹಿರಿಮೆ. ಇದು ಬರಿಯ ನೊಂದಜೀವಿಗಳ ವಾಸ್ತವಿಕ ಚಿತ್ರಣ ಮಾತ್ರವಲ್ಲ, ಅವರು ತಮ್ಮ ಹೋರಾಟದ ಮೂಲಕ ಪ್ರಪಂಚವನ್ನು ಯಾವ ರೀತಿ ಮಾರ್ಪಡಿಸಲು ಸನ್ನದ್ಧರಾಗಿದ್ದಾರೆ ಎಂಬುದನ್ನು ಇದು ವಿವರಿಸುತ್ತದೆ. ಲೆನಿನ್ 1907ರ ಮೇ ತಿಂಗಳಲ್ಲಿ ಲಂಡನಿನಲ್ಲಿ ನಡೆದ ರಷ್ಯದ ಸೋಷಿಯಲ್ ಡೆಮೋಕ್ರಾಟಿಕ್ ಪಕ್ಷದ ಐದನೆಯ ಅಧಿವೇಶನದಲ್ಲಿ ಗಾರ್ಕಿಯನ್ನು ಸಂಧಿಸಿದಾಗ ಈ ಕಾದಂಬರಿಯನ್ನು ರಚಿಸಿದುದಕ್ಕಾಗಿ, ಸಕಾಲದಲ್ಲಿ ಪ್ರಕಟಿಸಿದುದಕ್ಕಾಗಿ ಈತನನ್ನು ಬಹುವಾಗಿ ಅಭಿನಂದಿಸಿದನೆನ್ನಲಾಗಿದೆ. ಗಾರ್ಕಿಯ ಕೃತಿಗಳಲ್ಲಿ ರಷ್ಯದ ಕಾರ್ಖಾನೆಗಳ, ಮಾಲೀಕರ, ವರ್ತಕರ, ಶ್ರೀಮಂತರ ಮತ್ತು ಬುದ್ಧಿಜೀವಿಗಳ ಚಿತ್ರಗಳನ್ನೂ ಕಾಣಬಹುದು. ಈ ವರ್ಗದ ವ್ಯಕ್ತಿಗಳನ್ನು ಚಿತ್ರಿಸುವಾಗ ಗಾರ್ಕಿ ಅವರನ್ನು ಬಂಡವಾಳಗಾರರೆಂಬ ಕಾರಣದಿಂದ ಮಾತ್ರ ಅವಹೇಳನ ಮಾಡುವುದಿಲ್ಲ. ಗಾರ್ಕಿಯ ಇತರ ಕಾದಂಬರಿಗಳಾದ ದಿತ್ರಿ, ಪೋಮಾಗಾರ್ದೇವ್, ದಿ ಲೈಫ್ ಆಫ್ ಮಾತ್ವೆ ಕೋಷ್ಮಿಯಾಕಿನ್ ಮತ್ತು ಆರ್ತ ಮನೋವ್ಸ್‌ಗಳು ಕ್ರಾಂತಿಪೂರ್ವ ರಷ್ಯದ ಒಡೆಯರ ಜೀವನವನ್ನು ಕುರಿತವುಗಳು. ಅನೇಕ ವೇಳೆ ಈ ಕಾದಂಬರಿಗಳಲ್ಲಿ ಬರುವ ವ್ಯಕ್ತಿಗಳು ದೃಢನಿಶ್ಚಯದಿಂದ ಕೆಲಸ ಮಾಡತಕ್ಕವರು, ಸಾಹಸಿಗಳು, ಕ್ರಿಯಾಶೀಲರು ಮತ್ತು ಸ್ವಪ್ರಯತ್ನದಿಂದ ಮಹತ್ತರವಾದ ಕೆಲಸಗಳನ್ನು ಸಾಧಿಸಿದವರು. ಈ ವರ್ಗದವರನ್ನು ಚಿತ್ರಿಸುವಾಗ ಅವರನ್ನು ನಿಂದಿಸುವುದಾಗಲೀ ಅವಹೇಳನಕ್ಕೆ ಗುರಿ ಮಾಡುವುದಾಗಲಿ ಗಾರ್ಕಿಯ ಉದ್ದೇಶವಲ್ಲ. ಇಂಥ ಜನರ ಜೀವನವನ್ನು ಬಂಡವಾಳ ಸಮಾಜ ಯಾವ ರೀತಿ ವಿರೂಪಗೊಳಿಸುತ್ತದೆ, ಅವರ ಆತ್ಮವನ್ನು ಯಾವ ರೀತಿ ಕುಂಠಿಸುತ್ತದೆ, ಹಣದ ಗಳಿಕೆಯ ಆಸೆ ಹೇಗೆ ಅವರನ್ನು ಕ್ರೂರಿಗಳನ್ನಾಗಿ ಮಾಡುತ್ತದೆ – ಎಂಬುದನ್ನು ಇವನ ಕೃತಿಗಳು ಸಾಹಿತ್ಯಕವಾಗಿ ಪ್ರತಿಬಿಂಬಿಸುತ್ತವೆ. ಆರ್ತಮನೋವ್ಸ್ ಕಾದಂಬರಿ ರಷ್ಯದ ವರ್ತಕವರ್ಗದ ಮೂರು ಪೀಳಿಗೆಗಳ ಜೀವನವನ್ನು ಒಳಗೊಂಡಿದೆ. ಈ ಕುಟುಂಬದ ಯಜಮಾನ ಇಲ್ಯ ಆರ್ತಮನೋವ್ ತನ್ನ ಸ್ವಂತ ನೆಲದಲ್ಲಿಯೇ ಬೆಳೆದು ಅಚಲವಾಗಿ ನಿಂತಿರುವ ಓಕ್ ಮರದಂತೆ ದೃಢನಾಗಿರುತ್ತಾನೆ. ಆತ ತನ್ನ ಹಣ, ಕಾಲ ಮತ್ತು ದುಡಿಮೆಗಳನ್ನು ತನ್ನ ಊರನ್ನು ಸಂಪದ್ಯುಕ್ತವಾದ ಪಟ್ಟಣವಾಗಿ ಮಾರ್ಪಡಿಸಲು ಸಂಕಲ್ಪ ಉಳ್ಳವನು. ಆದರೆ ಅವನ ಚಟುವಟಿಕೆಗಳೆಲ್ಲ ಶೋಷಣೆಯ ಆಧಾರದ ಮೇಲೆ ನಿಂತಿರುತ್ತವೆ. ಅವನ ಮಕ್ಕಳು ಮತ್ತು ಮೊಮ್ಮಕ್ಕಳು ಕ್ರಮೇಣ ಸೋಮಾರಿಗಳಾಗಿ, ಧ್ಯೇಯರಹಿತ ಜೀವನದ ಕೆಸರಿನಲ್ಲಿ ಬಿದ್ದು ಅಲ್ಪರಾಗುತ್ತಾರೆ. ವ್ಯಕ್ತಿ ತನಗೆ ತಾನೇ ಎಷ್ಟೇ ಉನ್ನತಸತ್ತ್ವನಾಗಿದ್ದರೂ ಸಾಮಾಜಿಕ ಅರ್ಥವ್ಯವಸ್ಥೆ ಶೋಷಣಾತ್ಮಕವಾದಾಗ ಅದರಿಂದ ಅವನೂ ಪಾರಾಗಲಾರದೆ ಅವನ ಭಾವೀ ಸಂತಾನವೆಲ್ಲ ವ್ಯರ್ಥಜೀವಿಗಳಾಗಿ ಪತನಗೊಳ್ಳುತ್ತಾರೆಂಬುದನ್ನೂ ಈ ಕಾದಂಬರಿಯಲ್ಲಿ ಸಾಂಕೇತಿಸಲಾಗಿದೆ. ಗಾರ್ಕಿಯ ಕಡೆಯ ಮತ್ತು ಬಹು ದೊಡ್ಡ ಕೃತಿಯಾದ ಕ್ಲಿಂ ಸಾಮ್‌ಗಿನ್ನನ ಜೀವನ – ಎಂಬುದು ಒಬ್ಬ ವ್ಯಕ್ತಿ ಹೇಗೆ ತನ್ನ ಸ್ವಪ್ರತಿಷ್ಠೆ ಮತ್ತು ಅಲ್ಪತೆಯಿಂದ ಅರಿವಿಲ್ಲದೆಯೆ ತನ್ನ ಜೀವನವನ್ನು ವಿಷಪೂರಿತವನ್ನಾಗಿ ಮಾಡಿಕೊಳ್ಳುತ್ತಾನೆ ಎಂಬುದನ್ನು ಕುರಿತದ್ದು. 1880ರಿಂದ 1917ರ ವರೆಗಿನ ಅವಧಿಯ ರಷ್ಯದ ವಿಸ್ತೃತ ದೃಶ್ಯವನ್ನು ನೀಡುವ ಈ ಕಾದಂಬರಿಯ ನಾಯಕ ಕ್ಲಿಂ ಸಾಮ್‌ಗಿನ್. ಇವನೊಬ್ಬ ವಿಷಯ ಲಂಪಟ, ಸ್ವಪ್ರತಿಷ್ಠೆಯಿಂದ ಕೂಡಿದ ವಕೀಲ. ಇವನದು ಬಾಲ್ಯದಿಂದಲೂ ಯಾವ ಮಾತಿಗೂ ಸಿಕ್ಕಿಬೀಳದ, ಯಾವ ತತ್ವಕ್ಕೂ ತೆಕ್ಕೆಬೀಳದ ಯಾವ ಪ್ರಶ್ನೆಗೂ ಖಚಿತ ಉತ್ತರ ನೀಡದ ಪ್ರಕೃತಿ. ಸದಾ ತಾನು ಅನಾಥರಕ್ಷಕನೆಂದು ಬಡಾಯಿ ಕೊಚ್ಚುತ್ತಿರುತ್ತಾನೆ. ಆದರೆ ಇವನ ಜೀವನದ ಆಧಾರ ಶ್ರೀಮಂತರ ನೆರವು. ಇವನು ಹುಟ್ಟು ಗೋಸುಂಬೆ, ಸ್ವಾರ್ಥಿ. ಯಾವಾಗಲೂ ತನ್ನ ಯೋಗಕ್ಷೇಮಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡುತ್ತಾನೆ. ತಾನು ಎಲ್ಲರ ಪಕ್ಷಪಾತಿಯೆಂದು ನಟಿಸುತ್ತಾನೆ. ಆದರೆ ಯಾರ ಸಹಾಯಕ್ಕೂ ಒಂದು ಹುಲ್ಲುಕಡ್ಡಿಯನ್ನೂ ಎತ್ತುವುದಿಲ್ಲ. ಎಂಥ ಸನ್ನಿವೇಶಕ್ಕಾದರೂ ಹೊಂದಿಕೊಳ್ಳುವ ಚಾತುರ್ಯ ಇವನಲ್ಲಿದೆ. ಆದರೆ ಇವನಲ್ಲಿ ಮಾನವೀಯತೆ ಎಳ್ಳಷ್ಟೂ ಕಾಣುವುದಿಲ್ಲ. ಇವನ ನಿತ್ಯಜೀವನ ಕಪಟ ಮತ್ತು ಮೋಸದಿಂದ ತುಂಬಿದೆ.

ಗಾರ್ಕಿ ಈ ಕಾದಂಬರಿಯ ಮೂಲಕ ಪ್ರತಿಗಾಮಿ ಶಕ್ತಿಗಳ ವಿರುದ್ಧವಾದ ಮಹತ್ತರವಾದ ಹೋರಾಟ ನಡೆಸಿದ್ದಾನೆ. ಬಂಡವಾಳ ಅರ್ಥವ್ಯವಸ್ಥೆಯಲ್ಲಿ ಮಾನವ ಎಷ್ಟು ಕೀಳುಮಟ್ಟವನ್ನು ತಲುಪಬಲ್ಲ ಎಂಬುದನ್ನು ಕುರಿತ ಇಂಥ ಇನ್ನೊಂದು ಕಾದಂಬರಿ ಇದುವರೆಗೂ ಪ್ರಾಯಶಃ ರಚಿತವಾಗಿಲ್ಲ.

ಗಾರ್ಕಿ ಕೇವಲ ಸಾಹಿತಿಯಾಗಿಯೇ ಉಳಿಯಲಿಲ್ಲ. ತನ್ನ ಕಾಲದ ರಾಜಕೀಯ ಪ್ರಶ್ನೆಗಳನ್ನು ಕುರಿತು ಅನೇಕ ಉಜ್ಜ್ವಲ ಲೇಖನಗಳನ್ನು ಪ್ರಾವ್ಡಾ ಮತ್ತು ಇಜ್ವೆಸ್ತಿಯಾ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾನೆ. ರಾಜಕೀಯ ಹೋರಾಟದಲ್ಲಿ ಭಾಗವಹಿಸಿದ್ದಾನೆ. 1905ರ ಜನವರಿ ಒಂಬತ್ತರಂದು ನಡೆದ ಹತ್ಯಾಕಾಂಡದ ಪ್ರತ್ಯಕ್ಷದರ್ಶಿಯಾದ ಗಾರ್ಕಿ ಅದನ್ನು ಖಂಡಿಸಿದ್ದಾನೆ. ಇದಕ್ಕಾಗಿ ಗಾರ್ಕಿಯನ್ನು ಬಂಧಿಸಿ ಗಡೀಪಾರು ಮಾಡಿದರು. ಜ಼ಾರ್ ಸರ್ಕಾರದ ಈ ಕೃತ್ಯ ಯುರೋಪನ್ನೆಲ್ಲ ಕದಡಿತು. ಯುರೋಪಿನ ಎಲ್ಲ ನಗರಗಳಲ್ಲೂ ಇದರ ವಿರುದ್ಧ ಸಭೆಗಳು ನಡೆದವು. ಫ್ರೆಂಚ್ ಮಹಾ ಸಾಹಿತಿ ಅನತೋಲ್ ಫ್ರಾನ್ಸ್ ಗಾರ್ಕಿಯಂಥ ಮನುಷ್ಯ ಪ್ರಪಂಚಕ್ಕೆ ಸೇರಿದವನು, ಪ್ರಪಂಚವೆಲ್ಲ ಅವನ ಸಹಾಯಕ್ಕಾಗಿ ಏಳಬೇಕು – ಎಂದು ಘೋಷಿಸಿದ. ಗಾರ್ಕಿ 1906–1913ರ ವರೆಗೆ ವಿದೇಶಗಳಲ್ಲಿ ವಾಸಿಸಿದ. ಇವನು 1921 ರಿಂದ 1928ರ ವರೆಗೆ ಇಟಲಿಯಲ್ಲಿ ವಾಸಿಸುತ್ತಿದ್ದ. ರಷ್ಯಕ್ಕೆ ಹಿಂತಿರುಗಿದ ಅನಂತರ ರಷ್ಯದ ಲೇಖಕರ ನಿರ್ವಿವಾದ ನಾಯಕನಾದ. 1934ರಲ್ಲಿ ಸೋವಿಯಟ್ ಲೇಖಕರ ಒಕ್ಕೂಟ ಸ್ಥಾಪನೆಯಾದಾಗ ಪ್ರಥಮ ಅಧ್ಯಕ್ಷನಾದ. ಇವನು 1936ರ ಜೂನ್ 14ರಂದು ನಿಷ್ನಿನೊವ್‌ಗೊರಾಡ್‌ನಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆಯುತ್ತಿರುವಾಗಲೇ ನಿಧನ ಹೊಂದಿದ.

ಗಾರ್ಕಿ ಸಾಮಾಜಿಕ ಕಾದಂಬರಿಗಳನ್ನು ರಚಿಸಿದ ಸಾಹಿತಿ ಮಾತ್ರವಲ್ಲ. ಅವನ ಉದ್ದೇಶ ಸಮಾಜದ ಭವಿಷ್ಯವನ್ನು ರೂಪಿಸುವ ಹಲವಾರು ಕಾರ್ಯವಿಶೇಷಗಳನ್ನೂ ನಿರೂಪಿಸುವುದು. ಈತ ಸಾಹಿತ್ಯರಂಗವನ್ನು ಪ್ರವೇಶಿಸಿದ ಕಾಲದಲ್ಲಿ ಬರೆಹಗಾರರು ಜನತೆಯನ್ನು ಕರುಣಮಿಶ್ರಿತ ಸಹಾನುಭೂತಿಯಿಂದ ನಿರೂಪಿಸುವುದು ವಾಡಿಕೆಯಾಗಿತ್ತು. ಗಾರ್ಕಿ ಈ ಮಾರ್ಗವನ್ನು ಸಂಪೂರ್ಣವಾಗಿ ತ್ಯಜಿಸಿ ಜನತೆ ತಮ್ಮ ಕತೆಯನ್ನು ತಾವೇ ಹೇಳಿದರೆ ಯಾವ ರೀತಿ ಇರುತ್ತದೋ ಆ ರೀತಿಯಲ್ಲಿ ತನ್ನ ಕೃತಿಗಳನ್ನು ರಚಿಸಿದ. ಶುದ್ಧಕಲೆಯ ತತ್ತ್ವಗಳನ್ನು ಗಾರ್ಕಿ ಒಪ್ಪಲಿಲ್ಲ. ಅಂದಿನ ರಷ್ಯದ ಭಯಂಕರ ಅನಾಗರಿಕ ಸಮಾಜವನ್ನು ಕಟುವಾಗಿ ಟೀಕಿಸಿ ತನ್ಮೂಲಕ ರಷ್ಯದ ಜನತೆಯಲ್ಲಿ ತನಗಿದ್ದ ಉಜ್ಜ್ವಲ ವಿಶ್ವಾಸವನ್ನು ಗಾರ್ಕಿ ಪ್ರಕಟಿಸಿದ್ದಾನೆ. ಕಷ್ಟಕಾರ್ಪಣ್ಯಗಳಿಂದ ತುಂಬಿದ ನೀರಸ ಜೀವನವನ್ನು ಪ್ರತಿಭಟಿಸಿ ನಿರೋಧಿಸುವ ಸಲುವಾಗಿ ತನ್ನ ಜೀವನವನ್ನೇ ಮುಡುಪಾಗಿಟ್ಟಿರುವುದಾಗಿ ಗಾರ್ಕಿ ಹೇಳಿಕೊಂಡಿದ್ದಾನೆ. ಗಾರ್ಕಿಗೆ ಮಾನವನಲ್ಲಿ ಹಾಗೂ ಅವನಲ್ಲಿ ಅಡಗಿರುವ ಅದ್ಭುತ ಕ್ರಿಯಾಶಕ್ತಿಯಲ್ಲಿ ಅಚಲವಾದ ನಂಬಿಕೆಯಿತ್ತು. ತಾನು ಹೇಳಬೇಕಾದುದನ್ನು ಗಾರ್ಕಿ ಎಂದಿಗೂ ಹೇಳದೆ ಇರುತ್ತಿರಲಿಲ್ಲ; ಅಥವಾ ಹೇಳುವಾಗ ಅದನ್ನು ಅಸ್ಪಷ್ಟವಾಗಿ ಅನ್ಯೋಕ್ತಿಗಳ ಸಹಾಯದಿಂದ ಮಸುಕುಮಸುಕಾಗಿ ಹೇಳುತ್ತಿರಲಿಲ್ಲ. ಈತನ ಭಾವನೆಗಳು ಸದಾ ಪರಿಶುದ್ಧ ಮತ್ತು ಶಕ್ತಿಯುತವಾಗಿರುತ್ತಿದ್ದುವು. ವಿಚಾರಧಾರೆ ಪ್ರಸ್ತುತ ಹಾಗೂ ಭವಿಷ್ಯದ ಇತಿಹಾಸಗಳ ಮೇಲೆ ಆಧಾರಿತವಾಗಿರುತ್ತಿತ್ತು. ಮನಃಪಟಲದಲ್ಲಿ ಈ ಯುಗದ ಸಮಸ್ಯೆಗಳು ಮತ್ತು ಭಾವನೆಗಳು ತುಂಬಿರುತ್ತಿದ್ದವು.

ಗಾರ್ಕಿ ಒಂದು ಅರ್ಥದಲ್ಲಿ ವಿಶಿಷ್ಟ ರೀತಿಯ ಬರೆಹಗಾರ. ತನ್ನ ಬರೆಹಗಳಲ್ಲಿ ಇವನು ರಷ್ಯದ ಸಾಹಿತ್ಯದಲ್ಲಿ ಪರಿಪಕ್ವವಾಗುತ್ತ ಬಂದಿದ್ದ ಎಲ್ಲ ಪ್ರಗತಿಶೀಲ ಭಾವನೆಗಳನ್ನೂ ವಿಚಾರಧಾರೆಯನ್ನೂ ಮೂರ್ತೀಭವಿಸಿಕೊಂಡು ಅದರ ಮುನ್ನಡೆಗೆ ಕಾರಣನಾದ. ಪುಷ್ಕಿನ್‌ನಿಂದ ಈಚೆಗೆ ಯಾವ ರಷ್ಯನ್ ಬರೆಹಗಾರನೂ ಇವನಂತೆ ಜೀವನದಲ್ಲಿ ಆಸಕ್ತಿಯನ್ನು ಪ್ರದರ್ಶಿಸಲಿಲ್ಲ. ಮಾನವನ ಜೀವನವನ್ನು ಸುಖಮಯವನ್ನಾಗಿ ಮಾಡಲು ಅವರನ್ನು ಸಂಘಟಿಸಲು, ಕ್ರಿಯಾಶೀಲರನ್ನಾಗಿ ಮಾಡಲು ಗಾರ್ಕಿ ತನ್ನ ಲೇಖಣಿಯನ್ನು ಉಪಯೋಗಿಸಿದ. ಇದಕ್ಕಿಂತ ಹೆಚ್ಚಾಗಿ ನೇರವಾಗಿ ಜನಗಳಿಂದ, ಕಾರ್ಮಿಕ ಚಳವಳಿಯಿಂದ, ಲೆನಿನ್ನನಿಂದ ಪಡೆದುಕೊಂಡ ನವೀನ ಭಾವನೆಗಳಿಂದ ರಷ್ಯದ ಸಾಹಿತ್ಯವನ್ನು ಸಂಪದ್ಭರಿತವಾಗಿ ಮಾಡಿದುದಲ್ಲದೆ ಜನತೆಯ ಕ್ರಾಂತಿಗರ್ಭದಲ್ಲಿ ಜನ್ಮತಾಳಿದ ಈ ಭಾವನೆಗಳನ್ನು ಲೇಖನಗಳಲ್ಲಿ, ಕಾದಂಬರಿಗಳಲ್ಲಿ, ನಾಟಕಗಳಲ್ಲಿ ಮತ್ತು ಕಥೆಗಳಲ್ಲಿ ಅಭಿವೃದ್ಧಿಗೊಳಿಸಿದ; ಹಿಂದಿನ ಯಾವ ಬರೆಹಗಾರನೂ ತೋರದಿದ್ದ ರೀತಿಯಲ್ಲಿ ಸಮಾಜವಾದಿ ನವೀಕರಣದ ಅವಶ್ಯಕತೆಯನ್ನು ತೋರಿಸಿಕೊಟ್ಟ.

ಹೀಗೆ ಸಾಹಿತ್ಯದಲ್ಲಿ ಸಮಾಜವಾದಿ ವಾಸ್ತವತೆಯ ನಿರೂಪಣೆಯ ಸ್ಥಾಪಕನಾದ ಗಾರ್ಕಿಯನ್ನು ಹೊಸ ರಷ್ಯನ್ ಸಾಹಿತ್ಯದ ಪಿತನೆಂದು ಗೌರವಿಸುವುದು ಸ್ವಾಭಾವಿಕವೇ ಆಗಿದೆ.

(ಡಿ.ಆರ್.ಕೆ.;ಜಿ.ಎಚ್.ಆರ್.)

**ಗಾರ್ಗಿ :** ಬ್ರಹ್ಮಜಿಜ್ಞಾಸೆಯಲ್ಲಿ ಆಸಕ್ತಳಾಗಿದ್ದ ಒಬ್ಬ ಮಹಿಳೆ. ಗರ್ಗ ವಂಶದವಳು. ಮಹರ್ಷಿ ಮಿಥಿಲೆಯ ಜನಕಮಹಾರಾಜ ತಾನು ಕೈಕೊಂಡ ಯಜ್ಞ ಪೂರ್ತಿಯಾದ ಅನಂತರ ಸಂತುಷ್ಟಬ್ರಹ್ಮಸಭೆಯನ್ನುದ್ದೇಶಿಸಿ ಬ್ರಹ್ಮಿಷ್ಠನಾದವನು ಸುವರ್ಣಾಲಂಕೃತವಾದ ಸಾವಿರ ಆಕಳುಗಳನ್ನು ಕೊಂಡೊಯ್ಯಲಿ ಎಂದಾಗ ಯಾಜ್ಞವಲ್ಕ್ಯ ಋಷಿ ಮುಂದೆ ಬಂದನಷ್ಟೆ. ಆಗ ಯಾಜ್ಞವಲ್ಕ್ಯನ ಬ್ರಹ್ಮಜ್ಞಾನವನ್ನು ಕುರಿತು ಪ್ರಶ್ನಿಸಹೊರಟವರಲ್ಲಿ 6ನೆಯವಳಾಗಿ ಗಾರ್ಗಿ ಬರುತ್ತಾಳೆ. ಎಲ್ಲವನ್ನೂ ಆವರಿಸಿದ್ದು ಎನ್ನಲಾದ ನೀರು

ಯಾವುದರಿಂದ ಆವೃತವಾಗಿದೆ–ಎಂದು ಮುಂತಾಗಿ ಅವಳು ಪ್ರಶ್ನಿಸುತ್ತಾಳೆ. ಕೊನೆಗೆ ಬ್ರಹ್ಮನನ್ನು ತರ್ಕದಿಂದ ಅರಿಯಲಸಾಧ್ಯ, ವಿಪರೀತ ಪ್ರಶ್ನಿಸಿದರೆ ತಲೆ ಸಿಡಿದೀತು ಎಂದು ಯಾಜ್ಞವಲ್ಕ್ಯ ಹೇಳಿದಾಗ ಸುಮ್ಮನಾಗುತ್ತಾಳೆ.

ಏಳನೆಯವನಾಗಿ ಪ್ರಶ್ನಿಸಿದ ಉದ್ದಾಲಕನೂ ಸೋತಮೇಲೆ, ತಡೆಯಲಾರದೆ, ಬ್ರಹ್ಮಸಭೆಯ ಅಪ್ಪಣೆಯೊಂದಿಗೆ ಗಾರ್ಗಿ ಮತ್ತೆರಡು ಪ್ರಶ್ನೆಗಳನ್ನು ಕೇಳುತ್ತಾಳೆ.

ಸ್ವರ್ಗಮರ್ತ್ಯಗಳನ್ನು ಸದಾಕಾಲವೂ ಆವರಿಸಿದ್ದು ಯಾವುದು–ಎಂಬ ಪ್ರಶ್ನೆಗೆ ಯಾಜ್ಞವಲ್ಕ್ಯನಿಂದ ಆಕಾಶವೆಂಬ ಉತ್ತರ ಸಿಗುತ್ತದೆ. ಆಕಾಶವನ್ನು ಆವರಿಸಿದ್ದು ಯಾವುದು–ಎಂಬ ಪ್ರಶ್ನೆಗೆ ಆಕಾಶವನ್ನು ಯಾವುದು ತಾನೇ ಆವರಿಸಬಲ್ಲದು–ಎಂಬ ಪ್ರಶ್ನೆಯಿಂದಲೇ ಯಾಜ್ಞವಲ್ಕ್ಯ ಉತ್ತರಿಸುತ್ತಾನೆ.

ಆಕಾಶ ಎಲ್ಲದರಲ್ಲಿದ್ದು ಎಲ್ಲವನ್ನೂ ಮೀರಿದ್ದು; ಬ್ರಹ್ಮನನ್ನು ಸಂಪೂರ್ಣವಾಗಿ ಅರಿಯುವುದು ಯಾರಿಂದಲೂ ಎಂದಿಗೂ ಸಾಧ್ಯವಿಲ್ಲ ಎಂದು ಮುಂತಾದ ಯಾಜ್ಞವಲ್ಕ್ಯನ ನುಡಿಗಳಿಂದ ಗಾರ್ಗಿ ಸಮಾಧಾನ ಹೊಂದಿ ಯಾಜ್ಞವಲ್ಕ್ಯನನ್ನು ಬ್ರಹ್ಮಿಷ್ಠನೆಂದು ಮನ್ನಿಸಲು ಸಭೆಯನ್ನು ಕೇಳಿಕೊಳ್ಳುತ್ತಾಳೆ. (ಜಿ.ಕೆ.ಎಚ್.)

**ಗಾರ್ಗ್ಯ[1] :** ಒಬ್ಬ ಪ್ರಸಿದ್ಧ ಪ್ರಾಚೀನ ವೈಯಾಕರಣಿ. ಈತ ನಿರುಕ್ತವನ್ನು ಕುರಿತ ಗ್ರಂಥವನ್ನು ರಚಿಸಿದ್ದಿರಬಹುದೆಂದು ಹೇಳಲಾಗಿದೆ. ವೇದಾಂಗ – ಶಿಕ್ಷಾ ಭಾಗಗಳಾಗಿರುವ ಪ್ರಾತಿಶಾಖ್ಯಗಳಲ್ಲಿ ಈತನ ಹೆಸರು ಕಂಡುಬರುತ್ತದೆ. ಸುಪ್ರಸಿದ್ಧ ನಿರುಕ್ತಕಾರನಾದ ಯಾಸ್ಕ (ಪ್ರ.ಶ.ಪೂ. ಸು. 600) ತನ್ನ ನಿರುಕ್ತದಲ್ಲಿ ಸೂಚಿಸಿರುವ ಮತ್ತು ಅವನಿಗಿಂತಲೂ ಮೊದಲಿನವರಾಗಿದ್ದ ವ್ಯಾಕರಣಾಚಾರ್ಯರಲ್ಲಿ ಗಾರ್ಗ್ಯನೂ ಒಬ್ಬನಾಗಿದ್ದಾನೆ. ಈತನ ಹೆಸರು ಕಂಡುಬರುವ ಮತ್ತೊಂದು ಮುಖ್ಯ ಗ್ರಂಥವೆಂದರೆ ಪಾಣಿನಿಯ ಅಷ್ಟಾಧ್ಯಾಯೀ (ಪ್ರ.ಶ.ಪೂ. ಸು. 400). ಈ ಗ್ರಂಥಗಳು ಸಾಮಾನ್ಯವಾಗಿ ವೈದಿಕಸ್ವರಗಳ ವಿಚಾರಕ್ಕೆ ಸಂಬಂಧಪಟ್ಟಂತೆ ಈತನ ಹೆಸರನ್ನು ಸೂಚಿಸುತ್ತವೆ.

ನಾಮಪದಗಳೆಲ್ಲವೂ ಆಖ್ಯಾತಗಳಿಂದ (ಕ್ರಿಯಾಸೂಚಕ ಧಾತುಗಳು) ನಿಷ್ಪನ್ನವಾಗುತ್ತವೆಂದೂ ಅದು ಆಚಾರ್ಯ ಶಾಕಟಾಯನನ ಹಾಗೂ ನೈರುಕ್ತ ಸಿದ್ಧಾಂತವೆಂದೂ ಯಾಸ್ಕ ಪ್ರತಿಪಾದಿಸಿದ್ದಾನೆ. ಯಾಸ್ಕನೇ ಹೇಳಿರುವ ಪ್ರಕಾರ, ಕೆಲವು ವೈಯಾಕರಣರಂತೆ ಗಾರ್ಗ್ಯನೂ ಎಲ್ಲ ನಾಮಪದಗಳೂ ಧಾತು ನಿಷ್ಪನ್ನವಾಗಲಾರವೆಂಬ ಅಭಿಪ್ರಾಯವುಳ್ಳವನಾಗಿದ್ದಾನೆ. (ಬಿ.ಕೆ.ಎಸ್.)

**ಗಾರ್ಗ್ಯ[2] :** ಒಬ್ಬ ಋಷಿ. ರಾಮಾಯಣದ ಪ್ರಕಾರ ಅಂಗಿರಸನ ವಂಶದವ. ಕೇಕಯ ದೇಶದ ಅಧಿಪತಿಯಾಗಿದ್ದ ಈತ ಯುಧಾಜಿತನ ಪುರೋಹಿತ. ಗಂಧರ್ವ ದೇಶವನ್ನು ಗೆಲ್ಲುವ ಉದ್ದೇಶದಿಂದ ಯುಧಾಜಿತ ಹತ್ತು ಸಾವಿರ ಕುದುರೆಗಳನ್ನೂ ಅನೇಕ ರತ್ನಾಭರಣಗಳನ್ನೂ ಈತನ ಮೂಲಕ ಶ್ರೀರಾಮನಿಗೆ ಕಾಣಿಕೆಯಾಗಿ ಕೊಟ್ಟಿದ್ದ.

ಹರಿವಂಶದ ಪ್ರಕಾರ ಗಾರ್ಗ್ಯನ ವೇಣುಹೊತ್ರನ ಮಗ. ಪಾಂಡವರ ಮೂಲ ಪುರುಷನಾದ ಜನಮೇಜಯರಾಯ ಗಾರ್ಗ್ಯ ಮಗನನ್ನು ಹಿಂಸೆಮಾಡಿ ಬ್ರಹ್ಮಹತ್ಯೆಗೆ ಗುರಿಯಾಗಿ ಶೌನಕ ಮುನಿಯ ಮೂಲಕ ಯಜ್ಞ ಮಾಡಿಸಿ ಆ ಪಾತಕವನ್ನು ಕಳೆದುಕೊಂಡ. *

**ಗಾರ್ಡನ್, ಚಾರಲ್ಸ್ ವಿಲಿಯಮ್ :** 1860–1937. ಕೆನಡದ ಪಾದ್ರಿ, ಜನಪ್ರಿಯ ಕಾದಂಬರಿಕಾರ. ರಾಲ್ಫ್ ಕೊನಾರ್ ಎಂಬ ಗುಪ್ತನಾಮದಿಂದ ಈತ ತನ್ನ ಕಾದಂಬರಿಗಳನ್ನು ಪ್ರಚುರಪಡಿಸಿದ್ದಾನೆ. ತಂದೆ ಹೈಲ್ಯಾಂಡ್ ಸ್ಕಾಟಿಷ್ ಪ್ರೆಸ್ಬಿಟೀರಿಯನ್ ಪಂಗಡದ ಪಾದ್ರಿಯಾಗಿದ್ದ. 1883ರಲ್ಲಿ ಟರಾಂಟೋ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದ ಅನಂತರ ನಾಕ್ಸ್ ಕಾಲೇಜಿನಲ್ಲೂ ಎಡಿನ್‌ಬರೊ ವಿಶ್ವವಿದ್ಯಾಲಯದಲ್ಲೂ ದೇವತಾಶಾಸ್ತ್ರವನ್ನು ವ್ಯಾಸಂಗ ಮಾಡಿದ. 30ನೆಯ ವಯಸ್ಸಿನಲ್ಲಿ ಕೆನಡದ ರಾಕೀಸ್ ಪ್ರದೇಶದಲ್ಲಿ ಗಣಿಕಾರ್ಮಿಕರ ಮತ್ತು ಮರ ಕಡಿಯುವವರ ಜೊತೆಯಲ್ಲಿ ಮೂರು ವರ್ಷ ಕ್ರೈಸ್ತಧರ್ಮ ಪ್ರಚಾರಕನಾಗಿ ದುಡಿದ. ಒಂದನೆಯ ಮಹಾಯುದ್ಧದಲ್ಲಿ ಪಾದ್ರಿಯಾಗಿ ಕೆನಡದ ಕಡಲಪಡೆಯಲ್ಲಿ ಸೇವೆ ಮಾಡಿದ. ಗ್ಲೆನ್‌ಗ್ಯಾರಿಯಲ್ಲಿ ಕಳೆದ ಬಾಲ್ಯದ ನೆನಪುಗಳೂ ಆಮೇಲೆ ಧರ್ಮಬೋಧಕನಾಗಿ ಪಡೆದ ಅನುಭವಗಳೂ ಈತನ ಕಾದಂಬರಿಗಳಿಗೆ ಸಾಮಗ್ರಿಯಾದವು.

ಬಿಯಾಂಡ್ ದಿ ಮಾರ್ಷಸ್ ಎಂಬ ತನ್ನ ಮೊದಲ ಗ್ರಂಥದಲ್ಲಿ ಪ್ರಚಾರಕ ದಿನಗಳ ಕತೆಯನ್ನು ಈತ ಹೇಳಿದ್ದಾನೆ. ಇದಲ್ಲದೆ ತೀವ್ರ ಭಾವುಕತೆಯಿಂದ ತುಂಬಿದ ಬೋಧಪ್ರದವಾದ ಮೂವತ್ತು ಕಾದಂಬರಿಗಳನ್ನು ಈತ ರಚಿಸಿದ್ದಾನೆ. ಚುರುಕಾದ ಕಥನ, ಆಕರ್ಷಕ ಶೈಲಿಗಳಿಂದ ಈತನ ಕಾದಂಬರಿಗಳು ಜನಮೆಚ್ಚುಗೆಯನ್ನು ಪಡೆದುವು. ಬ್ಲ್ಯಾಕ್ ರಾಕ್, ದಿ ಸ್ಕೈ ಪೈಲಟ್, ದಿ ಮ್ಯಾನ್ ಫ್ರಮ್ ಗ್ಲೆನ್‌ಗ್ಯಾರಿ, ದಿ ಪ್ರಾಸ್ಪೆಕ್ಟ್, ಗ್ಲೆನ್‌ಗ್ಯಾರಿ ಸ್ಕೂಲ್ ಡೇಸ್, ದಿ ಗರ್ಲ್ ಫ್ರಮ್ ಗ್ಲೆನ್‌ಗ್ಯಾರಿ – ಮುಂತಾದವು ಇವನ ಪ್ರಸಿದ್ಧ ಕಾದಂಬರಿಗಳು. ಈ ಕೃತಿಗಳಿಗೆ ಜನಪ್ರಿಯತೆಯನ್ನು ತಂದುಕೊಟ್ಟಿದ್ದು ಇವನ ಕತೆಗಳಲ್ಲಿ ಎದ್ದು ಕಾಣುವ ಸಾಹಸ ಪ್ರೇಮ ಹಾಗೂ ಮಾನವಸೇವಾಬುದ್ಧಿ. ಪೋಸ್ಟ್‌ಸ್ಕ್ರಿಪ್ಟ್ ಟು ಅಡ್ವೆಂಚರ್ ಎಂಬ ಹೆಸರಿನ ಆತ್ಮಕಥೆ ಇವನ ಮರಣಾನಂತರ 1938ರಲ್ಲಿ ಪ್ರಕಟವಾಯಿತು. ಇವನ ಇನ್ನೊಂದು ಸಾಧನೆಯೆಂದರೆ ಕೆನಡದ ಯುನೈಟೆಡ್ ಚರ್ಚಿನ ಸ್ಥಾಪನೆಗೆ ನೆರವಾಗಿದ್ದು. ವಿನಿಪೆಗ್‌ನ ಸೇಂಟ್ ಸ್ಟೀಫನ್ ಚರ್ಚಿನಲ್ಲಿ ನಲವತ್ತು ವರ್ಷಗಳಿಗೂ ಮೇಲ್ಪಟ್ಟು ಪಾದ್ರಿಯಾಗಿ ಈತ ಸೇವೆ ಸಲ್ಲಿಸಿದ. (ಎಚ್.ಜಿ.ಎಸ್.ಆರ್.)

**ಗಾರ್ಡಾ ಸರೋವರ :** ಉತ್ತರ ಇಟಲಿಯಲ್ಲಿರುವ ಅತ್ಯಂತ ದೊಡ್ಡ ಸರೋವರ. ಇದಕ್ಕೆ ಬೆನಾಕೋ ಎಂದು ಹೆಸರುಂಟು. ವೆನೇಟ್ಸ್ಯಾ ಟ್ರಿಡೇಂಟೀನಾದ ದಕ್ಷಿಣಕ್ಕೆ, ಪೈಮಾಂಟೆ ವಲಯದಲ್ಲಿದೆ. ಉದ್ದ 54 ಕಿಮೀ ಗರಿಷ್ಠ ಅಗಲ 16.8 ಕಿಮೀ ವಿಸ್ತೀರ್ಣ ಸು.350.ಚ.ಕಿ.ಮೀ. ಗರಿಷ್ಠ ಆಳ 335.5 ಮೀ ಇದು ಸಮುದ್ರ ಮಟ್ಟದಿಂದ 63.5 ಮೀ ಎತ್ತರದಲ್ಲಿದೆ. ಉತ್ತರದಲ್ಲಿ ಕಡಿದಾದ ಪರ್ವತಗಳೂ ದಕ್ಷಿಣದಲ್ಲಿ ಚಿಕ್ಕ ಗುಡ್ಡಗಳೂ ಇದನ್ನು ಸುತ್ತುವರಿದಿವೆ. ಈ ಸರೋವರಕ್ಕೆ ನೀರು ಪೂರೈಕೆ ಉತ್ತರದ ಸಾರ್ಕೊ ತೊರೆಯಿಂದ; ಸರೋವರದ ನೀರು ಆಗ್ನೇಯದಲ್ಲಿಯ ಮಿನ್ಸಿಯೋ ನದಿಯ ಮೂಲಕ ಹೊರಹರಿಯುತ್ತದೆ. ಆಂಡೀಸ್ ನದಿಯ ದಕ್ಷಿಣ ಪಾತ್ರದ ಭಾಗವೇ ಗಾರ್ಡಾ ಸರೋವರ ಪ್ರದೇಶ ಎನ್ನಲಾಗಿದೆ. ಸದ್ಯದಲ್ಲಿ ಆಂಡೀಸ್ ನದಿ ಈ ಸರೋವರದಿಂದ ಪ್ರತ್ಯೇಕವಾಗಿ ದೂರದಲ್ಲಿ ಮಾಂಟೆಬಾಲ್ಡೊ ಕಡೆಗೆ ಹರಿಯುತ್ತದೆ. ಸರೋವರಕ್ಕೆ ಅಂಚು ಕಟ್ಟಿದಂತೆ ನೆಟ್ಟಿರುವ ಸಾಲು ಮರಗಳಿಂದ ಕೂಡಿರುವ ಸುತ್ತಣ ಪ್ರದೇಶ ಸುಂದರವಾಗಿದೆ. ಇದು ಪ್ರವಾಸಿಗಳನ್ನು ಆಕರ್ಷಿಸಿದೆ. ಪಶ್ಚಿಮ ಮತ್ತು ದಕ್ಷಿಣ ಕಡೆಯ ತೀರಪ್ರದೇಶದ ವಾಯುಗುಣ ಚಳಿಗಾಲದಲ್ಲೂ ಹಿತಕರ. ಈ ಸರೋವರದಲ್ಲಿ ಅನೇಕ ಬಗೆಯ ಮೀನುಗಳು ಹೇರಳವಾಗಿ ಸಿಕ್ಕುತ್ತವೆ. ಈ ಕಾರಣದಿಂದ ಸರೋವರದ ದಂಡೆಯ ಮೇಲೆ ಅನೇಕ ಪಟ್ಟಣಗಳು ಬೆಳೆದಿವೆ. ಪೆಸ್ಕೀರಾ, ಡೆಸೆನ್ಸಾನೊ, ಸ್ಯಾಲೊ, ಗಾರ್ಗ್ನಾನೊ, ರೀವಾ, ಗಾರ್ಡಾ, ಬಾರ್ಡೊಲಿನೊ – ಇವು ಮುಖ್ಯವಾದವು. *

**ಗಾರ್ಡಿನರ್, ಆಲ್‌ಫ್ರೆಡ್ ಜಾರ್ಜ್ :** 1865–1946. ಆಲ್ಫಾ ಆಫ್ ದ ಪ್ಲೋ ಎಂಬ ಕಾವ್ಯನಾಮದಿಂದ ಪ್ರಸಿದ್ಧನಾದ ಈತ ಪತ್ರಿಕೋದ್ಯಮಿ, ಸಾಹಿತಿ. ಹದಿನೈದು ವರ್ಷ ಕಾಲ ಪ್ರಾಂತೀಯ ಪತ್ರಿಕೋದ್ಯಮದಲ್ಲಿದ್ದು ಅನಂತರ 1902ರಿಂದ 1919ರವರೆಗೆ ಡೇಲಿ ನ್ಯೂಸ್ ಪತ್ರಿಕೆಯ ಸಂಪಾದಕನಾಗಿ ಕೆಲಸ ಮಾಡಿದ; ಅನಂತರ ಅದೇ ಪತ್ರಿಕೆಗೆ ಕೆಲವು ವರ್ಷ ರಾಜಕೀಯ ಸಲಹೆಗಾರನಾಗಿಯೂ ದುಡಿದ. ಈ ಕಾಲದಲ್ಲಿ ಈತ ತನ್ನ ಕಾವ್ಯನಾಮದಿಂದ ಉತ್ಕೃಷ್ಟವಾದ ಅನೇಕಾನೇಕ ಲಲಿತ ಪ್ರಬಂಧಗಳನ್ನು ಬರೆದ. ಈತನನ್ನು 20ನೆಯ ಶತಮಾನದ ಅಗ್ರಗಣ್ಯ ಪ್ರಬಂಧಕಾರರ ಪಂಕ್ತಿಗೆ ಸೇರಿಸಲಾಗಿದೆ.

ಈತನ ಪ್ರಸಿದ್ಧ ಪ್ರಬಂಧ ಸಂಕಲನಗಳು ಇವು : ಪ್ರಾಫೆಟ್ಸ್, ಪ್ರೀಸ್ಟ್ಸ್ ಅಂಡ್ ಕಿಂಗ್ಸ್ (1908); ಪಿಲ್ಲರ್ಸ್ ಆಫ್ ಸೊಸಯಟಿ (1913); ದಿ ವಾರ್ ಲಾರ್ಡ್ಸ್ (1915); ಸರ್ಟನ್ ಪೀಪಲ್ ಆಫ್ ಇಂಪಾರ್ಟೆನ್ಸ್ (1926); ಪೆಬಲ್ಸ್ ಆನ್ ದಿ ಷೋರ್ (1915); ಲೀವ್ಸ್ ಇನ್ ದಿ ವಿಂಡ್ (1918), ಮೆನಿ ಫರೋಸ್ (1924). ಇವಲ್ಲದೆ ಈತ ಲೈವ್ಸ್ ಆಫ್ ವಿಲಿಯಂ ಹಾರ್‌ಕೋರ್ಟ್ (1923), ಜಾರ್ಜ್ ಕ್ಯಾಡ್‌ಬರಿ (1923) ಎಂಬ ಜೀವನಚರಿತ್ರೆಗಳನ್ನೂ ಬರೆದಿದ್ದಾನೆ.

ಬಿಗಿಯಾದ ಬಂಧ, ಲಘುವಾದ ನಿರೂಪಣಾ ವಿಧಾನ, ವರ್ಣನಾ ಸಾಮರ್ಥ್ಯ, ಕವಿಯ ಮನೋಧರ್ಮ– ಇವುಗಳಿಂದಾಗಿ ಈತನ ಬರೆಹಗಳು ಜನಪ್ರಿಯವಾಗಿವೆ. (ಪಿ.ಎಂ.ಎಚ್.)

**ಗಾರ್ಡಿಯಂ :** ತುರ್ಕಿಯ ಅಂಕಾರ ಸಮೀಪದಲ್ಲಿರುವ ಒಂದು ಪುರಾತನ ನಗರ. ಸಾಂಗಾರಿಯಸ್ ಮತ್ತು ಟೆಂಬ್ರಿಸ್ ನದಿಗಳ ಸಂಗಮದ ಬಳಿ, ಅಂಕಾರಾ ಮತ್ತು ಡೊರಿಲಿಯಂ (ಈಗಿನ ಎಸ್ಕಿಷೆಹೀರ್) ನಗರಗಳ ನಡುವಣ ರಾಜಮಾರ್ಗದಲ್ಲಿದೆ. ಅನಟೋಲಿಯದ ಬಯಲುಸೀಮೆಗೂ ಸಮುದ್ರಕ್ಕೂ ಮಧ್ಯೆ ಒಂದು ಕೊಂಡಿಯಂತಿದ್ದ ಈ ನಗರ ಪ್ರ.ಶ.ಪೂ. 9ನೆಯ ಶತಮಾನದ ಕೊನೆಯಲ್ಲಿ ಏಷ್ಯ ಮೈನರ್ ಪ್ರದೇಶದಲ್ಲಿ ಪ್ರಬಲರಾಗಿದ್ದ ಫ್ರಿಜಿಯನ್ನರ ರಾಜಧಾನಿಯಾಗಿತ್ತು. ಪ್ರಚಲಿತ ಸಾಂಪ್ರದಾಯಿಕ ಕತೆಗಳಂತೆ ಇವರ ಮೊದಲ ಅರಸ ಗಾರ್ಡಿಯಸ್. ಆತ ಮೊದಲು ಫ್ರಿಜಿಯದಲ್ಲಿ ಒಬ್ಬ ರೈತನಾಗಿದ್ದ. ಅವನಿಂದಲೇ ಈ ನಗರಕ್ಕೆ ಗಾರ್ಡಿಯಂ ಎಂಬ ಹೆಸರು ಬಂತೆಂದು ಹೇಳಲಾಗಿದೆ. ದೇವಸ್ಥಾನಕ್ಕೆ ಬಂಡಿಯಲ್ಲಿ ಬರುವ ಪ್ರಥಮ ಮನುಷ್ಯನನ್ನು ತಮ್ಮ ಅರಸನನ್ನಾಗಿ ಆರಿಸಿಕೊಳ್ಳಬೇಕೆಂಬ ಜ್ಯೂಸ್ ದೇವತೆಯ ದಿವ್ಯವಾಣಿಯಂತೆ ಫ್ರಿಜಿಯನ್ನರು ಅವನನ್ನು ತಮ್ಮ ದೊರೆಯೆಂದು ಸ್ವಾಗತಿಸಿದರೆನ್ನಲಾಗಿದೆ. ಆತ ತನ್ನ ಬಂಡಿಯನ್ನು ದೇವರಿಗೆ ಒಪ್ಪಿಸಿದ. ಅದಕ್ಕೆ ಕಟ್ಟಿದ ಹಗ್ಗದ ಗಂಟನ್ನು ಯಾರು ಬಿಚ್ಚುವರೋ ಅವರು ಇಡೀ ಏಷ್ಯವನ್ನು ಜಯಿಸುವರೆಂದು ದಿವ್ಯವಾಣಿ ಸಾರಿತೆಂದು ಹೇಳಲಾಗಿದೆ. ಅವನ ಅನಂತರ

ಆಳ್ವಿಕೆಗೆ ಬಂದವನು ಮೈದಾಸ್. ಗಾರ್ಡಿಯಂನ ಪ್ರಜೆಗಳು ತಮ್ಮ ಅರಸರನ್ನು ಅನುಕ್ರಮವಾಗಿ ಈ ಎರಡು ಹೆಸರುಗಳಿಂದಲೇ ಕರೆದರು.

ಇಂದಿನ ಯಸ್ಸಿಹಾಯುಕ್ ನಗರಪ್ರದೇಶ ಹಿಂದಿನ ಗಾರ್ಡಿಯಂನ ನಿವೇಶನ ವಾಗಿತ್ತೆಂದು 1889ರಲ್ಲಿ ಕಾರ್ಟೆ ಸೋದರರು ಗುರುತಿಸಿದರಾದರೂ ಇತ್ತೀಚಿನವರೆಗೂ ಆ ಬಗ್ಗೆ ಹೆಚ್ಚಿನ ವಿವರಗಳು ತಿಳಿದಿರಲಿಲ್ಲ. ಆರ್.ಎಸ್.ಯಂಗ್ ಎಂಬ ಪುರಾತತ್ತ್ವ ಶೋಧಕ 1950ರಲ್ಲಿ ಇಲ್ಲಿ ಉತ್ಖನನ ಕಾರ್ಯವನ್ನು ಆರಂಭಿಸಿ ಈ ನಗರದ ಪ್ರಾಚೀನ ಇತಿಹಾಸದಲ್ಲಿ ಮೂರು ಘಟ್ಟಗಳನ್ನು ಯಶಸ್ವಿಯಾಗಿ ಗುರುತಿಸಿದ. ಫ್ರಿಜಿಯನ್ನರಿಗೂ ಹಿಂದೆ ಹಿಟ್ಟೈಟ್ ಜನಾಂಗ ಇಲ್ಲಿ ನೆಲಸಿದ್ದರ ಗುರುತುಗಳು ಕೆಳಗಿನ ಪದರದಲ್ಲಿ ದೊರಕಿದವು. ಮಧ್ಯದ ಪದರ ಫ್ರಿಜಿಯನ್ನರ ಕಾಲದ್ದು. ಪರ್ಷಿಯ ದೇಶ ಪ್ರಬಲವಾದಾಗ ಸೈರಸ್ ಈ ನಗರದ ಪ್ರಾಶಸ್ತ್ಯವನ್ನು ಅರಿತು ಕೊಂಡ. ಪರ್ಷಿಯನ್ ಸಾಮ್ರಾಜ್ಯದ ಕಾಲದಲ್ಲಿ ಗಾರ್ಡಿಯಂ ನಗರವನ್ನು ಮುಖ್ಯ ವ್ಯಾಪಾರ ಕೇಂದ್ರವಾಗಿ ಪುನರ್ನಿರ್ಮಿಸ ಲಾಯಿತು. ಇಲ್ಲೊಂದು ಕೋಟೆ ನಿರ್ಮಿತವಾಯಿತು. ಅಲೆಗ್ಸಾಂಡರ್ ಮಹಾಶಯ ಈ ನಗರದ ಮೇಲೆ ದಾಳಿ ಮಾಡಿದ (333). ಆ ಸಂದರ್ಭದಲ್ಲಿ ಆತ ಇಲ್ಲಿಯ ಗಾರ್ಡಿಯನ್ ಗಂಟನ್ನು ತನ್ನ ಕತ್ತಿಯಿಂದ ಕತ್ತರಿಸಿದನೆಂದು ಪ್ರತೀತಿ. ಪರ್ಷಿಯನ್ನರು ಮತ್ತು ಗ್ರೀಕರು ಈ ನಗರದೊಡನೆ ಹೊಂದಿದ್ದ ಸಂಪರ್ಕದ ಬಗ್ಗೆ ಊಹೆಗಳು ಗಾರ್ಡಿಯಂ ಪ್ರದೇಶದಲ್ಲಿ ಉತ್ಖನನ ಮಾಡಿದಾಗ ಮೇಲ್ಪದರದಲ್ಲಿ ದೊರೆತ ಅವಶೇಷಗಳಿಂದ ದೃಢಪಟ್ಟಿವೆ. (ಜೆ.ಬಿ.ಆರ್.)

**ಗಾರ್ಡಿಯನ್, ದಿ :** ಲಂಡನ್ ಮತ್ತು ಮ್ಯಾಂಚೆಸ್ಟರ್‌ನಿಂದ ಪ್ರಕಟವಾಗುತ್ತಿರುವ ರಾಷ್ಟ್ರೀಯ ದಿನ ಪತ್ರಿಕೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿರುವ ಕೆಲವೇ ಪತ್ರಿಕೆಗಳಲ್ಲಿ ಒಂದು. ಪ್ರಾರಂಭದಲ್ಲಿ ಇದು ಮ್ಯಾಂಚೆಸ್ಟರ್ ಗಾರ್ಡಿಯನ್ ಎಂಬ ಹೆಸರಿನಿಂದ ಸಾಪ್ತಾಹಿಕವಾಗಿ ಪ್ರಕಟವಾಗುತ್ತಿತ್ತು. ಸಂಸದೀಯ ಸುಧಾರಣೆ ಮತ್ತು ಸಾಮಾಜಿಕ ನ್ಯಾಯವನ್ನು ಒದಗಿಸುವ ಉದ್ದೇಶದಿಂದ ಕೆಲವು ಪ್ರಗತಿಶೀಲರು 1821ರಲ್ಲಿ ಈ ಪತ್ರಿಕೆಯನ್ನು ಪ್ರಾರಂಭಿಸಿದರು. ಇದಕ್ಕಾಗಿ ಅವರು ಹೂಡಿದ ಬಂಡವಾಳ ಕೇವಲ 400 ಪೌಂಡ್. 1855ರಿಂದ ದಿನಪತ್ರಿಕೆಯಾಯಿತು. ಪತ್ರಿಕೆ ರಾಷ್ಟ್ರೀಯ ಮಟ್ಟದಲ್ಲಿ ಬೆಳೆದು ಅಂತಾರಾಷ್ಟ್ರೀಯ ಖ್ಯಾತಿ ಪಡೆದಾಗ ಪತ್ರಿಕೆಯ ಹೆಸರನ್ನು ಗಾರ್ಡಿಯನ್ ದಿ ಎಂದಷ್ಟಕ್ಕೆ ಮೊಟಕುಗೊಳಿಸಲಾಯಿತು. 1971ರ ಮೇ 5ರಂದು ಪತ್ರಿಕೆಯ 150ನೆಯ ವಾರ್ಷಿಕೋತ್ಸವವನ್ನು ಆಚರಿಸಲಾಯಿತು.

ಈ ಪತ್ರಿಕೆ ಪ್ರಾರಂಭವಾದಂದಿನಿಂದಲೂ ನಿರ್ಭಯ ವಿಚಾರಧಾರೆಗೆ ಹೆಸರುವಾಸಿಯಾಗಿದೆ. 1936ರಲ್ಲಿ ಪತ್ರಿಕೆಯ ಪ್ರಭಾವಿ ಸಂಪಾದಕರಲ್ಲಿ ಒಬ್ಬರಾದ ಸಿ.ಪಿ. ಸ್ಕಾಟ್ ವಿಶ್ವಸ್ಥ ಮಂಡಲಿಯನ್ನು ರಚಿಸಿದ. ಪತ್ರಿಕೆಯ ಸ್ವಾಮ್ಯ ಆ ಮಂಡಲಿಗೆ ಸೇರಿದೆ. ಅದು ಸಂಪಾದಕ ವರ್ಗಕ್ಕೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿರುವರಲ್ಲದೆ ಈ ಸತ್ಸಂಪ್ರದಾಯವನ್ನು ಸತತವಾಗಿ ಉಳಿಸಿಕೊಂಡು ಬಂದಿದ್ದಾರೆ. ಪತ್ರಿಕೆಯ ಸಂಪಾದಕೀಯಗಳು ಇದಕ್ಕೆ ಸಾಕ್ಷಿ.

ಗಾರ್ಡಿಯನ್ ನ್ಯೂಸ್ ಪೇಪರ್ಸ್ ಲಿಮಿಟೆಡ್ ಸಂಸ್ಥೆ ಈ ಪತ್ರಿಕೆಯನ್ನು ಪ್ರಕಟಿಸುತ್ತಿದೆ. ಈ ಸಂಸ್ಥೆಯ ಮಾತೃಸಂಸ್ಥೆ ಮ್ಯಾಂಚೆಸ್ಟರ್ ಗಾರ್ಡಿಯನ್ ಅಂಡ್ ಈವ್ನಿಂಗ್ ನ್ಯೂಸ್ ಲಿಮಿಟೆಡ್. ಸಿ.ಪಿ ಸ್ಕಾಟ್ 25ನೆಯ ವಯಸ್ಸಿನಲ್ಲಿ ಪತ್ರಿಕೆಯ ಸಂಪಾದಕರಾಗಿ ನೇಮಕಗೊಂಡರು. 82ನೆಯ ವಯಸ್ಸಿನವರೆಗೂ ಸಂಪಾದಕರಾಗಿದ್ದರು. ಈಚಿನ ವರ್ಷಗಳಲ್ಲಿ ದಿ ಗಾರ್ಡಿಯನ್ ಅನೇಕ ಪ್ರಶಸ್ತಿಗಳನ್ನು ಗಳಿಸಿದೆ. 1970ರಲ್ಲಿ ಇದು ವರ್ಷದ ಪತ್ರಿಕೆಯಾಗಿ ಆಯ್ಕೆಯಾಗಿತ್ತು. ಸಂಪಾದಕರಾದ ಆಲಸ್ಟೇರ್ ಹೆದರಿಂಗ್ಟನ್ 1971ರಲ್ಲಿ ವರ್ಷದ ಅತ್ಯುತ್ತಮ ಪತ್ರಕರ್ತರಾಗಿ ಆಯ್ಕೆಗೊಂಡಿದ್ದರು. (ಬಿ.ವಿ.ವಿ.ವೈ.)

**ಗಾರ್ಡ್ನರ್, ಅರ್ಲ್ ಸ್ಟ್ಯಾನ್ಲೀ :** 1889–1970. ಅಮೆರಿಕ ಸಂಯುಕ್ತಸಂಸ್ಥಾನದ ಪತ್ತೇದಾರಿ ಕಾದಂಬರಿಕಾರ. ಪೆರೀ ಮೇಸನ್ ಎಂಬ ಜನಪ್ರಿಯ ಪತ್ತೇದಾರ ಪಾತ್ರದ ಪ್ರವರ್ತಕ. ಮೆಸಾಚುಸೆಟ್ಸ್‌ನ ಮಾಲ್ಡನ್‌ನಲ್ಲಿ 1889ರ ಜುಲೈ 17ರಂದು ಹುಟ್ಟಿದ. ವೆಂಟ್ಯುರ ಕೌಂಟಿಯಲ್ಲಿ ವಕೀಲ ವೃತ್ತಿ ಪ್ರಾರಂಭಿಸಿ (1911) ಸುಮಾರು 20 ವರ್ಷಗಳ ಕಾಲ ಸಮರ್ಥವಾಗಿ ದುಡಿದ. 1921ರಲ್ಲಿ ಪತ್ತೇದಾರಿ ಕತೆಗಳಿಗೇ ಮೀಸಲಾದ ಪತ್ರಿಕೆಗಳಿಗೆ ಕತೆಗಳನ್ನು ಬರೆಯಲು ಪ್ರಾರಂಭಿಸಿದ. ಈತನ ಮೊದಲ ಕಾದಂಬರಿ ದಿ ಕೇಸ್ ಆಫ್ ದಿ ವೆಲ್ವೆಟ್ ಕ್ಲಾತ್ 1932ರಲ್ಲಿ ಪ್ರಕಟವಾಯಿತು. ಅನಂತರ ವಕೀಲವೃತ್ತಿಗೆ ತಿಲಾಂಜಲಿಯಿತ್ತು ಪೂರ್ಣಕಾಲಿಕ ಲೇಖಕನಾದ. ಲೇಖನವೃತ್ತಿಯಲ್ಲಿ ಮೊದಲ 25 ವರ್ಷಗಳಲ್ಲಿ ಈತ ಒಟ್ಟು 54 ಕೃತಿಗಳನ್ನು ಹೊರತಂದ. ಎಡ್ಗರ್ ವ್ಯಾಲೆಸ್‌ನಂತೆ ಈತನೂ ಡಿಕ್ಟಫೋನ್ ಬಳಸಿಕೊಂಡು ತನ್ನ ಕತೆಗಳನ್ನು ಹೇಳಿ ರೆಕಾರ್ಡ್ ಮಾಡುತ್ತಿದ್ದನಂತೆ. ಇವುಗಳ ಒಟ್ಟು 7 ಕೋಟಿ 50 ಲಕ್ಷ ಪ್ರತಿಗಳು ಕೇವಲ ಉತ್ತರ ಅಮೆರಿಕದಲ್ಲಿಯೇ ಮಾರಾಟವಾದುವಂತೆ.

ಈತನ ಬಹುಪಾಲು ಕಾದಂಬರಿಗಳು ಪೆರೀ ಮೇಸನ್ ಎಂಬ ತೀಕ್ಷ್ಣಮತಿ ವಕೀಲನ ಪತ್ತೇದಾರಿ ಅದ್ಭುತಗಳಿಂದ ಕೂಡಿವೆ. ಕಥೆಯನ್ನು ತುಂಬ ವೇಗವಾಗಿ ಆದರೆ ಪ್ರತಿ ಹೆಜ್ಜೆಯಲ್ಲೂ ಕಾನೂನುಬದ್ಧವಾಗಿ ಹೇಳುವುದು ಗಾರ್ಡ್ನರನ ಕ್ರಮ. ಕಾದಂಬರಿಯ ಪ್ರಕರಣಗಳು ಹೆಚ್ಚು ಕುತೂಹಲ ಕೆರಳಿಸಿ ಕೋರ್ಟಿನಲ್ಲಿ ಮುಕ್ತಾಯವಾಗುತ್ತವೆ. ಎ.ಎ.ಫೇರ್ ಎಂದು ಹೆಸರಿಟ್ಟುಕೊಂಡು ಈತ ಕೆಲವು ನಿಗೂಢ (ಮಿಸ್ಟರಿ) ಕಾದಂಬರಿಗಳನ್ನು ಬರೆದಿದ್ದಾನೆ.

ಗಾರ್ಡ್ನರ್ ಅಪರಾಧಶಾಸ್ತ್ರದಲ್ಲಿ ಬಹಳಷ್ಟು ಆಸ್ಥೆ ವಹಿಸಿ ಸಂಶೋಧನ ಕೆಲಸ ಮಾಡಿದ್ದಾನೆ. ಮಿಥ್ಯಾಪವಾದಕ್ಕೆ ಗುರಿಯಾಗಿ ಕಾರಾಗೃಹ ಸೇರಿದವರ ರಕ್ಷಣೆಗೆ ಈತ 1948ರಲ್ಲೊಂದು ಸಂಸ್ಥೆಯನ್ನು ಪ್ರಾರಂಭಿಸಿದ. ದಿ ಹೌಲಿಂಗ್ ಡಾಗ್ (1934), ದಿ



ಸ್ಟಟರಿಂಗ್ ಬಿಷಪ್ (1936), ದಿ ಲೇಮ್ ಕ್ಯಾನರಿ (1937), ದಿ ಡ್ರೌನಿಂಗ್ ಡಕ್ (1942), ದಿ ರನ್‌ಅವೇ ಕಾರ್ಪ್ಸ್ (1954) ಮುಂತಾದವು ಪೆರೀ ಮೇಸನ್ನನನ್ನೇ ನಾಯಕನನ್ನಾಗುಳ್ಳ ಈತನ ಕೆಲವು ಪ್ರಸಿದ್ಧ ಕಾದಂಬರಿಗಳು. ಇವಲ್ಲದೆ ಈತ ಜಿಲ್ಲಾ ಅಟೋರ್ನಿ ಡಗ್ಲಾಸ್ ಸೆಲ್ಬಿಯನ್ನು ನಾಯಕನನ್ನಾಗುಳ್ಳ ದಿ ಡಿ. ಎ. ಕಾಲ್ಸ್ ಇಟ್ ಮರ್ಡರ್ (1937) ದಿ ಡಿ.ಎ. ಕಾಲ್ಸ್ ಎ ಟರ್ನ್ (1954) ಮೊದಲಾದ ಕಾದಂಬರಿ ಗಳನ್ನು ರಚಿಸಿದ್ದಾನೆ. ಅಮೆರಿಕದ ಸಾರ್ವಜನಿಕ ಅಭಿಪ್ರಾಯ ಸಂಗ್ರಹಣ ಸಂಸ್ಥೆ ನಡೆಸಿದ ಒಂದು ಪ್ರಯೋಗದಿಂದ ಸಂಯುಕ್ತಸಂಸ್ಥಾನದಲ್ಲಿ ಗಾರ್ಡ್ನರ್ ತನ್ನ ಕಾಲದ ಅತಿದೊಡ್ಡ ಜನಪ್ರಿಯ ಪತ್ತೇದಾರಿ ಕತೆಗಾರನೆಂದು ತಿಳಿಯುತ್ತದೆ. ಇವನಿಗೆ ಎರಡನೆಯವನು ಷರ್‌ಲಾಕ್ ಹೋಮ್ಸ್‌ನನ್ನು ಸೃಷ್ಟಿಸಿದ ಕಾನನ್ ಡಾಯಲ್. *

ಗಾರ್ಡ್ನರ್‌ನ ಕಾದಂಬರಿಗಳಲ್ಲಿ ಪೆರೀ ಮೇಸನನ ಕಕ್ಷಿಗಾರ (ಅಥವಾ ಕಕ್ಷಿಗಳು) ಒಂದು ವ್ಯೂಹದಲ್ಲೇ ಸಿಕ್ಕಿಕೊಳ್ಳುತ್ತಾನೆ(ಳೆ). ಇನ್ನೇನು, ಅವನ(ಳ) ಅಪರಾಧ ಸಾಬೀತಾಯಿತು ಸೆರೆಮನೆಗೋ ಗಲ್ಲಿಗೋ ಹೋಗುವುದು ಅನಿವಾರ್ಯ ಎನ್ನುವ ಹಂತದಲ್ಲಿ ಪೆರೀ ಮೇಸನ್‌ಗೆ ಹೊಳೆದ ಉತ್ತರದಿಂದ ಕಕ್ಷಿಗಾರ(ಳು) ಪಾರಾಗುತ್ತಾನೆ(ಳೆ), ಮೊಕದ್ದಮೆಯು ಕೋಲಾಹಲಕರವಾಗಿ ಮುಕ್ತಾಯವಾಗುತ್ತದೆ. ಹಲವೊಮ್ಮೆ ಮೇಸನನಿಗೆ ತೇಜೋವಧೆ ಮಾಡುತ್ತೇವೆ ಎಂದು ಬೀಗುತ್ತಿರುವ ಪೋಲೀಸರಿಗೆ ತೇಜೋವಧೆ ಯಾಗುತ್ತದೆ. ಹಿಂದಿನ ಕಾಲದ ಸಾಹಸ ಕಥೆಗಳ ಅದ್ಭುತ ಶಕ್ತಿಯ ನಾಯಕ ಈ ಕಾದಂಬರಿಗಳಲ್ಲಿ ಆಧುನಿಕ ವಕೀಲನಾಗಿ ಕಾಣಿಸಿಕೊಳ್ಳುತ್ತಾನೆ. (ಲಾರ್ಜಿಕ್ ದೇನ್ ಟ್ರೈಫ್) ಅಸಾಧಾರಣ ವ್ಯಕ್ತಿಗಳನ್ನು ಕಾಣುವ ಓದುಗನ ಬಯಕೆ ಇಲ್ಲಿ ತೃಪ್ತಿಹೊಂದುತ್ತದೆ. ಗಾರ್ಡ್ನರ್ 1970ರ ಮಾರ್ಚ್ 11ರಂದು ನಿಧನನಾದ. (ಎಲ್.ಎಸ್.ಎಸ್.)

**ಗಾರ್ಡ್ನರ್, ಅಲೆಗ್ಸಾಂಡರ್ :** 1785–1877. 1785ರಲ್ಲಿ ಜನಿಸಿದ ಒಬ್ಬ ಐರಿಷ್ ಸೈನಿಕ. ಅದೃಷ್ಟವನ್ನರಸುತ್ತಾ ಆಫ್ಘಾನಿಸ್ತಾನಕ್ಕೆ ಬಂದ ಈತ ಹಬೀಬುಲ್ಲಾಖಾನನ ಆಶ್ರಯ ಪಡೆದ. ಮಾವನಾದ ಅಮೀರ್ ದೋಸ್ತ್ ಮಹಮ್ಮದನೊಡನೆ ಹಬೀಬುಲ್ಲಾ ಅಧಿಕಾರಕ್ಕಾಗಿ ನಡೆಸಿದ ಹೋರಾಟಗಳಲ್ಲಿ ಈತನೂ ಪಾಲ್ಗೊಂಡ. ಆದರೆ ಇವನು ಬಹಳ ಕಾಲ ಅಲ್ಲಿರಲಿಲ್ಲ. 1826ರ ಸುಮಾರಿಗೆ ಪಂಜಾಬಿಗೆ ಬಂದು ರಣಜಿತ್ ಸಿಂಗನ ಕೆಳಗೆ ಕರ್ನಲ್ ಹುದ್ದೆ ಪಡೆದ. ಸಿಖ್ ಸೈನಿಕರಿಗೆ ಯುದ್ಧದ ತರಬೇತು ನೀಡುತ್ತಿದ್ದ ಈತ, ರಣಜಿತ್ ಸಿಂಗ್ ಆಫ್ಘನ್ನರೊಡನೆ ಹೂಡಿದ ಕದನಗಳಲ್ಲಿ ಅವನಿಗೆ ಬೆಂಬಲವಾಗಿದ್ದ, ರಣಜಿತ್‌ಸಿಂಗ್‌ನ ಮರಣಾನಂತರ ಅವನ ಮಕ್ಕಳಲ್ಲಿ ಸಿಂಹಾಸನಕ್ಕಾಗಿ ನಡೆದ ಹೋರಾಟಗಳ ಪ್ರತ್ಯಕ್ಷದರ್ಶಿಯಾಗಿದ್ದ. ಬ್ರಿಟಿಷರು ಸಿಖ್ಖರೊಡನೆ ನಡೆಸಿದ ಮೊದಲನೆಯ ಕದನದಲ್ಲಿ ಇವನು ಯಾವ ಪಾತ್ರವನ್ನೂ ವಹಿಸದಿದ್ದರೂ ಅಂದಿನ ಘಟನೆಗಳ ಹಲವು ವಿವರಗಳನ್ನು ಬರೆದಿಟ್ಟಿದ್ದಾನೆ. ತದನಂತರ ಜಮ್ಮು–ಕಾಶ್ಮೀರದ ದೊರೆ ಗುಲಾಬ್ ಸಿಂಗ್‌ನ (**ನೋಡಿ– ಗುಲಾಬ್–ಸಿಂಗ್**) ಅಧೀನದಲ್ಲಿ ಕೆಲಕಾಲ ದುಡಿದ. ಈತ ಬರೆದಿಟ್ಟಿರುವ ಸಮಕಾಲೀನ ಘಟನೆಗಳ ವರದಿಗಳನ್ನು ಮೆಮ್ವಾರ್ಸ್ ಆಫ್ ಅಲೆಗ್ಸಾಂಡರ್ ಗಾರ್ಡ್ನರ್ ಎಂಬ ಗ್ರಂಥದಲ್ಲಿ ಹ್ಯೂ ಪಿಯರ್ಸ್ ಸಂಗ್ರಹಿಸಿದ್ದಾನೆ.

1831ರಲ್ಲಿ ಸೈಯದ್ ಅಹಮದನ ನೇತೃತ್ವದಲ್ಲಿ ಮಹಮ್ಮದೀಯರು ಸಿಖ್ಖರ ವಿರುದ್ಧ ದಂಗೆ ಎದ್ದು ಮನ್‌ಸೆಹ್ರಾದ ಬಳಿಯ ಬಾಲಾಕೋಟ್ ಎಂಬಲ್ಲಿ ನಡೆಸಿದ ಧಾಳಿಯಲ್ಲಿ ಸಿಖ್ ಸೈನಿಕರಿಂದ ಅಹಮದ್ ಕೊಲ್ಲಲ್ಪಟ್ಟದ್ದನ್ನು ಕೆಲವೇ ಗಜಗಳ ದೂರದಲ್ಲಿ ನಿಂತು ನೋಡಿದೆನೆಂದು ಗಾರ್ಡ್ನರ್ ಹೇಳಿಕೊಂಡಿದ್ದಾನೆ; ಆಗ ಯಾವ ದೇವದೂತನೂ ಈ ವೀರನನ್ನು ದಿವ್ಯಲೋಕಕ್ಕೆ ಕೊಂಡೊಯ್ಯಲು ಬರಲಿಲ್ಲವೆಂದು ವ್ಯಂಗ್ಯವಾಗಿ ನುಡಿದಿದ್ದಾನೆ. 1839ರ ಅಕ್ಟೋಬರ್ 9ರಂದು ರಣಜಿತ್‌ಸಿಂಗ್‌ನ ಮಗನಾದ ಖಡಕ್‌ಸಿಂಗನ ಮಂತ್ರಿ ಚೇತ್‌ಸಿಂಗ್ ಬಾಜ್ವಾನನ್ನು ಧ್ಯಾನ್‌ಸಿಂಗ್ ಡೋಗ್ರಾ ಎಂಬವನು ರಾಜಕುಮಾರನ ಎದುರಿನಲ್ಲೇ ಇರಿದು ಕೊಂದುದನ್ನು ಕಂಡೆನೆಂಬುದು ಅವನ ಹೇಳಿಕೆ. ಖಡಕ್‌ಸಿಂಗ್ 1840ರ ನವೆಂಬರ್ 5ರಂದು ಮರಣ ಹೊಂದಿದಾಗ, ಅವನ ದೇಹವನ್ನೂ ಅವನೊಡನೆ ಸತಿ ಹೋದ ಅವನ ಇಬ್ಬರು ಪತ್ನಿಯರ ದೇಹಗಳನ್ನೂ ಚಿತೆಗೆ ಒಪ್ಪಿಸಿ ಅವನ ಮಗ ನವ್‌ನಿಹಲ್‌ಸಿಂಗ್ ಅರಮನೆಗೆ ಹಿಂದಿರುಗುತ್ತಿದ್ದಾಗ ಕೋಟೆಯ ದ್ವಾರದ ಕಮಾನು ಕುಸಿದು ನವ್‌ನಿಹಲ್‌ಸಿಂಗ್ ಸತ್ತನೆಂದು ಹೇಳುತ್ತಾನೆ. ಗಾರ್ಡ್ನರ್‌ನ ಬಖೈರಿನಲ್ಲಿರುವ ಇಂಥ ಅನೇಕ ಹೇಳಿಕೆಗಳಲ್ಲಿ ಹಲವು ಸತ್ಯಕ್ಕೆ ದೂರವೆಂದು ಇತಿಹಾಸಕಾರರು ತೋರಿಸಿಕೊಟ್ಟಿದ್ದಾರೆ. (ಜಿ.ಬಿ.ಆರ್.)



**ಗಾರ್ಡ್ನರ್, ಸ್ಯಾಮ್ಯುಯೆಲ್ ರಾಸನ್ :** 1829–1902. ಇಂಗ್ಲಿಷ್ ಇತಿಹಾಸಕಾರ. ಆಲಿವರ್ ಕ್ರಾಮ್ವೆಲ್ ವಂಶಸ್ಥ. 1829ರ ಮಾರ್ಚ್ 4ರಂದು ಹ್ಯಾಂಪ್‌ಷಿರ್‌ನ ಆಲ್ರೆಸ್‌ಫರ್ಡ್‌ನಲ್ಲಿ ಜನಿಸಿದ. ವಿಂಚೆಸ್ಟರಿನಲ್ಲೂ ಆಕ್ಸ್‌ಫರ್ಡಿನ ಕ್ರೈಸ್ಟ್‌ಚರ್ಚ್ ಕಾಲೇಜಿನಲ್ಲೂ ವಿದ್ಯಾಭ್ಯಾಸ ಮಾಡಿ ಲಂಡನ್ನಿನ ಕಿಂಗ್ಸ್ ಕಾಲೇಜಿನಲ್ಲಿ ಆಧುನಿಕ ಇತಿಹಾಸ ಪ್ರಾಧ್ಯಾಪಕನಾಗಿದ್ದ (1871–85) 1884ರಲ್ಲಿ ಆಲ್ ಸೋಲ್ಸ್ ಕಾಲೇಜಿನ ಮತ್ತು ಮೆರ್ಟನ್ ಕಾಲೇಜಿನ ಫೆಲೊ ಆಗಿ ಆಯ್ಕೆಗೊಂಡ.

ಗಾರ್ಡ್ನರ್ ಇಂಗ್ಲೆಂಡಿನ ಅಂತರ್ಯುದ್ಧ ಕಾಲದ ಇತಿಹಾಸವನ್ನು ವಿಶೇಷವಾಗಿ ಅಧ್ಯಯನಮಾಡಿದ. ಈ ಕಾಲಕ್ಕೆ ಸಂಬಂಧಿಸಿದಂತೆ ಹಲವಾರು ಸ್ಥಳಗಳಲ್ಲಿದ್ದ ಮೂಲ ದಾಖಲೆಗಳನ್ನು ಪರಿಶೀಲಿಸಿ 1863 ರಿಂದ 1900ರವರೆಗೆ ಹಲವಾರು ಉದ್ಗ್ರಂಥಗಳನ್ನು ರಚಿಸಿದ. ಒಂದನೆಯ ಜೇಮ್ಸನ ಸಿಂಹಾಸನಾರೋಹಣ ಕಾಲದಿಂದ ಅಂತರ್ಯುದ್ಧದ ಆರಂಭದವರೆಗಿನ (1603–42) ಕಾಲದ ಇತಿಹಾಸವನ್ನು ಕುರಿತು ಹತ್ತು ಸಂಪುಟಗಳೂ (1883–84) ಅಂತರ್ಯುದ್ಧವನ್ನು ಕುರಿತು ಮೂರು ಸಂಪುಟಗಳೂ (1886–93) ಹೊರಬಿದ್ದುವು. ಕಾಮನ್‌ವೆಲ್ತ್ ಮತ್ತು ಪ್ರೊಟೆಕ್ಟೊರೇಟ್ ಕಾಲದ ಸಮಗ್ರ ಚರಿತ್ರೆಯೂ (1649–60) ನಾಲ್ಕು ಸಂಪುಟಗಳಲ್ಲಿ ಪ್ರಕಟವಾಯಿತು (1903).

ಗಾರ್ಡ್ನರನ ಕೃತಿಗಳನ್ನು ವಿಮರ್ಶಕರು ಮೊದಮೊದಲು ಒಪ್ಪಲಿಲ್ಲ. ಆದರೆ ಇವನ ವಿಶ್ಲೇಷಣ ದೃಷ್ಟಿ ಕ್ರಮೇಣ ಮೆಚ್ಚುಗೆ ಗಳಿಸಿತು. 17ನೆಯ ಶತಮಾನದ ಸಾಮಾಜಿಕ ಆರ್ಥಿಕ ಬೌದ್ಧಿಕ ವಿದ್ಯಮಾನಗಳನ್ನು ಇವನು ಸೂಕ್ಷ್ಮವಾಗಿ ಗ್ರಹಿಸಿದ್ದ. ಇಂಗ್ಲೆಂಡಿನ ರಾಷ್ಟ್ರೀಯ ಭಾವನೆಯನ್ನು ಪುರಸ್ಕರಿಸಿ ಬರೆದ ಇವನ ಇತಿಹಾಸ ಈ ಧೋರಣೆಯಿಂದಾಗಿ ಮಹತ್ವ ಗಳಿಸಿದೆ. ಕಾಲಾನುಕ್ರಮಣಿಕೆಯ ವಿಧಾನವನ್ನನುಸರಿಸಿ, ವಿದ್ಯಮಾನದ ಯಾವ ಮುಖವನ್ನೂ ಕಡೆಗಣಿಸದೆ ಆತ ಮಾಡಿರುವ ನಿರೂಪಣೆ ಯಿಂದಾಗಿ ಇಂಗ್ಲೆಂಡಿನ ಇತಿಹಾಸದಲ್ಲೇ ಇದು ಅತ್ಯಂತ ಪರಿಚಿತವಾದ ಕಾಲವೆನಿಸಿದೆ. ಮೇಲೆ ಹೇಳಿದ ಗ್ರಂಥಗಳಲ್ಲದೆ ಇನ್ನೂ ಹಲವಾರು ಕೃತಿಗಳನ್ನು ಇವನು ರಚಿಸಿದ್ದಾನೆ. ಇತಿಹಾಸ ಲೇಖನಕ್ಕಾಗಿಯೇ ತನ್ನ ಜೀವನವನ್ನು ಮುಡಿಪಾಗಿಟ್ಟಿದ್ದ ಗಾರ್ಡ್ನರನ ಬಾಳು ಆರ್ಥಿಕವಾಗಿ ಅಷ್ಟೇನು ತೃಪ್ತಿಕರವಾಗಿರಲಿಲ್ಲ. 1882ರ ಅನಂತರ ಇವನಿಗೆ ದೊರಕಿದ ವಿಶ್ರಾಂತಿ ವೇತನದಿಂದ ಸ್ವಲ್ಪ ಅನುಕೂಲವಾಯಿತು. ಇವನ 65ನೆಯ ವಯಸ್ಸಿನಲ್ಲಿ ಆಕ್ಸ್‌ಫರ್ಡಿನಲ್ಲಿ ರೀಜಿಯಸ್ (ವಿದ್ವತ್ ಪೀಠಾಧಿಕಾರಿ) ಪ್ರಾಧ್ಯಾಪಕನ ಸ್ಥಾನವನ್ನು ನೀಡಿದಾಗ ಈತ ಇದನ್ನು ಸ್ವೀಕರಿಸಲಿಲ್ಲ. ಇತಿಹಾಸ ರಚನೆಯ ಕಾರ್ಯಕ್ಕೆ ಅದರಿಂದ ಅಡ್ಡಿಯಾದೀತೆಂಬುದು ಕಾರಣ. ಗಾರ್ಡ್ನರ್ 1902ರಲ್ಲಿ ತೀರಿಕೊಂಡ. (ಎಸ್.ಕೆ.ಎಸ್.)

**ಗಾರ್ತ್, ಸರ್ ಸ್ಯಾಮ್ಯುಯೆಲ್ :** 1661–1718. ವೈದ್ಯ ಹಾಗೂ ಕವಿ. ಜನನ ಯಾರ್ಕ್‌ಷೈರಿನ ಗಣ್ಯ ಕುಟುಂಬದಲ್ಲಿ. ಕೇಂಬ್ರಿಜ್‌ನಲ್ಲಿ ಉಚ್ಚ ಶಿಕ್ಷಣ ಮುಗಿಸಿ, ಲಂಡನ್ ವೈದ್ಯ ವಿದ್ಯಾಲಯದ ಪರೀಕ್ಷೆಯಲ್ಲಿ ಉತ್ತೀರ್ಣನಾದ. ಒಳ್ಳೆಯ ಸ್ವಭಾವ, ವಾಕ್ಕೌಶಲ. ವಿದ್ವತ್ತು, ಮತ್ತು ಜನಸೇವಾ ಪ್ರವೃತ್ತಿಯಿಂದಾಗಿ ಇವನ ವೃತ್ತಿ, ವ್ಯಾಪ್ತಿಗಳೆರಡೂ ವೃದ್ಧಿಸಿದವು. ರಾಜಕೀಯವಾಗಿ ಈತ ಹ್ವಿಗ್ ಬಣಕ್ಕೆ ಸೇರಿದವನು. ಪ್ರಸಿದ್ಧ ಪ್ರಬಂಧಕಾರನಾದ ಅಡಿಸನ್ ಮತ್ತು ಕವಿ ಪೋಪ್ ಈತನ ಗೆಳೆಯರು. ತನ್ನ ನಿವೃತ್ತಿಯ ಸಮಯದಲ್ಲಿ ಗಾರ್ತ್ ಒಂದನೆಯ ಜಾರ್ಜ್ ದೊರೆಗೆ ವೈದ್ಯನಾಗಿದ್ದು ಅವನಿಂದ ನೈಟ್ ಪದವಿಯನ್ನು ಪಡೆದ (1714).

ಗಾರ್ತ್ ಬರೆದ ಡಿಸ್ಪೆನ್ಸರಿ (1699) ಎಂಬ ಅಣಕು ಕವನ ಆ ಕಾಲಕ್ಕೆ ಬಹು ಪ್ರಸಿದ್ಧವಾಗಿತ್ತು. ಈತ ತನ್ನ ಗೆಳೆಯರಾದ ಅಡಿಸನ್, ಪೋಪ್ ಮೊದಲಾದವರ ನೆರವಿನಿಂದ ಓವಿಡ್ಡನ ಮೆಟಮಾರ್ಫಸಿಸ್ ಎಂಬ ಕೃತಿಯನ್ನು ಅನುವಾದ ಮಾಡಿದ್ದಾನೆ.

ವೈದ್ಯಕೀಯ ಸಹಾಯ ಬಡಬಗ್ಗರಿಗೆ ಉಚಿತವಾಗಿ ದೊರೆಯಬೇಕು ಎಂಬ ವಿಷಯ ಪ್ರಚಲಿತವಾಗಿದ್ದ ಆ ಕಾಲದಲ್ಲಿ ಬಹಳಷ್ಟು ಜನ ವೈದ್ಯರು ಆ ಅಭಿನಂದನೀಯ ಉದ್ದೇಶಕ್ಕೆ ಬೆಂಬಲ ಕೊಟ್ಟರು. ಈ ಯೋಜನೆಯ ಬಗ್ಗೆ ಗಾರ್ತ್ ಬಹಳ ಆಸಕ್ತಿ ವಹಿಸಿದನಲ್ಲದೆ ಅದಕ್ಕಾಗಿ ಶ್ರಮಿಸಿದ ಕೂಡ. ಆದರೆ ಗ್ರಂದಿಗೆಯವರು ತಮ್ಮ ವ್ಯಾಪಾರ ಕುಂದುತ್ತದೆಂದು ಬಗೆದು ಆ ಸಲಹೆಗೆ ಒಪ್ಪಲಿಲ್ಲ. ತಿಕ್ಕಾಟ ಪ್ರಾರಂಭವಾಯಿತು. ಗಾರ್ತ್ ಈ ತಿಕ್ಕಾಟವನ್ನೇ ವಸ್ತುವಾಗಿಟ್ಟುಕೊಂಡು ತನ್ನ ಡಿಸ್ಪೆನ್ಸರಿ ಎಂಬುದೊಂದು ಆರು ಕಾಂಡಗಳ ವ್ಯಂಗ್ಯ ಕವನವನ್ನು ರಚಿಸಿದ. ಇಂದು ಸಾಮಾನ್ಯ ಸಾಹಿತ್ಯಾಸಕ್ತನಿಗೆ ಗಾರ್ತ್‌ನ ನೆನಪಿದ್ದಲ್ಲಿ ಅದು ಈ ಪದ್ಯದಿಂದ ಮಾತ್ರ. ಅತಿ ಉದ್ದವೆನ್ನಿಸುವ ಈ ಕೃತಿ ಕಡೆಗೂ ಹಠಾತ್ತನೆ ನಿಂತಂತೆ ತೋರುತ್ತದೆಯಲ್ಲದೆ ಸಹಜವಾಗಿ ಮುಗಿಯಿತೆನಿಸುವುದಿಲ್ಲ. ಅಲ್ಲಲ್ಲೇ ಕೆಲವು ಭಾಗಗಳು ಬಹಳ ಚೆನ್ನಾಗಿವೆ. ಪಿತ್ಥ ಗಹ್ವರದ ವರ್ಣನೆ, ಸಮಕಾಲೀನ ಲೇಖಕ ಸರ್ ರಿಚರ್ಡ್ ಬ್ಲ್ಯಾಕ್‌ಮೋರ್‌ಗೆ, ಮಾಡಿರುವ ಹಿತೋಪದೇಶ, ಅಟರ್‌ಬರಿಯ ಪಾತ್ರಚಿತ್ರಣ ಮುಂತಾಗಿ ಒಂದೆರಡನ್ನು ಹೆಸರಿಸಬಹುದು. ಕವನದ ಓಟ ಸರಾಗವಾಗಿದೆ.

1710ರಲ್ಲಿ ಹ್ವಿಗ್ ಸರ್ಕಾರ ಉರುಳಿದಾಗ ಲಾರ್ಡ್ ಗೊಡಾಲ್ಫಿನ್ ಪದಚ್ಯುತ ನಾದುದರ ಬಗ್ಗೆ ಬರೆದ ಸಣ್ಣ ಕವಿತೆಯೊಂದು ಅಡಿಸನ್ನನ ಪ್ರಶಂಸೆಗೆ ಪಕ್ಕಾಯಿತೆಂದು ಜಾನ್‌ಸನ್ ಹೇಳುತ್ತಾನೆ.

ನಿಷ್ಠ ಹ್ವಿಗ್ ಆಗಿದ್ದರೂ ಗಾರ್ತ್ ತನ್ನ ಉತ್ತಮ ಸ್ವಭಾವ, ವ್ಯಕ್ತಿಗಳಿಂದಾಗಿ ಎಲ್ಲರಿಗೂ ಬೇಕಾದವನಾಗಿ ಬಾಳಿದ. ಪೋಪ್‌ನಂಥ ತೀಕ್ಷ್ಣ ವಿಡಂಬಕ ಕೂಡ ಇವನ ವ್ಯಕ್ತಿತ್ವವನ್ನು ಮೆಚ್ಚಿ ಬರೆದಿದ್ದಾನೆ. (ಆರ್.ಎನ್.;ಎಸ್.ಟಿ.ಪಿ.)

**ಗಾರ್ನೆಟ್ :** ಸಂಮಿಶ್ರಿತ ಸಿಲಿಕೇಟ್ ಖನಿಜ. ಇದರಲ್ಲಿ ಸಾಮಾನ್ಯವಾಗಿ ಕಬ್ಬಿಣ, ಮ್ಯಾಂಗನೀಸ್, ಮ್ಯಾಗ್ನೀಸಿಯಂ, ಕ್ಯಾಲ್ಸಿಯಂ ಮತ್ತು ಅಲ್ಯೂಮಿನಿಯಂ ಧಾತುಗಳಿರುತ್ತವೆ. ಇದು ಗಾಜಿನಂಥ ಒಂದು ಬಗೆಯ ಖನಿಜ. ಪಾರದರ್ಶಕವಾದ ದಟ್ಟ ಕೆಂಪು ಜಾತಿಯ ಗಾರ್ನೆಟ್ ಅನ್ನು ರತ್ನವನ್ನಾಗಿ ಬಳಸುತ್ತಾರೆ. ಇದಕ್ಕೆ ರಕ್ತಮಣಿ, ಪದ್ಮರಾಗ ಎಂಬ ವಿವಿಧ ಹೆಸರುಗಳಿವೆ. ಇದರ ಕಾಠಿಣ್ಯ 6.5 – 7.5 . ಇದು ಬಹಳ ಹೇರಳವಾಗಿ ಸಿಕ್ಕುವ ಖನಿಜ ಮತ್ತು ಸಾಮಾನ್ಯವಾಗಿ ರೂಪಾಂತರಿತ ಶಿಲೆಗಳಾದ ಪದರು ಶಿಲೆ ಮತ್ತು ನೈಸ್‌ಗಳಲ್ಲಿ ಕಂಡುಬರುತ್ತದೆ. ಇದು ಹೆಚ್ಚಿನ ಪ್ರಮಾಣದಲ್ಲಿದ್ದಾಗ ಆ ಬಗೆಯ ರೂಪಾಂತರಿತ ಶಿಲೆಯನ್ನು ಗಾರ್ನೆಟ್ ಪದರು ಶಿಲೆಯೆಂದೂ ಕರೆಯುವುದುಂಟು. ಗಾರ್ನೆಟ್ ಎಂಬ ಹೆಸರು ರಚನೆಯಲ್ಲಿಯೂ ಹೊರ ರೂಪದಲ್ಲಿಯೂ ಭೌತ ಲಕ್ಷಣದಲ್ಲಿಯೂ ಹೆಚ್ಚು ಕಡಿಮೆ ಒಂದೇ ರೀತಿಯಲ್ಲಿರುವ ಏಳು ವಿಧದ ಬೇರೆ ಬೇರೆ ಖನಿಜಗಳಿಗೆ ಅನ್ವಯಿಸುತ್ತದೆ. ಇವೆಲ್ಲವೂ ಸಮಾನ ಪರಿಮಾಣದ ಸ್ಫಟಿಕಗಳಾಗಿ 12 ಅಥವಾ 24 ಲಂಬ ಕೋನ ಫಲಕಗಳಿರುವ ಹರಳುಗಳಂತೆ ರೂಪುಗೊಳ್ಳುತ್ತವೆ. ಅಲ್ಲದೆ ಕಣಗಳಾಗಿಯೂ ಉಂಡೆಗಳಾಗಿಯೂ ಸಿಗುವುದುಂಟು. ಈ ವರ್ಗದ ಖನಿಜಗಳು ಊದಾಬಣ್ಣ, ಕಂದು, ಕಿತ್ತಳೆ, ಕೆಂಪು, ಎಲೆಹಸುರು, ಪಚ್ಚೆಹಸುರು, ಕಪ್ಪು ಮತ್ತು ಬಣ್ಣ ರಹಿತವಾದ ವಿವಿಧ ಛಾಯೆಗಳಲ್ಲಿ ಕೂಡ ಸಿಗುತ್ತವೆ. ಅಪಾರಕ ವಿಧಗಳನ್ನು ಬಹುವಾಗಿ ಘರ್ಷಕ ವಸ್ತುವಾಗಿ ಉಪಯೋಗಿಸುತ್ತಾರೆ. ಈ ದೃಷ್ಟಿಯಿಂದ ಕಬ್ಬಿಣ ಸಂಯೋಜಿತ ಆಲ್ ಮಂಡಿನ್ ವಿಧದ ಗಾರ್ನೆಟ್ ಬಹಳ ಉತ್ತಮವಾದುದು. ಮರಳು ಕಾಗದದ ತಯಾರಿಕೆಗೆ ಸಾಮಾನ್ಯವಾಗಿ ಶುದ್ಧ ಗಾರ್ನೆಟ್ ಕಣಗಳನ್ನು ಉಪಯೋಗಿಸುತ್ತಾರೆ. ಇದರ ಹೊಳಪು ಮುತ್ತಿನಂತೆ ಅಥವಾ ಗಾಜಿನಂತೆ. ಸಾಂದ್ರತೆ 3.15 – 4.3.

ಭಾರತದಲ್ಲಿ ಗಾರ್ನೆಟ್ ದೊರೆಯುವ ಮುಖ್ಯ ಪ್ರದೇಶಗಳು ತಿರುನೆಲ್ವೇಲಿ, ನೆಲ್ಲೂರು, ಹೈದರಾಬಾದು, ತಿರುವಾಂಕೂರು, ಕೋಲಾರ, ತುಮಕೂರು ಬಾಗಲಪುರ (ಬಿಹಾರ್), ಕಿಷನ್‌ಘರ್ (ರಾಜಸ್ತಾನ), ಸರ್ಗೂಜ (ಮಧ್ಯಪ್ರದೇಶ) ಇತ್ಯಾದಿ.


ಕರ್ನಾಟಕದಲ್ಲಿ ಈ ಖನಿಜ ವಿಸ್ತಾರವಾಗಿ ಹರಡಿದ್ದು ಪ್ರತಿಯೊಂದು ಜಿಲ್ಲೆಯಲ್ಲಿಯ ಅನೇಕ ವಿಧದ ಪದರು ಶಿಲೆ, ನೈಸ್, ಸುಣ್ಣಶಿಲೆ ಮುಂತಾದವುಗಳಲ್ಲಿ ಸಂಪರ್ಕ ರೂಪಾಂತರ ಖನಿಜವಾಗಿ ದೊರೆಯುತ್ತದೆ. (ಟಿ.ಟಿ.)

**ಗಾರ್‌ನೆಟ್, ಡೇವಿಡ್ :** 1892–1981. ಇಂಗ್ಲಿಷ್ ಕಾದಂಬರಿಕಾರ. ಹುಟ್ಟಿದ್ದು ಬ್ರೈಟನ್‌ನಲ್ಲಿ. ಪಿತಾಮಹ ರಿಚರ್ಡ್ ಗಾರ್‌ನೆಟ್ ಪ್ರಸಿದ್ಧ ಗ್ರಂಥಪಾಲ. ತಂದೆ ಎಡ್ವರ್ಡ್ ಗಾರ್ನೆಟ್ ನಾಟಕಕಾರ. ತಾಯಿ ಕಾನ್ಸ್‌ಟೆನ್ಸ್ ರಷ್ಯನ್ ಕಾದಂಬರಿಗಳ ಅನುವಾದಕಿ. ಹೀಗಾಗಿ ಈತ ಸಾಹಿತ್ಯಕ ವಾತಾವರಣದಲ್ಲೇ ಬೆಳೆದ. ಈತನ ವಿದ್ಯಾಭ್ಯಾಸ ದಕ್ಷಿಣ ಕೆನ್‌ಸಿಂಗ್‌ಟನ್ನಿನ ರಾಯಲ್ ಕಾಲೇಜಿನಲ್ಲಿ ನಡೆಯಿತು. ಅಲ್ಲಿ ಐದು ವರ್ಷ ಸಸ್ಯವಿಜ್ಞಾನವನ್ನು ಅಭ್ಯಸಿಸಿದ. ಲಂಡನ್ನಿನ ಟ್ಯುಟೋರಿಯಲ್ ಕಾಲೇಜಿನ ವಿದ್ಯಾರ್ಥಿ ಯಾಗಿದ್ದಾಗ ಬ್ರಿಟಿಷರ ಕೈದಿಯಾಗಿದ್ದ ವಿನಾಯಕ ಸಾವರ್ಕರರನ್ನು ಬಿಡಿಸಲು ನಡೆದ ಗುಪ್ತಚರ್ಯೆಯಲ್ಲಿ ಈತ ಭಾಗವಹಿಸಿದ್ದ. 1919ರಲ್ಲಿ ಸೊಹೊನಲ್ಲಿ ಪುಸ್ತಕಗಳ ಅಂಗಡಿಯೊಂದನ್ನು ತೆರೆದ. ಈತನ ಮೊದಲ ಪುಸ್ತಕ ಲೇಡಿ ಇನ್‌ಟು ಫಾಕ್ಸ್ (1923) ಒಂದು ಕಾದಂಬರಿ. ಇದರಲ್ಲಿ ಹೆಂಡತಿಯೊಬ್ಬಳು ನರಿಯಾಗಿ ಮಾರ್ಪಾಟಾದ ಘಟನೆಯೊಂದನ್ನವಲಂಬಿಸಿದಂತೆ ಕಲ್ಪಿತ ಕಥೆಯೊಂದನ್ನು ಹೆಣೆದಿದ್ದಾನೆ. ಈ ಕಾದಂಬರಿ ಈತನಿಗೆ ಹಥಾರ್ನ್‌ಡನ್ ಮತ್ತು ಟೇಟ್ ಮೆಮೋರಿಯಲ್ ಬಹುಮಾನಗಳನ್ನು ತಂದುಕೊಟ್ಟಿತು (1923). ಎ ಮ್ಯಾನ್ ಇನ್ ದಿ ಜೂ (1924), ದಿ ಸೈಲ್ಲರ್ಸ್ ರಿಟರ್ನ್( 1925). ಗೊ ಷಿ ಮಸ್ಟ್ ! (1927), ನೊ ಲವ್ (1929), ದಿ ಗ್ರ್ಯಾಸ್‌ಹಾಪ್ಪರ್ ಕಮ್ (1931)–ಇವು ಈತನ ಇತರ ಕಾದಂಬರಿಗಳು. ದಿ ಗೋಲ್ಡನ್ ಎಕೊ (1953) ಮತ್ತು ಫ್ಲವರ್ ಆಫ್ ದಿ ಫಾರೆಸ್ಟ್ (1955)–ಇವು ಈತನ ಆತ್ಮವೃತ್ತಗಳು. ಎ ಟೆರಿಬಲ್ ಡೆ (1932) ಎಂಬುದು ಸಣ್ಣಕತೆಗಳ ಸಂಕಲನ. 1952 ರಲ್ಲಿ ಈತನಿಗೆ ಸಿ.ಬಿ.ಇ ಪದವಿ ಲಭಿಸಿತು. (ಎಲ್.ಎಸ್.ಎಸ್.)



**ಗಾರ್ನೆಟ್, ರಿಚರ್ಡ್ :** 1835–1906. ಇಂಗ್ಲಿಷ್ ಕಥೆಗಾರ, ಜೀವನ ಚರಿತ್ರೆಗಳ ಕರ್ತೃ. ಈತನ ತಂದೆ ಬ್ರಿಟಿಷ್ ಮ್ಯೂಸಿಯಂನ ಮುದ್ರಿತ ಗ್ರಂಥ ಭಾಗದ ಸಹಾಯಕ ಪಾಲಕನಾಗಿದ್ದ. ಹುಟ್ಟಿದ್ದು ಲಿಚ್‌ಫೀಲ್ಡ್‌ನಲ್ಲಿ. ವಿದ್ಯಾಭ್ಯಾಸ ಬ್ಲೂಂಸ್‌ಬರೀ ಶಾಲೆಯಲ್ಲಿ. 1851ರಲ್ಲಿ ಬ್ರಿಟಿಷ್ ಮ್ಯೂಸಿಯಂನ ಸಹಾಯಕ ಗ್ರಂಥಪಾಲನಾಗಿ ಸೇರಿ ಸುಮಾರು 50 ವರ್ಷಗಳ ಕಾಲ ಅಮೂಲ್ಯ ಸೇವೆ ಸಲ್ಲಿಸಿದ. ನಿಂತು ಹೋಗಿದ್ದ ಪುಸ್ತಕಗಳ ಪಟ್ಟಿಯನ್ನು ಮುಂದುವರಿಸಿ ಮುಗಿಸಿದ. ಹೊಸ ಬಗೆಯ ಪುಸ್ತಕ ಕಪಾಟುಗಳನ್ನು ಸೇರಿಸಿದ ಕೀರ್ತಿ ಇವನದು. ಈ ಅವಧಿಯಲ್ಲಿ ಸಾಹಿತ್ಯಕ್ಕೆ ಸಂಬಂಧಿಸಿದ ಪುಸ್ತಕಗಳ ಬಗ್ಗೆ ಅಪಾರ ಜ್ಞಾನವನ್ನು ಗಳಿಸಿಕೊಂಡ. ಗ್ರೀಕ್, ಜರ್ಮನ್, ಇಟಾಲಿಯನ್, ಸ್ಪ್ಯಾನಿಷ್, ಪೋರ್ಚುಗೀಸ್ ಭಾಷೆಗಳಿಂದ ಅನುವಾದ ಮಾಡಿದುದಲ್ಲದೇ ಕೆಲವು ಕವನಗಳನ್ನು ಬರೆದ. ಕಾರ್ಲೈಲ್, ಮಿಲ್ಟನ್, ಬ್ಲೇಕ್, ಎಮರ್‌ಸನ್ ಇವರ ಜೀವನ ಚರಿತ್ರೆಗಳನ್ನು ಬರೆದುದಲ್ಲದೆ ಡಿಕ್ಷನರಿ ಆಫ್ ನ್ಯಾಷನಲ್ ಬಯಾಗ್ರಫಿ ಎಂಬ ಕೋಶಕ್ಕೆ ಮತ್ತು ಇತರ ವಿಶ್ವಕೋಶಗಳಿಗೆ ಅನೇಕ ಲೇಖನಗಳನ್ನು ನೀಡಿದ. ಸಾಹಿತ್ಯ ವಿಮರ್ಶೆಯ ಕ್ಷೇತ್ರದಲ್ಲಿ ರೆಲಿಕ್ಸ್ ಆಫ್ ಷೆಲಿ (1862) ಮತ್ತು ಇಟಲಿಯ ಸಾಹಿತ್ಯ ಚರಿತ್ರೆ (1898)–ಇವು ಈತನ ಮುಖ್ಯ ಕೃತಿಗಳು. ದಿ ಟ್ವೈಲೈಟ್ ಆಫ್ ದಿ ಗಾಡ್ಸ್ (1888) ನವುರು ವಿಡಂಬನೆಯಿಂದ ಕೂಡಿದ, ಮನಸ್ಸನ್ನೊಲಿಸುವ ನೀತಿಕಥೆಗಳ ಸಂಕಲನ. ಇದರಲ್ಲಿ ಆನಂದ, ದಿ ಮಿರಕಲ್ ವರ್ಕರ್ ಎಂಬ ಕಥೆ ಸ್ವಾರಸ್ಯವಾದದ್ದು. ಬುದ್ಧನ ಅಣತಿಯನ್ನು ಮೀರಿ ಪವಾಡಗಳಿಂದ ಬೌದ್ಧಧರ್ಮವನ್ನು ಹರಡಲು ಪ್ರಯತ್ನಿಸಿ ಪಾಡುಪಟ್ಟ ಆನಂದನ ಕಥೆ ಇದರ ವಸ್ತು. (ಎಲ್.ಎಸ್.ಎಸ್.)

**ಗಾರ್‌ಪೈಕ್ :** ಆಸ್ಟಿಯಿಕ್ತಿಸ್ ವರ್ಗದ ಲೆಪಿಸಾಸ್ಟಿಯೈಫಾರ್ಮೀಸ್ ಗಣದ ಲೆಪಿಸಾಸ್ಟಿಡೀ ಕುಟುಂಬಕ್ಕೆ ಸೇರಿದ ಮೀನುಗಳಿಗಿರುವ ಸಾಮಾನ್ಯ ಹೆಸರು. ಗಾರ್‌ಪೈಕ್‌ಗಳು ಉತ್ತರ ಅಮೆರಿಕ ಮತ್ತು ಮಧ್ಯ ಅಮೆರಿಕದ ಸಿಹಿ ನೀರು ಮತ್ತು ಅಳಿವೆಗಳಲ್ಲಿ ಕಾಣಸಿಗುತ್ತವೆ. ಇವುಗಳು ಹೋಲಾಸ್ಟಿಯನ್ ಗುಂಪಿಗೆ ಸೇರಿದ ಮೀನುಗಳು. ಇವು ಬಲು ಪ್ರಾಚೀನ ಬಗೆಯವು. ಮೀಸೋಜೋಯಿಕ್ ಕಾಲದಿಂದಲೂ ಅಸ್ತಿತ್ವದಲ್ಲಿವೆ ಯೆಂದು ಹೇಳಲಾಗಿದೆ. ವಿಕಸನ ಪಥದಲ್ಲಿ ಅತ್ಯಂತ ಮುಂದುವರೆದ ಎಲುಬು ಮೀನುಗಳಾದ ಟೀಲಾಸ್ಟಿಯನ್ ಮೀನುಗಳ ಪೂರ್ವಜ ಮೀನುಗಳು. ಪ್ರಸ್ತುತ 10 ಪ್ರಭೇದಗಳು ಮಾತ್ರ ಈ ಗುಂಪಿನಲ್ಲಿವೆ. ಗಾರ್‌ಪೈಕ್‌ಗಳಿಗೆ ತೆಳುವಾದ, ಕೊಳವೆಯಂಥ ದೇಹ, ಕೊಕ್ಕಿನಂತೆ ಉದ್ದವಾದ ಮತ್ತು ಹಲವಾರು ಸಾಲು ಹಲ್ಲುಗಳುಳ್ಳ ಮೂತಿ, ನುಣುಪಾದ, ಹೊಳೆಯುವ ದೃಢವಾದ ಗನಾಯ್ಡ್ ಆಕೃತಿಯ ಹುರುಪೆಗಳು, ಚಿಕ್ಕ ಈಜುರೆಕ್ಕೆಗಳು, ಬಾಲದ ರೆಕ್ಕೆಗೆ ಹತ್ತಿರವಿರುವ ಬೆನ್ನಿನ ಈಜುರೆಕ್ಕೆ, ಇವು ಈ ಮೀನುಗಳ ಪ್ರಮುಖ ಲಕ್ಷಣಗಳು. ಇವು ಮಾಂಸಾಹಾರಿ ಮೀನುಗಳು. ಸಾಮಾನ್ಯವಾಗಿ ನಿಧಾನ ಪ್ರವೃತ್ತಿಯ ಮೀನುಗಳಾಗಿದ್ದು ತನ್ನ ಬೇಟೆ ಕಂಡಾಗ ಚುರುಕಾಗಿ ಮೇಲೆರಗಿ ಕಬಳಿಸುತ್ತವೆ. ಅತ್ಯಂತ ದೊಡ್ಡದಾದ ಗಾರ್‌ಪೈಕ್ ದೈತ್ಯ ಅಲಿಗೇಟರ್ ಗಾರ್ (ಲೆಪಿಸೊಸ್ಟಿಯಸ್ ಟ್ರಿಸ್ಟೋಯಿಕಸ್) ಮೀನು ಸುಮಾರು 3.5 ಮೀಟರಿಗೂ ಉದ್ದವಾಗಿ ಬೆಳೆಯುತ್ತದೆ. ಇನ್ನೊಂದು ಪ್ರಬೇಧ ಲೆ. ಆಸಿಯಸ್ (ಲಾಂಗ್‌ನೋಸ್ ಗಾರ್).



ಗಾರ್‌ಪೈಕ್ ಗಳಿಗೆ ಶತ್ರುಗಳು ಕಡಿಮೆ. ಇವುಗಳ ಗಡುಸಾದ ಗ್ಯಾನಾಯ್ಡ್ ಹುರುಪೆಗಳ ಹೊದಿಕೆ ತುಂಬಾ ಗಟ್ಟಿಯಾಗಿರುವುದರಿಂದ ಇವನ್ನು ಬೇರೆ ಮೀನುಗಳು ತಿನ್ನಲಾರವು. ಅಲ್ಲದೆ ಇವುಗಳ ಮೊಟ್ಟೆಗಳು ಸಹ ಬಹಳ ವಿಷಪೂರಿತವಾಗಿರುವುದರಿಂದ ಯಾವ ಪ್ರಾಣಿಗಳು ಇವನ್ನು ತಿನ್ನುವುದಿಲ್ಲ. ಇದರಿಂದಾಗಿ ಕೆಲವು ಸಲ ಇವು ಸಂಖ್ಯೆಯಲ್ಲಿ ವೃದ್ಧಿಗೊಂಡು ಬೇರೆ ಮೀನುಗಳಿಗೆ ಹಾನಿಕಾರಕವಾಗುವುದುಂಟು. (ಬಿ.ಎಚ್.ಎಮ್.)

**ಗಾರ್ಫೀಲ್ಡ್, ಜೇಮ್ಸ್ ಏಬ್ರಂ :** 1831–81. ಅಮೆರಿಕ ಸಂಯುಕ್ತ ಸಂಸ್ಥಾನದ ಇಪ್ಪತ್ತನೆಯ ಅಧ್ಯಕ್ಷ. ಒಹಾಯೊ ರಾಜ್ಯದ ಕಹಾಗ ಕೌಂಟಿಯ ಆರೆಂಜ್ ಎಂಬ ನಗರದ ಬಳಿ ಸಣ್ಣ ಹೊಲವೊಂದರ ಗುಡಿಸಲೊಂದರಲ್ಲಿ 1831ರ ನವೆಂಬರ್ 19ರಂದು ಹುಟ್ಟಿದ. ಗಾರ್ಫೀಲ್ಡನಿಗೆ ಕೇವಲ ಎರಡು ವರ್ಷ ವಯಸ್ಸಾಗಿದ್ದಾಗ ತಂದೆ ತೀರಿಕೊಂಡ. ಸಂಸಾರ ಬಡತನವನ್ನು ಎದುರಿಸ ಬೇಕಾಯಿತು. ತಾಯಿ ಧೈರ್ಯ ದಿಂದ ತನ್ನ ಹಿರಿಯ ಮಗನೊಂದಿಗೆ ಹೊಲದ ಕೆಲಸ ನಿರ್ವಹಿಸಿದಳು. ಮಕ್ಕಳು ತಾಯಿಯ ಅಂಕೆಯಲ್ಲಿ ಸುಶಿಕ್ಷಿತರಾಗಿ ಬೆಳೆದರು. ದುಡಿಮೆಯ ಬೆಲೆ ಅರಿತರು. ಚರ್ಚಿನಲ್ಲಿ ಶ್ರದ್ಧೆ ಮೂಡಿಸಿ ಕೊಂಡರು,



1856ರಲ್ಲಿ ಗಾರ್ಫೀಲ್ಡ್ ವಿಲಿಯಮ್ಸ್ ಕಾಲೇಜ್‌ನಿಂದ ಪದವೀಧರನಾದ. ಅನಂತರ ಸ್ವಲ್ಪ ಕಾಲ ಹಿರಾಯ್‌ನಲ್ಲಿಯ ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಾಪಕನಾಗಿದ್ದ. ಕ್ರೈಸ್ತವಲಯಗಳಲ್ಲಿ ಒಳ್ಳೆಯ ಉಪನ್ಯಾಸಕನೆಂದು ಇವನಿಗೆ ಹೆಸರು ಬಂದಿತ್ತು. ಹೊಸದಾಗಿ ಸ್ಥಾಪಿತವಾಗಿದ್ದ ರಿಪಬ್ಲಿಕನ್ ಪಕ್ಷದ ಕಡೆಗೆ ಈತನ ಒಲವು ಬೆಳೆದಿತ್ತು. 1859ರಲ್ಲಿ ಒಹಾಯೊ ವಿಧಾನ ಮಂಡಲಕ್ಕೆ ಸದಸ್ಯನಾಗಿ ಆಯ್ಕೆ ಹೊಂದಿದ. ಅಮೆರಿಕನ್ ಅಂತರ್ಯುದ್ಧ ಕಾಲದಲ್ಲಿ ಇವನು ಸೇನೆಗೆ ಯೋಧರನ್ನು ಸಂಗ್ರಹಿಸಿ ಸ್ವತಃ ಕರ್ನಲ್ ಆಗಿ ಹೋರಾಡಿದ. ಎರಡು ವರ್ಷಗಳಲ್ಲಿ ಇವನು ಮೇಜರ್ ಜನರಲ್ ದರ್ಜೆಗೆ ಏರಿದ್ದ.

19ನೆಯ ಒಹಾಯೊ ಜಿಲ್ಲೆಯಿಂದ ಕಾಂಗ್ರೆಸಿಗೆ ಗಾರ್ಫೀಲ್ಡನ ಆಯ್ಕೆಯಾಯಿತು (1863). ಚೈತನ್ಯಶೀಲನೂ ದಕ್ಷನೂ ಸ್ನೇಹಪ್ರಿಯನೂ ಆಗಿದ್ದ ಗಾರ್ಫೀಲ್ಡ್ ಬಹು ಬೇಗ ಖ್ಯಾತಿ ಗಳಿಸಿದ. ಮುಂದಿನ ಹದಿನಾರು ವರ್ಷಗಳ ಅವಧಿಯಲ್ಲಿ ನಡೆದ

ಚುನಾವಣೆಗಳಲ್ಲಿ ಇವನು ಸಾಮಾನ್ಯವಾಗಿ ಹೆಚ್ಚು ಕಷ್ಟವಿಲ್ಲದೆ ಕಾಂಗ್ರೆಸಿಗೆ ಆಯ್ಕೆ ಹೊಂದುತ್ತಿದ್ದ. ಅವು ಅಂತರ್ಯುದ್ಧದ, ರಾಷ್ಟ್ರ ಪುನರ್ರಚನೆಯ, ಕ್ಷೋಭೆಯ ದಿನಗಳು. ರಿಪಬ್ಲಿಕನ್ ಪಕ್ಷದಲ್ಲಿ ಗಾರ್ಫೀಲ್ಡ್ ಒಬ್ಬ ಸಂಪ್ರದಾಯವಾದಿಯಾಗಿದ್ದ. ಹಣಸಂಬಂಧವಾಗಿ ರಾಜಕೀಯ ಕ್ಷೇತ್ರಗಳಲ್ಲಿ ಅನೈತಿಕ ವ್ಯವಹಾರಗಳು ಆಗ ವಿಶೇಷವಾಗಿ ತೋರಿಬಂದಿದ್ದುವು. ಇವನಿಗೂ ಅಂಥ ಅಪವಾದದ ಅಂಟು ಹತ್ತದೆ ಇರಲಿಲ್ಲ. 1880 ರಲ್ಲಿ ಈತ ಸೆನೆಟಿಗೆ ಆಯ್ಕೆ ಹೊಂದಿದ. ಅಮೆರಿಕ ಸಂಯುಕ್ತಸಂಸ್ಥಾನದ ಅಧ್ಯಕ್ಷ ಪದವಿಗೆ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಿ ಜಯಗಳಿಸಿದ. ಆ ಪದವಿಗೆ ಜಾನ್ ಷೆರ್ಮನನನ್ನು ಅಭ್ಯರ್ಥಿಯಾಗಿ ನಾಮಕರಣ ಮಾಡಲು ಈತ ಪ್ರಯತ್ನಿಸಿದ. ಈ ಸಂಬಂಧವಾಗಿ ಬಿಕ್ಕಟ್ಟು ಸಂಭವಿಸಿ ಕೊನೆಗೆ ಅದಕ್ಕೆ ಗಾರ್ಫೀಲ್ಡನ ನಾಮಕರಣವಾಯಿತು. ಪಕ್ಷದ ಹಲವಾರು ಪ್ರಬಲ ಗುಂಪುಗಳು ಇವನ ಅಭ್ಯರ್ಥಿತನವನ್ನು ವಿರೋಧಿಸುತ್ತಿದ್ದುವು. ಕೊನೆಗೆ ಈತ ಕೆಲವೇ ಮತಗಳಿಂದ ವಿಜಯಗಳಿಸಿ, 1881 ರ ಮಾರ್ಚ್ 4 ರಂದು ಅಧಿಕಾರಾರೋಹಣ ಮಾಡಿದ. ಪಕ್ಷದಲ್ಲಿದ್ದ ಈತನ ಶತ್ರುಗಳು ಇವನ ವಿರುದ್ಧ ಹೋರಾಟ ನಡೆಸಿದರು. ತಮಗೆ ಹಲವಾರು ಸವಲತ್ತುಗಳನ್ನು ನೀಡದಿದ್ದರೆ ಸಹಕಾರ ನೀಡುವುದಿಲ್ಲವೆಂದು ಹೇಳಿ ಒತ್ತಾಯ ಹಾಕಿದರು. ಗಾರ್ಫೀಲ್ಡ್ ಮಣಿಯಲಿಲ್ಲ. ಜುಲೈ 2 ರಂದು ಚಾರಲ್ಸ್ ಜೆ, ಗಿಟೌ ಎಂಬವನು ಇವನ ಮೇಲೆ ಗುಂಡು ಹಾರಿಸಿದ. ಆತ ಗಾರ್ಫೀಲ್ಡನಿಂದ ಹುದ್ದೆಯೊಂದನ್ನು ಬಯಸಿ ನಿರಾಶನಾಗಿದ್ದವನೆಂದೂ ಪ್ರಾಯಶಃ ಮತಿವಿಕಲನಾಗಿದ್ದನೆಂದು ಹೇಳಲಾಗಿದೆ. ಸೆಪ್ಟೆಂಬರ್ 19ರಂದು ಗಾರ್ಫೀಲ್ಡ್ ನಿಧನ ಹೊಂದಿದ. (ಎಂ.ಯು.)

**ಗಾರ್‌ಬೂರ್ಗ್, ಆರ್ನ್ ಎವನ್‌ಸನ್ :** 1851–1924. ನಾರ್ವೆ ದೇಶದ ಕಾದಂಬರಿಕಾರ, ಕವಿ, ನಾಟಕಕಾರ. ನವ ನಾರ್ವಿಜಿಯನ್ ಬರೆಹದಲ್ಲಿ ಪ್ರಥಮ ಪಂಕ್ತಿಗೆ ಸೇರುವ ಸಾಹಿತಿ.

ಗಾರ್‌ಬೂರ್ಗ್ ರೈತನ ಮಗ. ಮಧ್ಯಯುಗದಿಂದ ನಾರ್ವೆಯ ಗ್ರಾಮೀಣ ಜೀವನದಲ್ಲಿ ನಡೆದುಕೊಂಡು ಬಂದಿದ್ದ ವ್ಯವಸ್ಥೆ ಕುಸಿಯುತ್ತಿದ್ದ ಕಾಲದಲ್ಲಿ ಇವನ ಬಾಲ್ಯ, ಯೌವನಗಳು ಸಾಗಿದುವು. ತಂದೆ ಅತಿ ಧಾರ್ಮಿಕ ಮನೋಧರ್ಮದವನು. ಇದೇ ಅವನ ಸಾವಿಗೂ ಕಾರಣವಾಯಿತು. ಈ ಎರಡು ಅಂಶಗಳೂ ಗಾರ್‌ಬೂರ್ಗ್‌ನ ಜೀವನ ಮತ್ತು ಬರೆಹಗಳ ಮೇಲೆ ಪ್ರಭಾವ ಬೀರಿದುವು. ಇವನಿಗೆ ವಿದ್ಯಾಭ್ಯಾಸ ದೊರೆಯುವುದೇ ಕಷ್ಟವಾಯಿತು. ಹಲವು ಅಡ್ಡಿಗಳನ್ನು ಎದುರಿಸಿ ಕ್ರಿಸ್ಟಿಯಾನ ವಿಶ್ವವಿದ್ಯಾಲಯದಲ್ಲಿ ಅಭ್ಯಾಸ ಮಾಡಿದ. ಇವನು ವಿದ್ಯಾರ್ಥಿ ಜೀವನವನ್ನು ಕುರಿತು ಬರೆದ ಬಾಂಡೇ ಸ್ಟೂಡೆಂಟೆ (1883) ಆಗ ಜನಪ್ರಿಯವಾಗಿದ್ದ ಸ್ವೇಚ್ಛಾಪ್ರವೃತ್ತಿಯ, ಸಹಜತಾವಾದದ ಕಾದಂಬರಿಗಳನ್ನೇ ಅನುಸರಿಸಿದರೂ ಒಳ್ಳೆಯ ಕಥೆ ಎನಿಸಿದೆ. ಗಾರ್‌ಬೂರ್ಗ್ ಬೇಸರಪಟ್ಟು ಬೇಗ ಈ ಪಂಥದಿಂದ ದೂರನಾದ. ಗ್ರಾಮಜೀವನ ವಿಚ್ಛಿದ್ರವಾಗುವುದರಿಂದ ರೈತರ ಬಾಳಿನಲ್ಲಿ ತಲೆದೋರಿದ ಧಾರ್ಮಿಕ ಮತ್ತು ಅಂತಃಕರಣದ ಸಮಸ್ಯೆಗಳನ್ನು ಫ್ರೆಡ್ (1892) ಎಂಬ ಕಾದಂಬರಿಯಲ್ಲಿ ಸೂಕ್ಷ್ಮವಾಗಿ ನಿರೂಪಿಸಿದ. ಇದೇ ವಸ್ತುವನ್ನು ಕುರಿತು ಇನ್ನೆರಡು ಕಾದಂಬರಿಗಳನ್ನೂ ಒಂದು ನಾಟಕವನ್ನೂ ಬರೆದ. ಈ ಕೃತಿಗಳಲ್ಲೆಲ್ಲ ಆಳವಾದ ಧಾರ್ಮಿಕ ಭಾವನೆಯುಂಟು. ಬರೆಹಗಾರರು ಬಳಸುತ್ತಿದ್ದ ಡೇನೋ ನಾರ್ವಿಜಿಯನ್ ಮಾಧ್ಯಮದ ಬದಲು, ಪ್ರಾಚೀನ ನಾರ್ಸ್ಕ್‌ನಿಂದ ಬಂದ ರೈತರ ಭಾಷೆಯ ಆಧಾರದ ಮೇಲೆ ಸಾಹಿತ್ಯಕ್ಕಾಗಿ ನಾರ್ವಿಜಿಯನ್ ಭಾಷೆಯನ್ನು ಹೊಸದಾಗಿ ರೂಪಿಸಬೇಕೆಂಬ ಸಾಹಿತಿಗಳ ಪಂಥಕ್ಕೆ ನಾಯಕನಾದ. ಇವನ ಭಾವಗೀತೆಗಳ ಚಕ್ರ ಹೌಟುಸ (1895) ರೈತರ ಭಾಷೆಯಲ್ಲಿಯೇ ಇದೆ. ಇದು ಅತಿಮಾನುಷದಲ್ಲಿ ಹುಡುಗಿಯೊಬ್ಬಳಿಗಿದ್ದ ನಂಬಿಕೆಯನ್ನು ನಿರೂಪಿಸುತ್ತದೆ. ಮಧ್ಯಯುಗದ ನಂಬಿಕೆಗಳು, ಪದ್ಧತಿಗಳು ಇನ್ನೂ ಜೀವಂತವಾಗಿದ್ದ ಯುಗದ ಜೀವನವನ್ನು ಈ ಕವನಚಕ್ರ ಬಣ್ಣಿಸುತ್ತದೆ. ಇವನ ಭಾಷೆಗೆ ಭಾವನೆಗಳನ್ನು ಪ್ರಚೋದಿಸುವ ವಿಶೇಷ ಸಾಮರ್ಥ್ಯ ಉಂಟು. ಈ ಕವನಚಕ್ರ ಮತ್ತು ಫ್ರೆಡ್ ಇವನಿಗೆ ನವನಾರ್ವಿಜಿಯನ್ ಭಾಷೆಯ ಸಾಹಿತ್ಯದಲ್ಲಿ ಬಹು ಹಿರಿಯ ಸ್ಥಾನವನ್ನು ಗಳಿಸಿಕೊಟ್ಟಿದೆ.

ಗಾರ್‌ಬೂರ್ಗ್ ವಿಶಾಲ ಮನೋಭಾವದ ಅಭಿಪ್ರಾಯಗಳಿಸಿ ಹೆಸರು ಪಡೆದ ಪತ್ರಿಕೆಯೊಂದರ ಸ್ಥಾಪಕ ಸಂಪಾದಕನಾಗಿದ್ದನಲ್ಲದೆ ಹೋಮರನ ಒಡಿಸ್ಸಿಯನ್ನೂ (1918) ಮಹಾಭಾರತದಿಂದ ಆಯ್ದ ಭಾಗಗಳನ್ನೂ (1921) ಅನುವಾದ ಮಾಡಿದ್ದಾನೆ. ಇವನ ಕತೆಗಳು ಯುರೋಪಿನ ಹಲವು ಭಾಷೆಗಳಿಗೆ ಅನುವಾದವಾಗಿವೆ. ಈತನ ಎಲ್ಲ ಬರೆಹಗಳನ್ನೂ 8 ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ (1944). (ಎಲ್.ಎಸ್.ಎಸ್.)

**ಗಾರ್ಬೋ, ಗ್ರೆಟ :** 1905–90. ಖ್ಯಾತ ಚಲನಚಿತ್ರ ತಾರೆ. ಸ್ವೀಡನ್ನಿನವಳು. ಗ್ರೆಟ ಲೋವಿಸ ಗುಸ್ಟಾಫ್‌ಸನ್ ಎಂದು ಈಕೆಯ ಚಿತ್ರರಂಗದ ಹೆಸರು. ಈಕೆ ಜನಿಸಿದ್ದು ಸ್ಟಾಕ್ ಹೋಂನಲ್ಲಿ. ತಂದೆತಾಯಿಗಳು ಕಡುಬಡವ ಕುಟುಂಬದವರು. ತನ್ನ 14ನೆಯ ವಯಸ್ಸಿನ ವೇಳೆಗೆ ಅಲ್ಲಿನ ಗ್ರ್ಯಾಮರ್ ಶಾಲೆಯ ವಿದ್ಯಾಭ್ಯಾಸ ಮುಗಿಸಿಕೊಂಡು, ತಂದೆ ತೀರಿಕೊಂಡ ಕಾರಣ ದಿನಬಳಕೆಯ ವಸ್ತುಗಳ ಅಂಗಡಿಯೊಂದರಲ್ಲಿ ಈಕೆ ಕೆಲಸ ಮಾಡಿದಳು. ಕ್ಷೌರದ ಅಂಗಡಿಯಲ್ಲೂ ಕೆಲಸ ಮಾಡಿದ್ದುಂಟು. ಕೆಲವಾರು ಜಾಹೀರಾತು ಚಲನಚಿತ್ರಗಳಲ್ಲಿ ಕಾಣಿಸಿಕೊಂಡಿದ್ದ ಈಕೆಗೆ 1921ರಲ್ಲಿ ಎರಿಕ್ ಪೆಟ್ಸ್‌ಚರ್ಲ್ಸ್‌ನ ಪೀಟರ್ ದಿ ಟ್ರ್ಯಾಂಪ್ ಎಂಬ ಹಾಸ್ಯಮಯ ಚಿತ್ರದಲ್ಲಿ ಒಂದು ಸಣ್ಣ



ಪಾತ್ರ ಸಿಕ್ಕಿತು. ಅನಂತರ ಈಕೆ ಸ್ಟಾಕ್‌ಹೋಂನಲ್ಲಿ ರಾಯಲ್ ಅಕಾಡೆಮಿ ಆಫ್ ಡ್ರಮ್ಯಾಟಿಕ್ ಆರ್ಟ್ ಸಂಸ್ಥೆಯಲ್ಲಿ 1922 ರಿಂದ 1924 ರವರೆಗೆ ಅಭಿನಯ ಕಲೆಯ ಅಭ್ಯಾಸ ಮಾಡಿದಳು. ಮಾರಿಟ್ಜ್ ಸ್ಟಿಲ್ಲರ್ ಎಂಬ ಚಲನಚಿತ್ರ ನಿರ್ದೇಶಕ ತನ್ನ ದಿ ಸ್ಟೋರಿ ಆಫ್ ಗೋಷ್ಟಾ ಬರ್ಲಿಂಗ್ (1924) ಎಂಬ ಚಿತ್ರದಲ್ಲಿ ಕೌಂಟೆಸ್ ದ್ಯೋನಳ ಪಾತ್ರವಹಿಸಲು ಈಕೆಯನ್ನು ಆಯ್ಕೆ ಮಾಡಿದ. ಈತನೇ ಈಕೆಗೆ ಗ್ರೆಟ ಗಾರ್ಬೋ ಎಂಬ ಹೆಸರನ್ನಿತ್ತದ್ದು. ಸಿನಿಮಾ ರಂಗದ ನಟನೆಯ ಎಲ್ಲ ತಂತ್ರಗಳನ್ನೂ ಆತ ಈಕೆಗೆ ಹೇಳಿಕೊಟ್ಟ. ಸ್ಟಿಲ್ಲರನೊಡನೆ ಭೇಟಿಯಾದುದು ಗಾರ್ಬೋಳ ಜೀವನದಲ್ಲಿ ಒಂದು ಮಹತ್ತ್ವದ ಘಟನೆ. ಈಕೆ ಪಾತ್ರವಹಿಸಿದ ಮತ್ತಾವುದೇ ಚಿತ್ರವನ್ನು ಆತ ನಿರ್ದೇಶಿಸಲಿಲ್ಲವಾದರೂ ಸದಾಕಾಲವೂ ಈಕೆಯ ಬಳಿಯಲ್ಲೇ ಇರುತ್ತಿದ್ದ. ದಿ ಜಾಯ್‌ಲೆಸ್ ಸ್ಟ್ರೀಟ್ ಎಂಬ ಚಿತ್ರದಲ್ಲಿ ಪಾತ್ರವಹಿಸಿದ ಅನಂತರ ಗಾರ್ಬೋ ಸ್ಟಿಲ್ಲರನೊಡನೆ ಅಮೆರಿಕಕ್ಕೆ ಹೋದಳು (1925). ಖ್ಯಾತ ಚಿತ್ರನಿರ್ಮಾಣ ಸಂಸ್ಥೆಯಾದ ಎಂ.ಜಿ.ಎಂ. ನಲ್ಲಿ ಗಾರ್ಬೋಗೆ ಒಂದು ಅವಕಾಶ ಕಲ್ಪಿಸಲು ಸ್ಟಿಲ್ಲರ್ ಬಹಳ ಪ್ರಯತ್ನ ಮಾಡಿದ. ಸಿನಿಮಾ ಸಂಸ್ಥೆಯ ಪ್ರಚಾರ ಶಾಖೆಯ ತೀವ್ರ ಪ್ರಚಾರದಿಂದಾಗಿ ಕೆಲವೇ ದಿವಸಗಳಲ್ಲಿ ಗಾರ್ಬೋ ಹಾಲಿವುಡ್ಡಿನ ಪ್ರಮುಖ ತಾರೆಯಾಗಿ ಮೆರೆದಳು.

ಎಂ.ಜಿ.ಎಂ. ಸಂಸ್ಥೆಯಲ್ಲಿ ತಾನಿದ್ದ 16 ವರ್ಷಗಳ ಅವಧಿಯಲ್ಲಿ ಗಾರ್ಬೋ 24 ಚಲನಚಿತ್ರಗಳಲ್ಲಿ ಕಾಣಿಸಿಕೊಂಡಳು. ಅವಳಿಗೆ ಸಲ್ಲುತ್ತಿದ್ದ ಸಂಭಾವನೆ ಚಿತ್ರವೊಂದಕ್ಕೆ 400 ಡಾಲರುಗಳಿಂದ 3,00.000 ಡಾಲರುಗಳಿಗೇರಿತು. ದಿ ಟಾರೆಂಟ್ (1926); ಫ್ಲೆಷ್ ಅಂಡ್ ದಿ ಡೆವಿಲ್ (1927); ಲವ್ (1927); ವೈಲ್ಡ್ ಆರ್ಕಿಡ್ಸ್ (1929); ಅನ್ನಾ ಕ್ರಿಸ್ಟಿ (1930); ಮಾತಾ – ಹರಿ (1931); ಗ್ರ್ಯಾಂಡ್ ಹೋಟೆಲ್ (1932); ಗಂಭೀರ ಚಿತ್ರಗಳಾದ ಕ್ವೀನ್ ಕ್ರಿಷ್ಟಿನ (1933); ಅನ್ನಾ ಕರೇನಿನಾ (1935); ಮತ್ತು ಕ್ಯಾಮಿಲಿ (1936); ಮೇರಿ ವಾಲೆವ್‌ಸ್ಕ (1937); ನಿನೋಚ್ಕ (1939) – ಇವು ಈಕೆಯ ಕೆಲವು ಪ್ರಮುಖ ಚಲನಚಿತ್ರಗಳು.

1941ರಲ್ಲಿ ತನ್ನ 36ನೆಯ ವಯಸ್ಸಿನಲ್ಲಿ ಸಿನಿಮಾರಂಗದಿಂದ ಗಾರ್ಬೋ ಹೊರಬಂದಳು. 1950ರಲ್ಲಿ ಕೂಡಿದ ಸಿನಿಮಾತಜ್ಞರ ಒಂದು ಸಮಿತಿ ಈಕೆಯನ್ನು ಅತ್ಯುತ್ಕೃಷ್ಟ ತಾರೆಯೆಂದು ಸಾರಿತು. 1955ರಲ್ಲಿ ಗೌರವಾನ್ವಿತ ಅಕಾಡೆಮಿ (ಪ್ರಶಸ್ತಿ) ಪಡೆದುಕೊಂಡಳು. ಸಿನಿಮಾರಂಗದದಿಂದ ನಿವೃತ್ತಿ ಹೊಂದಿದ ಮೇಲೆ ನ್ಯೂಯಾರ್ಕಿನಲ್ಲೇ ಈಕೆ ನೆಲೆಸಿದಳು. 1951ರಲ್ಲಿ ಈಕೆಗೆ ಅಮೆರಿಕ ಸಂಯುಕ್ತ ಸಂಸ್ಥಾನದ ಪೌರತ್ವ ಲಭಿಸಿತು. ಈಕೆ 1990ರ ಏಪ್ರಿಲ್ 15ರಂದು ನ್ಯೂಯಾರ್ಕಿನಲ್ಲಿ ನಿಧನವಾದಳು. *

**ಗಾರ್ಲೆಂಡ್, ಹ್ಯಾಮ್ಲಿನ್ :** 1860–1940. ಅಮೆರಿಕದ ಕಾದಂಬರಿಕಾರ ಮತ್ತು ಪ್ರಬಂಧಕಾರ. ಬಾಲ್ಯದಲ್ಲಿ ರೈತತಂದೆಯೊಡನೆ ಹೊಲದಲ್ಲಿ ಕೆಲಸಮಾಡಿದ. ಅನಂತರ ಉಪಾಧ್ಯಾಯನಾದ, ಲೇಖಕನಾದ. ಈತನ ಮೊದಲ ಗಮನಾರ್ಹ ಕೃತಿ ಮೇನ್–ಟ್ರಾವೆಲ್ಡ್ ರೋಡ್ಸ್ (1891) ಎಂಬ ಕತೆಗಳ ಸಂಗ್ರಹ. ಸ್ಥಳದಿಂದ ಸ್ಥಳಕ್ಕೆ ಮೊಟ್ಟಮೊದಲಿಗೆ ವಲಸೆ ಹೋಗಿ ನೆಲಸುವ ರೈತರ ಕಷ್ಟಗಳ ಅನುಭವ ಗಾರ್ಲೆಂಡ್‌ನ ಕುಟುಂಬಕ್ಕಿತ್ತು. ಈ ಜೀವನದ ಕಹಿ–ಸೋಲುಗಳನ್ನು ತನ್ನ ಗುರು ವಿಲಿಯಂ ಡೀನ್ ಹವೆಲ್ಸ್‌ನಿಗಿಂತ ಉಗ್ರವಾಗಿ ಈತ ನಿರೂಪಿಸಿದ್ದಾನೆ. ರೈತರನ್ನು ಗುಲಾಮಗಿರಿಗಿಳಿಸಿ ಬಿಡುತ್ತಿದ್ದ ಲೇವಾದೇವಿಯವರನ್ನೂ ರೈತನ ಜೀವನದ ಬೆವರು, ಕಣ್ಣೀರುಗಳನ್ನು

ಕಾಣದೆ ದೂರದಿಂದ ಆ ಜೀವನವನ್ನು ರಮ್ಯವಾಗಿ ಬಣ್ಣಿಸುತ್ತಿದ್ದ ಲೇಖಕರನ್ನೂ ಖಂಡಿಸಿ, ಮಧ್ಯ ಪಶ್ಚಿಮ ಪ್ರದೇಶದ ರೈತರ ಸಂಕಟವನ್ನು ಹೃದಯಸ್ಪರ್ಶಿಯಾಗಿ ಇವನು ಚಿತ್ರಿಸಿದ್ದಾನೆ. ಇವನ ಮೊದಲನೆಯ ಕಾದಂಬರಿ ಎ ಸ್ಪಾಯಿಲ್ ಆಫ್ ಆಫೀಸ್ (1892) ವಾಸ್ತವಿಕತೆಯ ಪಂಥದ ನಾಯಕನೆಂದು ಇವನಿಗೆ ಹೆಸರು ತಂದಿತು. ಗಾರ್ಲೆಂಡ್ ತನ್ನ ವಾಸ್ತವಿಕತೆಯನ್ನು ವೆರಿಟಿಸಂ ಎಂದು ಕರೆದ; ವಾಸ್ತವಿಕತೆ ಮತ್ತು ವ್ಯಕ್ತಿ ಪ್ರಾಧಾನ್ಯಗಳು ಬೆರೆತ, ಪ್ರಜಾಪ್ರಭುತ್ವದ ಕಡೆ ವಾಲುವ ಮನೋಧರ್ಮ ಇದು. ಕ್ರಂಬ್ಲಿಂಗ್ ಐಡಲ್ಸ್ (1894) ಎಂಬ ವಿಮರ್ಶಾ ಪ್ರಬಂಧಗಳಲ್ಲಿಯೂ ಇವನು ಜನಸಾಮಾನ್ಯರ ಅಭಿಪ್ರಾಯಕ್ಕಿಂತ ಬಹುಮುಂದೆ ಸಾಗಿದ್ದನೆಂಬುದು ವ್ಯಕ್ತವಾಗುತ್ತದೆ. ಅಮೆರಿಕದ ಪಶ್ಚಿಮಪ್ರದೇಶದ ಜೀವನ, ಅತೀಂದ್ರೀಯ ಮತ್ತು ಪ್ರಕೃತ್ಯತೀತ ಅನುಭವಗಳು – ಇವನ್ನು ವಸ್ತುಗಳನ್ನಾಗಿ ಆರಿಸಿಕೊಂಡು ಈತ 1895 ರಿಂದ 1916ರವರೆಗಿನ ಅವಧಿಯಲ್ಲಿ ಹದಿನಾರು ಕಾದಂಬರಿಗಳನ್ನು ಬರೆದ. 1917ರಿಂದ ಸೃಜನ ಸಾಹಿತ್ಯದ ಮತ್ತೊಂದು ಅವಧಿ ಪ್ರಾರಂಭವಾಯಿತು. ಎ ಸನ್ ಆಫ್ ದಿ ಮಿಡ್ಲ್ ಬಾರ್ಡರ್ (1917) ಬಹುಮಟ್ಟಿಗೆ ಆತ್ಮವೃತ್ತ; ಇದರಲ್ಲಿ ಪರಿಪಕ್ವ ಮನಃಸ್ಥಿತಿ ಅಭಿವ್ಯಕ್ತಿ ಪಡೆದಿತ್ತು; ಈ ಹೊತ್ತಿಗೆ ಸಹಜತಾವಾದಿಗಳು ಅತಿದೂರ ಹೋದರೆಂದು ಆ ಪಂಥದಿಂದ ಗಾರ್‌ಲೆಂಡ್ ವಿಮುಖನಾಗಿದ್ದ. ಈ ಕೃತಿಯ ಮುಂದಿನ ಭಾಗ ಎ ಡಾಟರ್ ಆಫ್ ದಿ ಮಿಡ್ಲ್ ಬಾರ್ಡರ್ (1921) ಪುಲಿಟ್ಜರ್ ಬಹುಮಾನವನ್ನು ಪಡೆಯಿತು. ಟ್ರೇಲ್ ಮೇಕರ್ಸ್ ಆಫ್ ದಿ ಮಿಡ್ಲ್ ಬಾರ್ಡರ್‌ನಲ್ಲಿ (1926) ವಿಷಾದ ಬೆರೆತ ಅಭಿಮಾನದಿಂದ ಅಮೆರಿಕ ಖಂಡಕ್ಕೆ ಮೊದಲು ಬಂದ ವಲಸೆಗಾರರ ಸಾಹಸವನ್ನು ಈತ ವರ್ಣಿಸಿದ್ದಾನೆ. ಬಹುಮಟ್ಟಿಗೆ ಗಾರ್ಲೆಂಡ್‌ನ ಹೆಸರು ಉಳಿದಿರುವುದು ಈ ಮೂರು ಕೃತಿಗಳಿಂದ.

ರೆಡ್ ಇಂಡಿಯನ್ನರ ಜೀವನವನ್ನು ಸಹಾನುಭೂತಿಯಿಂದ ಅಧ್ಯಯನಮಾಡಿ ನಿಷ್ಪಕ್ಷಪಾತವಾಗಿ ಅದನ್ನು ಚಿತ್ರಿಸಿದ ಪ್ರಾರಂಭದ ಕತೆಗಾರರಲ್ಲಿ ಗಾರ್ಲೆಂಡ್ ಒಬ್ಬ. ಇವನ ದಿ ಬುಕ್ ಆಫ್ ಅಮೆರಿಕನ್ ಇಂಡಿಯ (1923) ರೆಡ್ ಇಂಡಿಯನ್ನರ ಜೀವನವನ್ನು ಕುರಿತ ಕತೆಗಳ ಸಂಗ್ರಹ.

ಸಾಹಿತ್ಯ ಕ್ಷೇತ್ರದಲ್ಲಿ ತನಗಿದ್ದ ಸ್ನೇಹಸಂಬಂಧಗಳನ್ನು ಚಿತ್ರಿಸುವ ನಾಲ್ಕು ಪುಸ್ತಕಗಳನ್ನೀತ ತನ್ನ ಎಪ್ಪತ್ತನೆಯ ವಯಸ್ಸಿನಲ್ಲಿ ಬರೆದ. ಅವುಗಳಲ್ಲಿ ರೋಡ್ ಸೈಡ್ ಮೀಟಿಂಗ್ಸ್ (1930) ಗಮನಾರ್ಹವಾದುದು.

ಶ್ರಮವೆಂಬುದನ್ನೇ ಲಕ್ಷಿಸದ ಅಸಾಧಾರಣ ಚೈತನ್ಯದ ಬರೆಹಗಾರ ಮತ್ತು ಭಾಷಣಕಾರನಾದ ಗಾರ್ಲೆಂಡ್ ಹಲವಾರು ಸಾಹಿತ್ಯ ಸಂಸ್ಥೆಗಳನ್ನು ಸ್ಥಾಪಿಸಿದ. ತನ್ನ ಕಾಲದವರ ಮೇಲೆ ಹೆಚ್ಚಿನ ಪ್ರಭಾವ ಬೀರಿದ ಮಹಾಕಾದಂಬರಿಕಾರ ಎಂಬ ಕೀರ್ತಿಗೆ ಈತ ಭಾಜನನಾದ. ಆದರೆ ಈಚೆಗಿನ ಸಾಹಿತ್ಯ ವಿಮರ್ಶಕರಲ್ಲಿ ಇವನ ಪ್ರಭಾವವನ್ನು ಕುರಿತು ಒಮ್ಮತವಿಲ್ಲ. ಈತ 1940ರಲ್ಲಿ ನಿಧನನಾದ. (ಎಲ್.ಎಸ್.ಎಸ್.)

**ಗಾರ್‌ಷಿನ್, ಫಸೀವಲಟ್, ಮಿಖೈಲೊವಿಚ್ :** 1855–88. ರಷ್ಯನ್ ಕತೆಗಾರ ಮತ್ತು ಕಾದಂಬರಿಕಾರ. ತಂದೆ ನಿವೃತ್ತ ಸೈನ್ಯಾಧಿಕಾರಿ. ರಷ್ಯ–ತುರ್ಕಿ ಯುದ್ಧದಲ್ಲಿ ಗಾರ್‌ಷಿನ್ ಸೈನಿಕನಾಗಿ ಭಾಗವಹಿಸಿದ. ಈ ಅನುಭವ ಇವನ ಇಡೀ ಜೀವನದ ಮೇಲೆ ಪ್ರಭಾವ ಬೀರಿತು. ಇವನ ಮೊದಲನೆಯ ಕತೆ, ನಾಲ್ಕು ದಿನಗಳು (1877) ಈ ಯುದ್ಧಕ್ಕೆ ಸಂಬಂಧಿಸಿದುದು. ಯುದ್ಧದ ವಿಷಯದಲ್ಲಿ ಇವನ ಜುಗುಪ್ಸೆ ಇಲ್ಲಿ ವ್ಯಕ್ತವಾಗುತ್ತದೆ. ಇವನದು ವಿಷಣ್ಣತೆಯ ಅತಿಸೂಕ್ಷ್ಮ ಮನಃಸ್ಥಿತಿ. ನ್ಯಾಯಕ್ಕಾಗಿ ತೀವ್ರ ಬಯಕೆ, ಅನುಕಂಪ, ಎಲ್ಲ ದುಷ್ಟತನವನ್ನೂ ತೊಡೆದುಹಾಕುವ ಛಲ– ಇವು ಇವನ ಕತೆಗಳಲ್ಲಿ ಎದ್ದು ಕಾಣುತ್ತವೆ. ಕಡೆಯ ವರ್ಷಗಳಲ್ಲಿ ಇವನ ಮನಸ್ಸು ಅಸ್ವಸ್ಥವಾಗಿತ್ತು. ಕೆಂಪು ಹೂ (1883) ಎಂಬ ಕತೆಯಲ್ಲಿ ತನ್ನ ಅನುಭವದ ಆಧಾರದಿಂದ ಹುಚ್ಚನೊಬ್ಬನ ಭಯಂಕರ ಚಿತ್ರವನ್ನು ಕೊಟ್ಟಿದ್ದಾನೆ. ಇವನ ಮೇಲೆ ಟಾಲ್‌ಸ್ಟಾಯ್ ಪ್ರಭಾವ ವಿಶಿಷ್ಟವಾಗಿತ್ತು. ತನ್ನ 33ನೆಯ ವಯಸ್ಸಿನಲ್ಲಿ ದೈಹಿಕ ಮತ್ತು ಮಾನಸಿಕ ಯಾತನೆಯನ್ನು ತಡೆಯಲಾರದೆ ಗಾರ್‌ಷಿನ್ ಆತ್ಮಹತ್ಯೆ ಮಾಡಿಕೊಂಡ.

ಈತ ಬರೆದದ್ದು ಸ್ವಲ್ಪ. ಆದರೆ ಕತೆಗಳಲ್ಲಿ ವಿಷಣ್ಣತೆ ನಿರಾಸೆಗಳಿದ್ದರೂ ಅನುಕಂಪ ಉದಾತ್ತತೆಗಳಿಂದ ಅವಕ್ಕೆ ಸೊಗಸು ಬರುತ್ತದೆ. ಇವನ ಬರೆಹಗಳಿಂದ ರಷ್ಯನ್ ಬರೆಹಗಾರರಿಗೆ ಸಣ್ಣ ಕತೆಯಲ್ಲಿ ಆಸಕ್ತಿ ಬೆಳೆಯುವಂತಾಯಿತು. ದಿನಚರಿ ಮತ್ತು ಪತ್ರಗಳನ್ನು ಬಳಸುವ ಕಥಾತಂತ್ರ ಇವನಿಗೆ ಬಹುಪ್ರಿಯ ಎನಿಸಿತ್ತು. (ಎಲ್.ಎಸ್.ಎಸ್.)

**ಗಾರೆಶಿಲ್ಪ :** ವಿವಿಧ ಮೂರ್ತಿಗಳನ್ನು ಗಾರೆಯಿಂದ ರಚಿಸುವ ಕಲೆ. ಪ್ರಾಚೀನ ಕಾಲ ದಿಂದಲೂ ಗಾರೆಯನ್ನು ವಾಸ್ತು ಮತ್ತು ಮೂರ್ತಿಶಿಲ್ಪಗಳ ರಚನೆಯಲ್ಲಿ ಬಳಸಿರುವುದನ್ನು ಕಾಣಬಹುದು. ಈಜಿಪ್ಟ್ ಸುಮೇರಿಯ ಮತ್ತು ಸಿಂಧೂ ನಾಗರಿಕತೆಗಳಲ್ಲಿ ಗಾರೆಯ ಬಳಕೆ ಬಗ್ಗೆ ಕುರುಹುಗಳಿವೆ. ಪ್ರಾಚೀನ ಭಿತ್ತಿ ಚಿತ್ರಗಳ ಹಿನ್ನಲೆಯಾಗಿ ಗಾರೆಯನ್ನು ಬಳಸಲಾಗಿದೆ. ಪ್ರಾಚೀನ ಗ್ರೀಕ್ ಮತ್ತು ರೋಮಿನ ಕಟ್ಟಡಗಳ ನಿರ್ಮಾಣದಲ್ಲಿ ಹಾಗೂ ಶಿಲ್ಪಕಲಾಕೃತಿಗಳ ರಚನೆಯಲ್ಲಿ ಗಾರೆ ಹೆಚ್ಚು ಬಳಕೆಗೊಂಡಿದೆ. ಈ ಕಾಲದಲ್ಲೇ ನಯ ಗಾರೆ ಒಂದು ಕಲಾಮಾಧ್ಯಮವಾಗಿ ರೂಪುಗೊಂಡಿತೆನ್ನಬಹುದು. ಭಾರತದಲ್ಲಿ ಗಾಂಧಾರ ಶೈಲಿಯಲ್ಲಿ ರಚನೆಗೊಂಡ ಬಹುತೇಕ ಬಿಡಿ ಆಕೃತಿಗಳು ಮತ್ತು ಫಲಕ ಶಿಲ್ಪಗಳು ಗಾರೆ ಮಾಧ್ಯಮವಾದವು. ಕರ್ನಾಟಕದಲ್ಲಿ ಶಾತವಾಹನರ ಕಾಲದಲ್ಲೇ ಕಟ್ಟಡಗಳ ನಿರ್ಮಾಣದಲ್ಲಿ ಸುಣ್ಣ ಗಾರೆಯನ್ನು ಬಳಸಲಾಗಿದೆ. ಬ್ರಹ್ಮಗಿರಿ, ಚಂದ್ರವಳ್ಳಿ, ಬನವಾಸಿ, ವಡಗಾಂವ್ ಮಾಧವಪುರದಲ್ಲಿ ನಡೆದ ಉತ್ಖನನಗಳು ಇಟ್ಟಿಗೆ ಕಟ್ಟಡಾವಶೇಷಗಳನ್ನು ಬೆಳಕಿಗೆ ತಂದಿವೆ. ಗಂಗರ ಕಾಲದ ದೇವಾಲಯಗಳಲ್ಲಿ ಭಿತ್ತಿ, ಚಾವಣಿ ಮತ್ತು ಶಿಖರಗಳ ರಚನೆಯಲ್ಲಿ ಇಟ್ಟಿಗೆಯೊಡನೆ ಗಾರೆಯನ್ನು ಬಳಸಲಾಗಿದೆ. ಬೌದ್ಧ ವಿಹಾರಗಳಲ್ಲಿನ ಭಿತ್ತಿ ರಚನೆಯಲ್ಲಿ ಗಾರೆಯನ್ನು ಕಾಣಬಹುದು. ಐಹೊಳೆಯ ಚಾಳುಕ್ಯ ಪೂರ್ವಕಾಲದ ಇಟ್ಟಿಗೆ ಕಟ್ಟಡದಲ್ಲಿ ಗಾರೆಯನ್ನು ಉಪಯೋಗಿಸಲಾಗಿದೆ. ಕಲ್ಯಾಣ ಚಾಳುಕ್ಯರ ಕಾಲದಲ್ಲೂ ಇಟ್ಟಿಗೆ ಗೋಡೆಯ ಮೇಲೆ ಗಾರೆ ಲೇಪನವನ್ನು ಮಾಡಿದ ಕುರುಹುಗಳು ಶಿಗ್ಗಾವಿ ತಾಲ್ಲೂಕಿನ ಬನ್ನಿಕೊಪ್ಪದ ಭೀಮೇಶ್ವರ ದೇವಾಲಯದಲ್ಲಿ ಕಾಣಬಹುದು. ಇದೇ ರೀತಿ ಹೊಯ್ಸಳ, ಮುಂದೆ ವಿಜಯನಗರ ಕಾಲಗಳಲ್ಲಿ ಗಾರೆ ಬಳಕೆಯನ್ನು ಕಾಣಬಹುದು. ಹಂಪಿಯ ಬಹುತೇಕ ಸ್ಮಾರಕಗಳಲ್ಲಿ ಗಾರೆಯನ್ನು ಬಳಸಲಾಗಿದೆ. ಬಿಜಾಪುರ, ಗುಲ್ಬರ್ಗ ಮತ್ತು ಬೀದರ್‌ನಲ್ಲಿನ ಮುಸ್ಲಿಂ ಸ್ಮಾರಕಗಳಲ್ಲಿ ಪ್ರಧಾನವಾಗಿ ಗಾರೆ ಬಳಕೆಗೊಂಡಿದೆ. ಅದರ ಪ್ರಭಾವ ವಿಜಯನಗರದ ಸ್ಮಾರಕಗಳಲ್ಲಿ ಎದ್ದು ಕಾಣುತ್ತದೆ. ಮುಖ್ಯವಾಗಿ ದೇವಾಲಯಗಳಲ್ಲಿಯ ಕೈಪಿಡಿ ಗೋಡೆಯ ಗೂಡುಗಳಲ್ಲಿ ಹಾಗೂ ಮಹಾದ್ವಾರ ಗೋಪುರಗಳಲ್ಲಿ ಗಾರೆ ಮೂರ್ತಿಶಿಲ್ಪಗಳನ್ನು ರಚಿಸಲಾಗಿದೆ. ಗಾರೆಯನ್ನು ಸುಣ್ಣ, ಮರಳು, ನೀರು, ಅಂಟುವಾಳಕಾಯಿ ಮತ್ತಿತರ ಅಂಟುಪದಾರ್ಥಗಳನ್ನು ಸೇರಿಸಿ ಸಿದ್ಧಪಡಿಸಲಾಗುವುದು. ಗಾರೆ ಮಿಶ್ರಣಗಳ ಅಳತೆ ಮತ್ತು ಪ್ರಮಾಣಗಳಿಗೆ ಸಂಬಂಧಿಸಿದಂತೆ ಸಂಸ್ಕೃತಿ ಸಾಹಿತ್ಯದ ಆಗಮಗಳು ಮತ್ತು ಶಿಲ್ಪ ಶಾಸ್ತ್ರ ಕೃತಿಗಳು ವಿವರಿಸಿವೆ. ಕಾಮಿಕಾಗಮ, ಹರಿಭಕ್ತವಿಲಾಸ ಮೊದಲಾದ ಕೃತಿಗಳಲ್ಲಿ ಗಾರೆ ಬಗೆಗಿನ ಮಾಹಿತಿಗಳುಂಟು. ಮುಖ್ಯವಾಗಿ ಗಾರೆಯ ಗುಣಮಟ್ಟ, ಅದನ್ನು ಬಳಸುವ ಉದ್ದೇಶವನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ ಕಟ್ಟಡಗಳ ರಚನೆಗೆ ಮೇಲೆ ತಿಳಿಸಿದಂತೆ ಗಾರೆಯಲ್ಲಿ ಸುಣ್ಣ ಮತ್ತು ಮರಳು ಪ್ರಧಾನವಾಗಿರುತ್ತದೆ. ಆದರೆ ಶಿಲ್ಪಗಳ ರಚನೆಗೆ ಸುಣ್ಣ ಮತ್ತು ಮರಳಿನೊಂದಿಗೆ ಅಂಟುವಾಳ ಕಾಯಿ, ಬೆಲ್ಲ, ಮೊಟ್ಟೆ ಲೋಳೆರಸ, ಬಿಲ್ವಪತ್ರೆ ಕಾಯಿಗಳನ್ನು ಸೇರಿಸಿ ನುಣ್ಣಗೆ ಅರೆದು ಗಾರೆಯನ್ನು ತಯಾರಿಸಲಾಗುವುದು. ಆ ಗಾರೆಯನ್ನು ತಯಾರಿಸಿದ ಅನಂತರ ಕೆಲವು ದಿನಗಳವರೆಗೆ ಅದನ್ನು ಬಳಸಬಹುದು.

ಗಾರೆ ಶಿಲ್ಪಗಳು ಮಥುರಾದ ಕಾಲದಿಂದಲೂ ದೊರೆಯುತ್ತವೆ. ಮರಳಿನೊಂದಿಗೆ ಅಂಟು ಇತ್ಯಾದಿ ಪದಾರ್ಥಗಳನ್ನು ಸೇರಿಸಿ ಗಾರೆಯನ್ನು ಸಿದ್ಧಪಡಿಸುವ ಬಗೆಗೆ ಕಾಶ್ಯಪ ಶಿಲ್ಪ, ವಿಷ್ಣು ಧರ್ಮೋತ್ತರ ಪುರಾಣ ಮತ್ತು ಸಮರಾಂಗಣ ಸೂತ್ರಧಾರಗಳಲ್ಲಿ ಸಾಕಷ್ಟು ವಿವರಗಳಿವೆ. ಶಿಲ್ಪಗಳನ್ನು ಮಣ್ಣು, ಗಾರೆ, ಮರ, ಕಲ್ಲು, ಇಟ್ಟಿಗೆ, ಲೋಹ ಇತ್ಯಾದಿಗಳಿಂದ ರೂಪಿಸಿ ಅದಕ್ಕೆ ಸರಿಹೊಂದುವ ಬಣ್ಣಗಳನ್ನು ಲೇಪಿಸಿ, ಸುಂದರಗೊಳಿಸಬಹುದೆಂದು ಶ್ರೀಕುಮಾರನ ಚಿತ್ರಲಕ್ಷಣದಲ್ಲಿ ಹೇಳಿದೆ. ಗಾರೆ ಪ್ರತಿಮೆಗಳಿಗೆ ಬಣ್ಣ ಹಾಕಿರುವುದನ್ನು ಪಲ್ಲವರ ಕಾಲದ ಕಾಂಚಿಪುರಂನ ಕೈಲಾಸನಾಥ ದೇವಾಲಯ ಮತ್ತು ಚೋಳರ ಕಾಲದ ತಂಜಾವೂರಿನ ಬೃಹದೇಶ್ವರ ದೇವಾಲಯಗಳಲ್ಲಿ ಕಾಣಬಹುದು. ಕೆಲವು ಉತ್ಸವ ಮೂರ್ತಿಗಳನ್ನು ಮರ, ಕಲ್ಲು, ಅಥವಾ ಮಣ್ಣಿನಿಂದ ತಯಾರಿಸಿ ಅವುಗಳ ಮೇಲೆ ತೆಳುವಾಗಿ ಗಾರೆಯನ್ನು ಲೇಪಿಸಿ ಬಣ್ಣ ಹಚ್ಚಿರುವುದನ್ನು ಹಾಗೂ ಅವುಗಳಿಗೆ ಅಭಿಷೇಕಾದಿಗಳನ್ನು ಮಾಡುವಂತಿಲ್ಲವೆಂಬ ವಿಚಾರ ಆಗಮಗಳಲ್ಲಿದೆ ಎಂಬುದು ವಿದ್ವಾಂಸರ ಅಭಿಪ್ರಾಯ. ಗಾರೆಯ ಶಿಲ್ಪ ಗಾಂಧಾರ ಶಿಲ್ಪ ಕಾಲಕ್ಕಿಂತ ಹಳೆಯದೆಂದೂ ಆಕೃತಿಯ ಬಟ್ಟೆ ಮತ್ತು ಅಂಗಾಂಗಗಳ ಉಬ್ಬು ತಗ್ಗುಗಳನ್ನು ಸೂಚಿಸಲು ಮಾತ್ರ ಬಣ್ಣಗಳನ್ನು ಹಾಕಲಾಗುತ್ತದೆಂಬುದು ಕೆ.ಎಂ. ವರ್ಮ ಅವರ ಅಭಿಪ್ರಾಯ.

ಕರ್ನಾಟಕದ ಗಂಗರ ಕಾಲದ ದೇವಾಲಯಗಳಲ್ಲಿ ಗಾರೆಶಿಲ್ಪಗಳಿವೆ. ಚಾಮರಾಜನಗರ ತಾಲ್ಲೂಕಿನ ನರಸಮಂಗಲದ ರಾಮಲಿಂಗೇಶ್ವರ ದೇವಾಲಯದ ವಿಮಾನದಲ್ಲಿ ಗಾರೆ ವಿಗ್ರಹಗಳು ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಉಳಿದು ಬಂದಿವೆ. ಸು.10–12 ನೆಯ ಶತಮಾನದ ಹಲವಾರು ದೇವಾಲಯಗಳ ಗರ್ಭಗೃಹಗಳಲ್ಲಿ ಗಾರೆಶಿಲ್ಪಗಳನ್ನು ರಚಿಸಿದ್ದು, ಇಂದಿಗೂ ಉಳಿದು ಬಂದಿವೆ. ಕೋಲಾರದ ಕೋಲಾರಮ್ಮ, ಅಂಗಡಿಗ್ರಾಮದ ವಾಸಂತಿಕಾ, ಕೂಡಲೂರಿನ ಬಸದಿ ಹಾಗೂ ದೇವಾಲಯ, ಹಾಸನದ ಹಾಸನಾಂಬ, ಕೆಲಸೂರಿನ ಬಸದಿ ಮುಂತಾದೆಡೆಗಳಲ್ಲಿ ಗಾರೆಯ ಬೃಹದಾಕಾರದ ಪೂಜಾ ವಿಗ್ರಹಗಳನ್ನು ಕಾಣಬಹುದು. ಮಂಡ್ಯ, ಬೆಂಗಳೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಕೆಲವೆಡೆ ಗ್ರಾಮದೇವತೆಗಳು ಗಾರೆಯಿಂದ ರೂಪುಗೊಂಡಿವೆ. ಚನ್ನಪಟ್ಟಣ

ತಾಲ್ಲೂಕಿನ ದೇವರ ಹೊಸಳ್ಳಿಯಲ್ಲಿರುವ ಸಂಜೀವರಾಯ (ಆಂಜನೇಯ) ಶಿಲ್ಪ ಗಾರೆಯದು. ಗ್ರಾಮದೇವತೆಗಳ ಗುಡಿಗಳಲ್ಲಿ ಗಾರೆಯ ನಗ್ನ ಸ್ತ್ರೀ ಮತ್ತು ಪುರುಷರ ಪ್ರತಿಮೆಗಳು ಹೆಚ್ಚಾಗಿವೆ. ಪ್ರಾಚೀನ ಕನ್ನಡ ಸಾಹಿತ್ಯದ ವಡ್ಡಾರಾಧನೆ ಹಾಗೂ ಜಗನ್ನಾಥ ವಿಜಯ ಮೊದಲಾದ ಕಾವ್ಯಗಳಲ್ಲಿ ಲೆಪ್ಪದ ಬೊಂಬೆ ಎಂಬುದನ್ನು ಗಾರೆ ಪ್ರತಿಮೆಗಳಿಗೆ ಸಂವಾದಿಯಾಗಿ ಬಳಸಲಾಗಿದೆ. ಅಂದರೆ ಪ್ರತಿಮೆಯನ್ನು ಸಂಪೂರ್ಣ ಗಾರೆಯಿಂದ ಮಾಡದೆ ಮಣ್ಣು ಅಥವಾ ಕಲ್ಲಿನಲ್ಲಿ ಮಾಡಿದ ಒರಟು ರಚನೆಗಳ ಮೇಲೆ ಗಾರೆಯನ್ನು ಲೇಪಿಸಲಾಗುತ್ತಿತ್ತು. ಇಂಥಹ ಪ್ರತಿಮೆಗಳು ಚೋಳರ ಕಾಲದಲ್ಲಿಯೂ ರಚನೆಗೊಂಡಿವೆ. ಗಂಗೈಕೊಂಡ ಚೋಳಪುರಂನಲ್ಲಿ ಇಂಥ ಈ ಬಗೆಯ ಗೊಂಬೆಗಳನ್ನು ಈಗಲೂ ನೋಡಬಹುದು. ವಿಜಯನಗರ ಕಾಲದಲ್ಲಿ ಒರಟು ಶಿಲಾಕಂಬಗಳಿಗೆ ಗಾರೆ ಲೇಪನ ಮಾಡಿ ನಯಗೊಳಿಸಿ ಚಿತ್ರಗಳಿಂದ ಅಲಂಕರಿಸಲಾಗುತ್ತಿತ್ತು. ಮತ್ತೊಂದು ರೀತಿಯ ಗಾರೆಶಿಲ್ಪಗಳೆಂದರೆ, ಮೊದಲಿಗೆ ಕಬ್ಬಿಣದ ಕಂಬಿಗಳಿಂದ ಸ್ಥೂಲ ರಚನೆಯನ್ನು ಸಿದ್ಧಪಡಿಸಿಕೊಂಡು, ಅನಂತರ ಅದಕ್ಕೆ ಗಾರೆ ತುಂಬಲಾಗುತ್ತಿತ್ತು. ಇವು ಮೈಸೂರು ಅರಸರ ಕಾಲದ್ದಿರಬಹುದೆಂಬುದು ವಿದ್ವಾಂಸರ ಅಭಿಪ್ರಾಯ. ಆದರೆ ವಿಜಯನಗರ ಕಾಲದ ಗಾರೆ ಶಿಲ್ಪಗಳಲ್ಲೇ ಮರದ ಗೂಟ ಹಾಗೂ ಅವಶ್ಯವಿದ್ದಲ್ಲಿ ಮಾತ್ರ ಅಭಯ ಹಸ್ತ ಮತ್ತು ವರದ ಹಸ್ತಗಳ ರಚನೆಗೆ ಕಬ್ಬಿಣದ ಕಡ್ಡಿಗಳನ್ನು ಬಳಸುತ್ತಿದ್ದರು. ಬಹುಶಃ ಇದೇ ವಿಧಾನವನ್ನು ಮೈಸೂರು ಅರಸರು ಅನುಸರಿಸಿ ಅಭಿವೃದ್ಧಿಪಡಿಸಿರಬಹುದು.

ಶಿಲಾ ಪ್ರತಿಮೆಗಳಲ್ಲಿ ಕಂಡುಬರುವ ವಿಗ್ರಹಗಳ ನಿರ್ಮಾಣದ ಮಾನ, ಪ್ರಮಾಣ, ಉನ್ಮಾನ, ಪರಿಮಾಣ, ಉಪಮಾನ, ಲಂಬಮಾನ ಮೊದಲಾದ ಲಕ್ಷಣಗಳು ಗಾರೆಶಿಲ್ಪಗಳ ನಿರ್ಮಾಣದಲ್ಲೂ ಕಂಡುಬರುತ್ತವೆ. ದ್ರಾವಿಡ ಶೈಲಿಯ ಶಿಖರ ಮತ್ತು ಗೋಪುರಗಳಲ್ಲಿ ಗಾರೆ ಶಿಲ್ಪಗಳು ವಿಶೇಷವಾಗಿವೆ. ಇದಕ್ಕೆ ದ್ರಾವಿಡ ಮಾದರಿಯ ನಿರ್ಮಾಣ ಸ್ವರೂಪವೇ ಕಾರಣ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಇದನ್ನು ಹಂಪೆಯ ದೇವಾಲಯಗಳ ಶಿಖರ ಮತ್ತು ಗೋಪುರಗಳಲ್ಲಿ ರಚನೆಗೊಂಡಿರುವ ಅಸಂಖ್ಯಾತ ಗಾರೆಶಿಲ್ಪಗಳು ಸಮರ್ಥಿಸುತ್ತವೆ. ಆದರೂ ಗಾರೆಶಿಲ್ಪಗಳ ರಚನೆಯ ಹಿಂದಿರುವ ಪ್ರಧಾನ ಉದ್ದೇಶ ವಾಸ್ತು ನಿರ್ಮಾಣಗಳನ್ನು ಅಲಂಕೃತಗೊಳಿಸುವುದಾಗಿದೆ. ಇದು ಬಿಡಿ ಶಿಲ್ಪವಾಗಿರಲಿ ಅಥವಾ ಉಬ್ಬು ಶಿಲ್ಪವಾಗಿರಲಿ ಹಿನ್ನಲೆಯಲ್ಲಿರುವ ವಾಸ್ತು ಭಾಗದ ಸೌಂದರ್ಯವನ್ನು ಹೆಚ್ಚಿಸುವುದಲ್ಲದೆ, ಖಾಲಿ ಕಾಣುವ ಸ್ಥಳವನ್ನು ಕಲಾಕೃತಿಗಳಿಂದ ತುಂಬುವುದಾಗಿತ್ತು. ಹೀಗಾಗಿ ವಾಸ್ತು ಅಲಂಕರಣದಲ್ಲಿ ಗಾರೆ ಪ್ರತಿಮೆಗಳು ಪ್ರಮುಖ ಪಾತ್ರ ವಹಿಸಿದ್ದವು.

ವಿಜಯನಗರ ಕಾಲದ ಗಾರೆ ಪ್ರತಿಮೆಗಳ ಅಧ್ಯಯನಕ್ಕೆ ಹಂಪಿ ಸೂಕ್ತ ಸ್ಥಳ. ಇಲ್ಲಿಯ ವಿರೂಪಾಕ್ಷ ದೇವಾಲಯ, ಕೃಷ್ಣದೇವಾಲಯ, ವಿಠ್ಠಲ ದೇವಾಲಯ, ಹಜಾರ ರಾಮ ದೇವಾಲಯ, ಮಾಲ್ಯವಂತ ರಘುನಾಥ ದೇವಾಲಯ, ಅಚ್ಯುತರಾಯ ದೇವಾಲಯ ಹಾಗೂ ಇನ್ನಿತರ ಸಣ್ಣ ಪುಟ್ಟ ದೇವಾಲಯಗಳಲ್ಲಿ ಗಾರೆಶಿಲ್ಪಗಳನ್ನು ಕಾಣಬಹುದು. ಅಲ್ಲದೆ ವಿಜಯನಗರ ಕಾಲದಲ್ಲಿ ಬೇರೆ, ಬೇರೆ ಪ್ರದೇಶಗಳಲ್ಲಿ ನಿರ್ಮಾಣಗೊಂಡ ದೇವಾಲಯುಗಳ ಶಿಖರ, ರಾಯಗೋಪುರ ಮತ್ತು ಕೈಪಿಡಿಗೋಡೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗಾರೆ ಪ್ರತಿಮೆಗಳು ರಚನೆಗೊಂಡವು. ಈ ಪ್ರತಿಮೆಗಳಲ್ಲಿ ಕೆಲವು ಸುಸ್ಥಿತಿಯಲ್ಲಿದ್ದು, ಉಳಿದಂತೆ ಭಗ್ನಗೊಂಡಿವೆ. ಅಲ್ಲದೆ ಗಾರೆಶಿಲ್ಪಗಳು ಸದಾ ತೆರೆದ ಸ್ಥಿತಿಯಲ್ಲಿದ್ದು, ಮಳೆ, ಗಾಳಿ ಮತ್ತು ಬಿಸಿಲುಗಳಿಂದ ಹಾಳಾಗುವ ಸಾಧ್ಯತೆಯೇ ಹೆಚ್ಚು. ಹೀಗೆ ಹಾಳಾದ ಶಿಲ್ಪಗಳನ್ನು ಕಾಲ ಕಾಲಕ್ಕೆ ಜೀರ್ಣೋದ್ಧಾರಗೊಳಿಸಿ ಸುಣ್ಣ ಬಣ್ಣಗಳನ್ನು ಹಚ್ಚಿರುವುದರಿಂದ ಅವುಗಳ ಸೌಂದರ್ಯ ಮರೆಯಾಗಿ ಒರಟು ರಚನೆಗಳಂತೆ ಕಂಡು ಬರುತ್ತವೆ. ಹೀಗಾಗಿ ಗಾರೆಶಿಲ್ಪಗಳ ಕಾಲಮಾನವನ್ನು ನಿರ್ದಿಷ್ಟವಾಗಿ ಗುರುತಿಸುವುದು ಕಷ್ಟ.

ವಿಜಯನಗರ ಕಾಲದ ಗಾರೆ ಶಿಲ್ಪಗಳು ಬೆಡಗುಬಿನ್ನಾಣಗಳಿಂದ ಕೂಡಿದ್ದು, ಹೊಯ್ಸಳ ಶಿಲ್ಪಗಳನ್ನು ನೆನಪಿಸುತ್ತವೆ. ಗಾರೆ ಹಸಿ ಹಿಟ್ಟಿನಂತಿರುವುದರಿಂದ ಶಿಲ್ಪಿ ತನ್ನೆಲ್ಲ ಕುಶಲತೆಯನ್ನು ಪ್ರಯೋಗಿಸಲು ಅವಕಾಶವಿದ್ದು, ಶಿಲ್ಪಗಳು ಅತ್ಯಂತ ಮನೋಜ್ಞವಾಗಿ ಮೂಡಿ ಬರಲು ಸಾಧ್ಯವಾಗಿದೆ. ಒಂದು ವೇಳೆ ರಚನೆ ಸರಿ ಬರದಿದ್ದರೆ, ಪುನಃ ಅದಕ್ಕೆ ಗಾರೆಯನ್ನು ಲೇಪಿಸಿ ಸುಂದರಗೊಳಿಸಲಾಗುತ್ತಿತ್ತು. ಹೀಗಾಗಿ ಗಾರೆ ಶಿಲ್ಪಗಳ ರಚನೆಯಲ್ಲಿ ತಿಳಿದೋ ತಿಳಿಯದೆಯೋ ಶಿಲ್ಪಿಯ ಸೃಜನಶೀಲತೆ ಪ್ರವೇಶವಾಗುತ್ತಿತ್ತು. ಇದರಿಂದಾಗಿ ಕೆಲವು ಗಾರೆ ಶಿಲ್ಪಗಳಲ್ಲಿ ನವ್ಯ ಗುಣಲಕ್ಷಣಗಳನ್ನು ಕಾಣಬಹುದು. ಮುಖ್ಯವಾಗಿ ವಿಜಯನಗರದ ಗಾರೆಶಿಲ್ಪಗಳು ನಾನಾ ಭಂಗಿಗಳಲ್ಲಿದ್ದು, ನೀಳ ರಚನೆಗಳಾಗಿವೆ. ಉದ್ದವಾಗಿದ್ದು, ತೆಳುವಾಗಿ ಬಳಕುವ ಲಕ್ಷಣಗಳಿಂದ ಕೂಡಿವೆ. ಈ ಲಕ್ಷಣಗಳನ್ನು ಆ ಕಾಲದ ಶಿಲಾಶಿಲ್ಪಗಳಲ್ಲೂ ಕಾಣಬಹುದು. ಗಾರೆಶಿಲ್ಪಗಳಿಗೆ ವಸ್ತ್ರದ ಅಲಂಕರಣವಿದ್ದು, ಕಸೂತಿ ಕೆಲಸವನ್ನು ಮಾಡಲಾಗಿದೆ. ಮಣಿಗಳ ಹಾರಗಳು ಪ್ರಧಾನ ಆಭರಣಗಳಾಗಿ ಎದ್ದು ಕಾಣುತ್ತವೆ. ಗಾರೆ ಶಿಲ್ಪಗಳು ಗೋಡೆಗೆ ಒರಗಿ ನಿಂತ ಬಿಡಿಶಿಲ್ಪಗಳಂತೆ ರಚನೆಗೊಂಡಿವೆ. ಪ್ರತಿಮಾ ಶಾಸ್ತ್ರದ ಲಕ್ಷಣಗಳನ್ನೊಳಗೊಂಡ ಈ ಶಿಲ್ಪಗಳು ಅಂಗಾಂಗ ರಚನೆಯಲ್ಲಿ ಪ್ರಮಾಣ ಬದ್ಧತೆಯನ್ನು ಕಾಯ್ದುಕೊಂಡಿವೆ. ನುರಿತ ಶಿಲ್ಪಿಗಳ ಅನುಭವದ ಸಾಕಾರ ಮೂರ್ತಿಗಳಂತೆ ಕಂಡು ಬರುತ್ತವೆ ಹಾಗೂ ಸಮಕಾಲೀನ ಇತರ ಮಾಧ್ಯಮಗಳ ಪ್ರತಿಮೆಗಳಿಗೆ ಸರಿ ಸಮನಾಗಿ ನಿಲ್ಲುತ್ತವೆ. ವಿಜಯನಗರೋತ್ತರ ಕಾಲದಲ್ಲಿ ರಚನೆಗೊಂಡ ಗಾರೆಶಿಲ್ಪಗಳು ಉಬ್ಬು ರಚನೆಗಳಾಗಿದ್ದು, ಒರಟು ಒರಟಾಗಿವೆ. ಈ ರೀತಿಯ ಶಿಲ್ಪಗಳು ವಿರೂಪಾಕ್ಷ ದೇವಾಲಯದ ಕೈಪಿಡಿಗೋಡೆಯ ಕೆಲವು ಗೂಡುಗಳಲ್ಲಿ(ವೈಷ್ಣವ ಶಿಲ್ಪಗಳು) ಮತ್ತು ಮುಂದಿನ ಮಹಾದ್ವಾರ ಗೋಪುರದಲ್ಲಿವೆ. ಈ ಶಿಲ್ಪಗಳು ಕೇವಲ ಗೋಡೆಗಂಟಿದ ತೆಳು ಉಬ್ಬು ಶಿಲ್ಪಗಳಂತಿವೆ. ವಸ್ತ್ರ ಮತ್ತು ಆಭರಣಗಳ ಅಲಂಕರಣದಲ್ಲಿ ವಿಜಯನಗರ ಕಾಲದ ಶಿಲ್ಪಶೈಲಿಯನ್ನೇ ಅನುಸರಿಸಿದ್ದರೂ ಒರಟು ಲಕ್ಷಣಗಳು ಎದ್ದು ಕಾಣುತ್ತವೆ. ಹೀಗಾಗಿ ಹಂಪೆಯ ವಿರೂಪಾಕ್ಷ ದೇವಾಲಯದಲ್ಲಿ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಗಾರೆ ಪ್ರತಿಮೆಗಳನ್ನು ಕಾಣಬಹುದಾಗಿದೆ. ಆದರೆ ಉಳಿದ ದೇವಾಲಯಗಳಲ್ಲಿ ವಾಸ್ತು ನಿರ್ಮಾಣದೊಂದಿಗೆ ರಚನೆಗೊಂಡ ಗಾರೆಶಿಲ್ಪಗಳನ್ನು ಕಾಣಬಹುದು. ಅಂದರೆ ವಿಜಯನಗರ ಕಾಲದಲ್ಲೆ ರಚನೆಗೊಂಡ ಗಾರೆಶಿಲ್ಪಗಳಿವೆ. ವಿರೂಪಾಕ್ಷ ದೇವಾಲಯದ ಕೈಪಿಡಿ ಗೋಡೆಯ ಗೂಡುಗಳಲ್ಲಿರುವ ಶೈವಗಾರೆ ಶಿಲ್ಪಗಳು ಇದೇ ದೇವಾಲಯದ ಕಿರಿಯ ಗೋಪುರದಲ್ಲಿರುವ ಗಾರೆಶಿಲ್ಪಗಳು, ಕೃಷ್ಣ ದೇವಾಲಯದ ಮಹಾದ್ವಾರ ಗೋಪುರದ ಗಾರೆ ಪ್ರತಿಮೆಗಳು, ಹಜಾರರಾಮದೇವಾಲಯದ ಕೈಪಿಡಿಗೋಡೆಯಲ್ಲಿರುವ ಸಾಲುಗಾರೆ ಪ್ರತಿಮೆಗಳು, ಮಲಪನ ಗುಡಿಯ ಮಲ್ಲಿಕಾರ್ಜುನ ದೇವಾಲಯದ ಕೈಪಿಡಿ ಗೋಡೆಯ ಗೂಡುಗಳಲ್ಲಿರುವ ಗಾರೆ ಪ್ರತಿಮೆಗಳು ಹಾಗೂ ಮಾಲ್ಯವಂತ ರಘುನಾಥ ದೇವಾಲಯದ ಗೋಪುರಗಳಲ್ಲಿರುವ ಗಾರೆ ಪ್ರತಿಮೆಗಳು ಮುಖ್ಯವಾಗಿವೆ. ಕೆಲವೆಡೆ ಗಾರೆ ಪ್ರತಿಮೆಗಳಿಗೆ ವಿವಿಧ ಬಣ್ಣಗಳನ್ನು ಲೇಪಿಸಿ ಅಲಂಕರಿಸಲಾಗಿದೆ. ಇವುಗಳಲ್ಲಿ ದೇವತಾ ಶಿಲ್ಪಗಳಲ್ಲದೆ ಲೌಕಿಕ ಶಿಲ್ಪಗಳು ಸಹ ಹೆಚ್ಚಿನ ಸಂಖ್ಯೆಯಲ್ಲಿವೆ.

ವಿರೂಪಾಕ್ಷ ದೇವಾಲಯದ ಕೈಪಿಡಿ ಗೋಡೆಯ ಗೂಡುಗಳಲ್ಲಿರುವ ಉಮಾಮಹೇಶ್ವರ, ನಾಟ್ಯಗಣಪ, ತ್ರಿಭಂಗಿಯಲ್ಲಿರುವ ಶಿವ, ನಂದಿರೂಢ ಶಿವಪಾರ್ವತಿ, ಶೈವಯತಿ, ಗಣಸಮೂಹ, ಚಾಮರಧಾರಿ ಸ್ತ್ರೀಯರು, ಭಕ್ತ ವೃಂದ ಗಾರೆ ಪ್ರತಿಮೆಗಳು ಉಲ್ಲೇಖಾರ್ಹ. ಕೊರಳಹಾರ, ತೋಳ್ಬಂದಿ, ಕಡಗ, ಡಾಬು ಮತ್ತು ಕಿರೀಟಗಳಿಂದ ಅಲಂಕೃತಗೊಂಡ ಈ ಪ್ರತಿಮೆಗಳು ಮನಮೋಹಕವಾಗಿವೆ. ಪುರುಷ ದೇವತೆಯನ್ನು ದೊಡ್ಡದಾಗಿಯೂ ಸ್ತ್ರೀದೇವತೆಯನ್ನು ಚಿಕ್ಕದಾಗಿಯೂ ರಚಿಸಲಾಗಿದೆ. ಕೃಷ್ಣದೇವಾಲಯದ ಮಹಾದ್ವಾರ ಗೋಪುರದ ಪಶ್ಚಿಮ ಭಾಗದಲ್ಲಿರುವ ಸೈನಿಕರ ಸಮೂಹ ಗಾರೆ ಶಿಲ್ಪಗಳನ್ನು ಕೃಷ್ಣದೇವರಾಯ ಒರಿಸ್ಸದ ಮೇಲೆ ಕೈಗೊಂಡ ದಂಡಯಾತ್ರೆಯ ಚಿತ್ರಣವೆನ್ನಲಾಗಿದೆ. ಇದರ ಬಹುಭಾಗ ಭಗ್ನಗೊಂಡಿದ್ದು ಇತ್ತೀಚೆಗೆ ಇದನ್ನು ಸಂರಕ್ಷಿಸಲಾಗಿದೆ.

ಹಂಪೆಯ ಗಾರೆ ಪ್ರತಿಮೆಗಳಲ್ಲಿ ಮಿಥುನ ಶಿಲ್ಪಗಳು ಪ್ರಮುಖವಾಗಿವೆ. ಇವುಗಳ ಮೈಮಾಟ ಆಕರ್ಷಕವಾಗಿದೆ. ವಿಠಲ ದೇವಾಲಯದ ಗೋಪುರದಲ್ಲಿ (ಪೂರ್ವ) ನಗ್ನ ಸ್ತ್ರೀಶಿಲ್ಪವೊಂದು ಲಜ್ಜಾಗೌರಿಶಿಲ್ಪದ ಮಾದರಿಯಲ್ಲಿದೆ. ವಿರೂಪಾಕ್ಷ ದೇವಾಲಯದ ದೊಡ್ಡ ಗೋಪುರದ ದಕ್ಷಿಣ ಮುಖದಲ್ಲಿರುವ ಮಿಥುನ ಶಿಲ್ಪಗಳು ಜೀವಂತಿಕೆಯಿಂದ ಕೂಡಿವೆ. ಸ್ತ್ರೀ ಪ್ರತಿಮೆಗಳು ತುಂಬು ಯೌವನವನ್ನು ಪ್ರಕಟಿಸುತ್ತವೆ. ಇವುಗಳ ಸುಂದರ ಕೇಶಾಲಂಕರಣ, ಲೇಪಾಕ್ಷಿ ವರ್ಣ ಚಿತ್ರಗಳಲ್ಲಿರುವ ಸ್ತ್ರೀಯರ ಕೇಶಾಲಂಕಾರವನ್ನು ಹೋಲುತ್ತವೆ. ಕೃಷ್ಣ ದೇವಾಲಯದ ಗೋಪುರದಲ್ಲಿರುವ ಗೋಪಿಕಾಸ್ತ್ರೀಯರ ಶಿಲ್ಪಗಳು ನಗ್ನವಾಗಿದ್ದರೂ ಸದಭಿರುಚಿಗೆ ಉತ್ತಮ ಉದಾಹರಣೆಗಳಾಗಿವೆ.

ಹೀಗೆ ಗಾರೆ ಪ್ರತಿಮೆಗಳು ವಿಜಯನಗರ ಕಾಲದ ವಾಸ್ತು ರಚನೆಗಳ ಅಲಂಕರಣವನ್ನು ಇಮ್ಮಡಿಸುವುದರಲ್ಲಿ ಪ್ರಮುಖ ಪಾತ್ರವಹಿಸಿವೆ. ವಿವಿಧ ಪಂಥದ ದೇವತೆಗಳು, ಪೌರಾಣಿಕ ಘಟನಾವಳಿಗಳು, ಪರಿವಾರ ದೇವತೆಗಳು, ಪ್ರಾಣಿಪಕ್ಷಿಗಳು, ರಾಜ, ರಾಣಿ, ಯತಿ ,ಶಿಷ್ಯ ಮತ್ತು ಇತರ ಸಮೂಹ ಗಾರೆ ಪ್ರತಿಮೆಗಳು ಪ್ರಮುಖವಾಗಿವೆ. ವಿಜಯನಗರ ಕಾಲದಲ್ಲಿ ಹಂಪಿ ಹೊರತುಪಡಿಸಿ ಇತರೆಡೆಗಳಲ್ಲಿ ನಿರ್ಮಾಣಗೊಂಡ ರಾಯಗೋಪುರ (ಮಹಾದ್ವಾರ ಗೋಪುರ) ಹಾಗೂ ಕೈಪಿಡಿ ಗೋಡೆಯ ಗೂಡುಗಳಲ್ಲಿ ಗಾರೆ ಪ್ರತಿಮೆಗಳು ನಿರ್ಮಾಣ ಗೊಂಡವು. ಉದಾ: ಮೇಲುಕೋಟೆ, ಕನಕಗಿರಿ, ಶ್ರೀರಂಗಪಟ್ಟಣ. ಈ ಹಿನ್ನೆಲೆಯಲ್ಲಿ ವಿಜಯನಗರ ಕಾಲದಲ್ಲಿ ಗಾರೆ ಪ್ರತಿಮೆಗಳನ್ನು ಶಿಲ್ಪಶಾಸ್ತ್ರದಲ್ಲಿ ಪರಿಣತಿ ಪಡೆದಿದ್ದ ಶಿಲ್ಪಿಗಳೆ ನಿರ್ಮಿಸಿರುವುದು ಸ್ಪಷ್ಟವಾಗುತ್ತದೆ. ಏಕೆಂದರೆ ಈ ಕಾಲದ ಮರ, ಶಿಲೆ, ಲೋಹ ಮತ್ತು ಗಾರೆ ಪ್ರತಿಮೆಗಳು ಲಕ್ಷಣ ಮತ್ತು ಶೈಲಿಯಲ್ಲಿ ಒಂದೇ ಮಾದರಿಯಲ್ಲಿ ಕಂಡುಬರುತ್ತವೆ. ಅಂದರೆ ವಿಜಯನಗರ ಕಾಲದಲ್ಲಿ ಗಾರೆ ಕುಶಲಕಲೆಯಲ್ಲಿ ನುರಿತ ಶಿಲ್ಪಿಗಳ ಒಂದು ವರ್ಗವೇ ಇತ್ತೆಂಬುದು ಸುಸ್ಪಷ್ಟ. ಆದರೆ

ಗಾರೆ ಶಿಲ್ಪಿಗಳನ್ನು ಕುರಿತಂತೆ ಈವರೆಗೂ ಯಾವುದೇ ಮೂಲದ ಮಾಹಿತಿ ದೊರೆತಿಲ್ಲ. ಇನ್ನು ಮೈಸೂರು ಒಡೆಯರ ಕಾಲದಲ್ಲೂ ಹೆಚ್ಚಿನ ಸಂಖ್ಯೆಯ ಗಾರೆ ಪ್ರತಿಮೆಗಳನ್ನು ದೇವಾಲಯಗಳ ಗೋಪುರ ಮತ್ತು ಕೈಪಿಡಿಗೋಡೆಯ ಗೂಡುಗಳಲ್ಲಿ ನಿರ್ಮಿಸಲಾಯಿತು. ಕಾಲಕ್ರಮೇಣ ವಸತಿ ಗೃಹಗಳ ಅಲಂಕರಣೆಯಲ್ಲಿ ಗಾರೆಯನ್ನು ಯಥೇಚ್ಛವಾಗಿ ಬಳಸುವ ಪದ್ಧತಿ ರೂಢಿಯಾಯಿತು. ಸಿಮೆಂಟ್ ಮತ್ತಿತರ ಆಧುನಿಕ ವಸ್ತುಗಳ ಪ್ರವೇಶದಿಂದಾಗಿ ಗಾರೆ ಬಳಕೆ ಸ್ಥಗಿತಗೊಂಡಿತೆನ್ನಬಹುದು. ಆದರೂ ಕೆಲವು ಕೆಲಸಗಳಿಗೆ ಗಾರೆ ಬಳಕೆಗೊಳ್ಳುತ್ತಿದೆ. (ಸಿ.ಎಂ.)

**ಗಾರ್ಸಿಯಾ ಲೋರ್ಕ್, ಫೆಡರಿಕೊ :** 1899–1936. ಆಧುನಿಕ ಸ್ಪೇನಿನ ಪ್ರಮುಖ ಸಾಹಿತಿಗಳಲ್ಲೊಬ್ಬ. ಸ್ಪೇನಿನ ಗ್ರಾನಡ ಜಿಲ್ಲೆಯ ಫೋಂತೆ ವಾಕ್ವೆರೋಸ್ ಎಂಬ ಹಳ್ಳಿಯಲ್ಲಿ ಜನಿಸಿದ. ಚಿಕ್ಕಂದಿನಿಂದಲೂ ದೇಹಸ್ಥಿತಿ ಬಹಳ ಸೂಕ್ಷ್ಮವಾಗಿದ್ದ ಕಾರಣ, ದೈಹಿಕ ಶ್ರಮದ ಕೆಲಸ ಈತನಿಗೆ ಸಾಧ್ಯವಾಗಲಿಲ್ಲ. ವೈಚಾರಿಕ ಮತ್ತು ಗಹನ ಮೀಮಾಂಸೆಯ ಪ್ರವೃತ್ತಿಯ ಲೋರ್ಕನಿಗೆ ತನ್ನ ಆಂಡಲೂಸಿಯ ಪ್ರಾಂತ್ಯದ ಜನರ ಸಹಜವಾದ ಪ್ರಕೃತಿ ಪ್ರೇಮ, ಸೂಕ್ಷ್ಮವಾದ ಕಲಾ ವಸ್ತುಗಳ ಪ್ರೇಮ ಹುಟ್ಟಿನಿಂದಲೇ ಮೈಗೂಡಿ ಬಂದಿತ್ತು. ಈತ ಚಿಕ್ಕಂದಿನಿಂದಲೂ ಸಂಗೀತದ ಅಭ್ಯಾಸದ ಜೊತೆಗೆ ಸ್ಪೇನಿನ ಪ್ರಾಚೀನ ಮತ್ತು ಈಚಿನ ಕಾವ್ಯಗಳ ಅಧ್ಯಯನ ನಡೆಸಿದ. ಗ್ರಾನಡ ವಿಶ್ವವಿದ್ಯಾಲಯ ಮತ್ತು ಮ್ಯಾಡ್ರಿಡ್‌ಗಳಲ್ಲಿ ತತ್ತ್ವಶಾಸ್ತ್ರ, ಸಾಹಿತ್ಯ ಮತ್ತು ನ್ಯಾಯಶಾಸ್ತ್ರಗಳ ಅಭ್ಯಾಸ ಮಾಡಿ 1921ರಲ್ಲಿ ಪದವಿಗಳನ್ನು ಪಡೆದ. ಇವನ ಮೊದಲ ಪದ್ಯಗಳೆಲ್ಲವೂ ಸ್ಪೇನಿನಲ್ಲೆಲ್ಲ ಪ್ರಸಾರವಾಗಿ ಬರೆದವನಿಗೆ ಅಪಾರ ಕೀರ್ತಿ ತಂದುಕೊಟ್ಟವು. ಲೋರ್ಕ



ಮತ್ತು ಗೆಳೆಯರು ಅವನ್ನು ತಾವೇ ಹಾಡಿ ಜನಪ್ರಿಯಗೊಳಿಸಿದರು. ಪ್ರಾರಂಭದಿಂದಲೂ ಮಕ್ಕಳ ಹಾಡಿನ ಸಾಂಗತ್ಯದ ಬಗ್ಗೆ ಅಪಾರ ಪ್ರೇಮವಿದ್ದ ಈತ ತನ್ನ ಜನತೆಯ ಬದುಕು, ಜಾನಪದ ಸಾಹಿತ್ಯಗಳ ಅಂತರಾಳಗಳನ್ನು ಕಂಡುಕೊಂಡು ನಿಜವಾದ ಜನತಾಕವಿಯೆನಿಸಿಕೊಂಡ. ಈತನ ಕವನ ಸಂಕಲನ ಅಚ್ಚಾದುದು 1921ರಲ್ಲಿ. ಈತನ ಇಂಪ್ರೆಸಿಯೋನ್ಸ್ ಇ ಪೈಸಾಜೆಸ್ ಎಂಬ ಗದ್ಯಗ್ರಂಥದಲ್ಲಿ (1918) ಹಳ್ಳಿಯ ಬದುಕು ಬಹು ಸಹಜವಾಗಿ ಚಿತ್ರಿತವಾಗಿದೆ. ಪ್ರಿಮೆರ್ ರೊಮಾನ್ಸೆರೊ ಗಿತಾನೊ ಎಂಬ ಕವಿತಾ ಸಂಗ್ರಹದಲ್ಲಿ (1928) ತನ್ನ ಗ್ರಾಮೀಣ ಸಮಾಜದ ಸತ್ತ್ವವನ್ನು ಅರ್ಥಪೂರ್ಣವಾಗಿ ಈತ ಚಿತ್ರಿಸಿದ್ದಾನೆ. ಆದರೂ ಆಧುನಿಕ ಕಲೆಯಲ್ಲಿ ಆಸಕ್ತನಾದ ಲೋರ್ಕಾ ಆಗಿನ ಯುವಕ ಚಿತ್ರಕಾರ ಸಾಲ್ವಡೋರ್ ಡಾಲಿ, ಕವಿ ಗೆರಾರ್ಡೊ ಡಿಯೇಗೊ ಮತ್ತು ಮ್ಯಾನುಯೆಲ್ ಡ ಫಾಲಾ ಮುಂತಾದವರ ಗೆಳೆಯನಾಗಿ ಅವರ ಪ್ರಭಾವಕ್ಕೊಳಗಾದ. 1922 ಮತ್ತು 1923ರಲ್ಲಿ ಜನತೆಯ ದೊಡ್ಡ ಜಾತ್ರೆಯೊಂದನ್ನು ನಡೆಸಿದ. ಇದು ಆಂಡಲೂಸಿಯದ ಜಾನಪದ ಕತೆಗಳ ಪುನರ್ನವೀಕರಣ ಮತ್ತು ಉದ್ಧಾರಕ್ಕೆ ಕಾರಣವಾಯಿತು. ಅದೇ ಕಾಲದಲ್ಲಿಯೇ ಜಾನಪದ ಸಂಗೀತಕ್ಕಾಗಿ ಲೋರ್ಕ ಮತ್ತೊಂದು ಸಮ್ಮೇಳನ ನಡೆಸಿದ. 1931ರಲ್ಲಿ ಪ್ರಕಟವಾದ ಪೊಯಾಮಾ ಡೆಲ್ ಕಾಂತೆ ಜಾಂಡೋ ಕಾವ್ಯಸಂಕಲನ ಎರಡು ಭಾಗಗಳಲ್ಲೂ ಲೋರ್ಕ ತನ್ನ ಪ್ರದೇಶದ ಜಿಪ್ಸಿಗಳ ಜಾನಪದ ಕಾವ್ಯಭಾಷೆಯನ್ನೇ ಬಳಸಿ, ಅವರ ಜೀವನದ ಸಮಗ್ರ ಚಿತ್ರಣ ಕೊಟ್ಟಿದ್ದಾನೆ. ಅವರ ಬದುಕಿನ ಅಲೆಮಾರಿತನದಲ್ಲಿಯೂ ಸಾವಿನೆದುರಿಗೆ ನಿಲ್ಲುವುದು ಅವರ ಸ್ಥೈರ್ಯ ಸುಂದರವಾಗಿ ಅಚ್ಚಳಿಯದಂತೆ ಮೂಡಿರುವ ಈ ಕೃತಿ ಅದ್ವಿತೀಯವಾದುದು. ಇಲ್ಲಿಯೂ ಲೋರ್ಕನ ಮನಸ್ಸಿನಲ್ಲಿ ಸದಾ ಹುದುಗಿದ್ದ ಸಾವಿನ ವಿಚಾರ ಇಣುಕುತ್ತದೆ. ಇವನ ಸ್ನೇಹಿತ ಗೂಳಿಕಾಳಗಪಟು ಮೇಜಿಯಾಸ್ ಕಾಳಗವೊಂದರಲ್ಲಿ ಗೂಳಿಯ ಇರಿತಕ್ಕೆ ಸಿಕ್ಕಿ ಸತ್ತಾಗ ಲೋರ್ಕ ಬರೆದ ಶೋಕಗೀತೆ (1935) ಕಣ್ಣಿನಲ್ಲಿ ರಕ್ತ ಹರಿಸುವಂಥ ಆಳವಾದ ಭಾವೋದ್ರೇಕದಿಂದ, ಜಿಲ್ಲೆನ್ನಿಸುವ ಪ್ರತಿಮೆಗಳಿಂದ ಕೂಡಿದೆ. ಈ ಕವಿತೆ ಆಧುನಿಕ ಯುರೋಪಿನ ಸಾಹಿತ್ಯದ ಅತ್ಯದ್ಭುತ ಶೋಕಗೀತೆಯೆಂದು ಹೆಸರಾಗಿದೆ.

ಕವಿಯೇ ಅಲ್ಲದೆ ಸಂಗೀತಗಾರ, ಚಿತ್ರಗಾರ, ನಾಟಕಕಾರ, ನಟ ಮತ್ತು ಜಾನಪದ ನೃತ್ಯಗಾರನಾಗಿ ಲೋರ್ಕ ಅಪಾರ ಜನಪ್ರಿಯತೆ ಗಳಿಸಿದ. 1929ರಲ್ಲಿ ನ್ಯೂಯಾರ್ಕಿಗೆ ಹೋಗಿಬಂದ ಅನಂತರ ಈತ ವಾಲ್ಟ್ ವ್ಹಿಟ್ಮನ್ ಮತ್ತಿತರ ಬಗ್ಗೆ ಸ್ವತಂತ್ರ್ಯ ಗೀತೆಗಳನ್ನು ರಚಿಸಿದ. ಸಂಚಾರೀ ಜಾನಪದ ರಂಗಭೂಮಿಯಲ್ಲಿ ಆಸಕ್ತಿ ವಹಿಸಿ ಕೊನೆಯವರೆಗೆ ಲ ಬ್ಯಾರಾಕಾದ ಸದಸ್ಯನಾಗಿದ್ದು ನಟನಾಗಿ, ನಾಟಕಕಾರನಾಗಿ, ನಿರ್ದೇಶಕನಾಗಿ ದುಡಿದ. ಬೋದಾಸ್‌ದ ಸಾಂಗ್ರೆ (1933), ಯೆರ್ಮಾ (1934), ಬರ್ನಾರ್ಡಾ ಆಲ್ಬನ ಮನೆ (1935ರಲ್ಲಿ ಬರೆದುದಾದರೂ 1940ರಲ್ಲಿ ಕವಿಯ ಸಾವಿನ ಅನಂತರ ಪ್ರಕಟವಾಯಿತು). ಮುಂತಾದ ದುರಂತ ನಾಟಕಗಳಿಗೆ ಜಿಪ್ಸಿ ಅಲೆಮಾರಿಗಳ ಜೀವನವೇ ವಸ್ತು.

ಸ್ಪೇನಿನ ಆಧುನಿಕ ಜಾನಪದ ಪುನರುತ್ಥಾನಕ್ಕೆ ಕಾರಣನಾಗಿ ಕಲೆಯನ್ನು ಅದಕ್ಕಾಗಿ ಮೀಸಲಿಟ್ಟ ಲೋರ್ಕ ಸ್ಪೇನಿನ ಅತ್ಯಂತ ಪ್ರಭಾವಶಾಲಿ ಸಾಹಿತಿಯಾಗಿ ಪರಿಗಣಿತ ನಾಗಿದ್ದಾನೆ. 1936ರಲ್ಲಿ ಸ್ಪೇನಿನಲ್ಲಿ ಅಂತರ್ಯುದ್ಧ ಪ್ರಾರಂಭವಾದಾಗ ಫ್ರ್ಯಾಂಕೋ ಬಣದ ಕಮ್ಯುನಿಸ್ಟ್ ವಿರೋಧಿ ಗುಂಪೊಂದು ಗ್ರಾನಡದಲ್ಲಿ ಗಾರ್ಸಿಯಾ ಲೋರ್ಕನನ್ನು 1936ರ ಆಗಸ್ಟ್ 19ರಂದು ರಸ್ತೆಯಲ್ಲಿ ಇರಿದು ಕೊಂದುಹಾಕಿತು. (ಎಸ್.ಎ.ಎನ್.)

**ಗಾರ್ಸ್ಟಾಂಗ್, ಜಾನ್ :** 1876–1956. ಬ್ರಿಟಿಷ್ ಪುರಾತತ್ತ್ವಜ್ಞ. ಮಧ್ಯಪ್ರಾಚ್ಯದ ಬಗ್ಗೆ ಈತ ನಡೆಸಿದ ಸಂಶೋಧನೆಗಳಿಂದಾಗಿ ಪ್ರಖ್ಯಾತನಾಗಿದ್ದಾನೆ. ಜನನ ಲ್ಯಾಂಡ್‌ಷೈರಿನ್ ಬ್ಲಾಕ್‌ಬರ್ನ್‌ನಲ್ಲಿ. 1876ರ ಮೇ 5 ರಂದು. ಆಕ್ಸ್‌ಫರ್ಡಿನ ಜೀಸಸ್ ಕಾಲೇಜಿನಲ್ಲಿ ಗಣಿತಶಾಸ್ತ್ರದ ವಿದ್ಯಾರ್ಥಿಯಾಗಿದ್ದಾಗ ಈತನಿಗೆ ರೋಮ್ ಮತ್ತು ಬ್ರಿಟಿಷ್ ಪ್ರಾಕ್ತನದಲ್ಲಿ ಆಸಕ್ತಿ ಹುಟ್ಟಿತು. ಈತ ಪ್ರಕಟಿಸಿದ ರೋಮನ್ ರಿಬ್‌ಚೆಸ್ಟರ್ (1899) ಈ ಆಸಕ್ತಿಯ ಫಲ. 1902ರಲ್ಲಿ ಈತ ಲಿವರಪೂಲ್ ವಿಶ್ವವಿದ್ಯಾಲಯದಲ್ಲಿ ಈಜಿಪ್ಟ್ ಪ್ರಾಕ್ತನಶಾಸ್ತ್ರದ ಉಪಪ್ರಾಧ್ಯಾಪಕ ನಾಗಿದ್ದ. ಅದೇ ವಿಶ್ವವಿದ್ಯಾಲಯ ದಲ್ಲಿ 1907ರಿಂದ 1941ರ ವರೆಗೆ ಪ್ರಾಕ್ತನಶಾಸ್ತ್ರ ವಿಧಾನಗಳ ಮತ್ತು ಪ್ರಯೋಗದ ಪ್ರಾಧ್ಯಾಪಕನಾಗಿದ್ದ. ಲಿವರ್‌ಪೂಲ್ ಪ್ರಾಕ್ತನಶಾಸ್ತ್ರ ಸಂಸ್ಥೆಯ ಸ್ಥಾಪನೆಗೆ ಈತ ಕಾರಣ. 1899ರಲ್ಲಿ ಈತ ವಿಲಿಯಂ ಮ್ಯಾಥ್ಯೂಸ್ ಫ್ಲಿಂಡರ್ ಪೆಟ್ರಿಯ ಕೆಳಗೆ ಕೆಲಸ ಮಾಡಲು ಈಜಿಪ್ಟಿಗೆ ಹೋದ. ಮುಂದಿನ 15 ವರ್ಷಗಳ ಕಾಲ ಈಜಿಪ್ಟ್, ನ್ಯೂಬಿಯ, ಏಷ್ಯ ಮೈನರ್‌ಗಳಲ್ಲಿ ಉತ್ಖನನ ಮಾಡಿದ. ಹಿಟ್ಟೈಟ್ ನಾಗರಿಕತೆಯ ವಿಚಾರದಲ್ಲಿ ಅಧಿಕಾರಯುತವಾಗಿ ಹೇಳಬಲ್ಲವನಾದ. 1910ರಲ್ಲಿ ಪ್ರಕಟವಾದ ದಿ ಲ್ಯಾಂಡ್ ಆಫ್ ದಿ ಹಿಟ್ಟೈಟೀಸ್ ಎಂಬುದು ಈ ಬಗ್ಗೆ ಒಂದು ಶಿಷ್ಟ ಗ್ರಂಥ. ಇದನ್ನು ಈತ ಪರಿಷ್ಕರಿಸಿ 1927ರಲ್ಲಿ ದಿ ಹಿಟ್ಟೈಟ್ ಎಂಪೈರ್ ಎಂಬ ಹೆಸರಿನಲ್ಲಿ ಪ್ರಕಟಿಸಿದ. ಪ್ರಾಚೀನ ಇಥಿಯೋಪಿಯದ ರಾಜಧಾನಿ ಮೆರೊಯೀದಲ್ಲಿ ಈತ ನಡೆಸಿದ (1910–14) ಉತ್ಖನನಗಳು ಅತ್ಯಂತ ಗಮನಾರ್ಹ ವಿಚಾರಗಳನ್ನು ಹೊರಗೆಡವಿದವು. ಅದು ರೋಮನ್ನರ ಆಕ್ರಮಣಕ್ಕೊಳಪಟ್ಟಿತ್ತೆಂಬುದು ವ್ಯಕ್ತಪಟ್ಟದ್ದು ಆಗಲೇ.



ಒಂದನೆಯ ಮಹಾಯುದ್ಧದ ಕಾಲದಲ್ಲಿ ಈತ ರೆಡ್ ಕ್ರಾಸ್ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ. ಈತ ಜೆರೂಸಲೆಂನಲ್ಲಿ ಬ್ರಿಟಿಷ್ ಪುರಾತತ್ತ್ವ ಶಾಲೆಯ ಪ್ರಥಮ ನಿರ್ದೇಶಕನಾಗಿ ನೇಮಕಗೊಂಡದ್ದು 1919ರಲ್ಲಿ. ಪ್ಯಾಲೆಸ್ಟೈನಿನ ಪುರಾತತ್ತ್ವ ಇಲಾಖೆಯನ್ನು ಈತ ವಹಿಸಿಕೊಂಡದ್ದು 1920ರಲ್ಲಿ. 1926ರಲ್ಲಿ ಈ ಎರಡು ಹುದ್ದೆಗಳಿಂದ ನಿವೃತ್ತಿ ಹೊಂದಿದ ಮೇಲೆಯೂ ಪುರಾತತ್ತ್ವ ವಿಚಾರಗಳಲ್ಲಿ ಕೆಲಸ ಮುಂದುವರಿಸಿದ. 1930–36ರಲ್ಲಿ ಜೆರಿಕೋದಲ್ಲಿ ಈತ ಮಾಡಿದ ಉತ್ಖನನಗಳು ಬಲು ಅಮೂಲ್ಯವಾದಂಥವು. ನೂತನ ಶಿಲಾಯುಗ ಮತ್ತು ಕಂಚಿನ ಯುಗಗಳ ಜನವಸತಿಯ ಬಗ್ಗೆ ಅನೇಕ ಮುಖ್ಯ ಸಂಗತಿಗಳು ಆವಿಷ್ಕಾರಗೊಂಡುವು.

ಈತ ಮೆರ್ಸಿನ್‌ನಲ್ಲಿ ಸಂಶೋಧನೆಗೆ ಎರಡನೆಯ ಮಹಾಯುದ್ಧ ಅಡ್ಡಿಯಾಯಿತು. ಈ ಸಂಶೋಧನೆಯ ವರದಿ ಪ್ರಿ–ಹಿಸ್ಟಾರಿಕ್ ಮೆರ್ಸಿನ್ ಎಂಬ ಹೆಸರಿನಲ್ಲಿ ಪ್ರಕಟವಾದ್ದು 1953ರಲ್ಲಿ. ಆನಟೋಲಿಯದ ಬಗ್ಗೆ ನಡೆಸಿದ ಅಧ್ಯಯನಕ್ಕೆ ಮನ್ನಣೆಯಾಗಿ ಈತ 1947–48ರಲ್ಲಿ ಆಂಕಾರದ ಬ್ರಿಟಿಷ್ ಪುರಾತತ್ತ್ವ ಶಾಲೆಯ ಪ್ರಥಮ ನಿರ್ದೇಶಕನಾಗಿ

ನೇಮಕಗೊಂಡ. 1949ರಲ್ಲಿ ಅದರ ಅಧ್ಯಕ್ಷನಾದ. ಈತ ಲೆಬನಾನಿನ ಬೀರತ್‌ನಲ್ಲಿ 1956ರ ಸಪ್ಟೆಂಬರ್ 12ರಂದು ತೀರಿಕೊಂಡ.

*

**ಗಾರ್ಹಸ್ಥ್ಯ :** ಗೃಹಸ್ಥಾಶ್ರಮ ಧರ್ಮಕ್ಕೆ ಈ ಹೆಸರಿದೆ. ಗೃಹಸ್ಥ ಅಂದರೆ ಮನೆಯುಳ್ಳವನು ಎಂದು ಪದಶಃ ಅರ್ಥ; ಭಾವಾರ್ಥ ಇದಕ್ಕಿಂತ ವಿಶಾಲವಾದದ್ದು. ಹಾಗೆಯೇ ಗೃಹಿಣಿ ಪದದ ಅರ್ಥವೂ ವಿಶಾಲವಾದದ್ದು. ಗೃಹಸ್ಥ ಮತ್ತು ಗೃಹಿಣಿ ಕೇವಲ ಮನೆಯೆಂಬ ಒಂದು ಕಟ್ಟಡವನ್ನು ಪಡೆದವರಲ್ಲ. ಅವರು ತಂದೆ ತಾಯಿ, ಅಣ್ಣ ತಮ್ಮ, ಅಕ್ಕ, ತಂಗಿಯರೊಡನೆ ಬಾಳುವ ಕುಟುಂಬಿಗಳು, ಸಂಸಾರಿಗಳು. ಸಮಾಜದ ಶೈಶವಾವಸ್ಥೆಯಲ್ಲೂ ಕುಟುಂಬವೇ ಜೀವನವ್ಯವಸ್ಥೆಯ ತಳಹದಿಯಾಗಿತ್ತು. ಹಲವು ಕುಟುಂಬಿಗಳು ನೆರೆಹೊರೆಯಾಗಿ ಬಾಳುತ್ತಿದ್ದುವು. ಪ್ರತಿಯೊಬ್ಬ ಕುಟುಂಬಿಯೂ ಹಲವು ಕುಟುಂಬಗಳ ಒಂದು ಕುಲ ಅಥವಾ ಬುಡಕಟ್ಟಿನ ಆಡಳಿತದಲ್ಲಿ ಭಾಗವಹಿಸುತ್ತಿದ್ದನು. ಅದರ ಕಟ್ಟು ಕಾಯಿದೆಗಳನ್ನು ಪಾಲಿಸುತ್ತಿದ್ದನು. ಅದರ ಮತಾಚಾರ ಗಳನ್ನು ಅನುಸರಿಸುತ್ತಿದ್ದನು. ಅವನ ಮಕ್ಕಳು ಆಯಾ ಕುಲದ ಅಥವಾ ಗುಂಪಿನ ಗುರುಗಳಿಂದ ವಿದ್ಯೆ ಕಲಿಯುತ್ತಿದ್ದರು. ಗುಂಪುಗುಂಪುಗಳಿಗೆ ಯುದ್ಧ ಒದಗಿದಾಗ ಯುದ್ಧದಲ್ಲಿ ಭಾಗವಹಿಸುತ್ತಿದ್ದರು. ಬೆಳೆದ ಸಮಾಜದಲ್ಲಂತೂ ಗೃಹಸ್ಥನ ಸಾಮಾಜಿಕ ಕರ್ತವ್ಯಗಳು ತುಂಬ ವಿಸ್ತರಿಸಿವೆ. ಅವನು ಪುರವಾಸಿಯಾಗಿ ಪೌರನ ಹಕ್ಕುಬಾಧ್ಯತೆಗಳನ್ನು ಪಡೆದಿರುತ್ತಾನೆ. ಒಂದು ರಾಷ್ಟ್ರದ ಪ್ರಜೆಯಾದ ಗೃಹಸ್ಥ ಅದರಿಂದ ಪಡೆಯುವ ಪ್ರಯೋಜನಕ್ಕೆ ಸಾಪೇಕ್ಷವಾದ ಕಟ್ಟು ಕಾಯಿದೆಗಳನ್ನು ಪಾಲಿಸಬೇಕಾಗುತ್ತದೆ. ಅವನ ಮತ್ತು ಅವನ ಕುಟುಂಬದವರ ಕ್ಷೇಮ, ಆಯುರಾರೋಗ್ಯ, ಆರ್ಥಿಕಸ್ಥಿತಿ, ಸಂಸ್ಕೃತಿ ಮುಂತಾದುವುಗಳಿಗೆ ಬಹುಮಟ್ಟಿಗೆ ಕಾರಣವಾದ ತನ್ನ ರಾಷ್ಟ್ರದ ಸರ್ಕಾರದೊಡನೆ ಪ್ರಜೆಯಾದ ಅವನು ಸಹಕರಿಸಬೇಕು. ಅರಿಸ್ಟಾಟಲನ ಹೇಳಿಕೆಯಂತೆ ರಾಜ್ಯವೆಂಬುದು ವಿಸ್ತೃತಗೊಂಡ ಕುಟುಂಬ. ಇಪ್ಪತ್ತನೆಯ ಶತಮಾನದಲ್ಲಿ ಒಂದು ಸಮಾಜಕ್ಕೆ, ರಾಷ್ಟ್ರಕ್ಕೆ ಸೇರಿದ ಗೃಹಸ್ಥನ ಹೊಣೆಗಾರಿಕೆ ರಾಷ್ಟ್ರಗಳ ಎಲ್ಲೆಯನ್ನು ಮೀರಿ ಸ್ವಲ್ಪಮಟ್ಟಿಗಾದರೂ ಅಂತರರಾಷ್ಟ್ರೀಯವಾಗಿದೆ. ಹೀಗೆ ಸಂಸಾರಿಯಾದ ಗೃಹಸ್ಥನ ಸಂಬಂಧಗಳು ತುಂಬ ವಿಸ್ತರಿಸಿವೆ. ಸಂಸಾರಿಯಲ್ಲದವನ ಜೀವನ ಸಂಕುಚಿತ, ಜೀವನ ಸಮಸ್ಯೆಗಳೂ ಸಂಕುಚಿತ, ಸಂಸಾರಿಯಾದವನ ಜೀವನ ವಿಶಾಲ, ಅವನ ಸಮಸ್ಯೆಗಳೂ ಅನೇಕ. ಇವನ್ನು ಪರಿಹರಿಸಿಕೊಳ್ಳಲು ಅವನು ತನ್ನ ವ್ಯಕ್ತಿತ್ವವನ್ನು ವಿಶೇಷ ರೀತಿಯಲ್ಲಿ ಬೆಳೆಸಿಕೊಳ್ಳ ಬೇಕಾಗುತ್ತದೆ.

ಸಂಸಾರಿಮಾನವನ ಜೀವನವೇ ವಿಶ್ವದ ಸಾಹಿತ್ಯ, ಕಲೆಗಳು, ಕಸಬುಗಳು, ಧರ್ಮ, ನ್ಯಾಯ, ನೀತಿ ಮುಂತಾದ ಎಲ್ಲದರ ವಿಷಯ. ಅದನ್ನು ಬಿಟ್ಟರೆ ಈ ಎಲ್ಲದರ ವ್ಯಾಪ್ತಿ ತೀರ ಸಂಕುಚಿತವಾಗುತ್ತದೆ, ಅವು ಹುರುಳಿಲ್ಲದೆ ಬಡಕಲಾಗುತ್ತವೆ.

ಹೀಗೆ ಜೀವನದಲ್ಲಿ ಮಹತ್ತರ ಪಾತ್ರವಹಿಸಿರುವ ಗೃಹಸ್ಥನ ಜೀವನಾವಸ್ಥೆಗೆ ಭಾರತೀಯ ತತ್ತ್ವವೂ ಮತವೂ ಧರ್ಮಶಾಸ್ತ್ರವೂ ಕಲೆಗಳೂ ತುಂಬ ಪ್ರಾಶಸ್ತ್ಯ ಕೊಟ್ಟಿವೆ. ಭಾರತೀಯ ತಾತ್ತ್ವಿಕರು ಜೀವನವನ್ನು ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಮತ್ತು ಸಂನ್ಯಾಸ ಎಂದು ನಾಲ್ಕು ಆಶ್ರಮಗಳಾಗಿ ವಿಂಗಡಿಸಿ ಅವುಗಳಲ್ಲಿ ಗೃಹಸ್ಥ್ಯಕ್ಕೆ ಒಂದು ಮುಖ್ಯ ಸ್ಥಾನವನ್ನು ಕೊಟ್ಟಿದ್ದಾರೆ. ಉಳಿದೆಲ್ಲ ಆಶ್ರಮಗಳಿಗೂ ಅದು ತಳಹದಿ. ಗೃಹಸ್ಥನ ಮಕ್ಕಳು ಗುರು ಮತ್ತು ಗುರುಪತ್ನಿಯ ಕುಟುಂಬಕ್ಕೆ ಸೇರಿದವರಾಗಿ ಬ್ರಹ್ಮಚರ್ಯವನ್ನು ನಡೆಸುತ್ತಾರೆ. ಗೃಹಸ್ಥನಾಗಿ ಜೀವನವನ್ನು ಸಾಂಗವಾಗಿ ನಡೆಸಿದವನೇ ಮುಂದೆ ವಾನಪ್ರಸ್ಥಾಶ್ರಮಿಯಾಗುವವನು. ಸಂನ್ಯಾಸಿಯಾಗಿ ಪರಿವ್ರಾಜಕನಾದವನೂ ಮೊದಲಿಗೆ ಗೃಹಸ್ಥನೇ. ಪರಿವ್ರಾಜಕನಾದಾಗ ಅವನು ಭಿಕ್ಷೆ ಪಡೆಯುವುದು ಗೃಹಸ್ಥರ ಕುಟುಂಬದಿಂದ. ಹೀಗೆ ಗೃಹಸ್ಥಾಶ್ರಮದ ಮೇಲೆ ಉಳಿದೆಲ್ಲ ಆಶ್ರಮಗಳೂ ನಿಂತಿವೆ.

ವೇದದ ವಿಭಾಗಗಳಾದ ಮಂತ್ರಗಳು, ಬ್ರಾಹ್ಮಣಗಳು, ಆರಣ್ಯಕಗಳು ಮತ್ತು ಉಪನಿಷತ್ತುಗಳಿಗೂ ಜೀವನದ ಆಶ್ರಮಗಳಿಗೂ ನಿಕಟಸಂಬಂಧವಿದೆ. ಬಾಲಕ ಉಪನಯನದ ಮೂಲಕ ದೀಕ್ಷೆ ಪಡೆದು ಬ್ರಹ್ಮಚಾರಿಯಾದಾಗ ಆತ ತನ್ನ ಶಾಖೆಗೆ ಸಂಬಂಧಿಸಿದ ವೇದ ಮಂತ್ರಗಳನ್ನು ಕಲಿಯಬೇಕು. ಹಿಂದೆ ಬಾಲಕಿಯರಿಗೂ ಉಪನಯನ ರೂಢಿಯಲ್ಲಿತ್ತು. ಹಾರೀತ ಸ್ಮೃತಿ ಸ್ತ್ರೀಯರನ್ನು ಬ್ರಹ್ಮವಾದಿಗಳು ಸದ್ಯೋವಧುಗಳು ಎಂದು ಎರಡು ಬಗೆಯಾಗಿ ವಿಭಾಗ ಮಾಡುತ್ತದೆ. ಬ್ರಹ್ಮವಾದಿಗಳು ಉಪನಯನವಾದ ಮೇಲೆ ವೇದಾಧ್ಯಯನ ನಡಸಿ ಪರಬ್ರಹ್ಮ ಉಪಾಸನೆಯನ್ನು ಕೈಕೊಳ್ಳುತ್ತಿದ್ದರು. ಬೃಹದಾರಣ್ಯಕ ಉಪನಿಷತ್ತಿನ ಗಾರ್ಗಿ ಇಂಥ ಬ್ರಹ್ಮವಾದಿನಿ, ಸದ್ಯೋವಧುಗಳಿಗೆ ವಿವಾಹಸಮಯದಲ್ಲಿ ಅದರ ಅಂಗವಾಗಿ ಮಾತ್ರ ಉಪನಯನ ವಿಧಿಸಲಾಗಿತ್ತು. ಸ್ತ್ರೀಯರೂ ವೇದಾಧ್ಯಯನ ನಡೆಸಿ ಉಪಾಧ್ಯಾಯಾ ಉಪಾಧ್ಯಾಯೀ ಆಚಾರ್ಯಾ ಎಂಬ ಅಧಿಕಾರವನ್ನು ಪಡೆಯುತ್ತಿದ್ದರೆಂದು ಪಾಣಿನಿ ತಿಳಿಸುತ್ತಾನೆ. ಉಪಾಧ್ಯಾಯಾ, ಆಚಾರ್ಯಾ, ಉಪಾಧ್ಯಾಯೀ ಎಂದರೆ ಗುರುಪತ್ನಿಯಲ್ಲ, ಗುರುಪತ್ನಿಯನ್ನು ಆಚಾರ್ಯ, ಉಪಾಧ್ಯಾಯಾ ಎಂದು ಕರೆಯಕೂಡದು. ಗುರುಪತ್ನಿ ಆಚಾರ್ಯಿಣೀ, ಉಪಾಧ್ಯಾಯಿನೀ. ಗುರುವಾದವಳನ್ನು ಆಚಾರ್ಯಾ, ಉಪಾಧ್ಯಾಯಾ ಎಂದೇ ಸಂಬೋಧಿಸುವುದು ರೂಢಿಯಲ್ಲಿತ್ತು. ಪೂರ್ವಮೀಮಾಂಸಾ ತತ್ತ್ವಸ್ಥಾಪಕನಾದ ಜೈಮಿನಿ ಶೂದ್ರರೂ ಉಪನಯನ ಮಾಡಿಕೊಂಡು ವೇದಾಧ್ಯಯನ ನಡೆಸಿ, ಗೃಹಸ್ಥರಾಗಿ ಜ್ಯೋತಿಷ್ಟೋಮ ಮುಂತಾದ ಯಜ್ಞಗಳನ್ನು ನಡೆಸಬಹುದೆಂದು ಹೇಳಿರುತ್ತಾನೆ.

ವೇದಾಧ್ಯಯನ ಮುಗಿಸಿ ಸ್ನಾತಕನಾಗಿ ದೇಶಗಳನ್ನು ಸುತ್ತಿ ತನ್ನ ವಿದ್ಯಾ ಪ್ರೌಢಿಮೆಯನ್ನು ತೋರಿಸಿ ಹಣವನ್ನು ಗಳಿಸಿ ಸದ್ಯೋವಧುವನ್ನು ಮದುವೆಯಾಗಿ ವ್ಯಕ್ತಿ ಗೃಹಸ್ಥನಾಗುತ್ತಾನೆ; ಗುರುವಾಗಿ, ಪುರೋಹಿತನಾಗಿ, ಯಾಜ್ಞಿಕನಾಗಿ ಧರ್ಮ, ಅರ್ಥ, ಕಾಮಗಳೆಂಬ (ತ್ರಿವರ್ಗ) ಪುರುಷಾರ್ಥಗಳನ್ನು ಸಾಧಿಸುತ್ತಾನೆ; ವೇದೋಕ್ತ ಯಜ್ಞ ಕಾರ್ಯಗಳನ್ನು ನಡೆಸಿದ ಫಲವಾಗಿ ಜೀವಾಂತ್ಯದಲ್ಲಿ ಸ್ವರ್ಗಸುಖವನ್ನು ಅನುಭವಿಸುತ್ತಾನೆ. ಮೊದಲಲ್ಲಿ ವೇದ ಅಂಗೀಕರಿಸಿದ್ದ ಪುರುಷಾರ್ಥಗಳು ಗೃಹಸ್ಥ ಸಾಧಿಸಬೇಕಾದ ಧರ್ಮ, ಅರ್ಥ ಮತ್ತು ಕಾಮಗಳೆಂಬ ಮೂರೇ ಪುರುಷಾರ್ಥಗಳು. ಸಂನ್ಯಾಸ ನಾಲ್ಕನೆಯ ಆಶ್ರಮವಾಗಿ ಸ್ಥಾಪಿತವಾದದ್ದು. ವೇದದ ಕೊನೆಯ ಭಾಗಗಳು ಅಂದರೆ ಉಪನಿಷತ್ತುಗಳು ಹಿಂದೆ ರೂಢಿಯಲ್ಲಿದ್ದ ಮೂರು ಪುರುಷಾರ್ಥಗಳ ಜೊತೆಗೆ ಮೋಕ್ಷವನ್ನು ನಾಲ್ಕನೆಯ ಪುರುಷಾರ್ಥವಾಗಿ ಸೇರಿಸಿದುವು. ಸ್ವರ್ಗಪ್ರಾಪ್ತಿಯೇ ಮೋಕ್ಷವಲ್ಲ. ಸ್ವರ್ಗಪಡೆದವ ತನ್ನ ಕರ್ಮಫಲ ತೀರಿದ ಮೇಲೆ ಪುನಃ ಈ ಲೋಕದಲ್ಲಿ ಜನ್ಮಪಡೆಯಲೇಬೇಕು. ಮೋಕ್ಷವಾದರೋ ಬ್ರಹ್ಮಸಾಕ್ಷಾತ್ಕಾರದ ಮೂಲಕ ಶಾಶ್ವತ ಬ್ರಹ್ಮಲೋಕಪ್ರಾಪ್ತಿ. ಮುಕ್ತನಾದವನಿಗೆ ಪುನರ್ಜನ್ಮವಿಲ್ಲ. ಗೃಹಸ್ಥನಾದವ ಈ ನಾಲ್ಕನೆಯ ಪುರುಷಾರ್ಥವನ್ನು ಸಾಧಿಸಲು, ಹೆಂಡತಿಯ ಅನುಮತಿ ಪಡೆದು ಸಂನ್ಯಾಸವನ್ನು ಸ್ವೀಕರಿಸುತ್ತಿದ್ದುದು ಸಾಮಾನ್ಯ ಪದ್ಧತಿ. ಗೃಹಸ್ಥನಾಗಿದ್ದ ಯಾಜ್ಞವಲ್ಕ್ಯ ತನ್ನ ಹೆಂಡತಿಯ ಅನುಮತಿ ಪಡೆದು ಸಂನ್ಯಾಸವನ್ನು ಅವಲಂಬಿಸಿದ ಚಿತ್ರವನ್ನು ಬೃಹದಾರಣ್ಯಕ ಉಪನಿಷತ್ತು ರಮ್ಯವಾಗಿ ಚಿತ್ರಿಸಿದೆ. ಉಪನಿಷತ್ತುಗಳ ಕಾಲದಲ್ಲಿ ಬಾಲಸಂನ್ಯಾಸ ಪ್ರಚಾರದಲ್ಲಿದ್ದಂತೆ ಕಂಡುಬರುವುದಿಲ್ಲ. ಈ ಪದ್ಧತಿ ಹುಟ್ಟಿದ್ದು ಬಹುಶಃ ಬುದ್ಧನ ಕಾಲದಲ್ಲಿ, ಉಪನಿಷತ್ತುಗಳಲ್ಲೂ ಕಲ್ಪಸೂತ್ರಗಳ ಗೃಹಸ್ಥನಾಗಿ ಬಾಳಿ ಸಮಾಜಕ್ಕೂ ವಂಶಕ್ಕೂ ಸಕಲ ಪ್ರಾಣಿವರ್ಗಕ್ಕೂ ಸಲ್ಲಿಸಬೇಕಾದ ಕರ್ತವ್ಯಗಳನ್ನು ಸಲ್ಲಿಸಿ ಧರ್ಮವೆಂಬ ಪುರುಷಾರ್ಥವನ್ನು ಸಾಧಿಸಿದ ಗೃಹಸ್ಥನೇ ಮೋಕ್ಷ ಸಾಧನವಾದ ಸಂನ್ಯಾಸಕ್ಕೆ ಅರ್ಹ–ಎಂದು ಸ್ಪಷ್ಟಪಡಿಸುತ್ತವೆ. ಕೆಲವು ಧರ್ಮಸೂತ್ರಗಳು, ಉದಾಹರಣೆಗೆ, ಗೌತಮ ಧರ್ಮಸೂತ್ರ, ಸಂನ್ಯಾಸವನ್ನು ಧಿಕ್ಕರಿಸಿವೆ. ಜೈಮಿನಿಯ ಪೂರ್ವಮೀಮಾಂಸಾದರ್ಶನ ಗಾರ್ಹಸ್ಥ್ಯಕ್ಕೆ ಪ್ರಾಧಾನ್ಯ ಕೊಟ್ಟು ಸಂನ್ಯಾಸವನ್ನು ನಿರಾಕರಿಸುತ್ತದೆ. ಅದರ ಪ್ರಸಿದ್ಧ ಅನುಯಾಯಿಯಾಗಿದ್ದ ಮಂಡನಮಿಶ್ರ ಸಂನ್ಯಾಸಿಗಳಾದ ಶಂಕರಾಚಾರ್ಯರು ತನ್ನ ಬಳಿಗೆ ಬಂದಾಗ ಅವರನ್ನು ತಿರಸ್ಕಾರದಿಂದ ಕಾಣುತ್ತಾನೆ. ಅನಂತರ ವಾದದಲ್ಲಿ ಸೋತು ಸಂನ್ಯಾಸವನ್ನು ಅವಲಂಬಿಸುತ್ತಾನೆ. ಶಂಕರಾಚಾರ್ಯರ ಅನಂತರ ಹುಟ್ಟಿದ ಶ್ರೀವೈಷ್ಣವ ಮತ್ತು ಮಾಧ್ವವೇದಾಂತಪಕ್ಷದವರೂ ಗೃಹಸ್ಥರಾಗಿ ಬಾಳಿ ಸಂನ್ಯಾಸವನ್ನು ಸ್ವೀಕರಿಸುವುದೇ ಸಾಮಾನ್ಯ. ಧರ್ಮವನ್ನು ಬಿಟ್ಟು ಮೋಕ್ಷವಿಲ್ಲ. ಗೃಹಸ್ಥಧರ್ಮವೇ ಉಳಿದೆಲ್ಲಕ್ಕೂ ಆಧಾರ. ಮೋಕ್ಷಾರ್ಥಿಯಾದ ಸಂನ್ಯಾಸಿಯೂ ಧರ್ಮಬಾಹಿರನಲ್ಲ. ಅವನೂ ಸರ್ವರಿಗೆ ಸಾಮಾನ್ಯವಾದ ಸಾಧಾರಣ ಧರ್ಮವನ್ನು ಪಾಲಿಸಬೇಕು.

ಗೃಹಸ್ಥನ ಸಾಧಾರಣ ಧರ್ಮದ ಬಗ್ಗೆ ಯಾಜ್ಞವಲ್ಕ್ಯ ಸ್ಮೃತಿ ಹೀಗೆ ಹೇಳಿದೆ.

ಅಹಿಂಸಾ ಸತ್ಯಮಸ್ತೇಯಮ್ ಶೌಚಮ್ ಇಂದ್ರಿಯನಿಗ್ರಹಃ
ದಾನಂ ಧರ್ಮೋ ದಯಾ ಶಾಂತಿಃ ಸರ್ವೇಷಾಂ ಧರ್ಮಸಾಧನಮ್

ಅಹಿಂಸೆ, ಸತ್ಯವಚನ, ಪರಿಶುದ್ಧತೆ, ದೇಹ ಮತ್ತು ಮನಸ್ಸುಗಳ ಶುಚಿ, ಇಂದ್ರಿಯಗಳ ಹತೋಟಿ, ದಾನ, ಸಂಯಮ, ದಯೆ, ಶಾಂತಿವರ್ತನೆ–ಇವು ಎಲ್ಲರ ಧರ್ಮ ಸಾಧನೆಗೂ ಅಗತ್ಯವಾದುವು. ಕಾಲ, ದೇಶ ಜಾತಿ, ಕುಲ, ಗೋತ್ರ, ಬುಡಕಟ್ಟು, ಜನಾಂಗ, ಬ್ರಹ್ಮಚಾರಿ, ಗೃಹಸ್ಥ, ಸಂನ್ಯಾಸಿ ಮುಂತಾದ ಭೇದಗಳ ಉಪಾಧಿಗೆ ಒಳಪಡದ ಸಾರ್ವಜನಿಕ ಮಾನವ ಧರ್ಮವೇ ಎಲ್ಲರಿಗೂ ಸಾಧಾರಣವಾದ ಧರ್ಮ.

ಮೇಲೆ ಹೇಳಿದ ಸಾಧಾರಣ ಕರ್ತವ್ಯಗಳಲ್ಲದೆ ಗೃಹಸ್ಥಾಶ್ರಮಕ್ಕೆ ವಿಶಿಷ್ಟವಾದ ಕರ್ಮಗಳಿವೆ. ಇವು ಮೂರು ಬಗೆಯಾಗಿವೆ–ನೈಮಿತ್ತಿಕ ಕರ್ಮಗಳು, ನಿತ್ಯ ಕರ್ಮಗಳು ಮತ್ತು ಐಚ್ಛಿಕ ಕರ್ಮಗಳು–ಎಂದು.

ಗೃಹಸ್ಥ ಆಚರಿಸಬೇಕಾದ ನೈಮಿತ್ತಿಕ ಕರ್ಮಗಳನ್ನು ಗೃಹ್ಯಸೂತ್ರಗಳು ವಿಸ್ತಾರವಾಗಿ ವರ್ಣಿಸಿವೆ. ಈ ಕರ್ಮಗಳು ಜೀವನದುದ್ದಕ್ಕೂ ಬೇರೆ ಬೇರೆ ಕಾಲಗಳಲ್ಲಿ ಆಚರಿಸಬೇಕಾದ ಸಂಸ್ಕಾರಗಳಿಗೆ ಸಂಬಂಧಪಟ್ಟವು. ವಿವಾಹ ಗೃಹಸ್ಥಾಶ್ರಮಕ್ಕೆ ಸೇರಲು ಅಗತ್ಯವಾದ ಸಂಸ್ಕಾರ. ವಿವಾಹಗಳು ಎಂಟು ಬಗೆಯಾಗಿವೆ. ಅವುಗಳಲ್ಲಿ ಶ್ರೇಷ್ಠವಾದದ್ದು ಬ್ರಾಹ್ಮೀವಿವಾಹಪದ್ಧತಿ. ಇದು ಗಂಡು ಹೆಣ್ಣುಗಳು ಮತ್ತು ಅವರ ಹತ್ತಿರ ಸಂಬಂಧಿಗಳ ಅನುಮೋದನೆಯಿದ ವೇದೋಕ್ತವಾಗಿ, ಅಗ್ನಿ ಸಾಕ್ಷಿಯಾಗಿ ನಡೆಯುವ ಕರ್ಮ.

ವಿವಾಹಾನಂತರ ನಡೆಯುವ ಕರ್ಮ ಗರ್ಭಾಧಾನ. ಸೋಮದೇವತೆಯನ್ನು ಸ್ತೋತ್ರಮಾಡಿ ಅವನಿಗೆ ಹವಿಸ್ಸನ್ನರ್ಪಿಸಿ ಅವನನ್ನು ಒಲಿಸಿಕೊಂಡು ದಂಪತಿಗಳು ಈ ಕರ್ಮದಲ್ಲಿ ಸಹಭಾಗಿಗಳಾಗುತ್ತಾರೆ. ಇಲ್ಲಿ ವ್ಯಕ್ತಿ ಸ್ವಇಚ್ಛೆಯಂತೆ ನಡೆಯುವಂತಿಲ್ಲ. ಕೇವಲ ಇಂದ್ರಿಯ ಸುಖವೇ ಸಂಭೋಗದ ಅಂತಿಮ ಗುರಿಯಲ್ಲ. ಅದು ಧರ್ಮ ಸಾಧನವಾದ ನಿಯೋಜಿತ ಕರ್ತವ್ಯ. ದಂಪತಿಗಳು ತಮ್ಮ ವಂಶೋದ್ಧಾರಕ್ಕೆ ಸಲ್ಲಿಸಬೇಕಾದ ಕರ್ತವ್ಯ ಇದು. ಸಂತಾನವಿಲ್ಲದ ದಂಪತಿಗಳಿಗೆ ಸದ್ಗತಿ ಇಲ್ಲ; ಅವರ ಪಿತೃಗಳಿಗೆ ಸ್ವರ್ಗದಲ್ಲಿ ಏಳಿಗೆ ಇಲ್ಲ. ಆದ್ದರಿಂದ ದಂಪತಿಗಳು ಸಂತಾನವನ್ನು ಪಡೆಯಬೇಕೆಂದು ವೇದ ಆಜ್ಞಾಪಿಸಿದೆ. ಗರ್ಭಧಾರಣೆಯಾದ ಮೇಲೆ ಐದನೆಯ ಅಥವಾ ಏಳನೆಯ ತಿಂಗಳಲ್ಲಿ ಆಚರಿಸಬೇಕಾದ ಕರ್ಮ ಸೀಮಂತ. ಶಿಶು ಜನಿಸಿದ ಮೇಲೆ ಹನ್ನೊಂದನೆಯ ದಿನ ದಂಪತಿಗಳು ಶಿಶುವಿಗೆ ನಡೆಸಬೇಕಾದ ಕರ್ಮ ನಾಮಕರಣ. ಶಿಶುವಿಗೆ ಒಂಬತ್ತು ತಿಂಗಳಾದ ಮೇಲೆ ನಡೆಸುವ ಕರ್ಮ ಅನ್ನಪ್ರಾಶನ. ಅದಕ್ಕೆ ಮೂರು ವರ್ಷ ತುಂಬಿದಾಗ ಏರ್ಪಡಿಸುವ ಕರ್ಮ ಚೌಲ. ಏಳು ವರ್ಷತುಂಬಿದಾಗ ಏರ್ಪಡಿಸುವ ಕರ್ಮ ಉಪನಯನ. ಈಗ ಬಾಲಕರಿಗೆ ಮಾತ್ರ ಉಪನಯನವನ್ನು ಮಾಡುವುದು ರೂಢಿಯಲ್ಲಿದೆ. ಹಿಂದೆ ಹುಡುಗಿಯರಿಗೂ ಉಪನಯನ ನಡೆಯುತ್ತಿತ್ತೆಂಬುದನ್ನು ಈಗಾಗಲೇ ತಿಳಿಸಿದೆ. ಉಪನಯನ ಅತ್ಯಂತ ಮುಖ್ಯವಾದ ಸಂಸ್ಕಾರ. ಅಧ್ಯಾತ್ಮಜೀವನವನ್ನು ಪ್ರವೇಶಿಸಲು ಅದು ಮೊದಲನೆಯ ದ್ವಾರ. ಈ ಎಲ್ಲ ಸಂಸ್ಕಾರಗಳಿಗೆ ಸೇರಿದ ಕರ್ಮಗಳು ಗೃಹಕರ್ಮಗಳು. ಜೀವನದ ಹಲವು ಘಟ್ಟಗಳಲ್ಲಿ ಮಾಡಬೇಕಾದ ನೈಮಿತ್ತಿಕ ಕರ್ಮಗಳಿವು.

ಗೃಹಸ್ಥ ಯಾವುದೊಂದು ಫಲಾಪೇಕ್ಷೆ ಇಲ್ಲದೆ ನಿತ್ಯವೂ ಮಾಡಬೇಕಾದ ಕರ್ಮಗಳೇ ನಿತ್ಯಕರ್ಮಗಳು-ತ್ರಿಕಾಲ ಸಂಧ್ಯಾವಂದನೆ, ಬೆಳಗ್ಗೆ ಮತ್ತು ಸಂಜೆ ನಡೆಸಬೇಕಾದ ಅಗ್ನಿಹೋತ್ರ, ವರ್ಷದುದ್ದಕ್ಕೂ ಗೃಹಾಗ್ನಿ ಆರದಂತೆ ಅದನ್ನು ಪೋಷಿಸುವುದು ಅವನ ಆದ್ಯ ಕರ್ತವ್ಯವಾಗಿತ್ತು. ಅದು ಗೃಹಸ್ಥ ನಿತ್ಯವೂ ಮಾಡಬೇಕಾದ ಪಂಚಮಹಾಯಜ್ಞಗಳಲ್ಲಿ ಒಂದು. ವೇದಾಧ್ಯಯನ, ಅತಿಥಿಸತ್ಕಾರ, ಪಿತೃತರ್ಪಣ, ಮೃಗಪಕ್ಷಿಗಳಿಗೆ ಆಹಾರ ಕೊಡುವುದು (ಭೂತಯಜ್ಞ)-ಈ ನಾಲ್ಕು ಇತರ ಮಹಾಯಜ್ಞಗಳು. ಈ ಪಂಚಮಹಾ ಯಜ್ಞಗಳನ್ನು ಸಾಂಗವಾಗಿ ನೆರವೇರಿಸಲು ಗೃಹಸ್ಥ ದಿನದ ಹೆಚ್ಚು ಭಾಗವನ್ನು ಮೀಸಲಾಗಿಡಬೇಕಾಗಿತ್ತು.

ನಿತ್ಯ, ನೈಮಿತ್ತಿಕ ಕರ್ಮಗಳಲ್ಲದೆ ಗೃಹಸ್ಥ ತನ್ನ ಜೀವನೋಪಾಯಕ್ಕಾಗಿ ಅವಲಂಬಿಸಿದ ಪೌರೋಹಿತ್ಯ ಉಪಾಧ್ಯಾಯವೃತ್ತಿ, ವೈದ್ಯಕೀಯವೃತ್ತಿ, ಸಾಹಿತ್ಯ, ಸಂಗೀತ ಮುಂತಾದ ಕಲೆಗಳಿಗೆ ಸಂಬಂಧಪಟ್ಟ ಕರ್ತವ್ಯಗಳು- ಇವು ಐಚ್ಛಿಕ ಕರ್ತವ್ಯಗಳು. ಜೊತೆಗೆ ಬಗೆಬಗೆಯ ಇಷ್ಟಸಿದ್ಧಿಗಳಿಗಾಗಿ ಆತ ಕೈಗೊಳ್ಳುವ ಯಜ್ಞಕಾರ್ಯಗಳೂ ಐಚ್ಛಿಕ ಕರ್ಮಗಳೇ.

ಮೊದಲಲ್ಲಿ ಗೃಹಸ್ಥಾಶ್ರಮದ ಪುರುಷಾರ್ಥಗಳು ಧರ್ಮಾರ್ಥಕಾಮಗಳೆಂಬ ಮೂರೇ ಆಗಿದ್ದವು. ಮೋಕ್ಷವೆಂಬ ನಾಲ್ಕನೆಯ ಪುರುಷಾರ್ಥ ಹುಟ್ಟಿದಾಗ ಆ ಮೋಕ್ಷಸಿದ್ಧಿಗೆ ಸಂನ್ಯಾಸ ಅಗತ್ಯವೆಂದು ಕೆಲವರು ಭಾವಿಸಿದರು. ಗೃಹಸ್ಥನಾಗಿದ್ದೇ ಮೋಕ್ಷಪಡೆಯಬಹುದೆಂದು ಇನ್ನು ಕೆಲವರು ಭಾವಿಸಿದರು. ಈ ನಾಲ್ಕನೆಯ ಪುರುಷಾರ್ಥ ಉಪನಿಷತ್ತುಗಳಲ್ಲಿ ಕಾಣಿಸಿಕೊಂಡಾಗ, ಗೃಹಸ್ಥರಲ್ಲೂ ಬ್ರಹ್ಮ ಸಾಕ್ಷಾತ್ಕಾರ ಪಡೆದವರಿದ್ದರು. ರಾಜನಾದ ಜನಕ, ಗಾಡಿಯನ್ನು ತಯಾರಿಸುತ್ತಿದ್ದ ರೈಕ್ವ ಇವರು ಗೃಹಸ್ಥರಾಗಿದ್ದೇ ಮೋಕ್ಷ ಪಡೆದರು. ಮಹಾಭಾರತ ಮತ್ತು ಪುರಾಣಗಳಲ್ಲಿ ಗೃಹಸ್ಥರಾದ ಹೆಂಗಸರೂ ಗಂಡಸರೂ ಮೋಕ್ಷ ಪಡೆದ ನಿದರ್ಶನಗಳು ಅನೇಕವಿವೆ. ಈ ರೀತಿ ಗೃಹಸ್ಥನ ಜೀವನ ಸಕಲ ಪುರುಷಾರ್ಥಗಳನ್ನು ಸಾಧಿಸಬಹುದಾದ ಸುವ್ಯವಸ್ಥಿತವಾದ ತುಂಬುಜೀವನ.

ಹಿಂದಿನ ರೀತಿಯ ಗಾರ್ಹಸ್ಥ್ಯ ಈಗ ಅಪೂರ್ವವೆನಿಸಿದೆ. ಕೆಲವು ವೈದಿಕ ಕುಟುಂಬಗಳನ್ನು ಬಿಟ್ಟರೆ ಉಳಿದವರಲ್ಲಿ ಅರ್ಥಕಾಮಗಳಿಗೇ ಹೆಚ್ಚು ಬೆಲೆ. ಹಿಂದೆ ಸ್ತ್ರೀಯರಿಗೆ ಮದುವೆಯ ಜೊತೆಯಲ್ಲೇ ಉಪನಯನವಾಗುತ್ತಿದ್ದಂತೆ ಈಗ ಪ್ರಾಯಕ್ಕೆ ಬಂದ ಪುರುಷರಿಗೆ ಉಪನಯನ ನಡೆಯುತ್ತಿದೆ. ನಿತ್ಯ ಮತ್ತು ನೈಮಿತ್ತಿಕ ಕರ್ಮಗಳ ಮತ್ತು ಪಂಚಮಹಾಯ್ಞಗಳ ಆಚರಣೆ ನಿಂತುಹೋಗಿದೆ. ಇಂದಿನ ಧರ್ಮ ವಿಶೇಷವಾಗಿ ಲೌಕಿಕ ಧರ್ಮವಾಗಿ ಪರಿವರ್ತನೆಯಾಗಿದೆ. ಆದರೂ ಪಾಶ್ಚಾತ್ಯ ದೇಶಗಳಂತೆ ಭಾರತದಲ್ಲಿ ಕುಟುಂಬ ಜೀವನ ಮುರಿದುಬೀಳುತ್ತಿಲ್ಲ. ಈಗಿನ ಗೃಹಸ್ಥರ ಮತೀಯ ಕರ್ತವ್ಯಗಳು ಸಂಕುಚಿತವಾದರೂ ಸಾಮಾಜಿಕ, ರಾಜಕೀಯ ಕರ್ತವ್ಯಗಳು ವಿಸ್ತರಿಸಿವೆ; ನೈತಿಕ ದೃಷ್ಟಿ ಉದಾರವೂ ವಿಶಾಲವೂ ಆಗಿದೆ. ಸಂನ್ಯಾಸಕ್ಕಿಂತಲೂ ಈಗ ಗಾರ್ಹಸ್ಥ್ಯಕ್ಕೆ ಹೆಚ್ಚು ಪ್ರಾಶಸ್ತ್ಯ ಬಂದಿದೆ. (ಜಿ.ಎಚ್.)

**ಗಾಲ್ :** ಈಗಿನ ಫ್ರಾನ್ಸ್, ಬೆಲ್ಜಿಯಂಗಳನ್ನೂ ಜರ್ಮನಿ, ಹಾಲೆಂಡ್, ಸ್ವಿಟ್ಜರ್‌ಲೆಂಡ್‌ಗಳ ಭಾಗಗಳನ್ನೂ ಒಳಗೊಂಡ ಪ್ರದೇಶದ ಪ್ರಾಚೀನ ನಾಮ. ಉತ್ತರ ಇಟಲಿಯೂ ಸೇರಿದಂತೆ ಈ ಇಡೀ ಭಾಗವನ್ನು ರೋಮನ್ನರು ಗಾಲ್ ಎಂದು ಕರೆಯುತ್ತಿದ್ದರು. ಪ್ರ.ಶ.ಪೂ. 58-51ರಲ್ಲಿ ನಡೆದ ಗಾಲಿಕ್ ಯುದ್ಧಗಳಲ್ಲಿ ಜೂಲಿಯಸ್ ಸೀಸರ್ ಈ ಭಾಗವನ್ನು ಗೆದ್ದ. ವಿಸ್ತೃತವಾದ ಗಾಲ್ ಪ್ರದೇಶದ ಎರಡು ವಿಭಾಗಗಳ ಪೈಕಿ ಆಲ್ಪ್ಸ್ ಪರ್ವತದ ಉತ್ತರಕ್ಕಿದ್ದ ವಿಭಾಗವನ್ನು ಟ್ರಾನ್ಸ್ ಆಲ್ಪೈನ್ (ಆಲ್ಪ್ಸಿನಾಚೆಯ) ಗಾಲ್ ಎಂದೂ ದಕ್ಷಿಣಕ್ಕಿದ್ದ ಜಿಲ್ಲೆಯನ್ನು ಸಿಸ್‌ಆಲ್ಪೈನ್ (ಆಲ್ಪ್ಸಿನೀಚೆಯ) ಗಾಲ್ ಎಂದೂ ಕರೆಯುತ್ತಿದ್ದರು. ಟ್ರಾನ್ಸ್‌ಆಲ್ಪೈನ್‌ಗಾಲ್ ರೂಢಿಯಲ್ಲಿ ಗಾಲ್ ಎನಿಸಿಕೊಂಡಿತು. ಈಗಿನ ಫ್ರಾನ್ಸನ್ನು ಕೆಲವು ವೇಳೆ ಗಾಲ್ ಎಂದು ಕರೆಯುವುದುಂಟು.

**ಟ್ರಾನ್ಸ್‌ಆಲ್ಪೈನ್ ಗಾಲ್ :** ಪ್ರ.ಶ.ಪೂ. 600ರಲ್ಲಿ ಗ್ರೀಕೊ-ರೋಮನ್ ಇತಿಹಾಸವನ್ನು ಪ್ರವೇಶಿಸಿತು. ಪ್ರ.ಶ.ಪೂ.ಸು. 400ರಿಂದ ರೋಮ್ ಮತ್ತು ಮಾಸ್ಸಿಲಿಯ (ಮಾರ್ಸೇಲ್ಸ್) ಮೈತ್ರಿಯಿಂದಿದ್ದುವು. ಮುಂದೆ ಮಾಸ್ಸಿಲಿಯಟರಿಗೆ ಒಳನಾಡಿನ ಜನರ ದಾಳಿಯನ್ನು ತಡೆಯುವುದು ಅಸಾಧ್ಯವಾದಾಗ ರೋಮನ್ನರು ನಡುವೆ ಪ್ರವೇಶಿಸಿದರು. ಪ್ರ.ಶ.ಪೂ. 118ರಲ್ಲಿ ನಾರ್ಬೊ ಮಾರ್ಟಿಯಸ್ (ದಕ್ಷಿಣ ಫ್ರಾನ್ಸಿನ ನಾರ್ಬಾನ್) ರೋಮನ್ನರ ವಸಾಹತಾಯಿತು. ರೋಮನ್ ವ್ಯಾಪಾರಿಗಳು ಅಧಿಕ ಸಂಖ್ಯೆಯಲ್ಲಿ ಇಲ್ಲಿಗೆ ಬರತೊಡಗಿದರು. ಕ್ಷಿಪ್ರದಲ್ಲಿಯೇ ಗಾಲ್ ರೋಮನೀ ಕೃತವಾಯಿತು.

ರೋಮನ್ ಆಕ್ರಮಣಪೂರ್ವದ ಗಾಲ್‌ನಲ್ಲಿ ತಮ್ಮನ್ನು ಕೆಲ್ಟ್‌ರೆಂದು ಕರೆದು ಕೊಳ್ಳುತ್ತಿದ್ದ ಗಾಲರಲ್ಲದೆ ಇನ್ನೂ ಹಲವು ಜನಾಂಗಗಳಿದ್ದುವೆಂದು ಸೀಸರನ ವ್ಯಾಖ್ಯಾನಗಳಿಂದ ತಿಳಿದುಬರುತ್ತದೆ. ಇವುಗಳ ನಡುವೆ ಸದಾ ಕದನಗಳು ನಡೆಯುತ್ತಿದ್ದುವು. ಈ ಕಲಹಗಳಿಂದಾಗಿ ಸೀಸರ್ ಇಲ್ಲಿ ಬಲವಾಗಿ ಬೇರೂರುವುದು ಸಾಧ್ಯವಾಯಿತು. ಪ್ರ.ಶ.ಪೂ. 52ರಲ್ಲೀ ವರ್ಸಿಂಜೆಟೊರಿಕ್ಸ್ ಎಂಬಾತ ಗಾಲ್ ಪ್ರದೇಶದ ವಿವಿಧ ಪಂಗಡಗಳನ್ನೂ ಒಟ್ಟುಗೂಡಿಸಿ ರೋಮನ್ನರ ಅಧಿಕಾರವನ್ನು ತೊಡೆದು ಹಾಕಲು ಯತ್ನಿಸಿ ವಿಫಲನಾದ. ಸೀಸರ್ ಗಾಲ್‌ನ ಮೇಲೆ ನಡೆಸಿದ ಧಾಳಿಯಿಂದಾಗಿ ರೋಮನ್ ಸಾಮ್ರಾಜ್ಯಕ್ಕೆ ಅಟ್ಲಾಂಟಿಕ್ ಸಾಗರ, ಇಂಗ್ಲಿಷ್ ಕಾಲುವೆ, ರೈನ್ ನದಿ-ಇವು ಎಲ್ಲೆಗಳಾದುವು. ಮುಂದೆ ಗಾಲ್‌ನ ಸಂಘಟನೆಯ ಭಾರವನ್ನು ಹೊತ್ತ ಆಗಸ್ಟಸ್ ಆ ಪ್ರದೇಶವನ್ನು ನಾರ್ಬೊನೆನ್ಸಿಸ್, ಆಕ್ವಿಟೇನಿಯ, ಲಗ್ಡುನೆನ್ಸಿಸ್, ಬೆಲ್ಜಿಕ ಎಂದು ವಿಂಗಡಿಸಿದ. ನಾರ್ಬೊನೆನ್ಸಿಸ್ ಉಳಿದ ಗಾಲ್ ಪ್ರದೇಶಗಳಿಗಿಂತ ಭಿನ್ನವಾಗಿತ್ತು. ಅನೇಕ ರೋಮನ್ನರು ಇಲ್ಲಿ ನೆಲಸಿದ್ದರು. ಇಲ್ಲಿ ಅನೇಕ ನಗರಗಳೂ ಬೆಳೆದುವು. ಹಲವಾರು ಕಟ್ಟಡಗಳ ನಿರ್ಮಾಣವಾಯಿತು. ರೋಮನ್ ಸಾರ್ವಜನಿಕ ಜೀವನದಲ್ಲಿ ಖ್ಯಾತಿಗಳಿಸಿದ ಅನೇಕರು ಇಲ್ಲಿ ಹುಟ್ಟಿದರು.

ತಮ್ಮ ಆಳ್ವಿಕೆಯಲ್ಲಿ ರೋಮನ್ನರು ಕೆಲ್ಟ್ ಜನಾಂಗದ ಧಾರ್ಮಿಕ ನಂಬಿಕೆಗಳಿಗೆ ಸಂಬಂಧಪಟ್ಟ ಯಾವ ವಿಷಯಕ್ಕೂ ಕೈಹಾಕಲಿಲ್ಲ. ಕೆಲಿಕ್ ದೇವರುಗಳಿಗೆ ರೋಮನ್ ಹೆಸರುಗಳನಿಟ್ಟರೂ ಕೆಲ್ಟಿಕ್ ನೀತಿನಿಯಮಗಳೇ ಮುಂದುವರಿದುವು. ರೋಮನ್ ಆಡಳಿತದ ವಿರುದ್ಧವಾದ ದಂಗೆಗಳು ಕ್ರಮೇಣ ಕಡಿಮೆಯಾದುವು.

2-3ನೆಯ ಶತಮಾನಗಳಲ್ಲಿ ಗಾಲ್‌ನ ಎಲ್ಲೆಗಳ ಭದ್ರತೆ ಕಡಿಮೆಯಾಗತೊಡಗಿತು. ಬಹುಶ: 257ರಲ್ಲಿ ಫ್ರಾಂಕರು ಗಾಲ್ ಪ್ರದೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ನುಗ್ಗಿದರು. ಪಾಸ್ಟ್ಯುಮಸ್ ಎಂಬವನು ಇವರ ಧಾಳಿಯನ್ನಡಗಿಸಿ ಸ್ವತಂತ್ರ ರೋಮನೀಕೃತ ರಾಜ್ಯ ಸ್ಥಾಪಿಸಿದ. ಪ್ರ.ಶ. 268ರಲ್ಲಿ ಸ್ಪೇನ್ ಮತ್ತು ನಾರ್ಬೊನೆನ್ಸಿಸ್ ಬೇರೆಯಾದರೂ 12ನೆಯ ಕ್ಲಾಡಿಯಸ್ ಪ್ರಭುತ್ವವನ್ನೊಪ್ಪಿದುವು. 3ನೆಯ ಶತಮಾನದ ಅಂತ್ಯದಲ್ಲಿ ಬಾಗೌಡೆ ಎಂಬ ದರೋಡೆಕಾರರ ಹಾವಳಿಗೆ ಇದು ತುತ್ತಾಗಿತ್ತು. ಮುಂದೆ ಆಗಿಂದಾಗ್ಗೆ ಇದು ಹೊರಗಿನವರ ಧಾಳಿಗೆ ಒಳಗಾಗುತ್ತಿತ್ತು. 406ರ ಕೊನೆಯಲ್ಲಿ ವ್ಯಾಂಡಲರು ಮತ್ತು ಇತರರು ವ್ಯಾಪಕವಾಗಿ ಇದನ್ನು ಆಕ್ರಮಿಸಿಕೊಂಡರು. ಆದರೂ ಇದು ಬಹಳ ಕಾಲ ರೋಮನ್ ನಾಗರಿಕತೆಯ ಕೊತ್ತಲವಾಗಿ ಉಳಿದಿತ್ತು.

**ಸಿಸ್‌ಆಲ್ಪೈನ್ ಗಾಲ್ :** ಈ ಪ್ರದೇಶ ಕೆಲ್ಟಿಕ್ ಆಕ್ರಮಣಕ್ಕೆ ಯಾವಾಗ ಒಳಗಾಯಿತೆಂಬುದು ನಿರ್ವಿವಾದವಾಗಿ ಸ್ಥಾಪಿತವಾಗಿಲ್ಲ. ಕೆಲ್ಟರು ಪ್ರ.ಶ.ಪೂ. 5ನೆಯ ಶತಮಾನದಿಂದ ಈಚೆಗೆ ಬಂದಿರಲಾರರೆಂದು ಹೇಳಲಾಗಿದೆ. ಇವರು ಬ್ರೆನರ್ ಮೂಲಕ ಬಂದು ಎಟ್ರುಸ್ಕನ್ನರನ್ನು ಕದಲಿಸಿ ತಾವು ನೆಲಸಿದರು; ಪ್ರ.ಶ.ಪೂ. 390 ರಲ್ಲಿ ರೋಮನ್ ಸೈನ್ಯವನ್ನು ನಾಶಗೊಳಿಸಿದರು; ರೋಮನ್ನು ಪ್ರಹರಿಸಿದರು. ಆದರೆ ಇವರ ಅಂತಃಕಲಹ ದಿಂದಾಗಿಯೂ ಹೊರಗಿನವರೊಂದಿಗೆ ಇವರು ಕಾದಾಡಬೇಕಾಗಿದ್ದುದ ರಿಂದಲೂ ಇವರ ದಕ್ಷಿಣ ಯಾತ್ರೆ ಹೆಚ್ಚು ಫಲಿಸಲಿಲ್ಲ. ಪ್ರ.ಶ.ಪೂ. 287 ರಲ್ಲಿ ರೋಮ್ ಇವರನ್ನು ಸೋಲಿಸಿತು. ಗಾಲರ ದೊಡ್ಡ ಆಕ್ರಮಣ ಸೇನೆ ಪ್ರ.ಶ.ಪೂ. 225 ರಲ್ಲಿ ಭಾರಿ ಪೆಟ್ಟು ತಿಂದಿತು. 183ರ ವೇಳೆಗೆ ರೋಮ್ ಆಧಿಪತ್ಯ ಹೆಚ್ಚು ವಿಸ್ತರಿಸಿತು. ಮುಂದಿನ ಶತಮಾನದಲ್ಲಿ ಆಲ್ಪ್ಸ್ ಪ್ರದೇಶದಲ್ಲೂ ಅದು ಸ್ಥಿರವಾಯಿತು. ಪ್ರ.ಶ.ಪೂ. ಸು. 89ರಲ್ಲಿ ಸಿಸ್‌ಆಲ್ಪೈನ್ ಗಾಲ್ ಪ್ರಾಂತ್ಯ ಸ್ಥಾಪಿತವಾಯಿತು.

ಸಿಸ್‌ಆಲ್ಪೈನ್ ಗಾಲ್ ಪ್ರಾಂತ್ಯ ಹಲವು ಲ್ಯಾಟಿನ್ ಲೇಖಕರ ಬೀಡಾಗಿತ್ತು. ಮುಂದೆ ಇದು ವಾಸ್ತವವಾಗಿ ಇಟಲಿಯ ಭಾಗವಾಗಿ ಇದರ ಚರಿತ್ರೆ ರೋಮನ್ ಇತಿಹಾಸದಲ್ಲಿ ಸೇರಿಹೋಯಿತು. (ಟಿ.ಡಿ.ಪಿ.)

**ಗಾಲ್, ಫ್ರಾನ್ಸ್ ಯೋಸೆಫ್ :** 1758–1828. ದೇಹರಚನಾಶಾಸ್ತ್ರಜ್ಞ. ಜರ್ಮನ್ ದೇಶದವ. ವಿಯೆನ್ನದಲ್ಲಿ ವೈದ್ಯನಾಗಿ ಜೀವನ ನಡೆಸುತ್ತಿದ್ದ. ತಲೆ ಬುರುಡೆಯ ವಿನ್ಯಾಸವನ್ನು ಸೂಕ್ಷ್ಮವಾಗಿ ಗಮನಿಸಿ ವ್ಯಕ್ತಿಯ ಗುಣಸ್ವಭಾವಗಳನ್ನು ಹೇಳಬಹುದು, ಎಂದು ಈತನ ನಂಬಿಕೆ. ಕಪಾಲಸಾಮುದ್ರಿಕೆಯನ್ನು (ಫ್ರೆನಾಲಜಿ) ಕುರಿತು ವಿಯೆನ್ನದಲ್ಲಿ ಈತ ಅನೇಕ ಉಪನ್ಯಾಸಗಳನ್ನು ಕೊಟ್ಟ. ಮತಧರ್ಮಕ್ಕೆ ವಿರುದ್ಧವೆಂಬ ಕಾರಣದಿಂದ ಸರ್ಕಾರ ಇವನ ಭಾಷಣಗಳನ್ನು ಬಹಿಷ್ಕರಿಸಿತು (1802). ಅನಂತರ ಈತ ತನ್ನ ಸಹೋದ್ಯೋಗಿ ಯೋಹಾನ್ ಕ್ಯಾಸ್ಪರ್ ಸ್ಪರ್ಜ್‌ಹೈಮ್ (1776–1832) ಎಂಬ ಮನಃಶಾಸ್ತ್ರಜ್ಞನೊಂದಿಗೆ ಪ್ಯಾರಿಸ್ಸಿಗೆ ಬಂದು ನೆಲೆಸಿದ (1807). 1810–1819ರ ಕಾಲದಲ್ಲಿ ಈ ಇಬ್ಬರೂ ಕಲೆತು ಪ್ರಕಟಿಸಿದ ಕಪಾಲಸಾಮುದ್ರಿಕಾ ಸಂಬಂಧವಾದ ಗ್ರಂಥಗಳು ಆ ಕಾಲದಲ್ಲಿ ಕ್ರಾಂತಿಯನ್ನೇ ಉಂಟುಮಾಡಿದುವು. 1822ರ ಸುಮಾರಿಗೆ ಗಾಲ್ ತನ್ನ ಸಂಶೋಧನೆಗಳಿಂದ, ಅಧ್ಯಯನದಿಂದ, ಪ್ರತಿಭೆಯಿಂದ ಕಪಾಲಸಾಮುದ್ರಿಕಾ ಶಾಸ್ತ್ರಕ್ಕೆ ಒಂದು ರೂಪ ಕೊಟ್ಟ. ಇದನ್ನು ಸ್ಪರ್ಜ್‌ಹೈಮ್ ಇಂಗ್ಲೆಂಡ್ ಮತ್ತು ಅಮೆರಿಕಗಳಲ್ಲಿ ಬಿತ್ತರಿಸಿದ. ಫ್ರೆನಾಲಜಿ ಎಂಬ ಪದವೂ ಈತನ ಸೃಷ್ಟಿಯೇ. ಈಗ ಈ ಶಾಸ್ತ್ರ ಶ್ರದ್ಧೇಯವಲ್ಲವೆಂದು ನಿರ್ಧರಿಸಿದ್ದಾರೆ. ಆದರೂ ಗಾಲ್ ದೇಹ ರಚನೆಯ ಸಂಬಂಧವಾಗಿ ಸ್ಪಷ್ಟಪಡಿಸಿದ ವಿವರಗಳು ನಿರ್ದುಷ್ಟವಾದುವು ಎಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ.

'ಅನಾಟಮಿ ಅಂಡ್ ಫಿಸಿಯಾಲಜಿ ಆಫ್ ದಿ ನರ್ವಸ್ ಸಿಸ್ಟಮ್', 'ಫಿಲಾಸಫಿಕಲ್ ಮೆಡಿಕಲ್ ರೀಸರ್ಚಸ್ ಕನ್ಸರ್ನಿಂಗ್ ನೇಚರ್ ಅಂಡ್ ಸೈನ್ಸ್ ಇನ್ ಡಿಸೀಸ್ ಅಂಡ್ ಹೆಲ್ತ್'–ಇವು ಗಾಲನ ಎರಡು ಮುಖ್ಯ ಗ್ರಂಥಗಳು. (ಎಸ್.ಕೆ.ಆರ್.)

**ಗಾಲ್ ಮಿಡ್ಜ್ :** ಡಿಪ್ಟರ ಗಣದ ಸಿಸಿಡೊಮೈಯಿಡೆ ಕುಟುಂಬಕ್ಕೆ ಸೇರಿದೆ. ಹಲವು ಜಾತಿ ಮತ್ತು ಪ್ರಭೇದಗಳು ಹಲವು ತರಹದ ಸಸ್ಯಗಳಲ್ಲಿ ಬದುಕುತ್ತವೆ. ಬತ್ತದ ಮತ್ತು ಮುಸುಕಿನ ಜೋಳದ ಸಸ್ಯಗಳಲ್ಲಿ ಜೀವನ ಚರಿತ್ರೆಯನ್ನು ಸಾಗಿಸುವ ಮಿಡ್ಜ್‌ಗಳನ್ನು ಓರ್ಸಿಯೋಲಿಯ ಓರೈಝು, ಬಸವನ ಪಾದದ ಮರದಲ್ಲಿ ಬದುಕುವ ಮಿಡ್ಜ್‌ಗಳನ್ನು ಪ್ಯಾರಡಿಪ್ಲೋಸೀಸ್ ಟ್ಯಮಿಫೆಕ್ಸ್, ಕಿತ್ತಳೆ ಜಾತಿಯ ಗಿಡಗಳಲ್ಲಿ ಬೆಳೆಯುವವನ್ನು ಪ್ಯಾರಡಿಪ್ಲೋಸೀಸ್ ಲಾಂಜಿಫೈಲಾ ಎಂದು ಕರೆಯಲಾಗುತ್ತದೆ. ಹೇನುಗಳು ವಾಸಿಸುವ ಸಸ್ಯಗಳಲ್ಲಿಯೂ ಸಹ ಇವು



ವಾಸಿಸುತ್ತವೆ. ಸಸ್ಯಗಳಲ್ಲಿ ಪ್ರೌಢ ಮಿಡ್ಜ್‌ಗಳು ಗಂಟು ಉಂಟುಮಾಡುತ್ತವೆ. ಹೆಣ್ಣು ಮಿಡ್ಜ್ ಕೆಂಪು ವರ್ಣದ ಉದರವನ್ನು ಹೊಂದಿದೆ. ಗಂಡಿನ ದೇಹವು ತಿಳಿಹಳದಿ ಅಥವಾ ಕಂದು ಬಣ್ಣದಿಂದ ಕೂಡಿರುತ್ತದೆ. ಸಾಮಾನ್ಯವಾಗಿ ಗಂಡು ಮಿಡ್ಜ್ ಹೆಣ್ಣಿಗಿಂತ ಚಿಕ್ಕದಾಗಿರುತ್ತದೆ. ಎರಡು ಜೊತೆ ರೆಕ್ಕೆಗಳನ್ನು ಹೊಂದಿದ್ದು 3 ರಿಂದ 3.5 ಮಿಮೀ ವಿಸ್ತಾರವಾಗಿರುತ್ತವೆ. ಗಂಡು ಮತ್ತು ಹೆಣ್ಣು ಎರಡೂ ಸಹ 10 ಕ್ಕಿಂತ ಹೆಚ್ಚು ಖಂಡಗಳಿರುವ ಮಣಿಸರದಾಕಾರದ ಸ್ಪರ್ಶಾಂಗಗಳನ್ನು ಹೊಂದಿವೆ. ನಿಶಾಚಾರಿಗಳಾಗಿದ್ದು ರಾತ್ರಿ ಸಮಯದಲ್ಲಿ ಸುಲಭವಾಗಿ ದೀಪದ ಬೆಳಕಿನ ಸಹಾಯದಿಂದ ಹಿಡಿಯಬಹುದು. ಕೊನೆಯ ಕೋಶಾವಸ್ಥೆಯಿಂದ (ಪ್ಯೂಪ) ಹೊರಬಂದ ತಕ್ಷಣವೆ ಪ್ರೌಢ ಮಿಡ್ಜ್‌ಗಳು ಸಮ್ಮಿಲನದಲ್ಲಿ (ಸಂತಾನಕ್ರಿಯೆ) ತೊಡಗುವುದು ಒಂದು ವಿಶಿಷ್ಟ ಲಕ್ಷಣ. ಆದರೆ ಹೆಣ್ಣು ಮಿಡ್ಜ್ ತನ್ನ ಜೀವಿತಾವಧಿಯಲ್ಲಿ ಒಂದೇ ಒಂದು ಬಾರಿ ಸಂತಾನಕ್ರಿಯೆಯಲ್ಲಿ ಭಾಗಿಯಾಗಿರುತ್ತದೆ. ಒಂದು ಹೆಣ್ಣು ಮಿಡ್ಜ್ 100–200 ಮೊಟ್ಟೆಗಳನ್ನು ಅದರ ಜೀವಿತಾವಧಿ ದಿವಸಗಳಲ್ಲಿ ಇಡುತ್ತದೆ. ಗಂಡು ಮಿಡ್ಜ್ ಮಾತ್ರ ಸಮ್ಮಿಲನ ಕ್ರಿಯೆಮುಗಿದ 12 ರಿಂದ 18 ಗಂಟೆಗಳ ಒಳಗೆ ಸಾಯುತ್ತದೆ. ಮೊಟ್ಟೆಗಳು ಉದ್ದವಾದ ಕೊಳವೆಯಾಕಾರದಲ್ಲಿರುತ್ತವೆ. ಆಗ ತಾನೇ ಹೊಸದಾಗಿ ಇಟ್ಟಿದ್ದ ಮೊಟ್ಟೆಗಳಲ್ಲಿ ವರ್ಣವೈವಿಧ್ಯವಿದೆ. ಶ್ವೇತ, ಗುಲಾಬಿ, ಕೆಂಪು ಮತ್ತು ಹಳದಿ ಬಣ್ಣಬರಬಹುದು. ಹುಳುಗಳು ಮೊಟ್ಟೆಯಿಂದ ಹೊರಬರುವ ಮುನ್ನ, ಆ ಮೊಟ್ಟೆಗಳು ಶಿಲಾರಾಶಿಯಂತೆ ಹೊಳೆಯುತ್ತಿರುತ್ತವೆ. ಒಂದು ಅಥವಾ 3–4 ಮೊಟ್ಟೆಗಳ ಗುಂಪುಗಳು ಬತ್ತದ ಚಿಗುರೊಡೆಯುವ ಗಿಣ್ಣುಗಳಲ್ಲಿ, ಎಲೆಯ ತಳದ ಭಾಗಗಳಲ್ಲಿ ಹಾಗೂ ಎಲೆಯ ಮೇಲ್ಭಾಗಗಳಲ್ಲಿ ಕಂಡು ಬರುತ್ತವೆ. ಮೊಟ್ಟೆಗಳ ಬೆಳವಣಿಗೆ 3–4 ದಿವಸಗಳಲ್ಲಿ ಮುಗಿಯುತ್ತದೆ.

ಮಿಡ್ಜ್‌ಗಳ ಕೋಶಾವಸ್ಥೆಯ ಮೊದಲ ಹುಳು ಕಾಲುಗಳಿಲ್ಲದ 1ಮಿಮೀ ಉದ್ದದ ಬೂದು ಅಥವಾ ಶ್ವೇತವರ್ಣದ್ದಾಗಿರುತ್ತದೆ. ಈ ಹುಳುಗಳು ಕಾಂಡದಲ್ಲಿ ಚಿಗುರು ಬರುವ ಅಥವಾ ಗಿಣ್ಣುಗಳಿರುವ ಜಾಗದಲ್ಲಿ ಆಹಾರಕ್ಕಾಗಿ ನೆಲೆಸಿರುತ್ತವೆ. ಒಂದು ಗಿಣ್ಣಿನಲ್ಲಿ ಒಂದು ಹುಳು ಮಾತ್ರ ಇರುತ್ತದೆ. ಈ ಹುಳುಗಳು ಗಿಣ್ಣಿನ ಬುಡವನ್ನು ತಿನ್ನುತ್ತಾ ಹೋಗುತ್ತವೆ. ಕೊನೆಗೆ ಕೊಳವೆಯಾಕಾರದ ಗಂಟು ಉತ್ಪತ್ತಿಯಾಗುತ್ತದೆ. ಈ ಗಂಟುಗಳು ಸಸ್ಯಗಳು ಚಿಗುರು ಒಡೆಯುವುದನ್ನು ಹಾಗೂ ಎಲೆಗಳ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ. ಎಡೆಬಿಡದೆ ಚಿಗುರು ಒಡೆಯುವ ತಳವನ್ನು ಹಾಗೂ ಕಾಂಡವನ್ನು ತಿನ್ನುವ ಹುಳುವಿನಿಂದ ಗಂಟು ದೊಡ್ಡದಾಗುತ್ತಾ ಹೋಗುತ್ತದೆ. ಕೋಶಾವಸ್ಥೆಯ ಹುಳುಗಳ ಬೆಳವಣಿಗೆಯೂ 3–4 ಹಂತದಲ್ಲಿದ್ದು 15–20 ದಿವಸಗಳಲ್ಲಿ ಕೋಶಾವಸ್ಥೆಯ ಕೊನೆಯ ಹಂತ ತಲುಪುತ್ತವೆ.


ಕೋಶಾವಸ್ಥೆಯ ಕೊನೆಯ ಹಂತದ ಹುಳುವು ತಿಳಿ ಗುಲಾಬಿ ಬಣದ್ದಾಗಿದ್ದು ಉದರವು ಮುಳ್ಳುಗಳಿಂದ ಆವೃತಗೊಂಡಿರುತ್ತದೆ. ಪ್ರೌಢಾವಸ್ಥೆಗೆ ಬರುವುದರೊಳಗೆ ಕೆಂಪುಬಣ್ಣಕ್ಕೆ ತಿರುಗುತ್ತದೆ. ಕೊನೆಯ ಹಂತದಲ್ಲಿ ಹುಳುಗಳು 2–2.5 ಮಿಮೀ ಉದ್ದ ಹಾಗೂ 0.6–0.8 ಮಿಮೀ ದಪ್ಪವಿರುತ್ತವೆ. ಈ ಕೊನೆಯ ಹಂತದ ಬೆಳವಣಿಗೆಯು 2–8 ದಿವಸಗಳಲ್ಲಿ ಮುಗಿದು ಪ್ರೌಢಾವಸ್ಥೆಯ ಮಿಡ್ಜ್‌ಗಳಾಗಿ ಬೆಳೆಯುತ್ತವೆ. ಈ ಎಲ್ಲಾ ಬೆಳವಣಿಗೆಗಳೂ ಸಸ್ಯಗಳ ಗಂಟಿನಲ್ಲಿಯೇ ನಡೆಯುತ್ತವೆ. (ಎಚ್.ಪಿ.ಜಿ.)

**ಗಾಲಕ, ವಿದ್ಯುತ್ ಅಲೆ :** ಒಂದು ವಿದ್ಯುನ್ಮಂಡಲದಲ್ಲಿ ಪ್ರವಹಿಸಬಹುದಾದ ಹಲವಾರು ಆವರ್ತಾಂಕಗಳ (ಫ್ರೀಕ್ವೆನ್ಸೀಸ್) ಪರ್ಯಾಯ ವಿದ್ಯುತ್ಪ್ರವಾಹಗಳ ನಡುವೆ ವಿಭೇದೀಕರಿಸಿ ಅನವಶ್ಯ ಆವರ್ತಾಂಕಗಳ ಪ್ರವಾಹದ ಮೊತ್ತವನ್ನು ಕ್ಷೀಣಿಸುವ ಹಾಗೂ ಅವಶ್ಯ ಆವರ್ತಾಂಕಗಳ ಪ್ರವಾಹವನ್ನು ಸರಾಗವಾಗಿ ಪ್ರವಹಿಸಲು ಅನುಮಾಡಿಕೊಡುವ ವಿದ್ಯುಜ್ಜಾಲ (ಎಲೆಕ್ಟ್ರಿಕ್ ವೇವ್ ಫಿಲ್ಟರ್). ರೇಡಿಯೋ, ದೂರವಾಣಿ, ದೂರಲೇಖಕ ಇತ್ಯಾದಿ ದೂರ ಸಂಪರ್ಕ ವಿಜ್ಞಾನಗಳಲ್ಲಿ (ಟೆಲಿಕಮ್ಯುನಿಕೇಷನ್ಸ್), ಎಲೆಕ್ಟ್ರಿಕ್ ಎಂಜಿನಿಯರಿಂಗ್ ವಿಭಾಗದಲ್ಲಿ ಮತ್ತು ಭೌತಶಾಸ್ತ್ರ ವಿಭಾಗದಲ್ಲಿ ಬಹಳವಾಗಿ ಉಪಯೋಗದಲ್ಲಿರುವ ವಿದ್ಯುತ್ ಅಲೆ ಗಾಲಕಗಳ ಉಪಯೋಗವನ್ನು ಮೊದಲು ಉಪಜ್ಞಿಸಿದವ ಜಿ.ಎ. ಕ್ಯಾಂಪ್‌ಬೆಲ್. ದೂರವಾಣಿಯ ವಿದ್ಯುದ್ವಾಹಕ ತಂತಿಗಳಲ್ಲಿ (ಜೋಡಿ ತಂತಿಗಳು) ಅನೇಕ ಸಂದರ್ಭಗಳಲ್ಲಿ ಪ್ರೇರಕಗಳನ್ನು (ಇಂಡಕ್ಟರ್ಸ್) ಶ್ರೇಣಿ ಸಂಯೋಜನೆಯಲ್ಲಿಯೂ (ಸೀರೀಸ್ ಕನೆಕ್ಷನ್) ಸಂಧಾರಿತ್ರಗಳನ್ನು (ಕೆಪಾಸಿಟರ್ಸ್) ಸಮಾಂತರ ಸಂಯೋಜನೆಯಲ್ಲಿಯೂ (ಪ್ಯಾರಲರ್ ಕನೆಕ್ಷನ್) ಜೋಡಿಸಿರುತ್ತಾರೆ. ಅಂಥ ತಂತಿಗಳಿಗೆ ಭಾರಿತ ತಂತಿಗಳು (ಲೋಡೆಡ್ ಸ್ಟ್ರಿಂಗ್ಸ್) ಎಂದು ಹೆಸರು. ಯಾವುದೇ ವಿದ್ಯುತ್ ಸಂಪರ್ಕ ತಂತಿಗಳಲ್ಲಿ ಪ್ರವಹಿಸುವ ವಿದ್ಯುತ್ತಿನ ಮೊತ್ತ ಆ ತಂತಿಗಳ ಗುಣದಿಂದಾಗಿ ಕಡಿಮೆಯಾಗುತ್ತದೆ. ದೂರವಾಣಿಯ ತಂತಿಗಳಲ್ಲಿ ಪ್ರವಹಿಸುವ ವಿದ್ಯುತ್ಪ್ರವಾಹ ವಿವಿಧ ಆವರ್ತಾಂಕಗಳಿಂದ ಕೂಡಿರುವುದು. ಶ್ರವ್ಯ ಆವರ್ತಾಂಕಗಳು 20 ರಿಂದ 20,000 ಊದ ಗಳವರೆಗೆ ಇರುತ್ತವೆ. ಭಾರಿತ ತಂತಿಗಳಲ್ಲಿ ಪ್ರವಹಿಸುವ ವಿದ್ಯುತ್ಪ್ರವಾಹದಲ್ಲಿನ ಅಲ್ಪ ವಿದ್ಯುತ್ ಅಲೆಗಳ ಅಂದರೆ ಅಲ್ಪ ಆವರ್ತಾಂಕಗಳ ಕ್ಷೀಣತೆ ಕಡಿಮೆ ಇರುವುದನ್ನೂ ಉಚ್ಚ ವಿದ್ಯುತ್ ಅಲೆಗಳ ಅಂದರೆ ಉಚ್ಚ ಆವರ್ತಾಂಕಗಳ ಕ್ಷೀಣತೆ ಬಹಳವಾಗಿ ಇರುವುದನ್ನೂ ಕ್ಯಾಂಪ್‌ಬೆಲ್ ಗಮನಿಸಿದ. ಇದನ್ನು ಅನುಸರಿಸಿ ಕ್ಯಾಂಪ್‌ಬೆಲ್, ಝೋಬೆಲ್ ಮೊದಲಾದ ವಿಜ್ಞಾನಿಗಳು ನಡೆಸಿದ ಸಂಶೋಧನೆಯ ಪ್ರಕಾರ ಪ್ರೇರಕಗಳನ್ನೂ ಸಂಧಾರಿತ್ರಗಳನ್ನೂ ಸೂಕ್ತವಾಗಿ ಜೋಡಿಸಿದ ವಿದ್ಯುಜ್ಜಾಲಗಳು ವಿದ್ಯುತ್ ಅಲೆ ಗಾಲಕಗಳಾಗಿ ಕೆಲಸ ಮಾಡಬಹುದೆಂದು ತಿಳಿಯಿತು. ಇದಕ್ಕೆ ಸಂಬಂಧಿಸಿದ ತತ್ತ್ವಗಳ ಮತ್ತು ಸೂತ್ರಗಳ ಪ್ರಕಾರವೇ ಈಗ ಬಳಕೆಯಲ್ಲಿರುವ ವಿದ್ಯುತ್ ಅಲೆ ಗಾಲಕಗಳ ನಿರ್ಮಾಣ ನಡೆಯುತ್ತದೆ. ಗಾಲಕದಲ್ಲಿ ಪ್ರವಹಿಸುವ ಅಥವಾ ಗಾಲಕದಿಂದ ತಡೆಯಲ್ಪಡುವ ವಿದ್ಯುತ್ಪ್ರವಾಹ ಕೇವಲ ಒಂದೇ ಒಂದು ಆವರ್ತಾಂಕವಾಗಿರದೆ ಆವರ್ತಾಂಕಗಳ ಒಂದು ತಂಡವೇ ಆಗಿರುತ್ತದೆ. ಗಾಲಕ ರಚನೆಯಲ್ಲಿ ಈ ತಂಡದ ಆದಿ ಮತ್ತು ಅಂತ್ಯ ಆವರ್ತಾಂಕಗಳು ಮುಖ್ಯ.

ನ್ಯೂನಾತಿರಿಕ್ತವಾದ ಆದರ್ಶ ಗಾಲಕದಲ್ಲಿ ಪ್ರತಿರೋಧಕ ನಷ್ಟ (ರೆಸಿಸ್ಟೆನ್ಸ್ ಲಾಸ್) ಇರುವುದಿಲ್ಲವಾಗಿ ಪ್ರವಾಹೀ ತಂಡದ (ಪಾಸ್ ಬ್ಯಾಂಡ್) ವಿದ್ಯುತ್ತಿನ ಮೊತ್ತ ಸ್ವಲ್ಪವೂ ಕ್ಷೀಣಿಸುವುದಿಲ್ಲ. ಬಂಧಕ ತಂಡದ (ಸ್ಟಾಪ್ ಬ್ಯಾಂಡ್) ವಿದ್ಯುತ್ತಿನ ಮೊತ್ತ ಪೂರ್ಣವಾಗಿ ಇಲ್ಲವೆ ಅಗಾಧ ಗಾತ್ರದಲ್ಲಿ ಕ್ಷೀಣಿಸುತ್ತದೆ. ಗಾಲಕದಲ್ಲಿ ವಿದ್ಯುತ್ತಿನ ಮೊತ್ತ ಕ್ಷೀಣಿಸುತ್ತದೆ ಎನ್ನುವುದರ ಅರ್ಥ ಗಾಲಕದಿಂದ ಹೊರಬರುವ ವಿದ್ಯುತ್ಪ್ರವಾಹ $i_2$ ಗಾಲಕವನ್ನು ಪ್ರವೇಶಿಸುವ ವಿದ್ಯುತ್ಪ್ರವಾಹದ ಮೊತ್ತ $i_1$ ಕ್ಕಿಂತ ಕಡಿಮೆ ಇರುತ್ತದೆ ಎಂದು. ಈ ಎರಡು ವಿದ್ಯುತ್ಪ್ರವಾಹಗಳ ಸಂಬಂಧವನ್ನು $i_2=i_1 \exp(-á)$ ಎಂದು ಸೂಚಿಸುತ್ತೇವೆ. ಇಲ್ಲಿ á ಕ್ಷೀಣತೆಯನ್ನು ಸೂಚಿಸುತ್ತದೆ. ಮೇಲಿನ ಸಮೀಕರಣದಲ್ಲಿ ವಿದ್ಯುತ್ಪ್ರವಾಹ ಕ್ಷೀಣತೆಯ ಜೊತೆಗೆ ತರಂಗದ ಪ್ರಾವಸ್ಥೆಯಲ್ಲಿನ (ಫೇಸ್) ಬದಲಾವಣೆಯನ್ನು ಕೂಡ ಗಮನಿಸಬೇಕಾಗುತ್ತದೆ.

ಪ್ರವಾಹಿತಂಡ (ಅಥವಾ ಬಂಧಕ ತಂಡ)ದಲ್ಲಿನ ಆದಿ ಮತ್ತು ಅಂತ್ಯ ಆವರ್ತಾಂಕಗಳ ಸ್ಥಾನಗಳನ್ನು ಗಮನದಲ್ಲಿಟ್ಟು ಗಾಲಕಗಳನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಬಹುದು: 1 ಅಲ್ಪ ಪ್ರವಾಹಿ ಗಾಲಕ (ಲೋ ಪಾಸ್ ಫಿಲ್ಟರ್); 2 ಉಚ್ಚ ಪ್ರವಾಹಿ ಗಾಲಕ (ಹೈ ಪಾಸ್ ಫಿಲ್ಟರ್); 3 ತಂಡ ಪ್ರವಾಹಿ ಗಾಲಕ (ಬ್ಯಾಂಡ್ ಪಾಸ್ ಫಿಲ್ಟರ್); 4 ತಂಡಬಂಧಕ ಗಾಲಕ (ಬ್ಯಾಂಡ್ ಸ್ಟಾಪ್ ಫಿಲ್ಟರ್). ತಂಡಬಂಧಕ ಗಾಲಕಗಳಿಗೆ ಅಲೆ ಬೋನುಗಳೆಂದು ಕೂಡ ಹೆಸರುಂಟು. ಈ ಗಾಲಕಗಳ ಸ್ಥೂಲ ವಿವರಣೆಯನ್ನು ಚಿತ್ರ (1)ರಲ್ಲಿ ತೋರಿಸಿದೆ.

ಅಲ್ಪ ಗಾಲಕ ಶೂನ್ಯ ಆವರ್ತಾಂಕದಿಂದ ಛೇದನ ಆವರ್ತಾಂಕ $f_c$ಯವರೆಗಿನ ವಿದ್ಯುತ್ಪ್ರವಾಹವನ್ನು ಕ್ಷೀಣಿಸುವುದಿಲ್ಲ ಮತ್ತು $f_c$ಯ ಮೇಲ್ಪಟ್ಟ ಆವರ್ತಾಂಕ ವಿದ್ಯುತ್ಪ್ರವಾಹವನ್ನು ಪೂರ್ಣವಾಗಿ ತಡೆಯುತ್ತದೆ (ಕ್ಷೀಣತೆ=∞). ಉಚ್ಚ ಗಾಲಕ ಶೂನ್ಯದಿಂದ $f_c$ ಆವರ್ತಾಂಕದವರೆಗಿನ ವಿದ್ಯುತ್ಪ್ರವಾಹಕ್ಕೆ ಪೂರ್ಣ ತಡೆಯನ್ನು ಒಡ್ಡುತ್ತದೆ; ಮತ್ತು $f_c$ಗಿಂತ ಹೆಚ್ಚಿನ ಆವರ್ತಾಂಕದ (ಅನಂತ ಆವರ್ತಾಂಕದವರೆಗೂ) ವಿದ್ಯುತ್ಪ್ರವಾಹಕ್ಕೆ ಸ್ವಲ್ಪವೂ ತಡೆಯಿಲ್ಲದಂತೆ ಹರಿಯಗೊಡುತ್ತದೆ. ತಂಡ ಪ್ರವಾಹಿಗಾಲಕ $f_{c1}$ ಮತ್ತು $f_{c2}$ಗಳ (ಆದಿ ಮತ್ತು ಅಂತ್ಯ ಆವರ್ತಾಂಕಗಳು) ಮಧ್ಯದಲ್ಲಿನ ಆವರ್ತಾಂಕಗಳ ವಿದ್ಯುತ್ಪ್ರವಾಹವನ್ನು ಹರಿಯಲು ಬಿಟ್ಟು ಉಳಿದೆಲ್ಲ ವಿದ್ಯುತ್ಪ್ರವಾಹಗಳನ್ನೂ ಕ್ಷೀಣಿಸುತ್ತದೆ. ತಂಡಬಂಧಕ ಗಾಲಕ $f_{c1}$ ಮತ್ತು $f_{c2}$ಗಳ ನಡುವಿನ ಆವರ್ತಾಂಕದ ವಿದ್ಯುತ್ಪ್ರವಾಹಗಳ ವಿನಾ ಉಳಿದೆಲ್ಲವನ್ನೂ ಹರಿಯಗೊಡುತ್ತದೆ. $f_{c1}$ ಮತ್ತು $f_{c2}$ ಗಳನ್ನು ಕೆಳಗಿನ ಮತ್ತು ಮೇಲಿನ ಆವರ್ತಾಂಕಗಳೆಂದು ಕೂಡ ಕರೆಯುತ್ತಾರೆ.




ಚಿತ್ರ 1. (a) ಅಲ್ಪ ಪ್ರವಾಹಿಗಾಲಕ, (b) ಉಚ್ಚ ಪ್ರವಾಹಿ ಗಾಲಕ, (c) ತಂಡ ಪ್ರವಾಹಿ ಗಾಲಕ, (d) ತಂಡ ಬಂಧಕ ಗಾಲಕ, *f*–ಆವರ್ತಾಂಕ, *fc*– ಛೇದನ ಆವರ್ತಾಂಕ. ಆದರ್ಶ ಗಾಲಕದ ಕ್ಷೀಣತೆಯನ್ನು ತುಂಡು ಗೆರೆಯಿಂದಲೂ ವ್ಯಾವಹಾರ್ಯ ಗಾಲಕದ ಕ್ಷೀಣತೆಯನ್ನು ಅಖಂಡ ಗೆರೆಯಿಂದಲೂ ತೋರಿಸಿದೆ.

ಬಳಕೆಯಲ್ಲಿರುವ ಗಾಲಕಗಳು ಮುಖ್ಯವಾಗಿ ಪ್ರೇರಕತ್ವ–ಧಾರಿತಗಳ (ಇಂಡಕ್ಟೆನ್ಸ್–ಕ್ಯಾಪಾಸಿಟೆನ್ಸ್ ಫಿಲ್ಟರ್ಸ್) ಜೋಡಣೆಯಿಂದಾದವುಗಳಾಗಿದ್ದು ಇವನ್ನು ನಿಚ್ಚಳಿಕೆ ಜಾಲಗಳೆಂದು (ಲ್ಯಾಡರ್ ನೆಟ್‌ವರ್ಕ್ಸ್) ಪರಿಗಣಿಸಿ ಇವು ಕೆಲಸ ಮಾಡುವ ವಿಧಾನವನ್ನು ವಿವರಿಸಬಹುದು. ಈ ವಿವರಣೆಯನ್ನು ಪರಿಶೀಲಿಸುವ ಮೊದಲು ಅಲ್ಪ ಮತ್ತು ಉಚ್ಚ ವಿದ್ಯುತ್ ಅಲೆ ಪ್ರವಾಹಿ ಗಾಲಕಗಳಾಗಿ ಮಾತ್ರ ಕೆಲಸ ಮಾಡುವ ಪ್ರತಿರೋಧತ್ವ–ಧಾರಿತ ಗಾಲಕಗಳ (ರೆಸಿಸ್ಟೆನ್ಸ್–ಕ್ಯಾಪಾಸಿಟೆನ್ಸ್ ಫಿಲ್ಟರ್ಸ್) ಜೋಡಣೆಯಿಂದ ನಿರ್ಮಿಸಬಹುದಾದ ಸುಲಭ ಗಾಲಕಗಳನ್ನು ಗಮನಿಸೋಣ. ಈ ಬಗೆಯ ಗಾಲಕಗಳನ್ನು ಮುಖ್ಯವಾಗಿ ರೇಡಿಯೋ ಗ್ರಾಹಿಯ (ರಿಸೀವರ್) ಅನೇಕ ಭಾಗಗಳಲ್ಲಿ ಉಪಯೋಗಿಸುತ್ತಾರೆ.

1. ಪ್ರತಿರೋಧತ್ವ–ಧಾರಿತ ಅಲೆಗಳು

(a) ಅಲ್ಪ ಪ್ರವಾಹಿ ಗಾಲಕ: ಚಿತ್ರ (2)ರಲ್ಲಿ ತೋರಿಸಿರುವ ಈ ಗಾಲಕವನ್ನು ರೇಡಿಯೋ ಸಂಧಾರಿತ್ರದಲ್ಲಿ ಧ್ವನಿ ನಿಯಂತ್ರಕವಾಗಿ (ಟೋನ್ ಕಂಟ್ರೋಲ್), ವಿದ್ಯುತ್




ಚಿತ್ರ 2. ಪ್ರತಿರೋಧತ್ವಧಾರಿತ ಅಲ್ಪ ವಿದ್ಯುತ್ ಅಲೆ ಪ್ರವಾಹಿ ಗಾಲಕ

ಪೂರೈಕೆ ಸಾಧನ ಮತ್ತು ಪ್ರವರ್ಧಕಗಳಲ್ಲಿ (ಆ್ಯಂಪ್ಲಿಫಯರ್ಸ್) ಬೇಡವಾದ ಪರ್ಯಾಯ ವಿದ್ಯುತ್ಪ್ರವಾಹವನ್ನು ಭೂಮಿಗೆ ಸೇರಿಸುವ ಸಾಧನವಾಗಿ ಉಪಯೋಗಿಸುತ್ತಾರೆ.


(b) ಉಚ್ಚ ಪ್ರವಾಹಿ ಗಾಲಕ: ಚಿತ್ರ (3)ರಲ್ಲಿ ಇವನ್ನು ತೋರಿಸಿದೆ.

2. ಪ್ರೇರಕತ್ವ–ಧಾರಿತ ಗಾಲಕಗಳು: ಇವುಗಳಲ್ಲಿ ಎರಡು ಮುಖ್ಯ ಪ್ರಭೇದಗಳಿವೆ – (a) ಸ್ಥಿರಾಂಕ– k ಗಾಲಕ (ಕಾನ್ಸ್‌ಟೆಂಟ್– k ಫಿಲ್ಟರ್); (b) m–ಸಾಧಿತ




ಚಿತ್ರ 3. ಪ್ರತಿರೋಧತ್ವ–ಧಾರಿತ ಉಚ್ಚ ವಿದ್ಯುತ್ ಅಲೆ ಪ್ರವಾಹಿ ಗಾಲಕ

ಗಾಲಕ (m–ಡಿರೈವ್ಡ್ ಫಿಲ್ಟರ್). ಇವನ್ನು ನಿಚ್ಚಳಿಕೆ ಜಾಲದ ಭಾಗಗಳೆಂದು ಪರಿಗಣಿಸಿ ಕೆಲಸ ಮಾಡುವ ರೀತಿಯನ್ನು ತಿಳಿಯುತ್ತೇವೆ. ಚಿತ್ರ 4 (a)ಯಲ್ಲಿ ತೋರಿಸಿರುವ



ಚಿತ್ರ 4. (a) ನಿಚ್ಚಳಿಕೆ ಜಾಲ, (b) T–ಭಾಗ (ಎಡಗಡೆ); T–ಭಾಗಗಳಿಂದ ಮಾಡಿದ ನಿಚ್ಚಳಿಕೆ ಜಾಲ (ಬಲಗಡೆ), (c) π–ಭಾಗ (ಎಡಗಡೆ); –π ಭಾಗಗಳಿಂದ ಮಾಡಿದ ನಿಚ್ಚಳಿಕೆ ಜಾಲ (ಬಲಗಡೆ)

ನಿಚ್ಚಳಿಕೆ ಜಾಲದಲ್ಲಿ $z_1$ ಮತ್ತು $z_2$ಗಳು ಪ್ರೇರಣಿಕ (ಇಂಡಕ್ಟಿವ್) ಅಥವಾ ಧಾರಿತ (ಕ್ಯಾಪಾಸಿಟಿವ್) ಪ್ರತಿಘಾತಗಳು (ರಿಆ್ಯಕ್ಟೆನ್ಸ್). $z_1$ ಮತ್ತು $z_2$ಗಳನ್ನು ಸೂಕ್ತವಾಗಿ ಆಯ್ಕೆ ಮಾಡಿ ಬೇರೆ ಬೇರೆ ಗಾಲಕಗಳನ್ನು (ಉದಾಹರಣೆಗೆ ಅಲ್ಪ ಅಲೆಪ್ರವಾಹಿ, ಉಚ್ಚ ಅಲೆ ಪ್ರವಾಹಿ ಇತ್ಯಾದಿ) ನಿರ್ಮಿಸಬಹುದು. ನಿಚ್ಚಳಿಕೆ ಜಾಲಗಳಿಗೆ ಸಂಬಂಧಿಸಿದ



ಚಿತ್ರ 5. ನಿಚ್ಚಳಿಕೆ ಜಾಲದಲ್ಲಿನ ವಿದ್ಯುತ್ಪ್ರವಾಹ

ಕೆಲವು ಪ್ರಮೇಯಗಳನ್ನೂ ಸೂತ್ರಗಳನ್ನೂ ತಿಳಿಯುವುದರಿಂದ ಗಾಲಕಗಳು ಕೆಲಸ ಮಾಡುವ ರೀತಿಯನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು.


ನಿಚ್ಚಳಿಕೆ ಜಾಲ ಹಲವಾರು ಸರ್ವಸಮ ಬಿಡಿ ಭಾಗಗಳನ್ನು ಸೇರಿಸಿದ ಸಂಘಟಿತ ಜಾಲ. ನಿಚ್ಚಳಿಕೆ ಜಾಲವನ್ನು *AA* ಅಥವಾ *BB*ಗಳಲ್ಲಿ (ಚಿತ್ರ 4) ಛೇದಿಸುವುದರಿಂದ ಜಾಲದ ಬಿಡಿ ಭಾಗಗಳು ಉಂಟಾಗುತ್ತವೆ. *AA* ಛೇದನವನ್ನು ಮಧ್ಯಶ್ರೇಣಿ ಛೇದನ (ಮಿಡ್‌ಸೀರೀಸ್ ಡಿವಿಶನ್) ಎಂದೂ ಇದರಿಂದ ಉಂಟಾಗುವ ಭಾಗಗಳನ್ನು *T*

ಭಾಗಗಳೆಂದೂ ಕರೆಯುತ್ತಾರೆ (ಚಿತ್ರ 4b). *BB* ಛೇದನವನ್ನು ಮಧ್ಯ ಶಾಖಾ ಛೇದನ (ಮಿಡ್‌ಶಂಟ್ ಡಿವಿಶನ್) ಎಂದೂ ಇದರಿಂದ ಉಂಟಾಗುವ ಭಾಗಗಳನ್ನು π ಭಾಗಗಳೆಂದೂ ಕರೆಯುತ್ತಾರೆ (ಚಿತ್ರ 4c). ನಿಚ್ಚಳಿಕೆ ಜಾಲದ ಒಂದು ತುದಿಗೆ ಜನಕ ಎಂದರೆ ಆಕರವನ್ನು (ಜನರೇಟರ್ ಆರ್‌ಸೋರ್ಸ್) ಜೋಡಿಸಿದಾಗ (ಚಿತ್ರ 5) ಜಾಲದಲ್ಲಿ ವಿದ್ಯುತ್ಪ್ರವಾಹ ಉಂಟಾಗುತ್ತದೆ. **(ಬಿ.ಎಸ್.ಎನ್.ಪಿ.)**

**ಗಾಲವ :** ವಿಶ್ವಾಮಿತ್ರನ ಶಿಷ್ಯರಲ್ಲಿ ಒಬ್ಬ. ವೇದಾಧ್ಯಯನ ಮುಗಿದ ಬಳಿಕ ಗುರುದಕ್ಷಿಣೆ ತೆಗೆದುಕೊಳ್ಳಬೇಕೆಂದು ವಿಶ್ವಾಮಿತ್ರನನ್ನು ಒತ್ತಾಯಪಡಿಸಿದ. ಮೊದಲು ಒಪ್ಪದಿದ್ದರೂ ಮೇಲಿಂದ ಮೇಲೆ ಬಲಾತ್ಕಾರ ಮಾಡಿದಾಗ ಗುರು ಶಿಷ್ಯನಿಗೆ ಒಂದು ಕಿವಿ ಮಾತ್ರ ಕಪ್ಪಾಗಿರುವ 800 ಬಿಳಿಯ ಕುದುರೆಗಳನ್ನು ತಂದೊಪ್ಪಿಸಬೇಕೆಂದು ಅಪ್ಪಣೆ ಮಾಡಿದ. ಭೂಲೋಕದಲ್ಲಿ ಎಲ್ಲೂ ಅಂಥ ಕುದುರೆಗಳು ಕಾಣಲಿಲ್ಲವಾಗಿ ಗಾಲವ ವಿಷ್ಣುವನ್ನು ಕುರಿತು ತಪಸ್ಸು ಮಾಡಿದ. ವಿಷ್ಣುವಿನ ಆಜ್ಞೆಯಂತೆ ಗರುಡ ಈತನನ್ನು ಯಯಾತಿ ರಾಜನಲ್ಲಿಗೆ ಕರೆತಂದು ಬಿಟ್ಟ. ಯಯಾತಿ ತನ್ನ ಮಗಳು ಮಾಧವಿಯನ್ನು ಗಾಲವನಿಗೆ ಒಪ್ಪಿಸಿ ಅವಳನ್ನು ಯಾವ ರಾಜನಿಗಾದರೂ ಕೊಟ್ಟು ಕುದುರೆಗಳನ್ನು ಸಂಪಾದಿಸಿಕೊಳ್ಳಬೇಕೆಂದು ತಿಳಿಸಿದ. ಪ್ರಸವಾನಂತರ ಮತ್ತೆ ತನ್ನ ಕನ್ಯತ್ವವನ್ನು ಪಡೆದುಕೊಳ್ಳುವ ವರವನ್ನೀಕೆ ಪಡೆದಿದ್ದಳು. ಗಾಲವ ಮಾಧವೀಯನ್ನು ಇಕ್ಷ್ವಾಕು ವಂಶದ ಹರ್ಯಶ್ವ, ದಿವೋದಾಸ, ಔಶೀರನೆಂಬ ರಾಜರುಗಳಿಗೆ ಒಪ್ಪಿಸಿ ತಲಾ 200 ಕುದುರೆಗಳಂತೆ 600 ಕುದುರೆಗಳನ್ನು ಸಂಪಾದಿಸಿದ. ಮಿಕ್ಕ 200 ಕುದುರೆಗಳಿಗೆ ಪ್ರತಿಯಾಗಿ ಮಾಧವಿಯನ್ನು ವಿಶ್ವಾಮಿತ್ರನಿಗೇ ಒಪ್ಪಿಸಿದ. ಈ ಉಲ್ಲೇಖ ಮಹಾಭಾರತದಲ್ಲಿದೆ.


ವಿಶ್ವಾಮಿತ್ರನ ಮಕ್ಕಳಲ್ಲಿ ಒಬ್ಬನ ಹೆಸರು ಗಾಲವ. ಒಮ್ಮೆ ಹನ್ನೆರಡು ವರ್ಷ ಕ್ಷಾಮ ಬಂದಾಗ ಭಿಕ್ಷಾವೃತ್ತಿಯನ್ನು ಬಯಸದ ವಿಶ್ವಾಮಿತ್ರ ಹೆಂಡತಿ ಮಕ್ಕಳನ್ನು ಬಿಟ್ಟು ಎಲ್ಲಿಯೋ ಹೊರಟುಹೋದ. ಆಗ ಆತನ ಹೆಂಡತಿ ತನ್ನ ಮಕ್ಕಳಲ್ಲಿ ಒಬ್ಬನನ್ನು ಮಾರಿ ಜೀವನ ನಡೆಸಬೇಕೆಂದು ಬಯಸಿ ಒಬ್ಬನ ಕುತ್ತಿಗೆಗೆ ದರ್ಭೆ ಹುರಿಯನ್ನು ಬಿಗಿದು ಕರೆದೊಯ್ಯುತ್ತಿದ್ದಳು. ನಡುದಾರಿಯಲ್ಲಿ ಸತ್ಯವ್ರತನೆಂಬ ಅರಸು ಇವಳನ್ನು ಸಂಧಿಸಿ ಸಮಾಚಾರ ತಿಳಿದು ಆ ಕುಟುಂಬದ ಹೊಣೆಯನ್ನು ತಾನು ಹೊರುವುದಾಗಿ ಅಭಯವಿತ್ತ. ಈ ರೀತಿ ಕುತ್ತಿಗೆಗೆ ಗಾಳ ಹಾಕಿಸಿಕೊಂಡವನಾದುದರಿಂದ ಈತನಿಗೆ ಗಾಲವನೆಂಬ ಹೆಸರಾಯಿತು. ಈ ವೃತ್ತಾಂತವನ್ನು ದೇವೀಭಾಗವತ, ವಾಯುಪುರಾಣ ಮುಂತಾದ ಕಡೆ ಉಲ್ಲೇಖಿಸಲಾಗಿದೆ. *

**ಗಾಲಿ :** ಲೋಹ, ಮರ ಇಲ್ಲವೇ ಇತರ ಗಡಸು ಪದಾರ್ಥಗಳಿಂದ ನಿರ್ಮಿಸಲ್ಪಟ್ಟ ವರ್ತುಲಾಕಾರದ ಚೌಕಟ್ಟು, ಪೂರ್ಣವಾಗಿ ಇಲ್ಲವೇ ಆಂಶಿಕವಾಗಿ ಘನವಾಗಿರಬಹುದು. ಕೇಂದ್ರದಲ್ಲಿ ಒಂದು ಗುಂಬವಿದ್ದು ಅಲ್ಲಿ ಸಂಗಮಿಸುವ ಮತ್ತು ಪರಿಧಿಯೆಡೆಗೆ ಅರೀಯವಾಗಿ ಅಪಹರಿಸುವ ಅರಗಳಿರಬಹುದು (ಹ್ವೀಲ್). ಚಕ್ರ ಪರ್ಯಾಯ ನಾಮ. ಗಾಲಿಯ ಇತಿಹಾಸ ಪ್ರ.ಶ.ಪೂ. 6,500 ವರ್ಷಗಳಷ್ಟು ಹಳೆಯದು. ಮಾನವನ ಸಂಸ್ಕೃತಿಯ ಇತಿಹಾಸದಲ್ಲಿ ಗಾಲಿಯ ಪಾತ್ರ ವಿಶಿಷ್ಟವಾದುದೂ ಕ್ರಾಂತಿಕಾರಕವಾದುದೂ ಆಗಿದೆ. ಪ್ರಾಚೀನ ಮಾನವ ಜನಾಂಗ ಅಲೆಮಾರಿಯಾಗಿದ್ದು ಆಹಾರವನ್ನು ಹುಡುಕಿ ಸಂಪಾದಿಸುತ್ತಿದ್ದ ಕಾಲದಲ್ಲಿ ಆಹಾರ ಶೇಖರಣೆಯ ಆವಶ್ಯಕತೆಯೇ ಇರಲಿಲ್ಲ. ಆದರೆ ಕ್ರಮೇಣ ಆತ ಒಂದು ಕಡೆ ನೆಲೆನಿಂತು ತನ್ನ ಆಹಾರವನ್ನು ತಾನೇ ಬೆಳೆಸಲಾರಂಭಿಸಿದಾಗ ಹಾಗೆ ಬೆಳೆಸಿದ ಬೆಳೆಯನ್ನು ಶೇಖರಿಸಲು ಪಾತ್ರೆಗಳ ಆವಶ್ಯಕತೆ ಉಂಟಾಯಿತು.




**ಕುಂಬಾರಚಕ್ರ – ಉಪಯೋಗದ ಹಂತದಲ್ಲಿ**

ಜೇಡಿಮಣ್ಣನ್ನು ಕಲಸಿ ಕೈಯಿಂದ ಸಣ್ಣ, ದೊಡ್ಡ ಮಡಿಕೆ, ಗಡಿಗೆ ಜಾಡಿಗಳನ್ನು ಮಾಡಿಕೊಳ್ಳುತ್ತಿದ್ದ. ಆದರೆ ಗಾಲಿಯನ್ನು ಸಮತಲವಾಗಿ ಕೆಳಗಿಟ್ಟು ತಿರುಗಿಸಿದಾಗ ಮಧ್ಯದ ಗುಂಬದಲ್ಲಿ ಮಣ್ಣನ್ನು ಎರೆದು, ತಿರುಗಿಸಿ ಹೆಚ್ಚು ನಯವಾದ, ಭದ್ರವಾದ ಮಡಿಕೆ ಮುಂತಾದ ಪಾತ್ರೆಗಳನ್ನು ಮಾಡಲು ಆತ ಕಲಿತ. ಹೀಗೆ ಮಾಡುವಾಗ ಕ್ರಮೇಣ ಅವನಲ್ಲಿ ಹುದುಗಿದ್ದ ಅಭಿರುಚಿ ಹೊಮ್ಮಿ ಅವುಗಳಿಗೆ ಬಣ್ಣ ಕೊಡುವುದನ್ನೂ ಅವುಗಳ ಮೇಲೆ ರೇಖಾ ಚಿತ್ರಗಳನ್ನು ಹೆಚ್ಚು ಕಲಾತ್ಮಕವಾಗಿ ಬಿಡಿಸುವುದನ್ನೂ ಆರಂಭಿಸಿದ. ಪುರಾತತ್ತ್ವ ಶೋಧಕರು ಪ್ರಾಚೀನಾವಶೇಷಗಳ ಕಾಲನಿರ್ಣಯ ಮಾಡುವಾಗ ನಿವೇಶನಗಳಲ್ಲಿ ದೊರೆತ ಮಡಿಕೆ ಮುಂತಾದ ಮೃತ್ಪಾತ್ರೆಗಳು ಕೈಯಿಂದ



**ವಿವಿಧ ಬಗೆಯ ಗಾಲಿಗಳು : 1. ಒಡ್ಡರ ಬಂಡಿಯ ಗಾಲಿ, 2. ಉರ್ ಗಾಲಿ, ಸುಮೇರಿಯ (ಪ್ರ.ಶ.ಪೂ. 2500, 3. ಪ್ರ.ಶ.ಪೂ. 16ನೆಯ ಶತಮಾನದ ಈಜಿಪ್ಷಿಯನ್ ಗಾಲಿ, 4. ರಥದ ಗಾಲಿ, 5. ಎಟ್ರಸ್ಕನ್ ಗಾಲಿ (ಪ್ರ.ಶ.ಪೂ. 5ನೆಯ ಶತಮಾನ), 6. ಮರದ ಗಾಡಿಯ ಗಾಲಿ, 7. ಮೊಟ್ಟಮೊದಲ ಮೋಟಾರ್ ಕಾರೊಂದರ ಚಕ್ರ, 8. ರೈಲ್ವೆ ಎಂಜಿನಿನ ಚಕ್ರ**


ಮಾಡಿದವೇ ಆಥವಾ ಕುಂಬಾರನ ಚಕ್ರದಿಂದ ಮಾಡಿದವೇ ಎಂಬುದನ್ನು ಸಹ ಗಮನಿಸುತ್ತಾರೆ. ಕುಂಬಾರನ ಮಡಿಕೆ ಪ್ರ.ಶ.ಪೂ. 6,500–5,500 ರಷ್ಟು ಪ್ರಾಚೀನವಾಗಿದೆ. ಚಕ್ರದ ಉಪಯೋಗವನ್ನು ಅರಿತ ಬಳಿಕ ಅದನ್ನೇ ಒಂದು ಕಸಬನ್ನಾಗಿ ಮಾಡಿ ಕೊಂಡವರು ಕುಂಬಾರರು. ಕುಂಬಾರನ ಚಕ್ರ ಸಾಂಸ್ಕೃತಿಕ ಪಯಣ ಒಂದು ವಿಶಿಷ್ಟ ಘಟ್ಟವನ್ನು ಸೇರಿದುದರ ಕುರುಹೆಂದು ಹೇಳಬಹುದು.



**ಅಶೋಕ ನಿರ್ಮಿತ ಸಾರಾನಾಥ ಶಿಲಾಸ್ತಂಭದ ಸಿಂಹಪೀಠದ ಅಡಿಯಲ್ಲಿ ವೃಷಭ–ಆನೆಗಳ ನಡುವೆ ಇರುವ ಅಶೋಕ ಚಕ್ರ**

ಬಂಡಿಗಳಿಗೆ ಚಕ್ರದ ಉಪಯೋಗವಂತೂ ತಿಳಿದೇ ಇದೆ. ಮರದ ಕಾಂಡವನ್ನು ಕಡಿದು ಎರಡು ತುದಿಗಳ ಅಚ್ಚುಗಳನ್ನು ಕೆತ್ತಿ ಆ ಅಚ್ಚುಗಳಿಗೆ ಚಕ್ರಗಳನ್ನು ಜೋಡಿಸಿದಾಗ ಇವು ವೇಗವಾಗಿ ಹೋಗುವ ಪಯಣದ ಬಂಡಿಗಳಾದವು. ಪ್ರಾಚೀನ ಕಾಲದಲ್ಲಿ ಇವನ್ನು ಮಾಡಿತ್ತಿದ್ದುದರಿಂದ ಅತಿ ಪ್ರಾಚೀನವಾದ ಗಾಡಿ, ಎಂದರೆ ಗಾಡಿಯ ಚಕ್ರ, ಯಾರ ಕೊಡುಗೆ ಎಂದು ಹೇಳಲಾಗದು. ಹರಪ್ಪ ಸಂಸ್ಕೃತಿಯ ಕಾಲವಾದ ಪ್ರ.ಶ.ಪೂ. 2500 ಕ್ಕೂ ಮೊದಲೇ ಈ ಚಕ್ರಗಳ ಅರಿವು ಅಂದಿನವರಿಗಿತ್ತು. ಪ್ರ.ಶ.ಪೂ. 2500 ಕ್ಕೂ ಹಿಂದಿನ ಸುಮೇರಿಯನ್ ಸಂಸ್ಕೃತಿಯಲ್ಲೂ ಗಾಡಿಗಳ ಉಪಯೋಗವಿತ್ತು. ಇದಕ್ಕೂ ಹಿಂದಿನ ನವಶಿಲಾಯುಗದ ಕಾಲಕ್ಕೆ ಗಾಲಿಯ ಪ್ರಯೋಜನದ ಅರಿವು ಆ ಜನರಿಗಿತ್ತೇ ಎಂಬುದನ್ನು ಹೇಳಲಾಗದು. ಆದರೆ ಕುಂಬಾರನ ಚಕ್ರದ ಅರಿವಿದ್ದ ಈಜಿಪ್ಟ್ ಜನರಿಗೆ ಸುಮಾರು ಪ್ರ.ಶ.ಪೂ. 1650 ರ ವರೆಗೂ ಗಾಲಿಯ ಉಪಯೋಗವನ್ನು ಕುರಿತು ಏನೂ ತಿಳಿದಿರಲಿಲ್ಲವೆಂಬುದು ಆಶ್ಚರ್ಯಕರ ಸಂಗತಿ. ಚಕ್ರದ ಭಾವನಾತ್ಮಕ ಉಪಯೋಗ ವನ್ನು ಪಡೆದವರು ಭಾರತೀಯರು. ಬುದ್ಧ ತನ್ನ ಧರ್ಮವನ್ನು ಸಾರುವುದನ್ನು ಧರ್ಮಚಕ್ರ ಪ್ರವರ್ತನವೆಂದು ಕರೆಯಲಾಗಿದೆ. ಧರ್ಮವನ್ನು ಒಂದು ಚಕ್ರಕ್ಕೆ ಹೋಲಿಸಿ ಚಕ್ರ ಅವಿಚ್ಛಿನ್ನವಾಗಿ ತಿರುಗುತ್ತಿರುವಂತೆ ಬುದ್ಧ ಈ ಧರ್ಮಚಕ್ರವನ್ನು ಮೊದಲು ನಡೆಸಿದನಂತೆ. ಈ ಪ್ರತೀಕವನ್ನು ತಳೆದಿರುವಂತೆ ಇಂಥ ಚಕ್ರಗಳನ್ನು ಮೇಲು ಭಾಗದಲ್ಲಿ

ಮಧ್ಯದ ಮರದಲ್ಲಿ ಗುಂಬವಿದ್ದು (ಹಬ್) ಅದರ ಮೂಲಕ ಅಕ್ಷ ಎಂದರೆ ಇರಚಿ (ಆ್ಯಕ್ಸಲ್) ಹಾದುಹೋಗುತ್ತಿತ್ತು. ಇವುಗಳಿಗೆ ಪ್ರತ್ಯೇಕ ನೇಮಿ (ಫೆಲ್ಲಿ) ಇರುತ್ತಿರಲಿಲ್ಲ. ಇಂಥ ಗಾಲಿಗಳು ದಪ್ಪವಾಗಿಯೂ ತೂಕವಾಗಿಯೂ ಇದ್ದುದರಿಂದ ಯುದ್ಧ ಕಾರ್ಯದ ರಥಗಳಿಗೆ ಅನುಪಯುಕ್ತವಾದ್ದವು. ಆದ್ದರಿಂದ ಗಾಲಿಗಳ ಉಪಯೋಗ ಬಲು ಸೀಮಿತವಾಗಿತ್ತು. ಪ್ರ.ಶ.ಪೂ. 3500 ರ ಕಾಲದ್ದೆಂದು ಹೇಳಲಾಗುವ ನಾಲ್ಕು ಗಾಲಿಗಳ ರಥವೊಂದು ಕತ್ತೆಗಳಿಂದ ಮತ್ತು ಎತ್ತುಗಳಿಂದ ಎಳೆಯಲ್ಪಡುತ್ತಿರುವ ಮಾದರಿಯೊಂದು ಕೀಷ್‌ನಲ್ಲಿ ದೊರೆತಿವೆ. ಪ್ರ.ಶ.ಪೂ. 2000 ದ ಹೊತ್ತಿಗೆ ಅರಳಿಗಳಿರುವ (ಸ್ಪೋಕ್ಸ್) ಗಾಲಿಗಳ ಉಪಜ್ಞೆಯಾಗಿ (ಇನ್‌ವೆನ್ಷನ್) ಹಳೆಯ ಗಾಲಿಗಳು ಮರೆಯಾದವು. ಮೆಸಪೊಟೇಮಿಯ, ಪರ್ಷಿಯ ಮತ್ತು ಟರ್ಕಿ ಪ್ರಾಂತಗಳಲ್ಲಿ ರೂಢಿಗೆ ಬಂದ ಅರದ ಗಾಲಿಗಳು ಪ್ರ.ಶ.ಪೂ. 1600 ರ ವೇಳೆಗೆ ಈಜಿಪ್ಟ್ ಮತ್ತು ಕ್ರೀಟ್ ದ್ವೀಪಗಳಲ್ಲಿಯೂ ಪ್ರ.ಶ.ಪೂ. 1300 ರ ಹೊತ್ತಿಗೆ ಚೀನದಲ್ಲಿಯೂ ಪ್ರ.ಶ.ಪೂ. 1000 ದ ವೇಳೆಗೆ ಉತ್ತರ ಯುರೋಪಿನಲ್ಲಿಯೂ ಪ್ರ.ಶ.ಪೂ. 500 ರ ಹೊತ್ತಿಗೆ ಬ್ರಿಟನ್ನಿನಲ್ಲಿಯೂ ಕಾಣಿಸಿಕೊಂಡವು. ಈ ಗಾಲಿಗಳು ಗುಂಬ, ನೇಮಿ ಮತ್ತು ಅರಗಳಿಂದ ಕೂಡಿರುತ್ತಿದ್ದವು. ನೇಮಿ ಮತ್ತು ಗುಂಬಗಳನ್ನು ಅರಗಳು ಕೂಡಿಸುತ್ತಿದ್ದವು. ನೇಮಿಯ ಹೊರಭಾಗಕ್ಕೆ ಚರ್ಮದ ಅಥವಾ ಲೋಹದ ಪಟ್ಟಿಯನ್ನು ಕೂಡಿಸಲಾಗುತ್ತಿತ್ತು. ಕೇಂದ್ರದಲ್ಲಿರುವ ಗುಂಬದಿಂದ ಹೊರಡುವ ಅರಗಳು ಸಮಸಂಖ್ಯೆಯಲ್ಲಿದ್ದು ನೇಮಿಯನ್ನು ಸೇರುತ್ತಿದ್ದವು. ನಾಲ್ಕು ಅರಗಳಿರುವ ಗಾಲಿಗಳು ಬೊಹಿಮಿಯಾ ಮತ್ತು ಡೆನ್ಮಾರ್ಕ್ ಪ್ರದೇಶಗಳಲ್ಲಿ ರಚಿತವಾದುವು. ರೋಮನ್ ಯುಗದಲ್ಲಿದ್ದ ಸೆಲ್ಟಿಕ್ ಗಾಲಿ ಪ್ರವೀಣರು 14 ಅರಗಳುಳ್ಳಗಾಲಿ ಗಳನ್ನು ರಚಿಸಿದ್ದರು. ನೇಮಿಯ ಹೊರಭಾಗಕ್ಕೆ ಕಾಯಿಸಿದ ಲೋಹದ ಪಟ್ಟಿಯನ್ನು ಕೂರಿಸಿ ಅದನ್ನು ತಣಿಸಿದಾಗ ನೇಮಿಯನ್ನು ಈ ಪಟ್ಟಿ ಬಿಗಿಯಾಗಿ ಅಪ್ಪಿಕೊಳ್ಳುತ್ತಿತ್ತು. ಪ್ರಾರಂಭದಲ್ಲಿ ನೇಮಿಯನ್ನು ಒಂದೇ ಮರದ ತುಂಡಿನಿಂದ ಮಾಡುತ್ತಿದ್ದರು. ಅದನ್ನು 6–7 ಮರದ ತುಂಡುಗಳಿಂದ ಅಷ್ಟೇ ಅರಗಳಿರುವಂತೆ ರಚಿಸುತ್ತಿದ್ದುದೂ ಇತ್ತು. ನೇಮಿ ಭೂಮಿಯ ಮೇಲೆ ಉರುಳುವಾಗ ಅದರ ಮೇಲೆ ಬಿದ್ದ ತೂಕ ಅರಗಳ ಮೂಲಕ ಅಕ್ಷದ ಮೇಲೆಯೂ ಬೀಳುತ್ತದೆ. ಹೀಗಾಗಿ ಗುಂಬಗಳ ರಂಧ್ರ ಕಾಲಕ್ರಮೇಣ ಸವೆದು ದೊಡ್ಡದಾಗುವುದು. ಇದನ್ನು ತಪ್ಪಿಸಲು ಸೆಲ್ಟ್ ಪ್ರವೀಣರು ಬೇರಿಂಗುಗಳ (ಅಚ್ಚಿನ ಧಾರಕಗಳು) ಉಪಯುಕ್ತತೆಯನ್ನು ಕಂಡುಕೊಂಡರು. ಗುಂಬದಲ್ಲಿ ಉದ್ದಕ್ಕೆ ಕಾಲುವೆಗಳಂತೆ ಕೊರೆದು ಅವುಗಳಲ್ಲಿ ಮರದ ತುಂಡುಗಳನ್ನು ಸೇರಿಸುತ್ತಿದ್ದರು. ಇವು ಗುಂಬದ ದ್ವಾರ ಮತ್ತು ಇರಚಿಯ ಮಧ್ಯೆ ತಿರುಗುತ್ತಿದ್ದವು. ರೋಮನ್ನರು ಮರದ ತುಂಡುಗಳ ಬದಲು ಕಂಚಿನ ಉಂಗುರಗಳನ್ನು ಬಳಕೆಗೆ ತಂದರು. ಇದೇ ಇಂದಿನ ಬುಷ್ ಮಾದರಿಯ ಬೇರಿಂಗುಗಳ ಉಪಜ್ಞೆಗೆ



**ಗಾಲಿಗಳು (ಇತರ ಬಗೆಯವು) : 1. ಬೈಸಿಕಲ್ ಚಕ್ರ, 2. ಬಸ್ಸಿನ ಚಕ್ರ, 3. ಎತ್ತಿನ ಗಾಡಿಯ ಚಕ್ರ, 4. ಟ್ರ್ಯಾಕ್ಟರ್ ಚಕ್ರ**

ಹೊತ್ತಿದ್ದ ಸುಮಾರು ಮೂವತ್ತು ಶಿಲಾಸ್ತಂಭಗಳನ್ನು ಅಶೋಕ ತನ್ನ ರಾಜ್ಯದ ಬೇರೆ ಬೇರೆ ಕಡೆ ನಿಲ್ಲಿಸಿದ. ಒಂದೊಂದು ಕಂಬದ ಮೇಲೂ ಸಾಮಾನ್ಯವಾಗಿ ಒಂದು ಚೌಕಾಕೃತಿಯ ಕಲ್ಲು, ಅದರ ಮೇಲೆ ಪೀಠ, ಅದರ ಮೇಲೆ ಚಕ್ರಾಕಾರದ ಇನ್ನೊಂದು ಕಲ್ಲು, ಅದರ ಸುತ್ತಲೂ ಹಂಸಗಳ, ವೃಷಭಗಳ, ಲತೆಗಳ ಸಾಲು, ಈ ಚಕ್ರದ ಮೇಲೆ ಒಂದು ವಿಗ್ರಹ ಇವು ಅಶೋಕನ ಸ್ತಂಭಗಳಲ್ಲಿ ನಾವು ಕಾಣುವ ವಿವರಗಳು. ಮೇಲುಭಾಗದ ವಿಗ್ರಹ ಸಿಂಹ, ವೃಷಭ, ಆನೆ, ಕುದುರೆ ಮುಂತಾದ ಯಾವುದಾದರೂ ಪ್ರಾಣಿಯದಾಗಿದ್ದು ಅವು ನಾಲ್ಕು ದಿಕ್ಕಿಗೆ ನಾಲ್ಕು ಮುಖಗಳನ್ನು ತೋರಿಸುತ್ತಿದ್ದವು. ಇವು ಧರ್ಮ ಸ್ತಂಭಗಳೆನಿಸಿವೆ. ಇವುಗಳ ಮೇಲೆ ಕಾಣುವುದೇ ಧರ್ಮಚಕ್ರ. ಸಾರಾನಾಥದಲ್ಲಿ ಇಂಥ ಕಂಬವೊಂದರ ಮೇಲೆ ನಾಲ್ಕು ಸಿಂಹಗಳನ್ನು ತೋರಿಸಲಾಗಿದೆ. ಭಾರತ ಧರ್ಮರಾಷ್ಟ್ರ, ಧರ್ಮಕ್ಷೇತ್ರವೆಂದು ಸಾರಲೆಂಬ ಭಾರತದ ರಾಜಚಿಹ್ನೆಯಾಗಿ ಈ ಸ್ತಂಭವನ್ನು ಸರ್ಕಾರ ಬಳಸುತ್ತಿದೆ. (ಜಿ.ಬಿ.ಆರ್.)

ಪ್ರಾಚೀನತಮ ಗಾಲಿಗಳು, ಒಡ್ಡರ ಬಂಡಿಯ ಚಕ್ರಗಳಂತೆ, ಉಂಡೆಗಾಲಿಗಳು. ಉದಾಹರಣೆಗೆ ಮೆಸಪೊಟೇಮಿಯಾದ ಕೀಷ್ ಮತ್ತು ಸೂಸ ಎಂಬಲ್ಲಿ ದೊರೆತಿರುವ ಮಾದರಿಗಳು ಹೀಗಿವೆ. ಅವನ್ನು ಮೂರು ಮರದ ತುಂಡುಗಳಿಂದ ಮಾಡಲಾಗಿತ್ತು.

ಕಾರಣವಾಯಿತು. ಅರದ ಗಾಲಿಗಳು ಹಗುರವಾಗಿಯೂ ಗಟ್ಟಿಯಾಗಿಯೂ ಇದ್ದುದರಿಂದ ಅವನ್ನು ಸಾಗಣೆ ಕಾರ್ಯಗಳಲ್ಲಿ ಹೆಚ್ಚಾಗಿ ಬಳಸಿಕೊಳ್ಳಲಾಯಿತು. ಮಧ್ಯ ಯುಗದಲ್ಲಿ ಕೆಲವು ದೇಶಗಳು ರಸ್ತೆ ಹಾಳಾಗುವುದೆಂಬ ಕಾರಣಕ್ಕಾಗಿ ಲೋಹದ ಪಟ್ಟಿಗಳಿರುವ ಗಾಲಿಗಳನ್ನು ನಿಷೇಧಿಸಿದ್ದವು.

ಪ್ರಸಕ್ತ ಶತಮಾನವನ್ನು ಗಾಲಿಗಳ ಯುಗ ಎಂದು ಸಾರ್ಥಕವಾಗಿ ಹೆಸರಿಸಬಹುದು. ಕೈಗಾರಿಕೆಗಳ ಯಾಂತ್ರೀಕಿಕರಣ ಗಾಲಿಗಳ ಉಪಯೋಗವನ್ನು ಅನಿವಾರ್ಯವನ್ನಾಗಿಸಿದೆ. ಯಾವ ಕಾರ್ಖಾನೆಯೇ ಆಗಲಿ ಗಾಲಿ ಇಲ್ಲದೆ ಇರಲು ಸಾಧ್ಯವೇ ಇಲ್ಲ. ಪ್ರತಿಯೊಂದು ಯಂತ್ರದಲ್ಲಿಯೂ ಚಾಲಕ, ಚಾಲಿತ, ಅನುಚಾಲಿತ, ವೇಗವರ್ಧಕ, ವೇಗಪಾತಕ ಮೊದಲಾದ ಗಾಲಿಗಳಲ್ಲಿ ಒಂದಲ್ಲ ಒಂದು ಇದ್ದೇ ಇರುತ್ತದೆ. ಬಸ್ಸು, ಕಾರು ಮೊದಲಾದ ವಾಹನಗಳಲ್ಲಿ ರಬ್ಬರ್ ಗಾಲಿಗಳ ಜೊತೆಗೆ ಗಿಯರು ಚಕ್ರವೇ ಮೊದಲಾದ ಗಾಲಿ ಪ್ರತಿರೂಪಗಳು ಇದ್ದೇ ಇರುತ್ತವೆ. ಗಾಲಿಗಳ ಕ್ಷೇತ್ರದಲ್ಲಿ ಕಪ್ಪಿ (ಪುಲ್ಲಿ), ನಿಯಂತ್ರಕ (ಫ್ಲೈಹ್ವೀಲ್) ,ಮತ್ತು ಗಿಯರು ಚಕ್ರಗಳ ಉಪಜ್ಞೆ ಯಂತ್ರಸಾಮರ್ಥ್ಯದ ವ್ಯಾಪ್ತಿಯ ದಿಗಂತವನ್ನು ಬಹುದೂರಕ್ಕೆ ತಳ್ಳಿಬಿಟ್ಟವೆ. ಎತ್ತಿನ ಗಾಡಿಯಿಂದ ಹಿಡಿದ ಅತ್ಯಂತ ಸಂಕೀರ್ಣಯಂತ್ರದವರೆಗೂ ಗಾಲಿಯ ಉಪಯೋಗ ಸರ್ವವ್ಯಾಪಿಯಾಗಿದೆ. (ಎಂ.ಆರ್.ಕೆ.)

**ಗಾಲಿನ, ಜೆಸಿಂತೊ :** 1852–97. ಇಟಲಿಯ ನಾಟಕಕಾರ. ಗಾಲ್ಡೋನಿಯ (**ನೋಡಿ– ಗಾಲ್ಡೋನಿ, ಕಾರ್ಲೋ**) ಅನಂತರ ಬರಿದಾಗಿದ್ದ ರಂಗಭೂಮಿಯನ್ನು ಪುನಶ್ಚೇತನಗೊಳಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ಇಪ್ಪತ್ತು ವರ್ಷ ತುಂಬುವುದಕ್ಕೆ ಮುಂಚೆಯೇ ಈತ ಸಾಂಪ್ರದಾಯಿಕವೂ ಆಡಂಬರಯುತವೂ ಆದ ಎರಡು ನಾಟಕಗಳನ್ನು ಇಟಾಲಿಯನ್ ಭಾಷೆಯಲ್ಲಿ ಬರೆದನಾದರೂ ಅವು ಹೆಚ್ಚು ಬಳಕೆಗೆ ಬರಲಿಲ್ಲ. ನಾಟಕಕಾರನಾಗುವುದಕ್ಕೆ ಮುಂಚೆ ಈತ ಕೆಲವು ಕಾಲ ನಟನಾಗಿಯೂ ರಂಗಭೂಮಿಯ ಮೇಳವಾದ್ಯದಲ್ಲಿ ಸೆಲ್ಲೋ ವಾದಕನಾಗಿ ಕೆಲಸಮಾಡುತ್ತಿದ್ದ. ಸಾಹಸಿ ರಂಗಮಂದಿರವೊಂದರ ವ್ಯವಸ್ಥಾಪಕನೊಬ್ಬ ಇವನ ಪ್ರತಿಭೆಯನ್ನು ಗುರುತಿಸಿ ವೆನೀಷಿಯನ್ ಭಾಷೆಯಲ್ಲಿ (ವೆನಿಸ್ಸಿನ ಪ್ರಾಂತಭಾಷೆ) ನಾಟಕ ಬರೆಯಲು ಪ್ರೇರೇಪಿಸಿದ. ಸ್ವಲ್ಪ ಕಾಲದಲ್ಲೇ ಇವನ ಹೆಸರು ಪ್ರಸಿದ್ಧವಾಯಿತು. ಸುಮಾರು ಏಳು ವರ್ಷ ಗಾಲಿನ ವೆನಿಸ್ಸಿನ ರಂಗಭೂಮಿಯ ಮೇಲೆ ಅತ್ಯಂತ ಪ್ರಸಿದ್ಧ ನಾಟಕಕಾರ ಎನಿಸಿಕೊಂಡ. ಗಾಲಿನ ಮೊಟ್ಟಮೊದಲ ಗಾಲ್ಡೋನಿಯ ಹರ್ಷನಾಟಕಗಳನ್ನು ಚೆನ್ನಾಗಿ ಅಭ್ಯಸಿಸಿ, ಮನನ ಮಾಡಿಕೊಂಡು ಆ ಮೇಲೆ ತನ್ನದೇ ಆದ ಕೃತಿಗಳನ್ನು ರಚಿಸಿದ. ಇವನ ನಾಟಕಗಳಲ್ಲಿ ಗಾಲ್ಡೋನಿಯ ಪ್ರಭಾವ ಸ್ಪಷ್ಟವಾಗಿದ್ದರೂ ನಾಟಕ ವಸ್ತು ಹಾಗೂ ಪಾತ್ರ ವಿನ್ಯಾಸದಲ್ಲಿ ವೈವಿಧ್ಯ, ಸ್ವಂತಿಕೆ ಇವೆ ಎನ್ನುತ್ತಾರೆ. ಈತ ತನ್ನ ಪ್ರತಿಯೊಂದು ನಾಟಕದಲ್ಲೂ ಸಮಕಾಲೀನ ವೆನಿಸ್ ನಾಗರಿಕ ಸಮಾಜದ ಹೃದಯವಿಹೀನತೆಯನ್ನೂ ದುರಾಸೆ, ದೌರ್ಬಲ್ಯಗಳನ್ನೂ ವಿಡಂಬನೆ ಮಾಡಿದ್ದಾನೆ; ಹಳೆಯ ಸಂಪ್ರದಾಯ ಹಾಗೂ ಹೊಸಕಾಲದ ಪ್ರವೃತ್ತಿಗಳ ಸಂಘರ್ಷವನ್ನು ಚಿತ್ರಿಸಿದ್ದಾನೆ. ಇವನ ಹಾಸ್ಯಪ್ರಧಾನವಾದ ನಾಟಕಗಳಲ್ಲೂ ಪ್ರಹಸನಗಳಲ್ಲೂ ಗಂಭೀರ ಚಿಂತನೆ ಇದೆ. ಸುಖ ದುಃಖಗಳ ನೆರಳು ಬೆಳಕಿನ ಚಲ್ಲಾಟವಿದೆ. ದಿ ಹಾರ್ಟ್‍ಸ್ ಐಸ್ ಎನ್ನುವ ನಾಟಕದಲ್ಲಿ ಬರುವ ಟೆರೆಸಾ ಎಂಬ ಹೃದಯವಂತಳಾದ ಕುರುಡ ವೃದ್ಧೆಯ ಪಾತ್ರ ಅಂತಃಕರಣವನ್ನು ಅರಳಿಸುವಂತಿದೆ. ಈತ ತನ್ನ ಜೀವಿತಕಾಲದ ಕೊನೆಯಲ್ಲಿ ಬರೆದ ವಾಸ್ತವಿಕ (ರಿಯಲಿಸ್ಟಿಕ್) ನಾಟಕಗಳಲ್ಲಿ ಸೂಕ್ಷ್ಮವಾದ ಕಲಾವಂತಿಕೆ, ಪರಿಪಕ್ವವಾದ ಚಿಂತನೆ ಕಾಣಿಸುತ್ತದೆ. ವ್ಯಕ್ತಿ ಹಾಗೂ ಸಮುದಾಯದ ಸಂಬಂಧವನ್ನು ಹೆಚ್ಚು ವ್ಯಗ್ರದೃಷ್ಟಿಯಿಂದ ಈತ ಚಿತ್ರಿಸಿದ್ದಾನೆ. ಹಣ ಹೇಗೆ ಮನುಷ್ಯರ ಅಂತರಂಗವನ್ನು ಕಳಂಕಗೊಳಿಸುತ್ತದೆ ಎನ್ನುವುದೇ ಇವನ ಎಲ್ಲ ನಾಟಕಗಳ ವಸ್ತು. ಆದರೆ ಅವುಗಳಲ್ಲಿ ಸೊಗಸಾದ ವೈವಿಧ್ಯವಿದೆ. ಸಾಯುವುದಕ್ಕೆ ಮುಂಚೆ ಈತ ಅರ್ಧಂಬರ್ಧ ಬರೆದು ಬಿಟ್ಟು ಹೋದ ಸೆನ್ಜ ಬರ್‍ಸೋಲ (ದಿಕ್ಸೂಚಿ ಇಲ್ಲದ) ಎನ್ನುವ ನಾಟಕದಲ್ಲಿ ಹಣವೇ ಸರ್ವಸ್ವ ಎಂಬ ನಂಬಿಕೆಗೆ ವಿರೋಧವಾಗಿ ನಡೆಯುವ ಮಾನವೀಯ ವ್ಯಕ್ತಿಯೊಬ್ಬನ ದುರಂತವಿದೆ. ಆ ನಾಟಕದ ಒಂದು ವಾಕ್ಯವನ್ನು ವೆನಿಸ್ ನಾಟಕಕಾರರು ಆಗಾಗ ನೆನೆಯುತ್ತಾರೆ. ಸದುದ್ದೇಶವುಳ್ಳವರಿಗೂ ಸತ್ಯವಂತರಿಗೂ ಕಾಲವಿಲ್ಲವೆನ್ನುವುದು ಸುಳ್ಳು. ಭವಿಷ್ಯ ಜಗತ್ತು ಅಂಥವರಿಗೇ ಸೇರಿದ್ದು. ಆದರೆ ಅವರು ಸ್ವಹಿತವನ್ನು ಬದಿಗೊತ್ತಿ ಶಿಲುಬೆ ಹೊತ್ತು ಅದನ್ನು ರಕ್ಷಿಸಲು (ಲೋಕಕಾರುಣ್ಯಕ್ಕಾಗಿ) ಧೈರ್ಯ ಹಾಗೂ ಹುರುಪಿನಿಂದ ಹೋರಾಡಬೇಕಾಗುತ್ತದೆ.

ಗಾಲಿನ ಬರೆದ ನಾಟಕಗಳಲ್ಲಿ ಉನ ಫ್ಯಮೇಜಿಯ ಇನ್ ರೋವಿನ, ಜೆಂತೆ ರೆಫಾದ, ಮಿಯಫಿಯ ಮತ್ತು ಲ ಫಮೇಜಿಯ ಎನ್ನುವುವು ಪ್ರಸಿದ್ಧವಾಗಿವೆ. (ಎಚ್.ಕೆ.ಆರ್.)

**ಗಾಲಿಬ್, ಮಿರ್ಜ಼ಾ :** 1797–1869. ಉರ್ದು ಮತ್ತು ಪರ್ಷಿಯನ್ ಭಾಷೆಗಳಲ್ಲಿ ಕೃತಿ ರಚನೆ ಮಾಡಿರುವ ಪ್ರಸಿದ್ಧ ಕವಿ. ಈತನ ಪೂರ್ಣ ಹೆಸರು ಮಿರ್ಜ಼ಾ ಅಸದುಲ್ಲಾಹ್ ಬೇಗ್ ಖಾನ್ ಅಲಿಯಾಸ್ ಮಿರ್ಜ಼ಾ ನವ್‍ಷಾಹ್. ಗಾಲಿಬ್ ಎನ್ನುವುದು ಕಾವ್ಯನಾಮ. ಕೊನೆಯ ಮೊಗಲ್ ಚಕ್ರವರ್ತಿ ಬಹದ್ದೂರ್ ಷಾ ಜ಼ಫರ್ ಈತನಿಗೆ ನಜ್ಮುದ್ ದೌಲ. ದಬೀರ್–ಉಲ್–ಮುಲ್ಕ್, ನಿಜಾಮ್ ಜಂಗ್ ಬಹಾದೂರ್–ಎಂಬ ಬಿರುದುಗಳನ್ನು ಕೊಟ್ಟಿದ್ದ.

ಈತ ಜನಿಸಿದ್ದು ಆಗ್ರದಲ್ಲಿ. ಬಾಲ್ಯದಲ್ಲಿ ಈತನಿಗೆ ಸಮರ್ಥ ವಿದ್ವಾಂಸನೊಬ್ಬನಿಂದ ಪರ್ಷಿಯನ್ ಮತ್ತು ಅರಬ್ಬೀ ಭಾಷೆಗಳಲ್ಲಿ ಶಿಕ್ಷಣ ದೊರೆಯಿತು. ಹದಿಮೂರನೆಯ ವರ್ಷದಲ್ಲಿಯೇ ಲೋಹಾರೂ ರಾಜಮನೆತನದ ಕನ್ಯೆಯೊಬ್ಬಳೊಡನೆ ಈತನಿಗೆ ವಿವಾಹವಾಯಿತು. ಹದಿನಾರನೆಯ ವರ್ಷದ ಹೊತ್ತಿಗೆ ದೆಹಲಿಗೆ ಬಂದು ಅಲ್ಲಿಯೇ ಶಾಶ್ವತವಾಗಿ ನೆಲೆಸಿದ. ಈತನ ತಂದೆ ಮತ್ತು ಚಿಕ್ಕಪ್ಪ ಸೈನಿಕರಾಗಿದ್ದರು. ಇವರ ಶೌರ್ಯ ಪರಾಕ್ರಮಗಳಿಗಾಗಿ ಬ್ರಿಟಿಷರು ಇವರಿಗೆ ಜಹಗೀರಿಯೊಂದನ್ನು ಕೊಟ್ಟಿದ್ದರು. ಮುಂದೆ ಇದನ್ನು ಕುಟುಂಬ ಪಿಂಚಣಿಯಾಗಿ ಪರಿವರ್ತಿಸಲಾಯಿತು. ಈತನಿಗೂ 750 ರೂ. ಗಳ ವಾರ್ಷಿಕ ಪಿಂಚಣಿ ದೊರೆಯುತ್ತಿತ್ತು. ದೆಹಲಿಯಲ್ಲಿ ಈತನಿಗೆ ಕವಿಗಳ, ವಿದ್ವಾಂಸರ ಮತ್ತು ಸೂಫಿ ಸಂತರ ಸಹವಾಸ ದೊರೆಯಿತು. ಇದು ಈತನ ಕಾವ್ಯ ರಚನೆಯ ಮೇಲೆ ತನ್ನದೇ ಆದ ಪ್ರಭಾವ ಬೀರಿತು. 1850ರಲ್ಲಿ ತೈಮೂರ್ ವಂಶದ ಚರಿತ್ರೆಯನ್ನು ಬರೆಯಲು ಮಾಹೆಯಾನ ಐವತ್ತು ರೂ. ಗಳ ವೇತನದ ಮೇಲೆ ಬಹಾದೂರ ಷಾ ಈತನನ್ನು ನೇಮಕ ಮಾಡಿಕೊಂಡ. ಮಹಾಕವಿ ಜಾಕನ ನಿಧನಾನಂತರ ಬಹದುರ್ ಷಾನಿಗೆ ಈತನೇ ಕಾವ್ಯ ಶಿಕ್ಷಾಚಾರ್ಯನಾದ. ಈತನನ್ನು ಆಸ್ಥಾನದ ಮಹಾಕವಿಯನ್ನಾಗಿಯೂ ಮಾಡಲಾಯಿತು. ಮುಂದೆ ಈತ ರಾಜಕುಮಾರರಿಗೆಲ್ಲ ಕಾವ್ಯ ಗುರುವಾದ. ಕೆಂಪುಕೋಟೆಯಲ್ಲಿ ನಡೆಯುತ್ತಿದ್ದ ಕವಿ ಸಮ್ಮೇಳನಗಳಲ್ಲೂ ಈತ ಭಾಗವಹಿಸುತ್ತಿದ್ದ. ಲಖನೌದ ನವಾಬನಾಗಿದ್ದ ವಾಜಿದ್



ಅಲಿ ಷಾನೂ ಈತನ ಪ್ರತಿಭೆಯನ್ನು ಗುರುತಿಸಿ, ಈತನಿಗೆ ವರ್ಷಾಶನವನ್ನು ಗೊತ್ತುಪಡಿಸಿದ. ಲಖನೌ ಕವಿಗಳ ಆಹ್ವಾನದ ಮೇಲೆ 1826ರಲ್ಲಿ ಈತ ಲಖನೌಗೆ ತೆರಳಿ ಅಲ್ಲಿ ಐದು ತಿಂಗಳ ಕಾಲ ತಂಗಿದ್ದ: ಸ್ವಾತಂತ್ರ್ಯದ ಪ್ರಥಮ ಸಮರದ (ಸಿಪಾಯಿದಂಗೆ) ಪರಿಣಾಮವಾಗಿ ಈತ ತುಂಬ ತೊಂದರೆಗೆ ಒಳಗಾದ. ಕೆಲವು ವರ್ಷಗಳಿಂದ ಸರ್ಕಾರ ಪಿಂಚಣಿ ನೀಡಿಕೆಯನ್ನೂ ನಿಲ್ಲಿಸಿತು. ಈ ಅವಧಿಯಲ್ಲಿ ತನ್ನ ಕಾವ್ಯಗುರುವಾಗಿ ನೇಮಿಸಿಕೊಂಡು ವರ್ಷಾಶನವನ್ನು ಗೊತ್ತುಪಡಿಸುವುದರ ಮೂಲಕ ರಾಂಪುರದ ನವಾಬ ಈತನ ನೆರವಿಗೆ ಬಂದ; ಕವಿಯು ಆಜೀವಪರ್ಯಂತ ಈ ವ್ಯವಸ್ಥೆ ಮುಂದುವರಿಯಿತು. ಕೆಲವು ವರ್ಷಗಳ ಬಳಿಕ ಬ್ರಿಟಿಷ್ ಸರ್ಕಾರವೂ ಪಿಂಚಣಿ ನೀಡಿಕೆಯನ್ನು ಮತ್ತೆ ಪ್ರಾರಂಭಿಸಿತು. ಇಷ್ಟಾದರೂ ಜೀವನಪರ್ಯಂತ ಈತ ಆರ್ಥಿಕ ಸಂಕಷ್ಟಗಳಿಗೆ ಒಳಗಾಗಿಯೇ ಇದ್ದ. ಬ್ರಿಟಿಷ್ ಸಕಾರದ ಪಿಂಚಣಿ ಮತ್ತು ರಾಂಪುರದ ನವಾಬರು ನೀಡುತ್ತಿದ್ದ ಮಾಸಾಶನ ಇಷ್ಟಲ್ಲದೆ ಇವನಿಗೆ ಬೇರೆ ಆದಾಯವಿರಲಿಲ್ಲ. ಮೊಗಲ್ ಆಸ್ಥಾನದ ವೇತನ, ಲಖನೌ ನವಾಬರ ವರ್ಷಾಸನ, ಕಾವ್ಯ ಶಿಕ್ಷೆಯನ್ನು ಪಡೆಯುತ್ತಿದ್ದ ಶಿಷ್ಯವರ್ಗ ತಂದು ಕೊಡುತ್ತಿದ್ದ ಗುರುದಕ್ಷಿಣೆ – ಇವೆಲ್ಲ ತಾತ್ಕಾಲಿಕವೂ ಅಲ್ಪಪ್ರಮಾಣದವೂ ಆಗಿದ್ದುವು. ದೆಹಲಿಯಲ್ಲಿದ್ದಷ್ಟು ಕಾಲವೂ ಸಾಲಿಗರಿಂದ ಅತಿಯಾದ ಬಡ್ಡಿಯ ಮೇಲೆ ಪಡೆದ ಸಾಲದಿಂದಲೇ ಈತ ಜೀವನ ನಿರ್ವಹಿಸಬೇಕಾಯಿತು. ಜೂಜಾಡುತ್ತಿದ್ದುದಕ್ಕಾಗಿ 1847 ರಲ್ಲಿ ಈತನನ್ನು ಮೂರು ತಿಂಗಳ ಕಾಲ ಜೈಲಿಗೆ ಹಾಕಲಾಗಿತ್ತು. ಈತನ ಏಳು ಮಕ್ಕಳೂ ಬಾಲ್ಯದಲ್ಲಿಯೇ ಕಾಲವಾದರು. ಹುಚ್ಚನಾಗಿದ್ದ ಈತನ ಪ್ರೀತಿಯ ಸೋದರ ಮಿರ್ಜ಼ಾ ಯೂಸುಫ್ 1857ರಲ್ಲಿ ತೀರಿಕೊಂಡ. ಭಾವಮೈದುನನಂತೂ ತನ್ನ ತಾರುಣ್ಯದಲ್ಲೇ ಗತಿಸಿದ. ಇಂಥ ಸುಖ ದುಃಖಗಳನ್ನು ಕಂಡ ಗಾಲಿಬ್ 1869ರ ಫೆಬ್ರವರಿ 15 ರಂದು ತನ್ನ ಎಪ್ಪತ್ತೆರಡನೆಯ ವಯಸ್ಸಿನಲ್ಲಿ ವಿಧಿವಶನಾದ. ದೆಹಲಿಯಲ್ಲಿ ಈತನನ್ನು ಸಮಾಧಿ ಮಾಡಲಾಯಿತು.

15 ಫೆಬ್ರವರಿ 1969ರಂದು ಭಾರತದಲ್ಲಿ ಮತ್ತು ವಿಶ್ವದ ಇತರ ವಿದ್ವತ್ ಕೇಂದ್ರಗಳಲ್ಲಿ ಗಾಲಿಬ್ ಶತಮಾನೋತ್ಸವವನ್ನು ಆಚರಿಸಲಾಯಿತು. ಭಾರತೀಯ ಅಂಚೆ ಇಲಾಖೆ ಇದರ ಸ್ಮರಣಾರ್ಥವಾಗಿ ಅಂಚೆಚೀಟಿಯೊಂದನ್ನು ಹೊರಡಿಸಿತು. ಗಾಲಿಬ್ ಅಕಾಡೆಮಿಯೂ ಸೇರಿದಂತೆ ಹಲವಾರು ಸ್ಮಾರಕಗಳನ್ನು ಸ್ಥಾಪಿಸಲಾಯಿತು. ಈತನ ಜೀವನ ಮತ್ತು ಕೃತಿಗಳನ್ನು ಕುರಿತು ಹಲವಾರು ಭಾಷೆಗಳಲ್ಲಿ ಗ್ರಂಥಗಳು ಬೆಳಕು ಕಂಡವು.

ಉರ್ದು ಮತ್ತು ಪರ್ಷಿಯನ್ ಭಾಷೆಗಳಲ್ಲಿ ಗಾಲಿಬ್ ಸುಮಾರು ಹನ್ನೆರಡು ಕೃತಿಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಕೆಲವು ಗದ್ಯರಚನೆಗಳು: ಉಳಿದವು ಪದ್ಯರಚನೆಗಳು. ಅವುಗಳಲ್ಲಿ ಮುಖ್ಯವಾದವು ಇವು:

1 ಮೆಹ್ರ್ ಎ ನಿಮ್ ರೋಜ್ (ತೈಮೂರ್ ವಂಶದ ಚರಿತ್ರೆ – ಪರ್ಷಿಯನ್ ಭಾಷೆಯಲ್ಲಿ)

2 ದಸ್ತಂಬೂ – 1857ರಲ್ಲಿ ನಡೆದ ಘಟನೆಗಳು ವಿವರಣೆ

3 ಕಾತಿ ಎ ಬುರ್ಹನ್ – ಪರ್ಷಿಯನ್ ನಿಘಂಟು

4 ಉರ್ದು ಎ ಮು ಅಲ್ಲಾ

5 ಊದ್ ಎ ಹಿಂದೀ

ಇವೆರಡೂ ಗಾಲಿಬ್ ತನ್ನ ಮಿತ್ರರಿಗೆ ಮತ್ತು ಶಿಷ್ಯರಿಗೆ ಬರೆದ ಪತ್ರಗಳ ಸಂಕಲನಗಳು

6 ಕುಲ್ಲಿಯಾತ್ ಎ ನಜ್ಮ್ ಎ ಫಾರ್ಸಿ – ಪರ್ಷಿಯನ್ ಕವಿತೆಗಳ ಸಂಕಲನ
7 ದೀವಾನ್ – ಉರ್ದು ಕವಿತೆಗಳ ಸಂಕಲನ

ಮೊಗಲರು ಭಾರತಕ್ಕೆ ಮೂರು ಕೊಡುಗೆಗಳನ್ನು – ಅಂದರೆ, ಉರ್ದು, ತಾಜ್‌ಮಹಲ್ ಮತ್ತು ಗಾಲಿಬ್ – ಬಿಟ್ಟು ಹೋಗಿದ್ದಾರೆಂದು ಹೇಳಿರುವುದು ಸೂಕ್ತವಾಗಿಯೇ ಇದೆ. ಭಾರತದ ಉರ್ದು ಕವಿಗಳಲ್ಲಿ ಗಾಲಿಬ್‌ನಿಗೆ ವಿಶಿಷ್ಟ ಸ್ಥಾನ ದೊರೆತಿದೆ. ಈತ ಸ್ವತಃ ಒಂದು ಮನೋಧರ್ಮ, ಒಂದು ಯುಗ ಮತ್ತು ಒಂದು ಜಗತ್ತೇ ಆಗಿದ್ದ. ಘನ ವಿದ್ವಾಂಸನಾಗಿದ್ದ ಈತನ ಅಧ್ಯಯನ ವ್ಯಾಪ್ತಿ ವಿಶಾಲವಾಗಿತ್ತು. ಅಮೀರ್ ಖುಸ್ರು ಹೊರತಾಗಿ ಭಾರತದ ಬೇರಾವ ಪರ್ಷಿಯನ್ ಕವಿಯನ್ನಾಗಲೀ ಲೇಖಕನನ್ನಾಗಲೀ ಈತ ಮಾನ್ಯ ಮಾಡಿರಲಿಲ್ಲ. ಉರ್ದು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಮೀರ್ ಒಬ್ಬನನ್ನೂ ಮಾತ್ರ ಈತ ಗೌರವಿಸುತ್ತಿದ್ದ ಹಾಗೂ ತನ್ನನ್ನೇ ಶಿಷ್ಟತೆಯ ಮಾನದಂಡವೆಂದು ಭಾವಿಸಿದ್ದ. ಪರ್ಷಿಯನ್ ಭಾಷೆಯಲ್ಲಿ ಭವ್ಯವಾದ ಕವನಗಳನ್ನು ರಚಿಸಿದರೂ ಉರ್ದು ಭಾಷೆಯಲ್ಲಿ ರಚಿಸಿದ ಪತ್ರಗಳು ಮತು ಭಾವಗೀತೆಗಳೇ ಈತನಿಗೆ ಸ್ಥಾನಮಾನಗಳನ್ನು ತಂದುಕೊಟ್ಟವು. ಮೀರ್‌ನನ್ನು ಬಿಟ್ಟರೆ, ಈತನೇ ಉರ್ದು ಸಾಹಿತ್ಯದ ಮಹಾನ್ ಕವಿ. ಉರ್ದು ಪತ್ರಸಾಹಿತ್ಯದಲ್ಲಂತೂ ಈತನದು ಅದ್ವಿತೀಯ ಸ್ಥಾನ. ಮೊದಲಿಗೆ ಈತ ಅಸದ್ ಎಂಬ ಕಾವ್ಯನಾಮದಿಂದ ಬರೆದನಾದರೂ ಮುಂದೆ ಗಾಲಿಬ್ ಎಂಬ ಹೆಸರನ್ನು ಸ್ಥಿರವಾಗಿ ಬಳಸಿದ. ವಾಸ್ತವವಾಗಿ ಇವೆರಡೂ ನಾಲ್ಕನೆಯ ಕಲೀಫ್ ಹಾಗೂ ಪವಿತ್ರ ಪ್ರವಾದಿಯ ಅಳಿಯನಾಗಿದ್ದ ಅಲೀಯ ಬಿರುದುಗಳಾಗಿದ್ದವು. ಮೊದಲಿಗೆ ಈತ ಪ್ರಸಿದ್ಧ ಭಾರತೀಯ ಕವಿಯಾದ ಬೇದಿಲ್‌ನನ್ನು ಅನುಕರಿಸುತ್ತಿದ್ದ. ಅದರೆ ಈ ಶೈಲಿ ಕೊಂಚ ಗೊಂದಲಕ್ಕೆಡೆಮಾಡಿಕೊಟ್ಟಿತು. ತನ್ನ ಇಪ್ಪತ್ತೈದನೆಯ ವಯಸ್ಸಿನಲ್ಲಿ ದೀವಾನ್ ಅನ್ನು ಪರಿಷ್ಕರಿಸಿದ. ಈತನ ಅನೇಕ ಕೃತಿಗಳು ಈತನ ಜೀವಮಾನದಲ್ಲಿಯೇ ಪ್ರಕಟವಾದುವು. ದೀವಾನ್ ಸುಮಾರು ಐದು ಆವೃತ್ತಿಗಳನ್ನು ಕಂಡಿತು. ಇದರಲ್ಲಿ ಎರಡು ಸಾವಿರದ ಪದ್ಯಗಳಿವೆ. ಇದೇ ಈತನ ಅತ್ಯಂತ ಮಹತ್ತ್ವಪೂರ್ಣ ಕೃತಿ. ತನ್ನ ಆಶ್ರಯದಾತರು, ಆಂಗ್ಲ ಗವರ್ನರುಗಳು ಮತ್ತು ವಿಕ್ಟೋರಿಯ ಮಹಾರಾಣಿಯವರನ್ನು ಕುರಿತ ಪ್ರಶಂಸಾತ್ಮಕ ಪದ್ಯಗಳನ್ನು ಪರ್ಷಿಯನ್ ಕವಿತೆಗಳ ಸಂಕಲನದಲ್ಲಿ ಕಾಣಬಹುದಾಗಿದೆ.

ಉರ್ದು ಕವಿತೆಗಳು ಈತನಿಗೆ ಉರ್ದು ಸಾಹಿತ್ಯದಲ್ಲಿ ಮಹಾಕವಿಯ ಸ್ಥಾನವನ್ನು ಗಳಿಸಿಕೊಟ್ಟಿವೆ. ಅಷ್ಟೇ ಅಲ್ಲ, ಈತನ ಹಿರಿಮೆ ಮತ್ತು ಖ್ಯಾತಿ ಇತರ ಕವಿಗಳ ಖ್ಯಾತಿಯನ್ನು ನುಂಗಿ ನೀರು ಕುಡಿದುಬಿಟ್ಟಿವೆ. ತನ್ನ ಸೃಜನಾತ್ಮಕ ಚಿಂತನೆಗಳನ್ನು ಅಭಿವ್ಯಕ್ತಿಗೊಳಿಸಲು ಈತ ತನ್ನದೇ ಆದ ಶೈಲಿಯೊಂದನ್ನು ಸೃಷ್ಟಿಸಿದ. ಈ ಶೈಲಿ ಅನನುಕರಣೀಯವಾಗಿದ್ದು ಈತನೊಂದಿಗೇ ಕೊನೆಗೊಂಡಿತು. ಪೂರ್ವಕವಿಗಳನ್ನು ಅನುಸರಿಸುವುದು ಈತನಿಗೆ ಒಪ್ಪಿಗೆಯಾಗಿರಲಿಲ್ಲ. ಹೊಸತನವೇ ಈತನ ಕಾವ್ಯದ ಜೀವಾಳ. ಜೀವನವೇ ಈತನ ಕಾವ್ಯದ ವಸ್ತುವಾಗಿದ್ದು, ಜೀವನದ ಉನ್ನತ ಮೌಲ್ಯಗಳನ್ನು ಈತ ತನ್ನ ಕಾವ್ಯದಲ್ಲಿ ಕಂಡರಿಸಿದ್ದಾನೆ. ಕಾವ್ಯ ಸೃಜನಾತ್ಮಕವಾಗಿರಬೇಕೇ ಹೊರತು ಕೇವಲ ಶಬ್ದಾಡಂಬರವಾಗಿ ಬಾರದು ಎಂಬುದೇ ಈತನ ಧ್ಯೇಯ. ಉದಾತ್ತ ಚಿಂತನೆಗಳು, ಉಪಮಾನಗಳ ಅಪೂರ್ವತೆ ಮತ್ತು ನವೀನತೆ, ಮೃದುಹಾಸ್ಯ, ಶ್ಲೇಷೆ, ವಸ್ತುವಿನ ನೂತನತೆ, ಅನುಭಾವಿಕತೆ, ಮೃದುಮಧುರ ಶೈಲಿ, ಪ್ರತಿಮಾಯೋಜನೆ, ಸೂಕ್ಷ್ಮ ಪರಿವೀಕ್ಷಣೆ, ಜೀವನದ ಕಟು ಅನುಭವಗಳ ನೈಜನಿರೂಪಣೆ, ಸರಳತೆ, ಅಭಿವ್ಯಕ್ತಿಯ ಪರಿಣಾಮ ರಮಣೀಯತೆ, ಪ್ರೇಮದ ತೀವ್ರತೆ–ಇವು ಈತನ ಕವಿತೆಯ ಪ್ರಾಣ ಹಾಗೂ ಸತ್ತ್ವ. ಈತ ನಿರಾಶಾವಾದಿಯೂ ಹೌದು. ಇಷ್ಟಾದರೂ ಈತನ ಕಾವ್ಯ ಸ್ವಾನುಭವದ ಪ್ರತೀಕವಾಗಿದ್ದು, ಓದುಗರೂ ಆ ಅನುಭವಗಳಲ್ಲಿ ಪಾಲ್ಗೊಳ್ಳುವಂತಾಗುತ್ತದೆ.

ಅದುವರೆಗೆ ಸಂಪ್ರದಾಯದ ಜಾಡಿನಲ್ಲಿಯೇ ಹರಿಯುತ್ತಿದ್ದ ಉರ್ದು ಕಾವ್ಯ ಧಾರೆಯ ದಿಕ್ಕನ್ನು ಬದಲಾಯಿಸಿದ ಶ್ರೇಯಸ್ಸು ಈತನದು. ಹೀಗಾಗಿ, ಆಧುನಿಕ ಉರ್ದು ಕವಿತೆಯ ಪ್ರವರ್ತಕನೆಂದು ಈತನನ್ನು ಗೌರವಿಸಲಾಗಿದೆ. ಉರ್ದು ಕಾವ್ಯದ ಮೇಲೆ ಈತ ಬೀರಿರುವ ಪ್ರಭಾವ ಮಹತ್ತರವಾದುದು. ಈತ ದೇಶಾದ್ಯಂತ ಶಿಷ್ಯರನ್ನು ಪಡೆದಿದ್ದ. ಅಂಚೆಯ ಮೂಲಕ ಶಿಕ್ಷಣ ಪಡೆಯುತ್ತಿದ್ದರು.

ಸರಳ, ಮಧುರ ಮತ್ತು ಪ್ರವಾಹ ಶೀಲ ಶೈಲಿಯಲ್ಲಿ ಬರೆಯಲಾಗಿರುವ ಈತನ ಪತ್ರಗಳು ಅನುಪಮವಾಗಿವೆ. ಇವುಗಳ ಅತ್ಯಂತ ಪ್ರಮುಖ ಲಕ್ಷಣವೆಂದರೆ ಸಂಭಾಷಣಾಶೈಲಿ. 1857ರಲ್ಲಿ ಮತ್ತು ಆ ತರುವಾಯ ರಚಿಸಿದ ಪತ್ರಗಳಲ್ಲಿ ತಾನೇ ಕಣ್ಣಾರೆ ಕಂಡ ದುಃಖದ ಘಟನೆಗಳ ಹೃದಯವಿದ್ರಾವಕ ಚಿತ್ರಗಳನ್ನು ಈತ ನೀಡಿದ್ದಾನೆ. ಉರ್ದು ಗದ್ಯದ ಅತ್ಯುತ್ಕೃಷ್ಟ ರಚನೆಗಳಲ್ಲಿ ಇವುಗಳಿಗೂ ಎಡೆ ದೊರೆತಿದೆ. ಈ ಪತ್ರಗಳು ಈತನ ವಿಶಿಷ್ಟ ವ್ಯಕ್ತಿತ್ವದ ಮೇಲೆ ಬೆಳಕು ಬೀರುತ್ತವೆಯಲ್ಲದೆ ಈತನ ಆತ್ಮಚರಿತ್ರೆಯ ಇಣುಕು ನೋಟವನ್ನೂ ನೀಡುತ್ತವೆ. (ಎಂ.ಎಂ.ಎಚ್.)

**ಗಾಲಿಯಂ :** ಆವರ್ತಕೋಷ್ಟಕದ ಪ್ರಧಾನ ಗುಂಪು 3ರ ಲೋಹ ಧಾತು; ಪರಮಾಣು ಸಂಖ್ಯೆ 31; ಪರಮಾಣು ತೂಕ 69.72; ಪ್ರತೀಕ ಉಚಿ. ಎಲೆಕ್ಟ್ರಾನ್ ವಿನ್ಯಾಸ $1^2 2^2 2ಠ^6 3^2 3ಠ^6 3ಜ^{10} 4^2 4ಠ^1$. ಇದೊಂದು ಬೂದು ಬಣ್ಣದ ಘನ ಲೋಹ. 29.78ಹ ಸೆಂ. ಉಷ್ಣತೆಯಲ್ಲಿಯೇ ಕರಗಿ ಬಿಳಿಬಣ್ಣದ ದ್ರವವಾಗುವುದು. ಕುದಿಬಿಂದು 2070ಹ ಸೆಂ. ದ್ರವರೂಪಕ್ಕೆ ಇರುವ ಈ ವ್ಯಾಪ್ತಿ ಗಾಲಿಯಮಿನ ವೈಶಿಷ್ಟ್ಯ. ಗೊತ್ತಿರುವ ಯಾವುದೇ ಧಾತುವಿಗಿಂತ ಇದು ಉಪಯುಕ್ತವಾದ ಮತ್ತು ಅತ್ಯಂತ ದೀರ್ಘವಾದ ವ್ಯಾಪ್ತಿ. ಅಧಿಕ ಉಷ್ಣತೆಯಲ್ಲೂ ಇದರ ಆವಿಯೊತ್ತಡ ಕಡಿಮೆ: 1315ಹ ಸೆಂ. ನಲ್ಲಿ 1ಮಿಮೀ. ಊರ; 1726ಹ ಸೆಂ.ನಲ್ಲಿ 100 ಮಿಮೀ. ಊರ. ಘನೀಭವಿಸಿದಾಗ ಸುಮಾರು ಶೇ 3 ರಷ್ಟು ವಿಕಸಿಸುವುದು ಮತ್ತು ಅಧಿಶೈತ್ಯಗೊಳ್ಳುವುದು. ಇದನ್ನು ಮೃದುವಾದ ಪಾತ್ರೆಗಳಲ್ಲಿ ಶೇಖರಿಸಿಡಬೇಕು. ಮ್ಹೋ ಕಾಠಿನ್ಯಮಾನದಲ್ಲಿ ಇದರ ಕಠಿನತೆ 2–3. ಕಡಿಮೆ ಉಷ್ಣತೆಯಲ್ಲಿ ಪೆಡಸು. ಲೋಹದ ಹರಳು ಆರ್ಥೊರಾಂಬಿಕ್, ದ್ವಿಪರಮಾಣ್ವಕ ಅಣು. 69 (ಶೇ 0.1) ಮತ್ತು 71 (ಶೇ 39.9) ಪರಮಾಣು ತೂಕವಿರುವ ಎರಡು ಸ್ಥಿರ ಐಸೊಟೋಪುಗಳಿವೆ. ವಿಕಿರಣಪಟು ಐಸೊಟೋಪುಗಳು ಮತ್ತು ಅವುಗಳ ಅರ್ಧಾಯುಗಳು ಹೀಗಿವೆ: 64(2.5 ಮಿ.), 65(15 ಮಿ.), 66(9.4 ಗಂ.), 67(78 ಗಂ.), 68(68 ಮಿ.) 70(21 ಮಿ.), 72(14.1 ಗಂ.), 73(5 ಗಂ.), 74(8ಮಿ.) ಸಾಂದ್ರತೆ 20ಹ ಸೆಂ. ಉಷ್ಣತೆಯಲ್ಲಿ 5.907. ಪರಮಾಣು ಗಾತ್ರ 11.76 ಗ್ರಾಹ್ಯೋಷ್ಣ 0.0977.

1875ರಲ್ಲಿ ಲೆಕಾಕ್ ಡಿ ಬಾಯ್ಸ್ ಬ್ಯಾಡ್ರಾನ್ ಎಂಬಾತ ಈ ಧಾತುವನ್ನು ಆವಿಷ್ಕರಿಸಿದ. ಫ್ರಾನ್ಸಿನ ಸತುಬ್ಲೆಂಡಿನಿಂದ ಪ್ರತ್ಯೇಕಿಸಿ ಪಡೆದ ಒಂದು ಪದಾರ್ಥವನ್ನು ಪರೀಕ್ಷಿಸುತ್ತಿದ್ದಾಗ ಈ ಧಾತುವಿನ ಪ್ರಧಾನ ರೋಹಿತರೇಖೆಗಳನ್ನು (ë 4172.2 ؘ ಮತ್ತು 4033.2 ؘ) ಅವನು ಗಮನಿಸಿದ. ಪೊಟಾಸಿಯಂ ಗ್ಯಾಲೇಟ್ ದ್ರಾವಣವನ್ನು ವಿದ್ಯುದ್ವಿಭಜಿಸಿ ಅಲ್ಪ ಮೊತ್ತದಲ್ಲಿ ಬೇರ್ಪಡಿಸಿ ಅದರ ಗುಣಗಳನ್ನು ಅಭ್ಯಸಿಸಿದ. ಇದಕ್ಕೆ ಕೇವಲ ಕೆಲವೇ ವರ್ಷಗಳ ಹಿಂದೆ ಮೆಂಡಲೀಫ್ ತನ್ನ ಆವರ್ತಕೋಷ್ಟಕದಲ್ಲಿ ಕೆಲವು ಸ್ಥಾನಗಳನ್ನು ಖಾಲಿಬಿಟ್ಟು ಅವನ್ನು ಭರ್ತಿ ಮಾಡುವ ಧಾತುಗಳನ್ನು ಭವಿಷ್ಯದಲ್ಲಿ ಕಂಡುಹಿಡಿಯಲಾಗುವುದೆಂದೂ ಅವುಗಳ ಗುಣಲಕ್ಷಣಗಳು ಹೀಗೆಯೇ ಇರುವುವೆಂದೂ ಮುನ್ನುಡಿದಿದ್ದ. 3b ಉಪಗುಂಪಿನಲ್ಲಿ ಅಲ್ಯೂಮಿನಿಯಂ ಕೆಳಗೆ ಒಂದು ಸ್ಥಾನವನ್ನು ತೆರಪುಬಿಟ್ಟು ಅದರ ಹೆಸರನ್ನು ಏಕ–ಅಲ್ಯೂಮಿನಿಯಂ ಎಂದು ಕರೆದಿದ್ದ. ಗಾಲಿಯಂ ಕಂಡುಹಿಡಿದ ಬಳಿಕ ಆ ಸ್ಥಾನವನ್ನು ಭರ್ತಿಮಾಡಲಾಗಿದೆ. ಮೆಂಡಲೀಫನ ಏಕ–ಅಲ್ಯೂಮಿನಿಯಮಿನ ಮತ್ತು ಗಾಲಿಯಮಿನ ಗುಣಲಕ್ಷಣಗಳು ಪರಸ್ಪರ ಸಂಪೂರ್ಣವಾಗಿ ಹೋಲುತ್ತವೆ.

ಗಾಲಿಯಂ ಅಪರೂಪಲೋಹವಾಗಿದ್ದರೂ ಅದು ಭೂಮಿಯ ಹೊರಪದರದಲ್ಲಿ (ಶೇ 0.0015) ದೊರೆಯುವ ಧಾತುಗಳ ಶ್ರೇಣಿಯಲ್ಲಿ 37ನೆಯದು. ಅಲ್ಯೂಮಿನಿಯಂ ಮತ್ತು ಸತುವಿನ ಖನಿಜ ಸಂಪನ್ಮೂಲಗಳಲ್ಲಿ ಇದು ಹೇರಳವಾಗಿ ಹರಡಿವೆ. ಅಲ್ಲದೆ ಕೆಲವು ಕಲ್ಲಿದ್ದಲುಗಳಲ್ಲೂ ಸೇರಿರುತ್ತದೆ. ಅತ್ಯಂತ ಹೆಚ್ಚು ಗಾಲಿಯಂ ಯುಕ್ತವಾದ ಖನಿಜವೆಂದರೆ ಜರ್ಮನೈಟು. ಇದು ಸತು–ತಾಮ್ರ–ಆರ್ಸೆನಿಕ್–ಜರ್ಮೇನಿಯಂ ಸಲ್ಫೈಡುಗಳ ಯುಗ್ಮಲವಣ. ಇದರಲ್ಲಿ ಶೇ 0.1–0.8ರ ವರೆಗೆ ಗಾಲಿಯಂ ಉಂಟು. ಆದರೆ ಈ ಖನಿಜ ಬಲು ವಿರಳ. ಆದ್ದರಿಂದ ಇದು ಗಾಲಿಯಮಿನ ಆಕರವಾಗುವುದು ಅವ್ಯಾವಹಾರಿಕ. ಅಮೆರಿಕದ ಕೆಲವು ಸತುವಿನ ಅದುರುಗಳು ಶೇ 0.02ರಷ್ಟು ಗಾಲಿಯಮನ್ನು ಪಡೆದಿದೆ. ಬಾಕ್ಸೈಟು ಮತ್ತು ಅಲ್ಯೂಮಿನಿಯಮಿನ ಇತರ ಅದುರುಗಳಲ್ಲಿ ಶೇ 0.001–0.01ರಷ್ಟು ಗಾಲಿಯಂ ಉಂಟು. ಇವುಗಳಿಂದ ಮುಖ್ಯವಸ್ತುಗಳನ್ನು ತಯಾರಿಸುವಾಗ ಗಾಲಿಯಂ ಕೆಲವು ಉಪೋತ್ಪನ್ನಗಳಲ್ಲಿ ಕೇಂದ್ರೀಕೃತವಾಗುತ್ತದೆ. ಇಂಥ ಉಪೋತ್ಪನ್ನಗಳೇ ಗಾಲಿಯಮಿನ ಅತ್ಯುತ್ತಮ ಆಕರಗಳು. ಸತುವಿನ ಹೊಗೆಗಂಡಿ ದೂಳುಗಳಿಂದ. ವಿದ್ಯುದ್ವಿಶ್ಲೇಷಿತ ಸತುವಿನ ದ್ರಾವಣಗಳ ಶೇಷವಸ್ತುಗಳಿಂದ ಮತ್ತು ಬೇಯರನ ಅಲ್ಯೂಮಿನದ ಶೇಷವಸ್ತುಗಳಿಂದ ಗಾಲಿಯಮನ್ನು ಸೋಡಿಯಂ ಗ್ಯಾಲೇಟಾಗಿ ಕ್ಲಿಷ್ಟ ವಿಧಾನಗಳಿಂದ ತಯಾರಿಸುತ್ತಾರೆ. ಸೋಡಿಯಂ ಗ್ಯಾಲೇಟಿನ ದ್ರಾವಣವನ್ನು $30^{o}$ ಸೆಂ.ಗಿಂತಲೂ ಹೆಚ್ಚಿನ ಉಷ್ಣತೆಯಲ್ಲಿ ವಿದ್ಯುದ್ವಿಭಜಿಸಿ ಲೋಹವನ್ನು ಪಡೆಯುತ್ತಾರೆ. ಗಾಲಿಯಮಿನ ವಾರ್ಷಿಕ ಉತ್ಪಾದನೆ ಸುಮಾರು 200 ಪೌಂಡುಗಳು. ಅಷ್ಟೇ ಅದರ ಬಳಕೆಯೂ ಉಂಟು. ವಿನೂತನ ಉಪಯೋಗಗಳಿಗೆ ಬೇಕಾದರೆ ಈ ಲೋಹವನ್ನು ವರ್ಷಕ್ಕೆ 20 ಟನ್ನಿನಷ್ಟು ಕೂಡ ಉತ್ಪಾದಿಸಲು ಸಾಧ್ಯ. ಇಂಗ್ಲೆಂಡಿನ ಸತುವಿನ ಹೊಗೆಗಂಡಿ ದೂಳುಗಳಿಂದ ಗಾಲಿಯಮನ್ನು ಕೈಗಾರಿಕಾ ಮೊತ್ತದಲ್ಲಿ ತಯಾರಿಸುತ್ತಾರೆ. ದೂಳುಗಳನ್ನು ಸೋಡಿಯಂ ಕಾರ್ಬೊನೇಟ್, ಸುಣ್ಣ, ಇದ್ದಲು ತಾಮ್ರದ ಆಕ್ಸೈಡುಗಳೊಂದಿಗೆ ದ್ರವಿಸುತ್ತಾರೆ. ಹೆಚ್ಚು ಪಾಲು ಜರ್ಮೇನಿಯಂ ಮತ್ತು ಗಾಲಿಯಂ ಹೊಂದಿರುವ ಲೋಹಮಿಶ್ರಣ ಒಂದು ಗೋಲಿಯ ರೂಪದಲ್ಲಿ

ಉತ್ಪತ್ತಿಯಾಗುವುದು. ಅದು ಕಿಟ್ಟದ ಕೆಳಭಾಗದಲ್ಲಿ ಸಂಗ್ರಹಿಸಿರುವುದು. ಅದನ್ನು ಫೆರಿಕ್ ಕ್ಲೋರೈಡಿನ ದ್ರಾವಣದಲ್ಲಿ ವಿಲಂಬಿಸಿ, ಕ್ಲೋರಿನನ್ನು ಹಾಯಿಸಿ, ಕ್ಲೋರೈಡ್‌ನ್ನು ಟ್ರೈಕ್ಲೋರೈಡನ್ನು ಪಡೆಯುತ್ತಾರೆ ಮತ್ತು ಆಸವಿಸಿ ಗಾಲಿಯಂ ಕ್ಲೋರೈಡನ್ನು ಪ್ರತ್ಯೇಕಿಸುತ್ತಾರೆ. ತಾಮ್ರಲವಣಗಳನ್ನು ಮತ್ತು ಒತ್ತರಿಸಬಹುದಾದ ಇತರ ಲೋಹಗಳನ್ನು ಒತ್ತರಿಸುವುದರಿಂದಲೂ ಕಬ್ಬಿಣವನ್ನು ಫೆರಸ್ ಸ್ಥಿತಿಗೆ ಅಪಕರ್ಷಿಸುವುದರಿಂದಲೂ ಶೇಷದ್ರಾವಣವನ್ನು ಇನ್ನಷ್ಟು ಶುದ್ಧೀಕರಿಸಬಹುದು. ಈಥರನ್ನು ಸೇರಿಸಿ ಗಾಲಿಯಂ ಕ್ಲೋರೈಡನ್ನು ಸಂಸ್ಕರಿಸಿ ಬಂದ ಸಾಂದ್ರವಾದ ದ್ರವ್ಯವನ್ನು ಆಸವಿಸಿ ಈಥರನ್ನು ಹೊರತೆಗೆಯುತ್ತಾರೆ. ಹೀಗೆ ಪಡೆದ ಶುದ್ಧ ಗಾಲಿಯಂ ಟ್ರೈಕ್ಲೋರೈಡಿನಿಂದ ಲೋಹವನ್ನು ತಯಾರಿಸುತ್ತಾರೆ.

ರಾಸಾಯನಿಕ ಗುಣಲಕ್ಷಣಗಳಲ್ಲಿ ಗಾಲಿಯಂ ಅಲ್ಯೂಮಿನಿಯಮನ್ನು ವಿಶೇಷವಾಗಿ ಹೋಲುವುದು ತೇವವಾದ ಗಾಳಿಯಲ್ಲಿಟ್ಟಾಗ ಲೋಹದ ಮೈಮೇಲೆ ಅದರ ಆಕ್ಸೈಡಿನ ರಕ್ಷಾಕವಚ ಏರ್ಪಡುತ್ತದೆ. ಕೆಂಗಾವಿಯಲ್ಲಿಯೂ ಇದು ಆಕ್ಸಿಜನ್ನಿನೊಡನೆ ವರ್ತಿಸುವುದಿಲ್ಲ. ಇನ್ನೂ ಹೆಚ್ಚಿನ ಉಷ್ಣತೆಯಲ್ಲಿ ಆಕ್ಸೈಡಾಗುವುದು. ನೀರನ್ನು $100^{\circ}$ ಸೆಂ.ನಲ್ಲೂ ಇದು ವಿಭಜಿಸುವುದಿಲ್ಲ. ಖನಿಜಾಮ್ಲಗಳು ಸಾವಕಾಶವಾಗಿ ಲೋಹದ ಮೇಲೆ ವರ್ತಿಸುವುವು. ಅಲ್ಯೂಮಿನಿಯಮಿನಂತೆ ನೈಟ್ರಿಕ್ ಆಮ್ಲದಲ್ಲಿ ಇದೂ ನಿಷ್ಪಟು ವಾಗುವುದು. ಬಿಸಿ ನೈಟ್ರಿಕ್ ಆಮ್ಲದೊಡನೆ ಗಾಲಿಯಂ ನೈಟ್ರೇಟಾಗುವುದು. ಇದು ಉಭಯವರ್ತಿ (ಆಂಫೊಟೆರಿಕ್). ಕಾಸ್ಟಿಕ್ ಕ್ಷಾರಗಳ ಸಾರಯುತ ದ್ರಾವಣಗಳೊಡನೆ ಕುದಿಸಿದಾಗ ದ್ರಾವ್ಯವಾದ ಆಯಾ ಗ್ಯಾಲೇಟುಗಳು ಮತ್ತು ಹೈಡ್ರೋಜನ್ ಉಂಟಾಗುತ್ತವೆ. ಅಲ್ಯೂಮಿನಿಯಮಿನಂತೆ ಗಾಲಿಯಂ ಹ್ಯಾಲೊಜನ್ನುಗಳೊಡನೆ ವರ್ತಿಸಿ ಟ್ರೈಹ್ಯಾಲೈಡುಗಳನ್ನು ಕೊಡುವುದು. ಅಮೋನಿಯದೊಂದಿಗೆ 900ಹ–100ಹ ಸೆಂ. ಉಷ್ಣತೆಯಲ್ಲಿ ವರ್ತಿಸಿ ಗಾಲಿಯಂ ನೈಟ್ರೈಡಾಗುವುದು. ತನ್ನ ಸಮಸ್ತ ಸಂಯುಕ್ತಗಳಲ್ಲೂ ಗಾಲಿಯಂ ಮುಖ್ಯವಾಗಿ ತ್ರಿವೇಲೆನ್ಸೀಯ. ಆದರೆ ದ್ವಿವೇಲೆನ್ಸೀಯ ಸಂಯುಕ್ತಗಳೂ ಇವೆ. ಉದಾಹರಣೆಗೆ ಗ್ಯಾಲಸ್ ಹ್ಯಾಲೈಡುಗಳು, ಸಲ್ಫೈಡು ಮತ್ತು ಆಕ್ಸೈಡು. ಗಾಲಿಯಂ ಸಲ್ಫೈಡ್ $Ga_2S$ ಮತ್ತು ಸೆಲಿನೈಡ್ $Ga_2Se$ ಇವನ್ನು ಬಿಟ್ಟರೆ ಅದರ ಏಕವೇಲೆನ್ಸೀಯ ಸಂಯುಕ್ತಗಳು ಬಹುಶಃ ಇರಲಾರವು.

ಗಾಲಿಯಮಿನ ಅಸಾಮಾನ್ಯ ಗುಣಗಳು ಅದರ ಉಪಯೋಗಗಳ ಬಗ್ಗೆ ಕುತೂಹಲ ಕೆರಳಿಸಿವೆ. ಆದರೂ ಅದು ಇನ್ನೂ ಹೆಚ್ಚಿನ ಬಳಕೆಗೆ ಬರಬೇಕಾಗಿದೆ. ಗಾಲಿಯಂ ಕಡಿಮೆ ಆವಿಯೊತ್ತಡ ಮತ್ತು ಅತಿ ಹೆಚ್ಚು ಕುದಿಯುವ ಉಷ್ಣತೆ ಪಡೆದಿರುವುದರಿಂದ ಕ್ವಾರ್ಟ್ಜ್ ಕೊಳವೆಗಳಲ್ಲಿ ಅದನ್ನು ತುಂಬಿ ಅಧಿಕ ಉಷ್ಣತೆಗಳಲ್ಲಿ ಉಪಯೋಗಿಸುವ ಉಷ್ಣತಾಮಾಪಕಗಳನ್ನು ತಯಾರಿಸುತ್ತಾರೆ. ಗಾಲಿಯಂ ಸಲ್ಫೈಡಿನಂಥ ಅರೆವಿದ್ಯುದ್ವಾಹಿಗಳ ತಯಾರಿಕೆಯಲ್ಲಿ ಮತ್ತು ಯುರೇನಿಯಮಿನ ರೋಹಿತಲೇಖಿ ವಿಶ್ಲೇಷಣೆಯಲ್ಲಿ ಇದರ ಸದ್ಯದ ಉಪಯೋಗ ಉಂಟು. ದ್ಯುತಿ ಕನ್ನಡಿಗಳ ಹಿಂಬದಿಗೆ ಹಚ್ಚಲು, ಹೆಚ್ಚಿನ ಉಷ್ಣತೆಗಳಲ್ಲಿ ದ್ರವಮುದ್ರಿಕೆಯ ಲೋಹವಾಗಿ ಮತ್ತು ಅತಿನೇರಳೆ ದೀಪಗಳಲ್ಲಿ ಪಾದರಸದ ಬದಲಾಗಿ ಗಾಲಿಯಮನ್ನು ಉಪಯೋಗಿಸುವ ಸಾಧ್ಯ ಉಂಟು. ಇದರಿಂದ $GaU_3$ ರಂಥ ಅಧಿವಿದ್ಯುದ್ವಾಹಿಗಳನ್ನು ತಯಾರಿಸಬಹುದು. ಗಾಲಿಯಂ ಕಡಿಮೆ ಉಷ್ಣತೆಯ ಬೆಸುಗೆ ಪದಾರ್ಥ ಮತ್ತು ಹೆಚ್ಚಿನ ಉಷ್ಣತೆಯ ಕೀಲೆಣ್ಣೆ. ಫ್ರೆಡಲ್–ಕ್ರಾಫ್ಟ್ಸ್ ಕ್ರಿಯೆಯಲ್ಲಿ ಗಾಲಿಯಂ ಕ್ಲೋರೈಡ್ ಅಲ್ಯೂಮಿನಿಯಂ ಕ್ಲೋರೈಡಿಗಿಂತ ಉಪಯುಕ್ತ ವೇಗವರ್ಧಕ ಎಲುಬಿನ ಕ್ಯಾನ್ಸರಿನ ನಿರ್ಣಯ ಮತ್ತು ಚಿಕಿತ್ಸೆಗಳಲ್ಲಿ ಐಸೊಟೋಪನ್ನು ಉಪಯೋಗಿಸುವರು. ನ್ಯೂಕ್ಲಿಯರ್ ಕ್ರಿಯಾಕಾರಿಗಳಲ್ಲಿ ಉಷ್ಣವಿನಿಮಯ ಮಧ್ಯವರ್ತಿ ಯಾಗಿ ಗಾಲಿಯಮನ್ನು ಉಪಯೋಗಿಸಬಹುದು. ಆದರೆ ಗಾಲಿಯಂ ತುಕ್ಕು ಹಿಡಿಯುತ್ತದೆ. ಹೆಚ್ಚಿನ ಉಷ್ಣತೆಗಳಲ್ಲಿ ಟಂಗಸ್ಟನ್ ಮತ್ತು ಟ್ಯಾಂಟಲಂ ವಿನಾ ಎಲ್ಲ ಲೋಹಗಳ ಮೇಲೂ ಅದರ ಪ್ರಭಾವವಿದೆ. ಅದಕ್ಕಾಗಿಯೇ ಅದರ ಮಿಶ್ರಲೋಹಗಳನ್ನು ಉಪಯೋಗಿಸುವ ಬಗ್ಗೆ ಸಾಕಷ್ಟು ಅಧ್ಯಯನ ನಡೆದಿದೆ. (ಪಿ.ಜಿ.ಆರ್.)

**ಗಾಲ್ಜಿ, ಕ್ಯಾಮಿಲೊ** : 1843–1926. ಇಟಲಿಯ ಸುಪ್ರಸಿದ್ಧ ಅಂಗಾಂಶಶಾಸ್ತ್ರಜ್ಞ, ಕೋಶ ವಿಜ್ಞಾನಿ ಹಾಗೂ ವೈದ್ಯ. 1843ನೆಯ ಇಸವಿ ಜುಲೈ 9 ರಂದು ಲಾಂಬರ್ಡಿ ಪ್ರಾಂತ್ಯದ ಕಾರ್ಟಿನೋ ನಗರದಲ್ಲಿ ಜನಿಸಿದ. ತಂದೆ ವೈದ್ಯ. ಈತನೂ ತಂದೆಯ ವೃತ್ತಿಯನ್ನೇ ಕೈಗೊಳ್ಳುವ ಸಲುವಾಗಿ ಪಾಡುವ ವಿಶ್ವವಿದ್ಯಾಲಯದಲ್ಲಿ ವೈದ್ಯವಿಜ್ಞಾನವನ್ನು ಓದಿ 1865ರಲ್ಲಿ ಪದವಿ ಪಡೆದ. ಅನಂತರ ಅಬ್ಬಿಯ ಟೆಗ್ರಾಸೊ ಎಂಬ ಹಳ್ಳಿಯಲ್ಲಿ ವೈದ್ಯವೃತ್ತಿಯನ್ನು ಆರಂಭಿಸಿದ. ಉತ್ತಮ ಸಂಶೋಧನ ಸೌಲಭ್ಯವಿರದಿದ್ದರೂ ಅಲ್ಲಿಯೇ ಈತ ಸಂಶೋಧನೆಗಳನ್ನು ನಡೆಸಿ ನರಜೀವಕೋಶಗಳನ್ನೂ ನರಮಂಡಲಗಳನ್ನೂ ವಿಶಿಷ್ಟವಾಗಿ ವರ್ಣೀಕರಿಸುವ ಸಿಲ್ವರ್ ನೈಟ್ರೇಟ್ ವಿಧಾನವನ್ನು ಕಂಡುಹಿಡಿದ. ಇದರಿಂದ ನರಮಂಡಲದ ಸೂಕ್ಷ್ಮ ರಚನೆಯ ಅಭ್ಯಾಸ ಸುಲಭವಾಯಿತು. ಒಂದು ರೀತಿಯಲ್ಲಿ ನರವಿಜ್ಞಾನದ ಆಧುನಿಕ ಅಭ್ಯಾಸ ಈತನಿಂದ ಆರಂಭವಾಯಿತು ಎಂದರೆ ಉತ್ಪ್ರೇಕ್ಷೆಯಿಲ್ಲ. ಇದೇ ರೀತಿ ತನ್ನ ಹೊಸ ವಿಧಾನಗಳ ಬಳಕೆಯಿಂದ ಪ್ರಾಣಿಗಳ ಜೀವಕೋಶದಲ್ಲಿ ಸೆಂಟ್ರೋಸೋಮನ್ನು ಸುತ್ತುವರಿದಿರುವ ಮತ್ತು ರಾಸಾಯನಿಕವಾಗಿ ಲೋಹೀಯ ಲವಣಗಳಿಗೆ ಒಲವನ್ನು ತೋರುವ ಕೆಲವು ವಿಶೇಷ ರಚನೆಗಳನ್ನು ಮೊಟ್ಟ ಮೊದಲ ಬಾರಿಗೆ ಈತ ಕಂಡುಹಿಡಿದ. ಈ ರಚನೆಗಳಿಗೆ ಇವನ ಗೌರವಾರ್ಥವಾಗಿ ಗಾಲ್ಜಿ ರಚನೆಗಳೆಂದು ಹೆಸರು ಕೊಡಲಾಗಿದೆ. ಜೀವಕೋಶಗಳ ಅಧ್ಯಯನಕ್ಕೆ ಲೋಹ ಲವಣಗಳನ್ನು ಬಳಸುವ ವಿಧಾನವನ್ನು ಮೊದಲು (1873) ಬಳಕೆಗೆ ತಂದವನೂ ಇವನೇ. ಈ ಲವಣಗಳ ಬಳಕೆಯಿಂದ ಜೀವಕೋಶಗಳು ಸೂಕ್ಷ್ಮದರ್ಶಕದಲ್ಲಿ ಚೆನ್ನಾಗಿ ಕಾಣುತ್ತವೆ. ಕೇಂದ್ರ ನರಮಂಡಲ, ಸಂವೇದನಾಂಗ, ಸ್ನಾಯು ಮತ್ತು ಗ್ರಂಥಿಗಳ ಅಭ್ಯಾಸಕ್ಕೂ ಈ ವಿಧಾನವನ್ನು ಅನ್ವಯಿಸಲಾಗಿದೆ. ಗಾಲ್ಜಿ 1879ರಲ್ಲಿ ಸಿಯೆನ ವಿಶ್ವವಿದ್ಯಾಲಯದ ಅಂಗರಚನಾವಿಜ್ಞಾನದ ಪ್ರಾಧ್ಯಾಪಕನಾಗಿ ನೇಮಕಗೊಂಡ. ಮರುವರ್ಷ ಪಾವೀಯ ವಿಶ್ವವಿದ್ಯಾಲಯದಲ್ಲಿ ಅಂಗಾಂಶವಿಜ್ಞಾನ ಮತ್ತು ರೋಗನಿದಾನ ವಿಜ್ಞಾನದ ಪ್ರಾಧ್ಯಾಪಕನಾದ. ಅನಂತರ 1880ರಲ್ಲಿ ಮಲೇರಿಯ ರೋಗದ ಕಡೆಗೆ ಗಮನ ಹರಿಸಿ ರೋಗಾಣುವಿನ ಜೀವನಚರಿತ್ರೆಯನ್ನು ಅಭ್ಯಸಿಸಿದ. ರೋಗಾಣು ಮನುಷ್ಯದೇಹದಲ್ಲಿ ನಡೆಸುವ ಜೀವನಚಕ್ರವನ್ನು ಕಂಡುಹಿಡಿದ ಕೀರ್ತಿ ಈತನದೇ. ಇದಕ್ಕಾಗಿ ಈ ಚಕ್ರಕ್ಕೆ ಗಾಲ್ಜಿಚಕ್ರ ಎಂದೇ ಹೆಸರು ಕೊಡಲಾಗಿದೆ.

ನರಮಂಡಲದ ಬಗ್ಗೆ ನಡೆಸಿದ ಸಂಶೋಧನೆಗಳಿಗಾಗಿ ಗಾಲ್ಜಿಗೆ 1906ರಲ್ಲಿ ನೊಬೆಲ್ ಪ್ರಶಸ್ತಿ ದೊರಕಿತು. 1926ನೆಯ ಇಸವಿ ಜನವರಿ 21ನೆಯ ತಾರೀಖು ಗಾಲ್ಜಿ ಪಾವೀಯದಲ್ಲಿ ನಿಧನನಾದ. (ಎಚ್.ಬಿ.ಡಿ.)

**ಗಾಲ್ಟನ್, ಸರ್ ಫ್ರಾನ್ಸಿಸ್** : 1822–1911. ಪ್ರಸಿದ್ಧ ವಿಜ್ಞಾನಿ. ಹುಟ್ಟಿದ್ದು ಬರ್ಮಿಂಗ್‌ಹ್ಯಾಮಿನಲ್ಲಿ. ಈತ ಚಾರ್ಲ್ಸ್ ಡಾರ್ವಿನ್ನನ ಸಮೀಪಬಂಧು. ಕಿಂಗ್ ಎಡ್ವರ್ಡ್ಸ್ ಶಾಲೆಯಲ್ಲಿ ವಿದ್ಯಾಭ್ಯಾಸ ಮುಗಿಸಿ ಲಂಡನ್ನಿನ ಕಿಂಗ್ಸ್ ಕಾಲೇಜಿನಲ್ಲಿ ವೈದ್ಯವಿಜ್ಞಾನವನ್ನು ಓದಿದ. ಅನಂತರ ಕೇಂಬ್ರಿಜಿನಲ್ಲಿ ಗಣಿತ ಶಾಸ್ತ್ರವನ್ನು ಅಭ್ಯಸಿಸಿದ. ಆವರೆಗೂ ಯಾರ ಕಣ್ಣಿಗೂ ಬೀಳದಿದ್ದ ಆಫ್ರಿಕದ ಡಮರ ಲ್ಯಾಂಡ್ ಮತ್ತು ಇತರ ಭಾಗಗಳನ್ನೂ ನೋಡಿ ಬಂದು ಟ್ರಾಪಿಕಲ್ ಸೌತ್ ಆಫ್ರಿಕ (1853) ಮತ್ತು ದಿ ಆರ್ಟ್ ಆಫ್ ಟ್ರ್ಯಾವಲ್ (1855) ಎಂಬ ಪುಸ್ತಕಗಳನ್ನು ಬರೆದ. 1856 ರಲ್ಲಿ ರಾಯಲ್ ಸೊಸೈಟಿಯ ಫೆಲೋ



ಆಗಿ ಚುನಾಯಿತನಾದ. 1863ರಿಂದ 1867ರವರೆಗೆ ಬ್ರಿಟಿಷ್ ಅಸೋಸಿಯೇಷನಿನ ವಿಜ್ಞಾನಾಭಿವೃದ್ಧಿ ಶಾಖೆಯ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದ. ಪವನಶಾಸ್ತ್ರದ ಬಗ್ಗೆ ಗಮನಾರ್ಹವಾದ ಕೆಲಸ ಮಾಡಿದ. ಈತ ಅನುವಂಶೀಯತೆಯ ಬಗ್ಗೆ ವಿಶೇಷ ಅಧ್ಯಯನ ನಡೆಸಿ ಹೆರೆಡಿಟರಿ ಕಾಸಸ್ (1869) ಹ್ಯೂಮನ್ ಫ್ಯಾಕಲ್ಟಿ (1883), ನ್ಯಾಚುರಲ್ ಇನ್‌ಹೆರಿಟೆನ್ಸ್ (1869), ನೋಟ್‌ವರ್ದಿ ಫ್ಯಾಮಿಲೀಸ್ (1906) ಎಂಬ ಗ್ರಂಥಗಳನ್ನು ಬರೆದ. ಶಾಶ್ವತ ನಿಧಿ ಕೊಟ್ಟು ಲಂಡನ್ ವಿಶ್ವ ವಿದ್ಯಾಲಯದಲ್ಲಿ ಉತ್ತಮ ಸಂತಾನವಿಜ್ಞಾನ ವಿಭಾಗವನ್ನು ತೆರೆಯಲು ಕಾರಣಕರ್ತನಾದ. ಕೊಲೆ ಮುಂತಾದ ಅಪರಾಧಗಳ ತನಿಖೆಯಲ್ಲಿ ಬೆರಳು ಗುರುತು ಗಳನ್ನು ತಿಳಿದು ಪತ್ತೆ ಹಚ್ಚುವ ಸಂಶೋಧನಾ ವಿಧಾನವನ್ನು ಜಾರಿಗೆ ತಂದವರಲ್ಲಿ ಈತನೇ ಮೊದಲಿಗ. 1909 ರಲ್ಲಿ ಈತನಿಗೆ ನೈಟ್ ಹುಡ್ ದೊರಕಿತು.

ಸಂಖ್ಯಾಕಲನ ಪದ್ಧತಿ ಯನ್ನು ವಿಶೇಷವಾಗಿ ಈತ ಬಳಕೆಗೆ ತಂದ. ಶ್ರೀಮಂತ ಕುಟುಂಬದವನಾದುದರಿಂದ ಯಾವೊಂದು ಹುದ್ದೆಗೂ ಅಂಟದೆ ಕೊನೆಯವರೆಗೂ ಈತ ಸ್ವತಂತ್ರ್ಯವಾದ ಸಂಶೋಧನೆ ಮತ್ತು ಅಧ್ಯಯನಗಳನ್ನು ನಡೆಸಿದ. ತುಂಬು ಪ್ರತಿಭಾವಂತನಾದ ಈತನಲ್ಲಿ ಅಮಿತವಾದ ಆಸಕ್ತಿ. ಅದ್ಭುತವಾದ ಕಲ್ಪನೆಯಿದ್ದುದರಿಂದ ಹೊಸ ಹೊಸ ಸಂಶೋಧನೆಗಳಿಗೆ ಬುನಾದಿ ಹಾಕಿದ. ಮಾನವ ಕಪಾಲಮಾಪನ, ಉತ್ತಮ ಸಂತಾನವಿಜ್ಞಾನ, ಸಂಖ್ಯಾಕಲನ ವಿಜ್ಞಾನದಲ್ಲಿ ಕ್ವೆಟ್‌ಲೆಟ್ ಪದ್ಧತಿ, ಬುದ್ಧಿಮಾಪನ ಪರೀಕ್ಷಾ, ಯಂತ್ರರಚನೆ–ಈ ಕ್ಷೇತ್ರಗಳಲ್ಲಿ ಈತ ಆದ್ಯನೆನ್ನಲಾಗಿದೆ. (ಎಸ್.ಕೆ.ಆರ್.)

**ಗಾಲ್ಡೋನಿ, ಕಾರ್ಲೋ :** 1707–93. ಇಟಲಿಯ ಸಾಂಪ್ರದಾಯಿಕ ನಾಟಕವನ್ನು ಸುಧಾರಿಸಿದ ನಾಟಕಕಾರ. ಇಟಾಲಿಯನ್ ಹರ್ಷನಾಟಕದ ಜನಕನೆಂದು ಪ್ರಸಿದ್ಧನಾಗಿದ್ದಾನೆ. ಈತ ಹುಟ್ಟಿದ್ದು 1707ರ ಫೆಬ್ರವರಿ 25ರಂದು ವೆನಿಸ್ಸಿನಲ್ಲಿ. ಸ್ವಲ್ಪಕಾಲ ವಕೀಲಿ ವೃತ್ತಿಯಲ್ಲಿದ್ದು ಅನಂತರ ನಾಟಕರಂಗಕ್ಕೆ ಇಳಿದ.

ನಾಟಕಗಳನ್ನು ಬರೆಯುವ ಆಸೆ ಗಾಲ್ಡೋನಿಗೆ ಬಾಲ್ಯದಿಂದಲೂ ಇತ್ತು. ಎಂಟನೆಯ ವಯಸ್ಸಿನಲ್ಲೆ ಈತ ತನ್ನ ಮೊದಲನೆಯ ನಾಟಕ ಬರೆದನೆನ್ನಲಾಗಿದೆ. 1734ರಲ್ಲಿ ಈತ ಬರೆದ ಬೆಲಿಸಾರಿಯೊ ಎಂಬ ದುರಂತನಾಟಕವನ್ನು ಜನತೆ ಮೆಚ್ಚಿದರೂ ದುರಂತನಾಟಕ ತನ್ನ ಕ್ಷೇತ್ರವಲ್ಲವೆಂದು ಈತ ಬಹುಬೇಗ ಅರಿತುಕೊಂಡ. ಅನಂತರ ಚತುರೋಕ್ತಿಯ ಹರ್ಷನಾಟಕಗಳನ್ನು ಬರೆಯತೊಡಗಿದ; ಆಡು ಮಾತಿನಲ್ಲಿ ಇಟಲಿಯ ಸಾಮಾನ್ಯ ಜನಜೀವನವನ್ನು ಚಿತ್ರಿಸುವ ನಾಟಕಗಳನ್ನು ಬರೆದು ಅವನ್ನು ನೆಲೆಗೊಳಿಸಲು ಶ್ರಮಿಸಿದ.

ನಾಟಕಕಾರನೂ ವಿಮರ್ಶಕನೂ ಆದ ಗಾಟ್‌ಸಿಯಂತೆ (ನೋಡಿ– ಗಾಟ್‌ಸಿ,– ಕಾರ್ಲೋ) ಗಾಲ್ಡೋನಿ ತನ್ನ ನಾಟಕವೃತ್ತಿಯನ್ನು ಕಮೆದಿಯ ದೆಲ್ ಆರ್ತ್‌ನ ನಟರಿಗಾಗಿ ನಾಟಕಗಳನ್ನು ರಚಿಸುವುದರ ಮೂಲಕ ಪ್ರಾರಂಭಿಸಿದ. ಆದರೆ ಗಾಟ್‌ಸಿ ಬಳಸುತ್ತಿದ್ದ ನಕಲಿ ಮತ್ತು ಯಕ್ಷಿಣಿ ಕಥೆಯ ಚಮತ್ಕಾರಗಳನ್ನು ಈತ ಅಷ್ಟಾಗಿ ಬಳಸಲಿಲ್ಲ. ಗಾಲ್ಡೋನಿಯ ಒಲವು ಯಥಾರ್ಥ ನಿರೂಪಣ ಪದ್ಧತಿಯ ರಂಗಭೂಮಿಯ ಕಡೆಗಿತ್ತು. ಫ್ರೆಂಚ್ ನಾಟಕಕಾರ ಮಾಲ್ಯೆರ್‌ನನ್ನು ಅನುಸರಿಸಿ ನೈಜರೀತಿಯಲ್ಲಿ ಸಾಮಾಜಿಕ ಜೀವನದ ಸತ್ಯಗಳನ್ನು ಚಿತ್ರಿಸುವುದು ಇವನ ಆಸೆ. ಈ ದಿಕ್ಕಿನಲ್ಲಿ ಇವನ ಪ್ರಥಮ ಪ್ರಯತ್ನ, ಮೋಮೆಲೊ ದಿ ಕೋರ್ಟಿಯರ್ (1738)– ಇದರಲ್ಲಿ ವೆನಿಷಿಯನ್ ಪ್ರಾಂತ್ಯ ಭಾಷೆಯನ್ನು ಬಳಸಿದ್ದಾನೆ. ಇದೇ ಶೈಲಿಯಲ್ಲಿ ಬರೆದ ಇನ್ನೊಂದು ನಾಟಕ, ದಿ ವರ್ದಿ ವುಮನ್ (1743). ಈ ನಾಟಕಗಳಲ್ಲಿ ರಂಗದ ಮೇಲೆ ಮೊಗವಾಡಗಳನ್ನು ಧರಿಸುವ ಸಾಂಪ್ರದಾಯಿಕ ಪದ್ಧತಿಯಿಂದ ನಟರನ್ನು ಗಾಲ್ಡೋನಿ ಮುಕ್ತಗೊಳಿಸಿದ. ಒಳ್ಳೆಯ ಹರ್ಷನಾಟಕ ಜನತೆಯ ಗುಣ ದೋಷಗಳನ್ನು ಸರಿಪಡಿಸುತ್ತದೆ ಎನ್ನುವುದು ಈತನ ನಿಲುವು. ಗಾಲ್ಡೋನಿ ಶಿಷ್ಟ ಇಟಾಲಿಯನ್ ಭಾಷೆಯಲ್ಲಿ ನಾಟಕಗಳನ್ನು ರಚಿಸಿದ್ದಾನಾದರೂ ಅವು ಅಷ್ಟಾಗಿ ಪ್ರಸಿದ್ಧಿ ಪಡೆಯಲಿಲ್ಲ. ವೆನಿಷಿಯನ್ ಪ್ರಾಂತೀಯ ಭಾಷೆಯಲ್ಲಿ ಈತ ಬರೆದ ನಾಟಕಗಳಲ್ಲೇ ಸಾಮಾಜಿಕ ಜೀವನದ ಉತ್ತಮ ಪಾತ್ರಗಳು ರೂಪುಗೊಂಡಿವೆ ಎಂದು ವಿಮರ್ಶಕರ ಅಭಿಪ್ರಾಯ.

ಗಾಲ್ಡೋನಿ 260ಕ್ಕೂ ಹೆಚ್ಚು ನಾಟಕಗಳನ್ನು ಬರೆದಿದ್ದಾನೆ. 1750–51ರ ಒಂದು ವರ್ಷದ ಅವಧಿಯಲ್ಲೇ 16 ನಾಟಕಗಳನ್ನು ಈತ ಬರೆದನೆನ್ನಲಾಗಿದೆ. ಗಾಟ್‌ಸಿಯ ಪ್ರತಿಸ್ಪರ್ಧೆ ಮತ್ತು ವಿರೋಧದಿಂದಾಗಿ ಗಾಲ್ಡೋನಿ 1761ರಲ್ಲಿ ವೆನಿಸ್ಸನ್ನು ಬಿಟ್ಟು ಪ್ಯಾರಿಸ್ಸಿಗೆ ಹೋದ. ಅಲ್ಲಿ ಇಟಾಲಿಯನ್ ರಂಗಭೂಮಿಯ ವ್ಯವಸ್ಥಾಪಕನ ಹುದ್ದೆಯನ್ನು ಒಪ್ಪಿಕೊಂಡ ಇವನು 1763ರಲ್ಲಿ ಬರೆದ ದಿ ಫಾನ್ ಬಹಳ ಪ್ರಸಿದ್ಧವಾಯಿತು. ತರುವಾಯ ಫ್ರಾನ್ಸಿನ ರಾಜಕುಮಾರಿಗೆ ಇಟಾಲಿಯನ್ ಭಾಷೆಯನ್ನು ಕಲಿಸಿದ. 16ನೆಯ ಲೂಯಿಯ ಮದುವೆಗೆಂದು ಫ್ರೆಂಚ್ ಭಾಷೆಯಲ್ಲಿ ದಿ ಕೈಂಡ್ಲಿ ಬೂಅರ್ (1771) ಎಂಬ ನಾಟಕವನ್ನು ಬರೆದ. 1783–87ರ ನಡುವೆ ತನ್ನ ಆತ್ಮಕಥೆಯನ್ನು ಫ್ರೆಂಚ್ ಭಾಷೆಯಲ್ಲಿ ಸಿದ್ಧಪಡಿಸಿದ. ತನ್ನ ಕೊನೆಗಾಲದಲ್ಲಿ ವರ್ಸೇಲ್ಸ್‌ಗೆ ತೆರಳಿದ. 16ನೆಯ ಲೂಯಿಯಿಂದಾಗಿ ಈತನಿಗೆ ಬರುತ್ತಿದ್ದ ವಿಶ್ರಾಂತಿವೇತನ ಫ್ರಾನ್ಸಿನ ಮಹಾಕ್ರಾಂತಿಯ ಅನಂತರ ನಿಂತುಹೋಯಿತು. ಗಾಲ್ಡೋನಿ ತುಂಬ ಬಡತನದಲ್ಲಿ ನರಳಿ 1793ರ ಫೆಬ್ರವರಿ 6ರಂದು ಅಸುನೀಗಿದ.

ಇಟಾಲಿಯನ್ ನಾಟಕದ ಚರಿತ್ರೆಯಲ್ಲಿ ಗಾಲ್ಡೋನಿಗೆ ವಿಶಿಷ್ಟಸ್ಥಾನ ಸಂದಿದೆ. ಈತ ಬಳಕೆಗೆ ತಂದ ಅನೇಕ ಸುಧಾರಣೆಗಳಿಂದ ರಂಗಭೂಮಿಯ ವಿನ್ಯಾಸವೇ ಬದಲಾಯಿತು. ಈತನನ್ನು ಇಟಾಲಿಯನ್ ಹರ್ಷನಾಟಕಗಳ ಜನಕನೆಂದಿರುವುದರ ಜೊತೆಗೆ ಅನೇಕ ವಿಮರ್ಶಕರು ಇಟಲಿಯ ಮಾಲ್ಯೆರ್ ಎಂದು ಹೊಗಳಿದ್ದಾರೆ. (ಎಸ್.ವಿ.ಎಸ್‌ಯು.)

**ಗಾಲ್ಫ್ :** ಚೆಂಡನ್ನು ದಾಂಡಿನಿಂದ ಹೊಡೆದು ಬದ್ದು ತುಂಬಿಸುವ ಒಂದು ಹೊರಾಂಗಣ ಕ್ರೀಡೆ. ಈಗ ಬಹುಜನಪ್ರಿಯವೂ ಅಂತಾರಾಷ್ಟ್ರೀಯವೂ ಎನಿಸಿದೆ. ಅದರ ಮೈದಾನ ಇಷ್ಟೇ ವಿಸ್ತಾರದ್ದಾಗಿರಬೇಕೆಂಬ ನಿಯಮವಿಲ್ಲ. ಆದರೆ ಅದು ಸಾಕಷ್ಟು ದೊಡ್ಡದಾಗಿರಬೇಕು. ಮೈದಾನದಲ್ಲಿನ ಗುಳಿಗಳ ಸಂಖ್ಯೆ 9ರಿಂದ 18ರ ವರೆಗೂ ಇರಬಹುದು. 18 ಇರುವದೇ ಈಗಿನ ವಾಡಿಕೆ. ಉದಾಹರಣೆಗೆ ಅಮೆರಿಕದ ಶಿಷ್ಟ ಮೈದಾನದ ಸುತ್ತು 5400 ಮೀ.ಯಿದ್ದು ನಡುವೆ 18 ಗುಳಿಗಳಿವೆ. ಈ ಗುಳಿಗಳ ನಡುವೆ ಇಂತಿಷ್ಟೇ ಅಂತರವಿರಬೇಕೆಂಬ ನಿಯಮವೇನಿಲ್ಲ. ಮೈದಾನ ಮಟ್ಟಸವಾಗಿರಬೇಕಾದುದೂ ಇಲ್ಲ. ಉಬ್ಬು ತಗ್ಗು ಅಂಕುಡೊಂಕುಗಳಿರುವ ನೈಸರ್ಗಿಕ ಮೈದಾನವೇ ಗಾಲ್ಫಿಗೆ ಹೇಳಿಮಾಡಿಸಿದ ಅಖಾಡ. ಚೆಂಡು ಗಡಸಾಗಿರುತ್ತದೆ. ಅದನ್ನು ದಾಂಡಿನಿಂದ ಹೊಡೆಯುತ್ತ ಒಂದೊದಾಗಿ ಬದ್ದನ್ನು ತುಂಬಿಸುತ್ತ ಹೋಗಬೇಕು. ಯಾರು ಕಡಿಮೆ ಹೊಡೆತದಲ್ಲಿ ಬದ್ದುಗಳೆಲ್ಲವನ್ನೂ ತುಂಬಿಸುತ್ತಾರೋ ಅವರು ಗೆದ್ದಂತೆ. ಆಟಗಾರರು ಒಂದೇ ದಾಂಡನ್ನು ಬಳಸುವುದಿಲ್ಲ. ಚೆಂಡು ಬಿದ್ದಿರುವ ಜಾಗ, ಅದಕ್ಕೂ ಬದ್ದಿಗೂ ಇರುವ ಅಂತರ, ನಡುವಣ ನೆಲದ ಅಂಕುಡೊಂಕುಗಳನ್ನು ಗಮನಿಸಿ ಹೊಡೆತಕ್ಕೆ ಯೋಗ್ಯವಾದ ದಾಂಡನ್ನು ಬಳಸುತ್ತಾರೆ. ಈ ದಾಂಡುಗಳ ಮತ್ತು ಚೆಂಡಿನ ವಿಷಯ ಮುಂದೆ ಬಂದಿದೆ.



ಬತ್ತಳಿಕೆಯಲ್ಲಿ ಬಗೆ ಬಗೆಯ ದಾಂಡುಗಳನ್ನು ಹೊತ್ತು, ಆಟಗಾರರೊಡನೆ ಹೋಗುವ ಸಹಾಯಕ ಜನ

ಗಾಲ್ಫ್ ಎಂದು ಆರಂಭವಾಯಿತು ಎಂಬುದನ್ನು ಸರಿಯಾಗಿ ಹೇಳಲು ಸಾಧ್ಯವಾಗದು. ಈ ಆಟ ಸ್ಕಾಟ್‌ಲೆಂಡಿನಲ್ಲಿ ಆರಂಭವಾಯಿತೆಂದು ಹೇಳಲಾಗುತ್ತಿದ್ದರೂ ಶತಮಾನಗಳ ಹಿಂದೆಯೇ ಇತರ ದೇಶಗಳಲ್ಲಿ ಈ ಆಟ ಆಡಲಾಗುತ್ತಿತ್ತು ಎನ್ನಲು ಪುರಾವೆಗಳಿವೆ. ರೋಮ್ ಸಾಮ್ರಾಜ್ಯದ ಆರಂಭ ದಿನಗಳಲ್ಲಿ ಪ್ಯಾಗಾನಿಕಾ ಎಂಬ ಆಟ ಬಳಕೆಯಲ್ಲಿತ್ತು. ಹಕ್ಕಿಯ ಪುಕ್ಕಗಳನ್ನು ತುಂಬಿದ್ದ ಚರ್ಮದ ಚೆಂಡನ್ನು ಬಾಗಿರುವ ಉದ್ದದ ಕೋಲೊಂದರಿಂದ ಹೊಡೆವ ಆಟ ಅದು. ರೋಮನ್ ಸೈನಿಕರು ತಾವು ಹೋದಲ್ಲೆಲ್ಲ ಈ ಆಟ ಆಡುತ್ತಿದ್ದರು. ಹೀಗೆ ಸ್ಕಾಟ್ಲೆಂಡಿಗೆ ಈ ಆಟ ಬಂದಿರಬಹುದು.



ಬೆಂಗಳೂರು ಗಾಲ್ಫ್ ಕ್ಲಬ್ಬಿನ ಆಟದ ಮೈದಾನ

ಗಾಲ್ಫ್ ಬಗ್ಗೆ ಸ್ಕಾಟ್‌ಲೆಂಡಿನಲ್ಲಿ ನಿಗದಿಯಾಗಿ ಕೇಳಬಂದುದು 1457ರಲ್ಲಿ. ಬಿಲ್ಲು ವಿದ್ಯೆಯ ಬಗ್ಗೆ ಜನತೆಯಲ್ಲಿ ಆಸಕ್ತಿ ಕುಗ್ಗುತ್ತಿದ್ದುದನ್ನು ಪಾರ್ಲಿಮೆಂಟ್ ಗಮನಿಸಿ ರಾಜ್ಯದ ಶ್ರೀಮಂತರು ವರ್ಷಕ್ಕೆ ನಾಲ್ಕು ಬಾರಿ ಸಭೆ ಸೇರಿ, ಫುಟ್‌ಬಾಲ್ ಹಾಗೂ ಗಾಲ್ಫ್ ಆಟಗಳು ನಡೆಯದಂತೆ ನೋಡಿಕೊಳ್ಳಬೇಕು ಎಂದು ಗೊತ್ತುಪಡಿಸಿತು. ಇದೇ ರೀತಿಯ ಶಾಸನಗಳನ್ನು 1471 ಹಾಗೂ 1491ರಲ್ಲೂ ಮಾಡಲಾಯಿತು. 1491ರಲ್ಲಿ ಫುಟ್‌ಬಾಲ್ ಹಾಗೂ ಗಾಲ್ಫ್ ಆಟಗಳಿಗೆ ನೇರ ಬಹಿಷ್ಕಾರ ವಿಧಿಸಲಾಯಿತು.

ಗಾಲ್ಫ್ ಆಟಕ್ಕೆ ಬಹಿಷ್ಕಾರ ವಿಧಿಸಿದ ನಾಲ್ಕನೆಯ ಜೇಮ್ಸ್ ಕೆಲವರ್ಷಗಳ ಅನಂತರ ತಾನೇ ಗಾಲ್ಫ್ ಆಡತೊಡಗಿದನೆಂದು ಹೇಳಲಾಗಿದೆ. ಮೇರಿ ಸ್ಟೂವರ್ಟ್ ತನ್ನ ಪತಿಯ ಕೊಲೆಯಾದ ಕೆಲದಿನಗಳ ಮೇಲೆ ಗಾಲ್ಫ್ ಆಡುತ್ತಿದ್ದಳೆಂಬ ವರದಿಗಳಿವೆ. ಹೀಗೆ ರಾಜರುಗಳ ಪ್ರೋತ್ಸಾಹದಿಂದ ಬೆಳೆದ ಗಾಲ್ಫ್ ಆಟ ಹೆಚ್ಚು ಪ್ರಚಾರ ಪಡೆಯಲು 18ನೆಯ ಶತಮಾನದಲ್ಲಿ ಹುಟ್ಟಿಕೊಂಡ ಗಾಲ್ಫ್ ಕ್ಲಬ್‌ಗಳು ನೆರವಾದುವು

ಖ್ಯಾತ ರಾಯಲ್ ಬ್ಲ್ಯಾಕ್‌ಹೀತ್ ಕ್ಲಬ್ 1608ರಲ್ಲೇ ಇತ್ತೆಂದು ಹೇಳಲಾಗಿದ್ದರೂ ಈ ಕ್ಲಬ್ ಅಸ್ತಿತ್ವಕ್ಕೆ ಬಂದುದು 1787 ಎನ್ನಬಹುದು. ಈ ಮುನ್ನ ಕೆಲವು ಕ್ಲಬ್‌ಗಳು ಇದ್ದ ಬಗ್ಗೆ ಸಾಕಷ್ಟು ಸಾಕ್ಷ್ಯಾಧಾರಗಳಿವೆ.

ವಿಶ್ವದ ಪ್ರಧಾನ ಕ್ಲಬ್ ಆದ ರಾಯಲ್ ಅಂಡ್ ಏನ್ಷಂಟ್ ಕ್ಲಬ್ ಭವನವನ್ನು 1840ರಲ್ಲಿ ಕಟ್ಟಲಾಯಿತು. ಇಂಗ್ಲೆಂಡಿನ ರಾಜರ ಹಾಗೂ ಆತನ ಹತ್ತಿರ ಸಂಬಂಧಿಗಳ ಪೋಷಣೆ ಪಡೆದಿದ್ದ ಈ ಕ್ಲಬ್ ಇಂದು ಗಾಲ್ಫ್ ಆಟದ ಬಗ್ಗೆ ನಿರ್ಣಾಯಕ ಸಂಸ್ಥೆ ಎನಿಸಿದೆ. ನಿಯಮಗಳನ್ನು ರೂಪಿಸುವ ಹಾಗೂ ತಿದ್ದುಪಡಿ ಮಾಡುವ ಅಧಿಕಾರ ಈ ಕ್ಲಬ್‌ಗೆ ಇದೆ. ಇದರ ತೀರ್ಮಾನಗಳನ್ನು ಅಮೆರಿಕ ಸಂಯುಕ್ತಸಂಸ್ಥಾನಗಳನ್ನು ಬಿಟ್ಟು ವಿಶ್ವದ ಉಳಿದೆಲ್ಲ ಎಡೆಗಳಲ್ಲೂ ಸ್ವೀಕರಿಸಲಾಗುತ್ತದೆ. 1951ರಲ್ಲಿ ರಾಯಲ್ ಅಂಡ್ ಏನ್ಷಂಟ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳ ಗಾಲ್ಫ್ ಸಂಸ್ಥೆಗಳು ಒಂದು ಕಡೆ ಕಲೆತು ಆಟಕ್ಕೆ ವಿಶ್ವದಾದ್ಯಂತ ಒಂದೇ ರೀತಿಯ ನಿಯಮಗಳನ್ನು ಇಟ್ಟುಕೊಳ್ಳಲು ಒಪ್ಪಿಕೊಂಡವು. ಅನಂತರ ಚೆಂಡಿನ ಪ್ರಮಾಣ ಒಂದನ್ನು ಬಿಟ್ಟು (ಅಮೆರಿಕದ ಚೆಂಡಿನ ವ್ಯಾಸ 4.27 ಸೆಂಮೀ ಇಂಗ್ಲೆಂಡಿನ ಚೆಂಡಿನ ವ್ಯಾಸ 3.75 ಸೆಂಮೀ) ಉಳಿದೆಲ್ಲ ಅಂಶಗಳಲ್ಲೂ ಇವೆರಡು ಸಂಸ್ಥೆಗಳ ನಿಯಮಗಳಲ್ಲೂ ಸಾಮರಸ್ಯವಿದೆ.



ಬೀಸು ಹೊಡೆತದ ವೈಖರಿ



ನವುರಾದ ಏಟಿನಿಂದ ಗುಣಿ ತುಂಬಿಸುವ ಸನ್ನಿವೇಶ

ಬ್ರಿಟಿಷ್ ಓಪನ್ ಅಂಡ್ ಅಮೆಚೂರು ಚಾಂಪಿಯನ್‌ಷಿಪ್ ಹಾಗೂ ಇಂಗ್ಲೆಂಡಿನ ವಾಕರ್ ಕಪ್ ಪಂದ್ಯಗಳು ರಾಯಲ್ ಅಂಡ್ ಏನ್ಷೆಂಟ್ ಕ್ಲಬ್‌ನ ಅಧಿಕಾರ ವ್ಯಾಪ್ತಿಗೆ ಒಳಗಾಗಿರುತ್ತವೆ.

ಅಮೆರಿಕದಲ್ಲಿ 1779ರಿಂದ ಗಾಲ್ಫ್ ಆಡಲಾಗುತ್ತಿದೆಯಾದರೂ ಮುಂದೆ ಒಂದು ಶತಮಾನಕಾಲ ಈ ಆಟ ಅಷ್ಟು ಪ್ರಚಾರ ಪಡೆದಿರಲಿಲ್ಲ. 1887ರಿಂದ ಈಚೆಗೆ ಈ ಆಟವನ್ನು ಅಮೆರಿಕದಲ್ಲಿ ನಿಯತ ರೂಪದಲ್ಲಿ ಆಡಲಾಗುತ್ತಿದೆ. ಸ್ಕಾಟ್ಲೆಂಡಿನ ರಾಬರ್ಟ್ ಲಾಕ್ ಹಾರ್ಟ್ ಎಂಬಾತ ಕೆಲವು ಗಾಲ್ಫ್ ಚೆಂಡುಗಳನ್ನೂ ದಾಂಡುಗಳನ್ನೂ ತಂದು ಅಮೆರಿಕದಲ್ಲಿ ತನ್ನ ಮಿತ್ರರಿಗೆ ಹಾಗೂ ನೆರೆಯವರಿಗೆ ಕೊಟ್ಟು ಗಾಲ್ಫ್ ಆಟದಲ್ಲಿ ಆಸಕ್ತಿ ಕುದುರಿಸಿದನೆನ್ನಲಾಗಿದೆ. 1888ರಲ್ಲಿ ಈತನಿಗೆ ನೆರೆಯವನಾದ ರೀಡನಿಗೂ ಗಾಲ್ಫ್ ಪಂದ್ಯ ನಡೆಯಿತು. ಅನಂತರ ಸೇಂಟ್ ಆಂಡ್ರೂಸ್ ಕ್ಲಬ್ ಸ್ಥಾಪಿತವಾಯಿತು. 1897ರಲ್ಲಿ ಕ್ಲಬ್‌ನ ನಿವೇಶನವನ್ನು ನ್ಯೂಯಾರ್ಕ್ ನಗರದ ಮೌಂಟ್ ಹೋಪ್‌ಗೆ ವರ್ಗಾಯಿಸಲಾಯಿತು.




ಗಾಲ್ಫ್ ಮೈದಾನ, ಸ್ಕಾಟ್ಲೆಂಡ್

ಮುಂದೆ 5 ವರ್ಷಗಳಲ್ಲಿ ಸುಮಾರು 20 ಕ್ಲಬ್‌ಗಳು ಹುಟ್ಟಿಕೊಂಡುವು. 1900ರ ವೇಳೆಗೆ ಅಮೆರಿಕ ಸಂಯುಕ್ತ ಸಂಸ್ಥಾನದಾದ್ಯಂತ ಬೇಸಗೆಯಲ್ಲಿ ಈ ಆಟ ಆಡಲಾಗುತ್ತಿತ್ತು. 1920ರ ವೇಳೆಗೆ ಅಮೆರಿಕದಲ್ಲಿ 2,800 ಗಾಲ್ಫ್ ಮೈದಾನಗಳು ಇದ್ದುವು.

1894ರ ಡಿಸೆಂಬರ್ 22ರಂದು ಐದು ಪ್ರಮುಖ ಕ್ಲಬ್‌ಗಳ ಪ್ರತಿನಿಧಿಗಳು ಸಭೆ ಸೇರಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ಗಾಲ್ಫ್ ಸಂಸ್ಥೆ ಆರಂಭಿಸಿದರು. ಈ ಸಂಸ್ಥೆ ಇಂದು ಈ ವಿಭಾಗದಲ್ಲಿ ಗಾಲ್ಫ್ ಬಗ್ಗೆ ಆಡಳಿತ ನಡೆಸುತ್ತಿದೆ.

ಮಹಿಳೆಯರೂ ಉತ್ತಮ ಸಂಖ್ಯೆಯಲ್ಲಿ ಈ ಆಟ ಆಡುತ್ತಿದ್ದಾರೆ.

ಗಾಲ್ಫ್ ಚೆಂಡನ್ನು ತುಂಬಿಸುವ ಬದ್ದು ಅಥವಾ ಕುಳಿ ಇರುವ ಸ್ಥಳದಲ್ಲಿ ಮಟ್ಟಸವಾದ ಒಂದು ಚದರವಿರುತ್ತದೆ. ಈ ಚದರದ ಮಧ್ಯೆ ನಾಲ್ಕೂವರೆ ಅಂಗುಲ ವ್ಯಾಸದ ಗುಳಿ ಇರುತ್ತದೆ. ಯಾವ ಗುಳಿಯ ಅನಂತರ ಯಾವ ಗುಳಿ ತುಂಬಿಸಬೇಕೆಂಬುದನ್ನು





ಒಂದರಿಂದ ಒಂಬತ್ತರವರೆಗಿನ ಕಬ್ಬಿಣದ ದಾಂಡುಗಳಿಂದ ಚೆಂಡನ್ನು ಹೊಡೆದಾಗ ಅದು ಸುಮಾರಾಗಿ ಎಷ್ಟು ದೂರ (ಗಜಗಳಲ್ಲಿ) ಹೋಗುತ್ತದೆಂಬುದನ್ನು ಚಿತ್ರದಲ್ಲಿ ತೋರಿಸಿದೆ

ಮೊದಲೇ ಗೊತ್ತುಮಾಡಲಾಗಿರುತ್ತದೆ. ಸರಪಳಿಯ ಕೊಂಡಿಗಳಂತೆ ಒಂದು ಗುಳಿಯಿಂದ ಇನ್ನೊಂದು ಗುಳಿಗೆ ಚೆಂಡು ತುಂಬಿಸಲಾಗುತ್ತದೆ. ಒಂದು ಪಂದ್ಯದಲ್ಲಿ ಒಂದು ಗುಳಿಯನ್ನು ಒಮ್ಮೆ ಮಾತ್ರ ತುಂಬಬೇಕು. ಗಾಲ್ಫ್ ಆಟದಲ್ಲಿ ಇಬ್ಬರ ನಡುವೆ ಇಲ್ಲವೆ ಎರಡು ಟೀಮುಗಳ ನಡುವೆ ಸ್ಪರ್ಧೆ ಇರುತ್ತದೆ. ಗುಳಿಯ ಚದರದ ಹೊರಗೆ ಚೆಂಡು ಹೊಡೆಯಲು ಒಂದು ಗುಪ್ಪೆ ಇರುತ್ತದೆ. ಒಂದು ಮರದ ತುಂಡು ಇಲ್ಲವೇ ಮರಳಿನ ಗುಪ್ಪೆ ಚೆಂಡನ್ನು ಸುತ್ತಲ ಪ್ರದೇಶದಿಂದ ಸ್ವಲ್ಪ ಎತ್ತರದಲ್ಲಿ ಇಡಲು ಸಹಾಯಕವಾಗಿರುತ್ತದೆ. ಪ್ರತಿ ಗುಳಿ ತುಂಬುವ ಮೊದಲು ಆಟಗಾರ ಹಲವಾರು ವಿಧದಲ್ಲಿ ಬೇರೆ ಬೇರೆ ಮಾದರಿಯ ದಾಂಡುಗಳನ್ನು ಬಳಸುತ್ತಾನೆ.

ಪಂದ್ಯಗಳಲ್ಲಿ ಎರಡು ಬಗೆ. ಒಂದು ಮ್ಯಾಚ್ ಪ್ಲೇ. ಇದರಲ್ಲಿ ಒಂದೊಂದು ಗುಳಿ ತುಂಬಿಸುವುದೂ ಒಂದೊಂದು ಸ್ಪರ್ಧೆ. ಎದುರಾಳಿಗಿಂತ ಹೆಚ್ಚು ಗುಳಿ ತುಂಬಿಸುವವರು ಗೆಲ್ಲುತ್ತಾರೆ. ಇನ್ನೊಂದು ಸ್ಟ್ರೋಕ್ ಪ್ಲೇ. ಒಬ್ಬ ಆಟಗಾರ ಎಷ್ಟು ಹೊಡೆತಗಳಲ್ಲಿ ಒಂದು ಸುತ್ತು ಗುಳಿತುಂಬಿಸಿ ಮುಗಿಸುತ್ತಾನೆ ಎಂಬುದು ಮುಖ್ಯ. ಕಡಿಮೆ ಹೊಡೆತಗಳಲ್ಲಿ ಸುತ್ತು ಮುಗಿಸುವಾತ ಇದರಲ್ಲಿ ವಿಜಯಿ. ಈ ಎರಡು ಬಗೆಯ ಆಟಗಳೂ ಪ್ರಚಲಿತವಿವೆ. ಸಾಮಾನ್ಯವಾಗಿ ಅಮೆಚೂರ್ ಸ್ಪರ್ಧೆಗಳಲ್ಲಿ ಮ್ಯಾಚ್ ಪ್ಲೇ ವಿಧಾನವನ್ನೂ ಪ್ರೊಫೆಷನಲ್ ಇಲ್ಲವೇ ಓಪನ್ ಸ್ಪರ್ಧೆಗಳಲ್ಲಿ ಸ್ಟ್ರೋಕ್ ಪ್ಲೇ ವಿಧಾನವನ್ನೂ ಬಳಸಲಾಗುತ್ತದೆ. ಪ್ರೊಫೆಷನಲ್ ವಾರ್ಷಿಕ ಚಾಂಪಿಯನ್ ಷಿಪ್ಸ್‌ನಲ್ಲಿ ಮಾತ್ರ ಮ್ಯಾಚ್ ಪ್ಲೇ ವಿಧಾನದ ಬಳಕೆ ಇದೆ.

ಮಹಿಳೆಯರಿಗಾಗಿ ನಡೆವ ಕರ್ಟಿಸ್ ಕಪ್, ಹಾಗೂ ಪುರುಷರಿಗಾಗಿ ನಡೆವ ರೈಡರ್ ಕಪ್ ಹಾಗೂ ವಾಕರ್ ಕಪ್ ಸ್ಪರ್ಧೆಗಳು ವಿಶ್ವಚಾಂಪಿಯನ್‌ಷಿಪ್‌ಗಳು.

**ಗಾಲ್ಫ್ ಚೆಂಡು:** ರೋಮನ್ನರ ಕಾಲದ ಚೆಂಡಿಗೆ ಹೊರಗಡೆ ಚರ್ಮದ ಹೊದಿಕೆ ಇತ್ತು. ಅದರ ಒಳಗೆ ಹಕ್ಕಿಗಳ ರೆಕ್ಕೆಪುಕ್ಕಗಳನ್ನು ಒತ್ತಿ ತುಂಬಿರುತ್ತಿದ್ದರು. 1884ರಲ್ಲಿ ಒಬ್ಬ ವ್ಯಾಪಾರಿ 2,456 ಇಂಥ ಚೆಂಡುಗಳನ್ನು ತಯಾರಿಸಿದನೆನ್ನಲಾಗಿದೆ. ಈ ಬಗೆಯ ಚೆಂಡು ಹೆಚ್ಚು ಬಾಳಿಕೆ ಬರುತ್ತಿರಲಿಲ್ಲ. ಒಂದೆರಡು ಆಟಗಳಲ್ಲೇ ಒಡೆದು ಹೋಗುತ್ತಿತ್ತು. ಅನಂತರ ಗಟಪರ್ಚದಲ್ಲಿ (ಲೇಟೆಕ್ಸ್) ಚೆಂಡನ್ನು ತಯಾರಿಸತೊಡಗಿದರು. ರಾಬರ್ಟ್ ಎ. ಪ್ಯಾಟರ್‌ಸನ್ ಎಂಬಾತ 1845ರಲ್ಲಿ ಇಂಥ ಒಂದು ಚೆಂಡನ್ನು ರೂಪಿಸಿದನೆನ್ನಲಾಗಿದೆ. ಇದರಿಂದ ಆಟದಲ್ಲಿ ದೊಡ್ಡ ಕ್ರಾಂತಿಯೇ ಆದಂತಾಯಿತು. ಈ ಚೆಂಡು ಪುಕ್ಕದ ಚೆಂಡಿಗಿಂತ ಗಡಸು. ಬೇಗ ಒಡೆಯುವಂಥ ದಲ್ಲ. ಆಮೇಲೆ 1898ರಲ್ಲಿ ರಬ್ಬರ್ ಚೆಂಡು ಬಳಕೆಗೆ ಬಂತು. ಇದನ್ನು ರೂಪಿಸಿದವನು ಕಾಬರ್ನ್ ಹ್ಯಾಸ್ಕೆಲ್ ಎಂಬಾತ. ಈತ ಸ್ವತಃ ಗಾಲ್ಫ್ ಆಟಗಾರನಾಗಿದ್ದು ಗುಟ್‌ರಿಚ್ ಕಂಪನಿಯವರ ಸಹಾಯದಿಂದ ಈ ಹೊಸ ಚೆಂಡನ್ನು ಬಳಕೆಗೆ ತಂದ. ರಬ್ಬರಿನ ಸಣ್ಣ ಗುಂಡೊಂದರ ಸುತ್ತ ಗಟ್ಟಿಯಾಗಿರುವ ರಬ್ಬರ್ ದಾರವನ್ನು ಸುತ್ತುತ್ತ ಹೋಗಿ ಚೆಂಡಿನ ಆಕೃತಿ ಬಂದಮೇಲೆ ಅದನ್ನು ಗಟ್ಟಿಮಾಡುವುದು ಈ ಚೆಂಡು ತಯಾರಿಕೆಯ ವಿಧಾನ. ಇದನ್ನೇ ಈಗ ಸುಧಾರಿಸಿ ಬಳಸಲಾಗುತ್ತಿದೆ. ಚೆಂಡಿನ ವೇಗ ಸೆಕೆಂಡಿಗೆ 250' ಗಿಂತ ಹೆಚ್ಚಿರಬಾರದು ಎಂಬ ನಿಯಮ ಅಮೆರಿಕದಲ್ಲಿ ಪ್ರಚಲಿತವಿದೆ.



ದಾಂಡಿನ ಭಾಗಗಳು : 1. ಮುಚ್ಚಳ, 2. ಹಿಡಿ, 3. ದಿಂಡು, 4. ಆಸರೆಕೋಳವೆ, 5. ಕತ್ತು, 6. ಮುಖ, 7. ಹಿಮ್ಮಡಿ, 8. ಅಂಗಾಲು, 9. ಬೆರಳು, 10. ತಲೆ

**ಗಾಲ್ಫ್ ಮೈದಾನ :** ವಿಶಾಲವಾಗಿದ್ದು ಎಷ್ಟು ಅಂಕುಡೊಂಕುಗಳ ಅಡಚಣೆಗಳು ಇದ್ದರೂ ಅಷ್ಟೂ ಅಷ್ಟು ಉತ್ತಮ. ನಡುವಿನ ಅಡಚಣೆಗಳನ್ನು ನಿವಾರಿಸಿಕೊಂಡು ಚೆಂಡು ಹೊಡೆಯುವುದು ಜಾಣತನ. ಸಹಜವಾದ ಅಡಚಣೆಗಳು ಇಲ್ಲದ ಕಡೆ ಕೃತಕವಾದುದನ್ನು ಒಡ್ಡಲಾಗುತ್ತದೆ. ಸರಿಯಾದ ಮೈದಾನದಲ್ಲಿ 18 ಗುಳಿಗಳಿರುತ್ತವೆ. 18 ಅಲ್ಲದೆ 9 ಮಾತ್ರ ಇದ್ದಲ್ಲಿ ಎರಡು ಸುತ್ತು ಆಡಬೇಕಾಗುತ್ತದೆ.

ಸ್ಕಾಟ್ಲೆಂಡಿನ ಗೆನ್ ಈಗಲ್ಸ್, ಇಂಗ್ಲೆಂಡಿನ ಓಕೆಂಗ್, ಅಮೆರಿಕದ ಪೈನ್‌ವ್ಯಾಲಿ, ಕೆನಡದ ಜ್ಯಾಸ್ಪರ್ ಪಾರ್ಕ್, ಆಸ್ಟ್ರೇಲಿಯದ ರಾಯಲ್ ಮೆಲ್‌ಬೋರ್ನ್–ಈ ಮೊದಲಾದವು ಬಹು ಪ್ರಶಸ್ತವಾದ ಗಾಲ್ಫ್ ಮೈದಾನಗಳು.

**ದಾಂಡುಗಳು:** ಸಾಮಾನ್ಯವಾಗಿ ಸರಿಯಾದ ಆಟಗಾರನ ಬತ್ತಳಿಕೆಯಲ್ಲಿ 3 ಇಲ್ಲವೆ 4 ಮರದ ದಾಂಡುಗಳು 9 ಇಲ್ಲವೆ 10 ಕಬ್ಬಿಣದ ದಾಂಡುಗಳು ಇರುತ್ತವೆ. ಏನೇ ಆದರೂ ಒಂದು ಸುತ್ತಿನ ಆಟದಲ್ಲಿ 14ಕ್ಕಿಂತ ಹೆಚ್ಚು ದಾಂಡುಗಳ ಅಗತ್ಯ ಕಾಣದು. ಈ ದಾಂಡುಗಳ ಉದ್ದ, ಬಳುಕು, ತೂಕ, ಆಕಾರ, ತಲೆಯ ಬಾಗು–ಈ ಮೊದಲಾದವುಗಳಲ್ಲಿ ಖಚಿತವಾದ ವ್ಯತ್ಯಾಸವಿರುತ್ತದೆ. ಗುರುತಿಗೆಂದು ಒಂದೊಂದು ದಾಂಡಿಗೂ ಒಂದೊಂದು ನಂಬರನ್ನು ಹೆಸರನ್ನು ಕೊಟ್ಟಿರುತ್ತಾರೆ. ಉದಾಹರಣೆಗೆ ಮರದವಲ್ಲಿ 1ನೆಯ ದಾಂಡಿಗೆ ಡ್ರೈವರ್ ಎಂದೂ ಮೂರನೆಯದಕ್ಕೆ ಸ್ಪೂನ್ ಎಂದೂ ಹೆಸರಿದೆ. ಇದೇ ರೀತಿ ಲೋಹದಲ್ಲಿ ಒಂದನೆಯದಕ್ಕೆ ಕ್ಲೀಕ್ ಎಂದೂ ಐದನೆಯದಕ್ಕೆ ಮ್ಯಾಷಿ ಎಂದೂ ಒಂಬತ್ತನೆಯದಕ್ಕೆ ನಿಬ್ಲಿಕ್ ಎಂದೂ ಹೆಸರು.

ದಾಂಡಿನ ಅಂಗಭಾಗಗಳ ಹೆಸರುಗಳನ್ನೂ ಯಾವ ದಾಂಡು ಎಂಥ ಹೊಡೆತಕ್ಕೆ ಯೋಗ್ಯ ಎಂಬ ವಿವರಗಳನ್ನೂ ಚಿತ್ರಗಳಲ್ಲಿ ತೋರಿಸಿದೆ.

**ನಿಯಮಗಳು:** ಮ್ಯಾಚ್ ಪ್ಲೇ ಮತ್ತು ಸ್ಟ್ರೋಕ್ ಪ್ಲೇಗಳಿಗೆ ಪ್ರತ್ಯೇಕವಾದ ನಿಯಮಗಳಿವೆ. ಮ್ಯಾಚ್ ಪ್ಲೇನಲ್ಲಿ ಹೆಚ್ಚು ಬದ್ದು ತುಂಬಿಸಿದವರು ಗೆಲ್ಲುತ್ತಾರೆ. ಅಂದರೆ ಇರುವ 18ರಲ್ಲಿ 10 ಬದ್ದು ತುಂಬಿಸಿದವನು ಗೆದ್ದಂತೆ. ಅತಿ ಕಡಿಮೆ ಹೊಡೆತದಿಂದ ಚೆಂಡನ್ನು ಬದ್ದಿಗೆ ತುಂಬಿಸಿದರೆ ಹಾಗೆ ತುಂಬಿಸಿದವನು ಆ ಬದ್ದನ್ನು ಗೆದ್ದಂತಾಗುತ್ತದೆ. ಹಾಗೆ ಮಾಡಿದವನಿಗೆ ಆಟವನ್ನು ಮುಂದುವರಿಸುವ ಗೌರವ ಸಲ್ಲುತ್ತದೆ.

ಇಬ್ಬರೂ ಸಮನಾದ ಹೊಡೆತ ಗಳಿಂದ ಬದ್ದು ತುಂಬಿದಲ್ಲಿ ಗೆದ್ದ ಬದ್ದನ್ನು ಇಬ್ಬರಲ್ಲೂ ಸಮನಾಗಿ ಹಂಚುತ್ತಾರೆ. ಇಬ್ಬರಲ್ಲಿ ಯಾರು ಮೊದಲು ಬದ್ದು ತುಂಬುತ್ತಾರೋ ಅವರಿಗೆ ಆಟ ಮುಂದುವರಿಸುವ ಅಧಿಕಾರ ಬರುತ್ತದೆ. ಸ್ಟ್ರೋಕ್ ಪ್ಲೇನಲ್ಲಿ ಹದಿನೆಂಟು ಬದ್ದುಗಳ ಒಂದು ಸುತ್ತನ್ನು ಯಾರು ಅತಿ ಕಡಿಮೆ ಹೊಡೆತಗಳಲ್ಲಿ ತುಂಬಿ ಮುಗಿಸುತ್ತಾರೋ ಅವರು ಗೆದ್ದಂತೆ. ಯಾರು ಯಾವ ಬದ್ದನ್ನು ಎಷ್ಟು ಹೊಡೆತಗಳಲ್ಲಿ ತುಂಬಿಸಿದರು ಎಂಬುದನ್ನು ಗುರುತು ಮಾಡಿ ಕೊಳ್ಳಲಾಗುತ್ತದೆ.

ಗಾಲ್ಫ್ ಆಟವನ್ನು ಇಬ್ಬರು, ಮೂರು ಜನ, ನಾಲ್ವರು ಒಟ್ಟಿಗೆ ಆಡಬಹುದು. ಇಬ್ಬಿಬ್ಬರ, ಮೂವರು ಮೂವರ ಟೀಮು ಮಾಡಿಕೊಂಡೂ ಆಡಬಹುದು.

(ಎಚ್.ಎಸ್.ಎಸ್.ಎನ್.)

**ಗಾಲ್ಸ್‌ವರ್ದಿ, ಜಾನ್ :** 1867–1933. ಸುಪ್ರಸಿದ್ಧ ಇಂಗ್ಲಿಷ್ ಕಾದಂಬರಿಕಾರ, ನಾಟಕಕಾರ. 1932ರಲ್ಲಿ ಈತನಿಗೆ ಸಾಹಿತ್ಯಕ್ಕಾಗಿ ನೊಬೆಲ್ ಬಹುಮಾನ ಬಂತು. ಈತ ಸರ್ರೆ ಕೌಂಟಿಯ ಕಿಂಗ್‌ಸ್ಟನ್ ಹಿಲ್‌ನಲ್ಲಿ 1867ರಲ್ಲಿ ಹುಟ್ಟಿದ. ತಂದೆ ಜಾನ್ ಗಾಲ್ಸ್‌ವರ್ದಿ ಶ್ರೀಮಂತ ವಕೀಲ, ಹಲವಾರು ಕಂಪನಿಗಳ ನಿರ್ದೇಶಕ. ಅವನ ನಾಲ್ಕು ಜನ ಮಕ್ಕಳಲ್ಲಿ ಈತ ಎರಡನೆಯವ. ಹ್ಯಾರೊ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ,



ಆಕ್ಸ್‌ಫರ್ಡಿನಲ್ಲಿ ಲಾ ಪರೀಕ್ಷೆ ತೆಗೆದುಕೊಂಡು ವಕೀಲನಾಗಿ ಲಿಂಕನ್ಸ್‌ಇನ್‌ಗೆ ಸೇರಿದ. ಶಾಲೆಯಲ್ಲಾಗಲಿ ಕಾಲೇಜಿನಲ್ಲಾಗಲಿ ಮುಂದೆ ಪ್ರತಿಭಾವಂತ ಸಾಹಿತಿಯಾಗುವನೆಂಬ ಯಾವ ಲಕ್ಷಣಗಳಾಗಲಿ ಸೂಚನೆಯಾಗಲಿ ಈತನಲ್ಲಿ ಕಂಡಿರಲಿಲ್ಲ. ಅಧ್ಯಯನಕ್ಕಿಂತ ಈತನಿಗೆ ಕ್ರೀಡೆಯ ಆಕರ್ಷಣೆಯೇ ಹೆಚ್ಚಾಗಿತ್ತು. ಫುಟ್‌ಬಾಲ್ ಟೀಮಿನ ಕ್ಯಾಪ್ಟನ್ ಆಗಿದ್ದ. ವಕೀಲಿ ವೃತ್ತಿಯನ್ನು ಆರಂಭಮಾಡಿದ್ದಷ್ಟೋ ಅಷ್ಟೆ. ಅದರಲ್ಲಿ ಆಸಕ್ತಿಯಿಲ್ಲದ್ದರಿಂದಲೂ ಮನೆಯ ಕಡೆ ಅನುಕೂಲವಾಗಿದ್ದುದರಿಂದಲೂ ದೂರಪ್ರಾಚ್ಯ ದೇಶಗಳನ್ನು ನೋಡಲು ವ್ಯಾಪಾರಿ ಹಡಗುಗಳಲ್ಲಿ ದೀರ್ಘಪ್ರವಾಸ ಕೈಕೊಂಡ. ಈ ಪರ್ಯಟನ ಕಾಲದಲ್ಲೇ ಜೋಸೆಫ್ ಕಾನ್ರಾಡನ ಸ್ನೇಹವಾಯಿತು. ಈ ಆತ್ಮೀಯತೆ ಗಾಲ್ಸ್ ವರ್ದಿಯ ಬದುಕಿನುದ್ದಕ್ಕೂ ಉಳಿದುಬಂತು.

ಗಾಲ್ಸ್‌ವರ್ದಿ ತುಂಬಾ ರೂಪವತಿಯೂ ಜಾಣೆಯೂ ಆಗಿದ್ದ ಆಡಾ ಎಂಬಾಕೆಯನ್ನು ಮದುವೆ ಆದ. ಈಕೆ ಗಾಲ್ಸ್‌ವರ್ದಿಯ ದಾಯಾದಿ ಆರ್ಥರ್ ಎಂಬುವವನ ಹೆಂಡತಿ. ವಿಕ್ಟೋರಿಯ ಸಮಾಜದ ಸಾಂಪ್ರದಾಯಿಕ ಕಟ್ಟಳೆಯ ಇರುಕಿನಲ್ಲಿ

ಸಿಕ್ಕು ಬಲವಂತದ ಮದುವೆಗೆ ಈಡಾಗಿದ್ದವಳು. ಅದೊಂದು ವಿಷಮ ದಾಂಪತ್ಯ ಎಂದು ಗಂಡನ ಕಡೆಯವರೇ ಕಂಡುಕೊಂಡಿದ್ದರು. ತೀವ್ರ ಜುಗುಪ್ಸೆ, ನಿರಾಸೆಗಳಿಗೆ ಗುರಿಯಾಗಿದ್ದ ಈಕೆಯ ಬಗ್ಗೆ ಜಾನ್‌ಗೆ ಹುಟ್ಟಿದ ಕನಿಕರ ಕ್ರಮೇಣ ಅನುರಾಗಕ್ಕೆ ತಿರುಗಿತು. ಅನಂತರ 1905ರಲ್ಲಿ ಆಡಾ ತನ್ನ ಪತಿಯೊಡನೆ ವಿವಾಹವಿಚ್ಛೇದ ಮಾಡಿಕೊಂಡ ಮೇಲೆ ಜಾನ್ ಆಕೆಯನ್ನು ಮದುವೆ ಯಾದ. ಆಕೆ ತುಂಬಾ ಬುದ್ಧಿವಂತೆ. ಸಾಹಿತ್ಯದಲ್ಲಿ ಅಭಿರುಚಿ ಉಳ್ಳವಳು. ಅವಳೇ ಗಾಲ್ಸ್‌ವರ್ದಿಯಲ್ಲಿ ಹುದುಗಿದ್ದ ಸಾಹಿತ್ಯ ಪ್ರತಿಭೆಯನ್ನು ಜಾಗ್ರತಗೊಳಿಸಿ ಆತ ಪುಸ್ತಕಗಳ ಮೇಲೆ ಪುಸ್ತಕ ಬರೆಯುವಂತೆ ಬಾಳಿನುದ್ದಕ್ಕೂ ಸ್ಫೂರ್ತಿ ಕೊಡುತ್ತ ಬಂದಳು. ಅವರ ದಾಂಪತ್ಯ ಪರಸ್ಪರ ಪ್ರೇಮ, ತಿಳಿವಳಿಕೆಗಳಿಂದ ಸುಖಮಯವಾಗಿತ್ತು. ಗಾಲ್ಸ್‌ವರ್ದಿಯ ನಿರ್ವಿಕಾರವಾದ ಸಮಚಿತ್ತದ ಬರವಣಿಗೆಗೆ ಈ ಹಿನ್ನೆಲೆ ಬಹುಮಟ್ಟಿಗೆ ಕಾರಣವಾಗಿರಬೇಕು.

ಗಾಲ್ಸ್‌ವರ್ದಿಯ ಮೊಟ್ಟಮೊದಲ ಕೃತಿ 1897ರಲ್ಲಿ ಪ್ರಕಟವಾದ ಫೋರ್ ವಿಂಡ್ಸ್ ಎಂಬ ಸಣ್ಣಕತೆಗಳ ಸಂಕಲನ. ಅನಂತರ 1898ರಲ್ಲಿ ಜೋಸೆಲಿನ್, 1900ರಲ್ಲಿ ವಿಲ್ಲಾ ರೂಬೆನ್ ಎಂಬ ಎರಡು ಕಾದಂಬರಿಗಳನ್ನು ಈತ ಬರೆದ. ಜಾನ್ ಸಿಂಜಾನ್ ಎಂಬ ಕಾವ್ಯನಾಮದಲ್ಲಿ ಪ್ರಕಟವಾದ ಈ ಕೃತಿಗಳು ಯಾರ ಗಮನವನ್ನೂ ಸೆಳೆಯಲಿಲ್ಲ. ತುರ್ಗ್ಯನೆಫ್‌ನನ್ನು ಮೆಚ್ಚಿದ್ದ ಗಾಲ್ಸ್‌ವರ್ದಿಗೆ ರಷ್ಯದ ಬೃಹತ್ ಕಾದಂಬರಿಗಳ ಮಾದರಿಯಲ್ಲಿ ಬರೆಯಬೇಕೆಂಬ ಆಕಾಂಕ್ಷೆ ಪ್ರಬಲವಾಗಿತ್ತು.

1906ರಲ್ಲಿ ಗಾಲ್ಸ್‌ವರ್ದಿ ದಿ ಮ್ಯಾನ್ ಆಫ್ ಪ್ರಾಪರ್ಟಿ ಎಂಬ ಕಾದಂಬರಿಯನ್ನು ಬರೆದ. ಇದು ಪ್ರಕಟವಾದ ಕೂಡಲೆ ವಿಖ್ಯಾತವಾಯಿತು. ಅದೇ ವರ್ಷ ಈತನ ದಿ ಸಿಲ್ವರ್ ಬಾಕ್ಸ್ ಎಂಬ ಸಾಮಾಜಿಕ ನಾಟಕ ರಂಗದ ಮೇಲೆ ಅತ್ಯಂತ ಯಶಸ್ವಿಯಾಯಿತು.

ಗಾಲ್ಸ್‌ವರ್ದಿಯ ಪ್ರತಿಭೆ ಸಹಜವಾಗಿ ಉಕ್ಕಿಬಂದ ಚಿಲುಮೆಯಲ್ಲ; ಪ್ರಜ್ಞಾಪೂರ್ವಕವಾದ ಸಾಧನೆಯಿಂದ ಆತ ಗಳಿಸಿಕೊಂಡದ್ದು. ಕೃತಿಯ ವಸ್ತುವಿನ ಬಗ್ಗೆ ತುಂಬಾ ಆಲೋಚನೆ ಮಾಡಿ, ನಿಧಾನವಾಗಿ ಕೂತು ಬರೆದು, ಅನಂತರ ಅದನ್ನು ಕಲಾತ್ಮಕ ದೃಷ್ಟಿಯಿಂದ ಪರಾಮರ್ಶಿಸಿ ಕಡೆದು ಮೆರುಗು ಕೊಡುವ ಕಲೆಗಾರಿಕೆ ಆತನದು. ಹೀಗಾದುದರಿಂದಲೇ ಗಾಲ್ಸ್‌ವರ್ದಿಗೆ ಮಧ್ಯ ವಯಸ್ಸು ಮೀರಿದ ಮೇಲೆಯೇ ಸಾಹಿತ್ಯದ ಸಿದ್ಧಿ ಮತ್ತು ಕೀರ್ತಿ ಲಭಿಸಿದ್ದು. ದಿ ಮ್ಯಾನ್ ಆಫ್ ಪ್ರಾಪರ್ಟಿಯನ್ನು ಬರೆದಾಗ ಅದೊಂದು ಸ್ವಸಂಪೂರ್ಣವಾದ ಕೃತಿ ಎಂದೇ ಭಾವಿಸಿದ್ದ ಗ್ರಂಥಕರ್ತನಿಗೆ ಅನಂತರ ಅದು ಮಹಾ ಕಾದಂಬರಿಯೊಂದರ ಮೊದಲ ಭಾಗವಾಗಲು ತಕ್ಕುದೆಂದು ತೋರಿತು. ಕಾಲ್ಪನಿಕವಾದ ಫಾರ್‌ಸೈಟ್ ಮನೆತನದ ಮೂರು ತಲೆಮಾರಿನ ಕತೆಯನ್ನು ಸವಿಸ್ತಾರವಾಗಿ ಬೆಳೆಸಿಕೊಂಡು 1906 ರಿಂದ 1933 ವರೆಗೂ ಸುಮಾರು 26 ವರ್ಷಗಳ ಕಾಲ ಗಾಲ್ಸ್‌ವರ್ದಿ ಈ ಮಹಾಕಾದಂಬರಿಯನ್ನು ಮುಂದುವರಿಸಿ ಬರೆದ. ಈ ಸುದೀರ್ಘವಾದ ಕೃತಿ ಮೊದಲು ಒಂದೊಂದೇ ಸಂಪುಟವಾಗಿ ಪ್ರಕಟವಾದರೂ ಮೊದಲ ಐದು ಸಂಪುಟ ಸೇರಿದ ಫಾರ್‌ಸೈಟ್ ಸಾಗಾ ಎಂಬ ಹೆಸರಿನಲ್ಲಿ ಒಂದನೆಯ ಭಾಗವಾಯಿತು. ಅನಂತರ ಮತ್ತೆ ಮೂರು ಸಂಪುಟಗಳು ಪ್ರತ್ಯೇಕವಾಗಿ ಬಂದುದಲ್ಲದೆ 1929ರಲ್ಲಿ ಅವನ್ನು ಒಟ್ಟಾಗಿ ಸೇರಿಸಿ ಎ ಮಾಡರ್ನ್ ಕಾಮೆಡಿ ಎಂಬ ಹೆಸರಿನಲ್ಲಿ ಎರಡನೆಯ ಭಾಗವಾಗಿ ಪ್ರಕಟಿಸಲಾಯಿತು. 1931ರಿಂದ 1933ರ ವರೆಗೆ ಬರೆಯಲ್ಪಟ್ಟ ಇನ್ನೂ ಮೂರು ಸಂಪುಟಗಳನ್ನು ಗಾಲ್ಸ್‌ವರ್ದಿಯ ಮರಣಾನಂತರ 1934ರಲ್ಲಿ ಎಂಡ್ ಆಫ್ ದಿ ಚಾಪ್ಟರ್ ಎಂಬ ಶಿರೋನಾಮೆಯಲ್ಲಿ ಮೂರನೆಯ ಭಾಗವಾಗಿ ಪ್ರಕಟಗೊಳಿಸಲಾಯಿತು. ಫಾರ್‌ಸೈಟ್ ಮನೆತನದ ತಲೆಮಾರಿನ ಕತೆಯಾಗಿದ್ದು ಮೇಲಿನ ಮಧ್ಯಮ ವರ್ಗಕ್ಕೆ ಸೇರಿದ ಇಂಗ್ಲಿಷ್ ಸಿರಿವಂತರ ಕೌಟುಂಬಿಕ ಜೀವನದ ತದ್ವತ್ ಜೀವಂತ ಪೂರ್ಣವಾದ ಚಿತ್ರವಾಗಿ ಮೂಡಿರುವ ಈ ಮಹಾಕಾದಂಬರಿ ಜಗತ್ತಿನ ಮಹತ್ಕೃತಿಗಳಲ್ಲಿ ಒಂದೆಂದು ಪರಿಗಣಿತವಾಗಿದೆ. ಪಾತ್ರ ಸೃಷ್ಟಿಯಲ್ಲಿ, ಚಿತ್ರಣದಲ್ಲಿ ಗಾಲ್ಸ್‌ವರ್ದಿಯ ಅಸಾಧಾರಣವಾದ ಪ್ರತಿಭೆ, ವಿಶೇಷವಾದ ಪರಿಣತಿ ಚೆನ್ನಾಗಿ ವ್ಯಕ್ತವಾಗುತ್ತವೆ. ಇದರಲ್ಲಿ ಬರುವ ಹಿರಿಯ ಫಾರ್‌ಸೈಟ್, ಸೋಮ್ಸ್, ಐರೀನ್ ಮೊದಲಾದ ವ್ಯಕ್ತಿಗಳು ಬಹುಕಾಲ ನೆನಪಿನಲ್ಲಿ ಉಳಿಯುತ್ತಾರೆ. ಈ ಬೃಹತ್ ಕಾದಂಬರಿಯ ಒಂದೊಂದು ಭಾಗವೂ ಒಂದೊಂದು ಸ್ವತಂತ್ರ್ಯವಾದ ಕಾದಂಬರಿ ಇದ್ದ ಹಾಗೆಯೇ ಇದೆ. ಇವಲ್ಲದೆ ಇತರೆ ಏಳು ಕಾದಂಬರಿಗಳನ್ನು ಗಾಲ್ಸ್‌ವರ್ದಿ ಅನಂತರ ಬರೆದ. ಎಲ್ಲ ಸೇರಿದರೆ ಸುಮಾರು 20 ಕಾದಂಬರಿಗಳಾಗುತ್ತವೆ. ಜೊತೆಗೆ 9 ನಾಟಕಗಳನ್ನೂ, 9 ಪ್ರಬಂಧ ಸಂಕಲನಗಳನ್ನೂ, 7 ಸಣ್ಣ ಕತೆಗಳ ಸಂಕಲನಗಳನ್ನೂ, ಒಂದು ಪತ್ರಗುಚ್ಛವನ್ನೂ ಈ ಸಾಹಿತಿ ರಚಿಸಿದ್ದಾನೆ. ಮರಣಾನಂತರದ ಪ್ರಕಟಣೆಯಾಗಿ ಬಂದ ಈತನ ಒಂದು ಕವನ ಸಂಕಲನ ಗಣನೀಯ ಕಾವ್ಯಗುಣದಿಂದ ಕೂಡಿದ್ದರೂ ಕಾದಂಬರಿ ಮತ್ತು ನಾಟಕಗಳ ಉಜ್ಜ್ವಲತೆಯಲ್ಲಿ ಮರೆಯಾಗಿದೆ.

1921ರಲ್ಲಿ ಸ್ಥಾಪಿತವಾದ ಪಿ.ಇ.ಎನ್. ಕ್ಲಬ್ಬಿನ ಪ್ರಥಮ ಅಧ್ಯಕ್ಷನಾಗಿ ಗಾಲ್ಸ್‌ವರ್ದಿ ಆಯ್ಕೆಯಾದ. ಈ ಮನ್ನಣೆಗೆ ಆತ ಸರ್ವ ವಿಧದಲ್ಲೂ ಯೋಗ್ಯನಾಗಿದ್ದ. ಈ ಸ್ಥಾನದ ಫಲವಾಗಿ ದೂರದ ಅನೇಕ ಸಾಹಿತಿಗಳು ಈತನಿಗೆ ಮಿತ್ರರಾದರು. 1918ರಲ್ಲಿ ತಾನಾಗಿ ಬಂದ ನೈಟ್‌ಹುಡ್ ಗೌರವವನ್ನು ನಿರಾಕರಿಸಿದನಾದರೂ 1929ರಲ್ಲಿ ಆರ್ಡರ್ ಆಫ್ ಮೆರಿಟ್ ಪ್ರಶಸ್ತಿಯನ್ನು ಈತ ತಪ್ಪಿಸಿಕೊಳ್ಳಲಾಗಲಿಲ್ಲ. 1932ರಲ್ಲಿ ವಿಶ್ವದ ಶ್ರೇಷ್ಠಸಾಹಿತ್ಯಕ್ಕೆ ಸಲ್ಲುವ ನೊಬೆಲ್ ಬಹುಮಾನ ಈತನಿಗೆ ಲಭಿಸಿತು. ಆಕ್ಸ್‌ಫರ್ಡ್, ಕೇಂಬ್ರಿಜ್ ಮುಂತಾದ ಹಲವಾರು ವಿಶ್ವವಿದ್ಯಾನಿಲಯಗಳು ಈತನಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನಿತ್ತು ಸನ್ಮಾನಿಸಿದವು.

ಗಾಲ್ಸ್‌ವರ್ದಿ ಶ್ರೇಷ್ಠದರ್ಜೆಯ ಸಾಹಿತಿಯಾಗಿ ಮಾತ್ರವಲ್ಲ ದಯಾರ್ದ್ರ ಹೃದಯ, ಮಾನವೀಯ ಅನುಕಂಪೆ, ದಾನಶೀಲ ಔದಾರ್ಯ ಮುಂತಾದ ಗುಣ ಸಂಪನ್ನನೂ ಸುಸಂಸ್ಕೃತನೂ ಆದ ವ್ಯಕ್ತಿಯಾಗಿ ಪರಿಚಿತರೆಲ್ಲರ ಮೆಚ್ಚುಗೆಗೆ ಪಾತ್ರನಾಗಿದ್ದ. ತನಗೆ ಬಂದ ನೊಬೆಲ್ ಬಹುಮಾನದ ಹಣವನ್ನೆಲ್ಲ ಪಿ.ಇ.ಎನ್. ಕ್ಲಬ್ಬಿನ ಅಭಿವೃದ್ಧಿಗಾಗಿ ದಾನಮಾಡಿಬಿಟ್ಟ. ಒಂದನೆಯ ಮಹಾಯುದ್ಧದ ಕಾಲದಲ್ಲಿ ತನ್ನ ಪುಸ್ತಕಗಳಿಂದ ಬರುತ್ತಿದ್ದ ವರಮಾನವೆಲ್ಲ ಯೋಧರ ಪರಿಹಾರನಿಧಿಗೆ ಸೇರುವ ಹಾಗೆ ಏರ್ಪಾಟು ಮಾಡಿದ.

ಸಮಾಜದ ಕ್ರೌರ್ಯ, ತಿರಸ್ಕಾರ, ಶೋಷಣೆಗಳಿಗೆ ಗುರಿಯಾಗಿ ಪರಿತಪಿಸುವ ದೀನ ದಲಿತರ ಕರುಣಾಜನಕ ಪರಿಸ್ಥಿತಿಯನ್ನು ಚಿತ್ರಿಸುವ ಕತೆಗಳೇ ಇವನ ನಾಟಕಗಳ ವಸ್ತು. ಬರೆದುದು ಕೆಲವೇ ನಾಟಕಗಳಾದರೂ ಒಂದೊಂದೂ ಬಹು ಪರಿಣಾಮಕಾರಿಯಾಗಿ ಸಮಾಜದ ಮೇಲೆ ಪ್ರಭಾವವನ್ನು ಬೀರಿತು. ಶ್ರೀಮಂತರಿಗೇ ಒಂದು ರೀತಿ ಬಡವರಿಗೇ ಮತ್ತೊಂದು ರೀತಿಯಾಗಿ ಕಾನೂನನ್ನು ಅನ್ವಯಿಸುವ ನ್ಯಾಯಾಲಯಗಳ ಪಕ್ಷಪಾತವನ್ನು ಕುರಿತ ವಿಡಂಬನೆಯೇ ದಿ ಸಿಲ್ವರ್ ಬಾಕ್ಸ್ ಎಂಬ ನಾಟಕ. ಕಾರ್ಮಿಕರ ಸಮಸ್ಯೆಯನ್ನು ವಿಶ್ಲೇಷಿಸುವ ದಿ ಸ್ಟ್ರೈಫ್ ಎಂಬ ನಾಟಕ ಮತ್ತು ನರಕಗಳಂತಿದ್ದ ಕಾರಾಗೃಹಗಳ ಘೋರಸ್ಥಿತಿಯನ್ನು ಚಿತ್ರಿಸುವ ಜಸ್ಟಿಸ್ ಎಂಬ ನಾಟಕ ಸರ್ಕಾರದ ಗಮನವನ್ನೂ ಸೆಳೆದವು. ಕಾರಾಗೃಹಗಳ ಸ್ಥಿತಿಯನ್ನು ಸುಧಾರಿಸುವ ಅನೇಕ ಕ್ರಮಗಳನ್ನು ಸರ್ಕಾರ ಕೈಕೊಂಡಿತು.

ಗಾಲ್ಸ್‌ವರ್ದಿಗೆ ಕಪಟತನ, ಗೊಡ್ಡು ಸಂಪ್ರದಾಯ ಮತ್ತು ಹೇಡಿತನಗಳನ್ನು ಕಂಡರೆ ಆಗುತ್ತಿರಲಿಲ್ಲ. ಸಮಾಜದ ಹಲವಾರು ಸಮಸ್ಯೆಗಳನ್ನು ಕುರಿತ ಸಮರ್ಪಕವಾದ ವಿಶ್ಲೇಷಣೆಯನ್ನು ಈತನ ಕೃತಿಗಳಲ್ಲಿ ಕಾಣಬಹುದು. ಈ ಸಮಸ್ಯೆಗಳನ್ನು ಮಾನವೀಯ ದೃಷ್ಟಿಯಿಂದ ನೋಡುತ್ತ ನಿಷ್ಪಕ್ಷಪಾತವಾಗಿ ಸಮಾಜದ ವಿಚಾರವಂತರ ಮುಂದಿಡುವುದಷ್ಟೇ ಗಾಲ್ಸ್‌ವರ್ದಿಯ ಉದ್ದೇಶ. ಈತ ಯಾವ ಸಮಸ್ಯೆಗೂ ಪರಿಹಾರವನ್ನು ಸೂಚಿಸುವುದಿಲ್ಲ. ಏಕೆಂದರೆ ಈ ಸಮಸ್ಯೆಗಳಿಗೆ ಪರಿಹಾರ ಅಷ್ಟು ಸರಳವಲ್ಲ, ಸುಲಭವಲ್ಲ ಎಂದು ಈತ ಚೆನ್ನಾಗಿ ವಿಚಾರ ಮಾಡಿ ಮನಗಂಡಿದ್ದ. ಯಾವ ಸಮಸ್ಯೆಗಾದರೂ ಯಾವ ಸಾಮಾಜಿಕ ಅನ್ಯಾಯಕ್ಕಾದರೂ ಯಾವ ಒಬ್ಬ ವ್ಯಕ್ತಿಯಾಗಲಿ ಯಾವ ಒಂದು ವರ್ಗವಾಗಲಿ ಸಂಪೂರ್ಣವಾಗಿ ಹೊಣೆಯಲ್ಲ ಎಂದು ಈತನ ಅಭಿಮತ. ಇದಕ್ಕೇ ಈತ ಯಾರ ಮೇಲೂ ತಪ್ಪು ಹೊರಿಸುವುದಿಲ್ಲ. ಯಾರನ್ನೂ ದೂರುವುದಿಲ್ಲ. ಸಮಾಜದ ವ್ಯವಸ್ಥೆಯಲ್ಲೇ ಕ್ರಾಂತಿಕಾರಕವಾದ ಕೆಲವು ಮೂಲಭೂತ ಬದಲಾವಣೆಗಳಾಗುವುದು ಅಗತ್ಯ. ಸಾಮಾಜಿಕ ಜೀವನ ವ್ಯವಸ್ಥೆಯಾದರೂ ತುಂಬ ಜಟಿಲವಾದುದು. ಯಾವೊಂದು ಆದರ್ಶದ ಸರಳೀಕರಣಕ್ಕೂ ಅದು ಒಳಪಡುವಂಥದಲ್ಲ. ಭಾಗ್ಯಹೀನರು ನಿರಂತರವಾಗಿ ಹೀನಸ್ಥಿತಿಯಲ್ಲೇ ಇರುವಂಥ ಪರಿಸ್ಥಿತಿಗೆ ಇರುವ ಹಲವಾರು ಕಾರಣಗಳು ಇಡೀ ಸಮಾಜದ ರಚನೆಯಲ್ಲಿ ಒಂದಕ್ಕೊಂದು ಜಟಿಲವಾಗಿ ಹೆಣೆದುಕೊಂಡಿರುತ್ತವೆ. ಒಂದು ಕಡೆ ಸಿಕ್ಕು ಬಿಡಿಸಲೆತ್ನಿಸಿದರೆ ಇನ್ನೊಂದು ಕಡೆ ಸಿಕ್ಕುಸಿಕ್ಕಾಗುತ್ತದೆ. ಇದು ಸಾಮಾನ್ಯವಾಗಿ ಗಾಲ್ಸ್‌ವರ್ದಿಯ ವಿಚಾರಸರಣಿ. ಈತ ನಿರಾಶಾವಾದಿಯೇನೊ ಎಂಬ ಸಂಶಯ ಬರಬಹುದು. ಆದರೆ ಅದು ನಿಜವಲ್ಲ. ಈತನಿಗೆ ಮಾನವೀಯತೆಯಲ್ಲಿ ಅಪಾರವಾದ ಶ್ರದ್ಧೆ. ಸದ್ಗುಣ ಸಂಪನ್ನ, ಮನುಷ್ಯತ್ವದಲ್ಲಿ ನಂಬಿಕೆ. ಈ ವಿಶ್ವಾಸವಿದ್ದುದರಿಂದಲೇ ಗಾಲ್ಸ್‌ವರ್ದಿ ಸಾಮಾಜಿಕ ಅನ್ಯಾಯದ ವಿರುದ್ಧ ಸೆಣಸುವಂತೆ ಜನರಲ್ಲಿ ಜಾಗೃತಿಯುಂಟುಮಾಡಿದ.

20ನೆಯ ಶತಮಾನದ ಪೂರ್ವಾರ್ಧ ಅವಧಿ ವಿಚಾರಪ್ರಧಾನವಾದ ಸಾಮಾಜಿಕ ಸಮಸ್ಯಾ ನಾಟಕಗಳ ಯುಗ ಎಂದು ಹೆಸರಾಗಿದೆ. ಈ ಕಾಲದ ಶ್ರೇಷ್ಠ ನಾಟಕಕಾರರಲ್ಲಿ ಗಾಲ್ಸ್‌ವರ್ದಿಯೂ ಒಬ್ಬನಾಗಿದ್ದಾನೆ. ಬರ್ನಾರ್ಡ್ ಷಾನ ನಾಟಕಗಳಲ್ಲಿ ಕಂಡುಬರುವ ಸಂಭಾಷಣಾ ಚಾತುರ್ಯವಾಗಲಿ, ಹಾಸ್ಯದ ಹೊನಲಾಗಲಿ ಈತನ ನಾಟಕಗಳಲ್ಲಿ ಇಲ್ಲ. ತುಂಬ ಗಂಭೀರವೂ ಉದ್ವೇಗರಹಿತವೂ ಆದ ವಸ್ತುನಿಷ್ಠ ಪ್ರತಿಪಾದನೆ ಈತನ ನಾಟಕಗಳ ಲಕ್ಷಣ. ಪಾತ್ರಗಳೂ ಸಂಭಾಷಣೆಯೂ ತೀರ ಸಾಧಾರಣ ಎನ್ನುವಂಥವು. ಆದರೆ ನಾಟಕ ಸಂವಿಧಾನದಲ್ಲಿ ಕಾಣುವ ಅಪೂರ್ವವಾದ ಶಿಲ್ಪಕೌಶಲದಲ್ಲಿ

ಗಾಲ್ಸ್‌ವರ್ದಿಯನ್ನು ಮೀರಿಸುವ ಮತ್ತೊಬ್ಬ ನಾಟಕಕಾರನಿಲ್ಲ. ಸುಸ್ಥಿರವಾದ ಅಸ್ತಿಬಾರದ ಮೇಲೆ ತುಂಬ ಕಲಾತ್ಮಕವಾಗಿ ನಿರ್ಮಿಸಿದ ಗೋಪುರದ ಮಾದರಿ ಈತನ ನಾಟಕಗಳ ರಚನಾಶೈಲಿ. ಸಾಹಿತ್ಯಕ್ಕೆ ಇದು ಗಾಲ್ಸ್‌ವರ್ದಿಯ ವಿಶಿಷ್ಟ ಕಾಣಿಕೆ. ಈತನನ್ನು ಸಮಾಜ ಸುಧಾರಕ ಎನ್ನುವುದಕ್ಕಿಂತ ಹೆಚ್ಚಾಗಿ ಶ್ರೇಷ್ಠ ಕಲಾವಿದ ಎನ್ನಬಹುದು. ಸಾಹಿತ್ಯಕ್ಕಿಂತ, ಕಲೆಗಿಂತ ಜೀವನ ದೊಡ್ಡದು ಎಂಬುದಕ್ಕೆ ಸರಿಯಾಗಿ ಗಾಲ್ಸ್‌ವರ್ದಿಯ ವ್ಯಕ್ತಿತ್ವವೇ ತುಂಬಾ ಹಿರಿದಾದುದು. ಈತನ ಸರಸಸಜ್ಜನಿಕೆಗಳಿಂದ ಕೂಡಿದ ಸುಸಂಸ್ಕೃತ ನಡೆವಳಿಕೆ, ಉದಾತ್ತವಾದ ಸ್ವಭಾವ, ತನಗೆ ಬರುತ್ತಿದ್ದ ವರಮಾನದಲ್ಲಿ ಅರ್ಧ ಭಾಗವನ್ನು ದಾನಧರ್ಮಗಳಿಗೆ ವಿನಿಯೋಗಿಸಿ ಉಳಿದರ್ಧ ಭಾಗದಲ್ಲಿ ಸಂತುಷ್ಟ, ಸಂತೃಪ್ತ ಜೀವನವನ್ನು ನಡೆಸುತ್ತಿದ್ದ ಗುಣಸಂಪನ್ನತೆ ಪ್ರಸಿದ್ಧವಾಗಿದೆ. (ಕೆ.ಬಿ.ಪಿ.)

**ಗಾವಿಲಗಡ :** ಮಹಾರಾಷ್ಟ್ರ ರಾಜ್ಯದ ಅಮರಾವತಿ ಜಿಲ್ಲೆಯ ಮೇಳಘಾಟ್ ತಾಲ್ಲೂಕಿನಲ್ಲಿಯ ಒಂದು ಐತಿಹಾಸಿಕ ಕೋಟೆ. ಸು. 1220ಮೀ ಎತ್ತರದ ಸಾತ್ಪುರಾ ಬೆಟ್ಟದ ನೆತ್ತಿಯ ಮೇಲಿದೆ. ಅಹ್ಮದ್ ಶಹ ಬಹುಮನಿ ಇದನ್ನು ಕಟ್ಟಿಸಿದನೆನ್ನಲಾಗಿದೆ. (1425). ಅಕ್ಬರನ ಆಡಳಿತದ ಕಾಲದಲ್ಲಿ ಅಬುಲ್‌ಫಜಲ್ ಇದನ್ನು ಗೆದ್ದುಕೊಂಡ (1598). ಹಿಂದೆ ಈ ಭಾಗದಲ್ಲಿ ಗೋವಳರು ಹೆಚ್ಚಾಗಿ ವಾಸವಾಗಿದ್ದರಿಂದ ಇವಕ್ಕೆ ಗವಳೀಗಡ, ಗಾವಿಲಗಡ ಎಂದು ಹೆಸರು ಬಂತೆಂದು ಪ್ರತೀತಿ. ಮೊಗಲರಿಂದ ಭೋಸ್ಲೆ ವಂಶದವರ ವಶಕ್ಕೆ ಬಂದ ಅನಂತರ ಈ ಕೋಟೆ ವಿಶೇಷ ಪ್ರಸಿದ್ಧಿ ಪಡೆಯಿತು. ಭೋಸ್ಲೆ ವಂಶ ರಾಜ್ಯವನ್ನು ಕಳೆದುಕೊಂಡ ಮೇಲೆ ಇದು ಇಂಗ್ಲೀಷರ ಅಧಿಕಾರ ಕಕ್ಷೆಯಲ್ಲಿ ಬಂತು. ಕೋಟೆಯಲ್ಲಿ ಒಂದು ಸುಂದರವಾದ ಮಸೀದಿಯೂ ಕೆಲವು ಶಿಲಾಲೇಖನಗಳೂ ಇವೆ *.

**ಗಾಸ್, ಎಡ್ಮಂಡ್ :** 1849–1928. ಇಂಗ್ಲಿಷ್ ಸಾಹಿತಿ. ಯುರೋಪಿನ ಬೇರೆ ಬೇರೆ ದೇಶಭಾಷೆಗಳ ಉತ್ಕೃಷ್ಟ ಸಾಹಿತ್ಯ ಕೃತಿಗಳನ್ನು ಇಂಗ್ಲೆಂಡಿನ ಓದುಗರಿಗೆ ಪರಿಚಯ ಮಾಡಿಕೊಟ್ಟ ವಿದ್ವಾಂಸ ವಿಮರ್ಶಕ. ತಂದೆ ಪಿ. ಎಚ್. ಗಾಸ್ ಧರ್ಮ ನಿಷ್ಠನಾದ ಒಬ್ಬ ಪ್ರಾಣಿವಿಜ್ಞಾನಿ. ಮನೆಯ ಕಠಿಣ ನೀತಿನಿಯಮಗಳ ವಾತಾವರಣ ಯುವಕ ಎಡ್ಮಂಡನಿಗೆ ಹಿಡಿಸಲಿಲ್ಲ. ಆದುದರಿಂದ ತಾನು ವಿಪರೀತ ಒತ್ತಡಕ್ಕೆ ಒಳಗಾಗಬೇಕಾಯಿತೆಂದು ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾನೆ.



ಈ ವಿರಸವನ್ನು ಮರೆಯಲು ಎಡ್ಮಂಡ್ ಸಾಹಿತ್ಯಾಭ್ಯಾಸದಲ್ಲಿ ನಿರತನಾದ. ಅನೇಕ ವರ್ಷ ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂ, ಬೋರ್ಡ್ ಆಫ್ ಟ್ರೇಡ್ ಸಂಸ್ಥೆಗಳಲ್ಲಿ ದುಡಿದು ಬಿಡುವಿನ ಕಾಲವನ್ನೆಲ್ಲ ಸಾಹಿತ್ಯ ಅಧ್ಯಯನಕ್ಕೆ ವಿನಿಯೋಗಿಸಿದ. ಈತ ಬರೆದ ಕೆಲವು ಸಾಧಾರಣ ಕವನಗಳು, ಭಾಷಾಂತರಗಳು, ಸಾಹಿತ್ಯ ಚರಿತ್ರೆಗಳು, ವಿಮರ್ಶಾತ್ಮಕ ಬರೆಹಗಳು ಇವನಿಗೆ ಆ ಕಾಲದಲ್ಲಿ ಖ್ಯಾತಿ ತಂದವು. ಆಧುನಿಕ ಸಾಹಿತ್ಯ ಯುಗದ ಕ್ರಾಂತಿಕಾರಕ ಬದಲಾವಣೆಗಳು ಅಸ್ತಿತ್ವಕ್ಕೆ ಬರುವ ಮುನ್ನ ರಚಿತವಾದುವಾದ್ದರಿಂದ ಈತನ ಕೃತಿಗಳು ಈಗ ತೀರಾ ಅಪಕ್ವವೆನಿಸುತ್ತವೆ. ಈತನ ಮುಖ್ಯಕೃತಿಗಳಲ್ಲಿ ಇಬ್ಸೆನ್ ನಾಟಕಗಳ ಭಾಷಾಂತರಗಳು, ಈತ ಸಂಪಾದಿಸಿದ ಥಾಮಸ್ ಗ್ರೇ, ಜಾನ್ ಡನ್, ಥಾಮಸ್ ಬ್ರೌನ್ ಮುಂತಾದವರ ಕೃತಿಗಳು, 18ನೆಯ ಶತಮಾನದ ಇಂಗ್ಲಿಷ್ ಸಾಹಿತ್ಯದ ಚರಿತ್ರೆ, ಕ್ರಿಟಿಕಲ್ ಕಿಟ್‌ಕ್ಯಾಟ್ಸ್, ಫ್ರೆಂಚ್ ಪ್ರೊಫೈಲ್ಸ್ ಮುಂತಾದವು ಸೇರಿವೆ. ಎಡ್ಮಂಡನ ಬರೆವಣಿಗೆಯಲ್ಲಿ ವಿಪುಲವಾದ ಉತ್ಸಾಹ, ರಮಣೀಯತೆಗಳಿದ್ದರೂ ಸಾರ್ವಕಾಲಿಕವಾದ ಸಾಹಿತ್ಯ ಮೌಲ್ಯಗಳು ವಿರಳ. ಆದರೆ ಸ್ಕಾಂಡಿನೇವಿಯನ್ ಹಾಗೂ ಫ್ರೆಂಚ್ ಸಾಹಿತ್ಯ, ಮತ್ತು 17–18ನೆಯ ಶತಮಾನದ ಇಂಗ್ಲಿಷ್ ಸಾಹಿತ್ಯ– ಇವುಗಳಲ್ಲಿ ಅಪಾರ ಕೃಷಿ ನಡೆಸಿದ ಅಗ್ರಗಣ್ಯರಲ್ಲಿ ಈತ ಒಬ್ಬ. ಇಂದಿನ ವಿಮರ್ಶಕರ ಬರೆವಣಿಗೆಯಲ್ಲಿ ಅಗಾಧ ಪಾಂಡಿತ್ಯ, ಪ್ರಖರವಾದ ಬುದ್ಧಿಶಕ್ತಿಗಳು ತುಂಬಿದ್ದರೂ ತಾನು ಮೆಚ್ಚಿಕೊಂಡ ಸಾಹಿತ್ಯ ಕೃತಿಗಳನ್ನು ಚಪ್ಪರಿಸಿ ಸವಿದು ಆಸ್ವಾದಿಸಬೇಕೆನ್ನುವ ಮನೋಧರ್ಮ ಇಲ್ಲವಾಗಿದೆ. ಅಂಥವರಿಗೆ ಎಡ್ಮಂಡನ ಗ್ರಂಥಗಳು ದಿಕ್ಸೂಚಿಯಾಗಬೇಕು. ಫಾದರ್ ಅಂಡ್ ಸನ್ ಎನ್ನುವ ಗಾಸ್ ನ ಆತ್ಮಕಥೆ, ಇಂಗ್ಲಿಷ್ ಭಾಷೆಯಲ್ಲಿನ ಒಂದು ಅಪೂರ್ವ ಗ್ರಂಥ. ಇವನ ನವುರಾದ ವ್ಯಂಗ್ಯ, ಬುದ್ಧಿಶಕ್ತಿ, ತಾಳ್ಮೆ ಎಲ್ಲವೂ ಇಲ್ಲಿ ಆಕರ್ಷಕ ಶೈಲಿಯಲ್ಲಿ ಅಭಿವ್ಯಕ್ತಿಗೊಂಡಿವೆ. (ಎಚ್.ಕೆ.ಆರ್.)

**ಗಾಹದ್ವಾಲ ಮನೆತನ :** 11ನೆಯ ಶತಮಾನದ ಉತ್ತರಾರ್ಧದಲ್ಲಿ ಉತ್ತರ ಭಾರತದ ಕನೌಜಿನಲ್ಲಿ ಅಧಿಕಾರಕ್ಕೆ ಬಂದ ಒಂದು ರಾಜಮನೆತನ. ಇದು ರಾಷ್ಟ್ರಕೂಟರ ಅಥವಾ ರಾಥೋರರ ವಂಶದ ಒಂದು ರಾಜಮನೆತನ. ಇದು ರಾಷ್ಟ್ರಕೂಟರ ಅಥವಾ ರಾಥೋರರ ವಂಶದ ಒಂದು ಶಾಖೆಯೆಂಬುದು ಕೆಲವರ ಅಭಿಪ್ರಾಯವಾದರೂ ಇದಕ್ಕೆ ಸಾಕಷ್ಟು ಆಧಾರಗಳಿಲ್ಲ. ಕಳಚುರಿ ಲಕ್ಷ್ಮೀಕರ್ಣನ ಮಾಂಡಲಿಕನಾಗಿದ್ದ ಯಶೋವಿಗ್ರಹ ಈವರೆಗೆ ತಿಳಿದುಬಂದಿರುವ ಮೊದಲ ದೊರೆ. ಇವನ ಮಗ ಮಹೀಚಂದ್ರ. ಇವನಿಗೆ ಮಹೀತಲ, ಮಹೀಯಲ, ಎಂದೂ ಹೆಸರುಗಳಿದ್ದವು. ಈತ ಉತ್ತರ ಪ್ರದೇಶದ ಕೆಲವು ಭಾಗಗಳನ್ನಾಳುತ್ತಿದ್ದ. ಮಹೀಚಂದ್ರನ ಅನಂತರ ಪಟ್ಟಕ್ಕೆ ಬಂದವನು ಅವನ ಮಗ ಚಂದ್ರದೇವ. ಉತ್ತರ ಭಾರತದಲ್ಲಿ ಪ್ರಬಲರಾಗಿದ್ದ ಪರಮಾರ ಭೋಜ ಮತ್ತು ಕಳಚುರಿ ಕರ್ಣರ ಕಾಲದಲ್ಲಿ ಆಕ್ರಮಣ ಮಾಡಲು ಹೆದರಿ ಹಿಂದೆಗೆಯುತ್ತಿದ್ದ ಮುಸ್ಲಿಮರು ಅವರ ಅನಂತರ ಮತ್ತೆ ತಮ್ಮ ಧಾಳಿಗಳನ್ನಾರಂಭಿಸಿದ ರೆಂದೂ ಪಂಜಾಬಿನ ರಾಜ್ಯಪಾಲನಾಗಿದ್ದ ಮಹಮೂದ 1086–90ರಲ್ಲಿ ಕನೌಜ್, ಕಾಲಂಜರ ಮತ್ತು ಉಜ್ಜಯಿನಿಗಳನ್ನು ಲೂಟಿ ಮಾಡಿದನೆಂದೂ ಆಗ ಕನೌಜಿನಲ್ಲಿ ಚಂದರಾಯ್ ಎಂಬವನು ಇವನ ಮಿತ್ರನಾಗಿದ್ದನೆಂದೂ ತಿಳಿದುಬರುತ್ತದೆ. ಚಂದ್ರದೇವನೇ ಈ ಚಂದರಾಯನಾಗಿರಬಹುದು. ಮಹಮೂದ ತನ್ನ ದಂಡಯಾತ್ರೆಯಿಂದ ಹಿಂದಿರುಗಿದಾಗ ಉದ್ಭವಿಸಿದ ಅನಿಶ್ಚಯ ಪರಿಸ್ಥಿತಿಯನ್ನು ಚಂದ್ರದೇವ ಉಪಯೋಗಿಸಿಕೊಂಡು ಕನೌಜನ್ನು ಪಂಚಾಲದ ರಾಷ್ಟ್ರಕೂಟ ದೊರೆ ಗೋಪಾಲನಿಂದ ಕಿತ್ತುಕೊಂಡ. ಚಂದ್ರದೇವ, ಗಜಪತಿ, ನರಪತಿ, ತ್ರಿಶಂಕುಪತಿ– ಇವರನ್ನು ಸೋಲಿಸಿದ. ಈತ ಕುಶಿಕ, ಕಾಶಿ, ಉತ್ತರ ಕೋಸಲಗಳನ್ನು ರಕ್ಷಿಸಿದುದಾಗಿ ಹೇಳಿಕೊಂಡಿದ್ದಾನೆ. ಪೂರ್ವದಲ್ಲಿ ಇವನ ಮುನ್ನಡೆಗೆ ಮಗಧದ ದೊರೆ ಭೀಮಯಶನಿಂದ ತಡೆ ಬಿತ್ತು. ಅಲಹಾಬಾದಿನಿಂದ ವಾರಾಣಸಿ ಅಯೋಧ್ಯೆಗಳವರೆಗಿನ ಸೀಮೆಯೆಲ್ಲ ಚಂದ್ರದೇವನ ವಶವಾಗಿದ್ದುವು. ವಾರಾಣಸಿ ಗಾಹದ್ವಾಲರ ಎರಡನೆಯ ರಾಜಧಾನಿಯಾಗಿತ್ತು. ಚಂದ್ರದೇವನ ರಾಜ್ಯ ಪಶ್ಚಿಮದಲ್ಲಿ ಇಂದ್ರಪ್ರಸ್ಥದವರೆಗೂ ವಿಸ್ತರಿಸಿತ್ತೆಂಬುದು ಕೆಲವರ ಅಭಿಪ್ರಾಯ. ಆದರೆ ಆಗ ದೆಹಲಿಯಲ್ಲಿ ಬೇರೆ ರಾಜಮನೆತನ ಆಳುತ್ತಿತ್ತು. ಚಂದ್ರದೇವನ ವಶದಲ್ಲಿದ್ದ ಇಂದ್ರಸ್ಥಾನವೆಂಬುದು ಇಂದ್ರಪ್ರಸ್ಥವಾಗಿದ್ದಿರಲಾರದೆಂದು ಅದು ಈಗಿನ ಇಂದೂರ್ ಆಗಿರಬಹುದೆಂದೂ ಹೇಳಲಾಗಿದೆ.

ಚಂದ್ರದೇವನ ಅನಂತರ ರಾಜ್ಯವಾಳಿದವನು ಮದನಚಂದ್ರ. ಈತನ 1104–09ರ ಶಾಸನಗಳು ದೊರೆತಿವೆ. ವಾರಾಣಸಿ, ಬಿತಾಪುರ ಉಪವಿಭಾಗ, ಹಿಂದಿನ ಪಂಚಾಲ ರಾಜ್ಯದ ಒಂದು ಭಾಗ–ಇವು ಈತನ ಅಧೀನದಲ್ಲಿದ್ದುವು. ಮೂರನೆಯ ಅಲ್ಲಾವುದ್ದೌಲಾ ಮಸೂದ ಈ ಸಮಯದಲ್ಲಿ ಕನೌಜಿನ ಮೇಲೆ ದಂಡೆತ್ತಿ ಬಂದಿದ್ದನೆಂದೂ ಅಲ್ಲಿಯ ದೊರೆಯಾದ ಮಲ್ಹಿ ಎಂಬುವನನ್ನು ಸೆರೆಹಿಡಿದನೆಂದೂ ಆತ ವಿಪುಲವಾಗಿ ಹಣ ತೆತ್ತು ವಿಮೋಚನೆ ಪಡೆದನೆಂದೂ ಮುಸ್ಲಿಂ ಇತಿಹಾಸಕಾರರು ಹೇಳುತ್ತಾರೆ. ಮದನಚಂದ್ರನೇ ಈ ಮಲ್ಹಿ ಎಂದು ಭಾವಿಸಲಾಗಿದೆ.

ಮದನಚಂದ್ರನ ಮಗ ಗೋವಿಂದಚಂದ್ರ. ಗಾಹದ್ವಾಲ ವಂಶದ ಸಮರ್ಥ ದೊರೆಗಳಲ್ಲೊಬ್ಬ. ಈತ ತನ್ನ ತಂದೆ ಬದುಕಿದ್ದ ಕಾಲದಲ್ಲೇ ಮುಸ್ಲಿಮರನ್ನು ಸೋಲಿಸಿದನೆಂದು ಕೆಲವು ದಾಖಲೆಗಳಿಂದ ಗೊತ್ತಾಗುತ್ತದೆ. ಮುಸ್ಲಿಮರು ತನ್ನ ತಂದೆಯನ್ನು ಸೆರೆಯಿಂದ ಬಿಡುಗಡೆ ಮಾಡುವಂತೆ ಈತ ಒತ್ತಡ ತಂದಿದ್ದಿರಬಹುದು. ಹೀಗಾಗಿ ಮುಂದೆ ಮದನಚಂದ್ರ ಹೆಸರಿಗೆ ದೊರೆಯಾಗಿದ್ದರೂ ವಾಸ್ತವವಾಗಿ ಗೋವಿಂದಚಂದ್ರನೇ ಆಡಳಿತ ನಡೆಸುತ್ತಿದ್ದಿರಬೇಕು. ಈ ಕಾಲದಲ್ಲಿ ದಂಡೆತ್ತಿ ಬಂದ ಗೌಡ ರಾಮಪಾಲನನ್ನು ಇವನು ಸೋಲಿಸಿ ಹಿಮ್ಮೆಟ್ಟಿಸಿದ. ಈತ 1114ರಲ್ಲಿ ಪಟ್ಟಕ್ಕೆ ಬಂದ. ಅಂದಿನಿಂದ 1154ರವರೆಗೆ ಈತ ಬರೆಸಿದ 42 ಶಾಸನಗಳು ಇದುವರೆಗೆ ದೊರಕಿವೆ. ವಾರಾಣಸಿ, ಫತೇಪುರ, ಕಾನ್ಪುರ, ಕನೌಜ್, ಗೊಂಡಾ, ಗೋರಖಪುರ, ದಿನಾಪುರ, ಪಟ್ನಗಳವರೆಗೆ ಈತನ ರಾಜ್ಯ ವಿಸ್ತರಿಸಿತ್ತೆಂಬುದು ಈ ಶಾಸನಗಳಿಂದ ಗೊತ್ತಾಗುತ್ತದೆ. 1143ರ ಅನಂತರ ಈತ ಪಾಲದೊರೆ ಮದನನನ್ನು ಸೋಲಿಸಿ ಮಾಂಘೀರ್‌ವರೆಗಿನ ಎಲ್ಲ ನೆಲವನ್ನೂ ಗೆದ್ದುಕೊಂಡ. ಆದರೆ 1158ರ ವೇಳೆಗೆ ಮಾಂಘೀರನ್ನು ಮತ್ತೆ ಅವನಿಗೆ ಒಪ್ಪಿಸಬೇಕಾಯಿತು. ಗೊಂಡಾ ಜಿಲ್ಲೆಯನ್ನು 1129ಕ್ಕೂ ಹಿಂದೆಯೇ ರಾಷ್ಟ್ರಕೂಟ ಮದನಪಾಲನಿಂದಲೋ ಅವನ ಅನಂತರ ಬಂದ ದೊರೆಯಿಂದಲೋ ಗೆದ್ದುಕೊಂಡಿರಬೇಕೆಂದು ಊಹಿಸಲಾಗಿದೆ. ಗೌಡ, ವಂಗ, ಕಳಿಂಗ,

ತೆಲಂಗ, ಮಹಾರಾಷ್ಟ್ರ, ಸೌರಾಷ್ಟ್ರ, ಚಂಪಾರಣ, ನೇಪಾಲ, ಭೋಟ, ಚೀನ, ಲೊಹಾವರ (ಲಾಹೋರ), ಓಡ್ರ, ಮಾಳವಗಳ ದೊರೆಗಳ ವಿರುದ್ಧ ಗೋವಿಂದಚಂದ್ರ ಸೆಣಸಾಡಿ ಗೆದ್ದನೆಂದು ಹೇಳಲಾಗಿದೆ. ಕಳಿಂಗ ಒರಿಸ್ಸಗಳ ದೊರೆಯಾಗಿದ್ದ ಅನಂತವರ್ಮನ್ ಚೋಡಗಂಗನ ಪಶ್ಚಿಮದ ಕಡೆಯ ವಿಸ್ತರಣವನ್ನು ಗೋವಿಂದಚಂದ್ರ ತಡೆಗಟ್ಟಿರಬೇಕು. ಮಿಥಿಲೆಯ ನಾನ್ಯದೇವ ಗೋವಿಂದಚಂದ್ರನ ನೆರೆರಾಜ್ಯದ ದೊರೆಯಾಗಿದ್ದ. ಈ ಇಬ್ಬರ ನಡುವೆ ಕದನ ಸಂಭವಿಸಿದ್ದಿರಬೇಕು. ಮಗಧದ ಮೇಲೆ ದಂಡೆತ್ತಿ ಹೋಗಿದ್ದ ಚಾಳುಕ್ಯದೊರೆ ಸೋಮೇಶ್ವರನೂ ಗೋವಿಂದಚಂದ್ರನೊಂದಿಗೆ ಕಾದಿದ ಸಂಭವವುಂಟು. ಇಂತೆಯೇ ಇತರ ಹಲವು ರಾಜರ ವಿರುದ್ಧ ಗೋವಿಂದಚಂದ್ರ ತನ್ನ ಶೌರ್ಯಪ್ರದರ್ಶನ ಮಾಡಿದನೆನ್ನಬಹುದು. ಆದರೆ ಈತ ನೇಪಾಲ, ಚೀನ, ಟಿಬೆಟ್‌ಗಳ ಮೇಲೆ ಆಕ್ರಮಣ ನಡೆಸಿದನೆನ್ನುವುದು ಉತ್ಪ್ರೇಕ್ಷೆಯೆಂದು ಭಾವಿಸಲಾಗಿದೆ. ಗೋವಿಂದಚಂದ್ರನ ಚಿನ್ನ ಮತ್ತು ತಾಮ್ರ ನಾಣ್ಯಗಳು ಸಿಕ್ಕಿವೆ. ಗೋವಿಂದಚಂದ್ರ ಅನೇಕ ಕಲೆಗಳನ್ನು ಬಲ್ಲವನಾಗಿದ್ದ. ಇವನಿಗೆ ಅನೇಕ ರಾಣಿಯರಿದ್ದರು. ಇವರ ಪೈಕಿ ಒಬ್ಬಳು ಕುಮಾರದೇವಿ. ಈಕೆ ಬೌದ್ಧೆ, ದೇವ ರಕ್ಷಿತನ ಮಗಳು. ಗೋವಿಂದಚಂದ್ರನಿಗೆ ಆಸ್ಫೋಟಕಚಂದ್ರ, ವಿಜಯಚಂದ್ರ, ರಾಜ್ಯಪಾಲ ಎಂಬ ಮೂವರು ಮಕ್ಕಳಿದ್ದರು. ಬಹುಶಃ ಗೋವಿಂದಚಂದ್ರನ ಅನಂತರ 1154ರಿಂದ ಈಚೆಗೆ, ವಿಜಯಚಂದ್ರ ದೊರೆಯಾಗಿದ್ದ. ವಿಜಯಚಂದ್ರ ಮುಸ್ಲಿಮರ ದಂಡಯಾತ್ರೆಯೊಂದನ್ನು ಹಿಮ್ಮೆಟ್ಟಿಸಿದ. ಇವನಿಂದ ಸೋತ ಮುಸ್ಲಿಂ ಆಕ್ರಮಣಕಾರ ಬಹುಶಃ ಖುಸ್ರಾವ್ ಖಾನ್ ಇರಬೇಕು.


ವಿಜಯಚಂದ್ರನ ಅನಂತರ ಸಿಂಹಾಸನವನ್ನೇರಿದವನು (1170) ಜಯಚಂದ್ರ. ದೋಆಬ್, ಅಲಹಾಬಾದ್, ವಾರಾಣಸಿ, ಪಟ್ನಾ, ಗಯ ಇವು ಈತನ ವಶದಲ್ಲಿದ್ದುವು. ಈತ ಪೂರ್ವದಲ್ಲಿ ಸೇನ ದೊರೆಯೊಂದಿಗೆ ಘರ್ಷಣೆ ನಡೆಸಿದನೆಂದು ಹೇಳಲಾಗಿದೆ. ಜಯಚಂದ್ರನ ಮಗಳು ಸಂಯುಕ್ತೆಯನ್ನು ಅಜ್ಮೀರದ ಚಾಹಮಾನ 3ನೆಯ ಪೃಥ್ವೀರಾಜ ಪ್ರೇಮಿಸಿ ಅಪಹರಿಸಿಕೊಂಡು ಹೋದನೆಂಬ ಕಥೆಯೊಂದುಂಟು. ಇದು ನಿಜವೆಂಬುದಕ್ಕೆ ಆಧಾರಗಳಿಲ್ಲ. ಜಯಚಂದ್ರ ಕವಿಗಳಿಗೆ ಆಶ್ರಯ ನೀಡಿದ. ನೈಷಧಚರಿತದ ಕರ್ತೃವಾದ ಶ್ರೀಹರ್ಷ ಈತನ ಆಸ್ಥಾನದಲ್ಲಿದ್ದನೆಂದು ಹೇಳಲಾಗಿದೆ. ಜಯಚಂದ್ರ ಎರಡು ದಶಕಗಳಿಗೂ ಹೆಚ್ಚು ಕಾಲ ಶಾಂತಿಯಿಂದ ರಾಜ್ಯವಾಳಿದ. ಆದರೆ ಈತನ ಆಡಳಿತದ ಕೊನೆಯಲ್ಲಿ ಮಹಾ ದುರಂತವೊಂದು ಸಂಭವಿಸಿತು. ಮುಯಿಜ಼್‌ಉದ್ದೀನ್ ಮಹಮ್ಮದ್ ಘೋರಿ ದೆಹಲಿ–ಅಜ್ಮೀರಗಳನ್ನು ಜಯಿಸಿ ದೊಡ್ಡ ಸೇನೆಯೊಂದಿಗೆ ಜಯಚಂದ್ರನ ರಾಜ್ಯದ ಮೇಲೆ ಏರಿಬಂದ (1193). ಜಯಚಂದ್ರ ತನ್ನೆಲ್ಲ ಸೇನಾಬಲದೊಡನೆ ಅವನನ್ನು ಚಂದವರದಲ್ಲಿ ಎದುರಿಸಿ ಹೋರಾಡಿದ. ಆನೆಯ ಮೇಲೆ ಕುಳಿತು ಯುದ್ಧ ಮಾಡುತ್ತಿದ್ದ ಜಯಚಂದ್ರ ಸಾವಿಗೆ ಈಡಾದ. ಗಾಹದ್ವಾಲ ಸೇನೆ ಸಂಪೂರ್ಣವಾಗಿ ಸೋತುಹೋಯಿತು. ವಿಜಯೀ ಮುಸ್ಲಿಂ ಸೇನೆ ವಾರಾಣಸಿಗೆ ನುಗ್ಗಿ ಅಲ್ಲಿದ್ದ ಸಂಪತ್ತನ್ನೆಲ್ಲ ಸೂರೆಮಾಡಿತು. ಮಹಮ್ಮದ್ ಘೋರಿ ಗೆದ್ದ ಪ್ರದೇಶದ ಆಡಳಿತವನ್ನು ತನ್ನ ಕಡೆಯ ಅಧಿಕಾರಿಯೊಬ್ಬನಿಗೆ ಒಪ್ಪಿಸಿ ಸೇನೆಯೊಂದಿಗೆ ಹಿಂದಿರುಗಿದ. ಆದರೆ ಆ ಪ್ರದೇಶದ ಮೇಲೆ ಬಹಳ ಕಾಲ ಮುಸ್ಲಿಮರು ಹತೋಟಿ ಹೊಂದಲಾಗಲಿಲ್ಲ. ಜಯಚಂದ್ರ ಸತ್ತಾಗ ಅವನ ಮಗ ಹರಿಶ್ಚಂದ್ರನಿಗೆ 18 ವರ್ಷ ವಯಸ್ಸಾಗಿತ್ತು. ಈತ ಮುಸ್ಲಿಮರಿಂದ ತನ್ನ ತಂದೆಯ ರಾಜ್ಯದ ಕೆಲವು ಭಾಗಗಳನ್ನು ಬಹುಶಃ ಬಿಡಿಸಿಕೊಂಡಿರಬೇಕು. ಇವನು, ಕನೌಜ್, ಜೌನ್‌ಪುರ, ಮಿರ್ಜಾಪುರಗಳನ್ನಾಳುತ್ತಿದ್ದ. ಚಂದೆಲ್ಲ ದೊರೆ ತ್ರೈಲೋಕ್ಯವರ್ಮನ್ ಹರಿಶ್ಚಂದ್ರನ ಮೇಲೆ ಯುದ್ಧ ಮಾಡಿ ಇವನನ್ನು ಸೋಲಿಸಿದನೆಂದು ತಿಳಿದುಬರುತ್ತದೆ.

ಹರಿಶ್ಚಂದ್ರನ ಅನಂತರ ರಾಜ್ಯವಾಳುತ್ತಿದ್ದ ಗಾಹದ್ವಾಲ ದೊರೆ ಅಡಕ್ಕಮಲ್ಲನೆಂದು ಹೇಳಲಾಗಿದೆ. ಕನೌಜನ್ನು ಅಂತಿಮವಾಗಿ ಇಲ್ತುಮಿಷ್ ಗೆದ್ದುಕೊಂಡ (1226). ರಾಜ್ಯ ಕಳೆದುಕೊಂಡ ಅಡಕ್ಕಮಲ್ಲ ಮಧ್ಯಭಾರತದ ನಾಗೋಡ್ ಸಂಸ್ಥಾನದಲ್ಲಿ ನೆಲೆಸಿದನೆಂದು ತಿಳಿದುಬರುತ್ತದೆ. ಅಲ್ಲಿ ಅಡಕ್ಕಮಲ್ಲನ ಸಾಮಂತನೊಬ್ಬ ಆಳುತ್ತಿದ್ದ.

ಗಾಹಾದ್ವಾಲ ದೊರೆಗಳು ವಿಷ್ಣುಭಕ್ತರು. ಇವರ ಶಾಸನಗಳು ಲಕ್ಷ್ಮಿಯ ಸ್ತುತಿಯೊಂದಿಗೆ ಆರಂಭವಾಗುತ್ತದೆ. ಇವರು ಶಿವ ಇತ್ಯಾದಿ ದೇವತೆಗಳನ್ನೂ ಪೂಜಿಸುತ್ತಿದ್ದರು. ಇವರನ್ನು ಪರಮ ಮಹೇಶ್ವರರೆಂದೂ ಕರೆಯಲಾಗುತ್ತಿತ್ತು. ಗಾಹದ್ವಾಲ ದೊರೆಗಳು ಕಟ್ಟಿಸಿದ್ದ ಅನೇಕ ಮಂದಿರಗಳು ಮುಸ್ಲಿಮರ ದಾಳಿಗೆ ತುತ್ತಾಗಿ ನಾಶವಾದವು.

(ಎಚ್.ಎಂ.ಎನ್.ಆರ್.)

**ಗಾಳದ ಮೀನು :** ಲೋಫೀಫಾರ್ಮೀಸ್ ಗಣದ ಲೋಫಿಯಿಡೀ ಕುಟುಂಬಕ್ಕೆ ಸೇರಿದ ಲೋಫಿಯಸ್ ಜಾತಿಯ ಸಮುದ್ರವಾಸಿ ಮೀನುಗಳ ಸಾಮಾನ್ಯ ಬಳಕೆಯ ಹೆಸರು (ಆಂಗ್ಲರ್ ಫಿಶ್). ಬಲು ಸ್ವಾರಸ್ಯಕರ ಮೀನುಗಳಿವು. ಇವುಗಳ ತಲೆಯ ಮೇಲೆ ಉದ್ದವಾದ ಗಾಳದಂಥ ರಚನೆಯಿದ್ದು ಇದರಿಂದ ಇತರೆ ಬಗೆಯ ಮೀನುಗಳನ್ನು ತನ್ನೆಡೆಗೆ ಆಕರ್ಷಿಸಿ ಹಿಡಿದು ತಿನ್ನುತ್ತವೆ. ಹೀಗಾಗಿ ಇದು ಮೀನುಗಾರ ಮೀನಾಗಿದೆ. ಈ ಬಗೆಯ ವಿಚಿತ್ರ ಜೀವನಕ್ರಮದಿಂದ ಇವುಗಳಿಗೆ ಗಾಳದ ಮೀನುಗಳೆಂಬ ಹೆಸರು ಬಂದಿದೆ. ಇವುಗಳಲ್ಲಿ ಸುಮಾರು 12 ಪ್ರಭೇದಗಳಿವೆ. ಇವುಗಳಲ್ಲೆಲ್ಲ ಬಹು ಮುಖ್ಯವಾದುದು ಲೋಫಿಯಸ್ ಪಿಸ್ಕಟೋರಿಯಸ್ ಎಂಬುದು. ಇದು ಪೂರ್ವ ಅಟ್ಲಾಂಟಿಕ ಸಾಗರದ, ಬಾರೆಂಟ್ಸ್ ಸಮುದ್ರ, ಗಿಬ್ರಾಲ್ಟರ್ ಜಲ ಸಂಧಿ, ಭೂಮಧ್ಯ ಸಮುದ್ರ, ಮತ್ತು ಕಪ್ಪು ಸಮುದ್ರಗಳಲ್ಲಿ ಕಂಡು ಬರುತ್ತವೆ. ಐಸ್‌ಲೆಂಡ್ ಮತ್ತು ಮಾರಿಷಿಯಾನಾಗಳಲ್ಲೂ ಇರುವುದಾಗಿ ವರದಿಯಾಗಿದೆ. ಇವು ಸು. 200 ಸೆಂಮೀ.ವರೆಗೆ ಹಾಗೂ 57 ಕೆ.ಜಿ ವರೆಗೆ ಬೆಳೆಯುತ್ತವೆ. ಸುಮಾರು 24 ವರ್ಷಗಳವರೆಗೆ ಬದುಕಬಲ್ಲದೆಂದು ವರದಿಯಾಗಿದೆ. ಮಣ್ಣು ಅಥವಾ ಮರಳಿನಿಂದ ಕೂಡಿದ ಕಡಲ



ತಳದಲ್ಲಿ ತೀರದಿಂದ 20 ಮೀ ಆಳದಿಂದ ಹಿಡಿದು 1000 ಮೀ ಆಳದವರೆಗೆ ಇವು ವಾಸಿಸುತ್ತವೆ. ವಿಲಕ್ಷಣ ರೂಪಿಯಾಗಿದ್ದು ಚಪ್ಪಟೆ ದೇಹ, ಅಗಲವಾದ ತಲೆ, ದೇಹದ ಗಾತ್ರಕ್ಕೆ ಹೋಲಿಸಿದರೆ ಬಲುದೊಡ್ಡದಾದ ಬಾಯಿ. ಹಿಂದಕ್ಕೆ ಬಾಗಿರುವ ಮೊಟು ಹಲ್ಲುಗಳ ಪಂಕ್ತಿ, ಮೈಮೇಲೆ ಹುರುಪೆಗಳಿಲ್ಲದಿರುವುದು, ಚರ್ಮ ತೆಳು ಹಾಗೂ ಸಡಿಲವಾಗಿರುವುದು, ಉರುಟಾದ ಮತ್ತು ಮುಳ್ಳುಗಳಿಂದ ಕೂಡುದ ದೇಹದ ಮುಂಭಾಗ, ಉದ್ದವಾದ ಗಾಳವಾಗಿ ಮಾರ್ಪಟ್ಟ ಬೆನ್ನುಭಾಗದ ಈಜುರೆಕ್ಕೆಯ ಮೊದಲನೆ ಮುಳ್ಳು – ಇವು ಈ ಮೀನಿನ ಮುಖ್ಯ ಲಕ್ಷಣಗಳು. ಬಹಳ ಬಳುಕುವ ಈ ಗಾಳ ಕಣ್ಣುಗಳ ನಡುವೆ ನೆತ್ತಿಯ ಮೇಲೆ ಇದ್ದು ಬಾಯಿಯ ಮುಂದೆ ಚಾಚಿಕೊಂಡಿರುತ್ತದೆ. ಅದರ ತುದಿಯಲ್ಲಿ ಮಾಂಸಲವಾದ ಉಪಾಂಗಗಳೂ ಇವೆ. ಆಹಾರ ಮೀನುಗಳನ್ನು ತನ್ನೆಡೆ ಸೆಳೆಯಲು ಬಲು ಚಾಣಾಕ್ಷತನದಿಂದ ತನ್ನ ಗಾಳವನ್ನು ಬಳಸುತ್ತದೆ. ತನ್ನ ದೇಹವನ್ನೆಲ್ಲ ಸಮುದ್ರದ ತಳ ಭಾಗದಲ್ಲಿ ಹುದುಗಿಸಿಕೊಂಡು ಗಾಳವನ್ನು ಮಾತ್ರ ಹೊರಗೆ ಮೇಲಕ್ಕೆ ಚಾಚಿ ಅಲುಗಾಡಿಸುತ್ತಿರುತ್ತದೆ. ಇದರ ಆಕಾರ ಮತ್ತು ಚಲನೆಗಳಿಂದ ಸೆಲೆ ಹುಳುವಿನಂತೆ ಕಾಣುತ್ತದೆ. ಇದರಿಂದ ಆಕರ್ಷಿತಗೊಂಡ ಮೀನುಗಳು ಇದರ ಬಳಿಗೆ ಬಂದಾಗ ಅವುಗಳ ಮೇಲೆರಗಿ ಕಬಳಿಸುತ್ತದೆ. ಇದರ ಬಾಯಿ ದೊಡ್ಡದಿರುವುದರಿಂದ ಇದು ತನ್ನಷ್ಟೇ ದೊಡ್ಡದಾದ ಮೀನನ್ನು ನುಂಗಬಲ್ಲದು.

ಗಾಳದ ಮೀನುಗಳಲ್ಲಿ ಸಾಮಾನ್ಯವಾಗಿ ಹೆಣ್ಣಿಗಿಂತ ಗಂಡು ಮೀನುಗಳು ಚಿಕ್ಕ ಗಾತ್ರದಾಗಿದ್ದು ಸಂತಾನೋತ್ಪತ್ತಿಯ ಕಾಲದಲ್ಲಿ ಹೆಣ್ಣಿಗೆ ಅಂಟಿಕೊಂಡಿದ್ದು ಪರಾವಲಂಬಿ ಜೀವನ ನಡೆಸುತ್ತವೆ.

ಇದೇ ರೀತಿಯ ಗಾಳದ ಮೀನುಗಳನ್ನು ಹೋಲುವ ಇನ್ನಿತರ ಗಾಳದ ಮೀನುಗಳೂ ಉಂಟು. 525ಮೀ ರಿಂದ 5250ಮೀ ಆಳದಲ್ಲಿ ವಾಸಿಸುವ ಆಳ ಕಡಲಿನ ಗಾಳದ ಮೀನು (ಡೀಪ್ ಸೀ ಆಂಗ್ಲರ್ ಫಿಶ್) ಕೂಡ ಒಂದು. ಸೆರಿಯಾಟಸ್ ಇದರ ವೈಜ್ಞಾನಿಕ ನಾಮ. ಈ ಮೀನುಗಳು ಕಡಲ ಗಾಢಾಂಧಕಾರದಲ್ಲಿರುವುದರಿಂದ ಇವುಗಳ ಗಾಳದ ತುದಿ ನೀಲು ಊದಾ ಮುಂತಾದ ಬೆಳಕನ್ನು ಚೆಲ್ಲಬಲ್ಲದು. ಹೀಗೆ ಬೆಳಕು ಉತ್ಪತ್ತಿಯಾಗಲು ಕೆಲವು ರೀತಿಯ ವಿಶೇಷ ಬ್ಯಾಕ್ಟೀರಿಯಗಳು ಕಾರಣವೆಂದು ತಿಳಿದು ಬಂದಿದೆ. ಇದರಿಂದ ಇತರೆ ಮೀನುಗಳು ಆಕರ್ಷಿತವಾಗಿ ಹತ್ತಿರ ಬಂದಾಗ ಅವನ್ನು ಸುಲಭವಾಗಿ ಹಿಡಿಯಬಲ್ಲದು. ಹೆಣ್ಣು ಮೀನುಗಳಲ್ಲಿ ಮಾತ್ರ ಇಂತಹ ಗಾಳ ಇರುವುದು ಸೂಜಿಗದ ಸಂಗತಿ. ಗಂಡುಗಳಲ್ಲಿ ಗಾಳವೇ ಇರುವುದಿಲ್ಲ. ಇವುಗಳಲ್ಲೂ ಗಂಡು ಮೀನು ಹೆಣ್ಣು ಮೀನನ್ನು ಅನುಸರಿಸಿ ಜೀವನ ನಡೆಸುತ್ತದೆ.

ಬೇಸಗೆಯಲ್ಲಿ ಗಾಳದ ಮೀನುಗಳು ಸಂತಾನೋತ್ಪತ್ತಿ ನಡೆಸುತ್ತವೆ. ಮೊಟ್ಟೆಯೊಡೆದು ಬರುವ ಮರಿಗಳು ಪ್ರಬುದ್ಧಾವಸ್ಥೆಗೆ ಬರುವವರೆಗೂ ಸಮುದ್ರದ ಮೇಲ್ಪದರದಲ್ಲಿ ಈಜಾಡುತ್ತಿದ್ದು ಸಣ್ಣ ಪುಟ್ಟ ಪ್ರಾಣಿಗಳನ್ನು ತಿಂದು ಬದುಕುತ್ತದೆ. ಆನಂತರ ಕಡಲಾಳಕ್ಕಿಳಿದು ಪ್ರೌಢ ಜೀವನ ಆರಂಭಿಸುತ್ತವೆ.

(ಜಿ.ಎಸ್.ಎಚ್.ಐ.)

**ಗಾಳಿ[1] :** ಭೂಮೇಲ್ಮೈಗೆ ಸಾಪೇಕ್ಷವಾಗಿ ಚಲಿಸುವ ವಾಯು (ವಿಂಡ್). ಸಾಮಾನ್ಯವಾಗಿ ವಾಯುವಿನ (ಏರ್) ಕ್ಷಿತಿಜೀಯ ಚಲನೆಗೆ (ಊರ್ಧ್ವ ಚಲನೆಗಲ್ಲ) ಹಾಗೂ 1–3 ಮಿನಿಟುಗಳ ವರೆಗೆ ಆಯ್ದ ಅವಧಿಯಲ್ಲಿ ವಾಯುಚಲನೆಯ ಸರಾಸರಿಗೆ ಗಾಳಿ ಎನ್ನುತ್ತೇವೆ. ಆದ್ದರಿಂದ ಸೂಕ್ಷ್ಮಹವಾವೈಜ್ಞಾನಿಕ ಪರಿಚಲನೆಗಳೇ (ಮೈಕ್ರೊ ಮೀಟಿಯರಲಾಜಿಕಲ್ ಸರ್ಕ್ಯುಲೇಷನ್ಸ್) ಮುಂತಾದ ಸೂಕ್ಷ್ಮ ವಾಯುಚಲನೆಗಳು ನಮ್ಮ ಪರಿಗಣನೆಯಲ್ಲಿ ಬರುವುದಿಲ್ಲ. 1–3 ಮಿನಿಟ್ ಅಂತರದ ಆಯ್ಕೆ ನಮಗೆ ಎರಡು ರೀತಿಯಲ್ಲಿ ಸಮರ್ಪಕವಾಗಿದೆ: 1) ವಾಯುಮಂಡಲದ ಪರಿಚಲನೆಯ ಪ್ರರೂಪದಲ್ಲಿ (ಸರ್ಕ್ಯುಲೇಷನ್ ಪ್ಯಾಟರ್ನ್) ಗಂಟೆಯಿಂದ ಗಂಟೆಗೆ ಮತ್ತು ದಿವಸದಿಂದ ದಿವಸಕ್ಕೆ ಆಗುವ ಬದಲಾವಣೆಗಳನ್ನು ಅಧ್ಯಯಿಸಲು; 2) ವಾಯುಮಂಡಲದ ಸಾರ್ವತ್ರಿಕ ಪರಿಚಲನೆಯ ದೊಡ್ಡ ಗಾತ್ರದ ಪರಿಣಾಮಗಳನ್ನು ಅಧ್ಯಯಿಸಲು. ಭೂಮಿಯ ಮೇಲ್ಮೈಯಲ್ಲಿ ಗಾಳಿಯ ಪ್ರತ್ಯಕ್ಷ ಪರಿಣಾಮಗಳನ್ನು ನೆಲಕೊರೆತ, ಸಸ್ಯಲಕ್ಷಣ, ಕಟ್ಟಡಗಳಿಗೆ ಘಾಸಿ, ಜಲತರಂಗಗಳ ಉತ್ಪಾದನೆ ಇವೇ ಮುಂತಾದವುಗಳಲ್ಲಿ ಕಾಣಬಹುದು. ಎತ್ತರಕ್ಕೆ ಸಾಗಿದಂತೆ ವಾಯುವಿಮಾನಗಳ ಚಲನೆ, ಕ್ಷಿಪಣಿಗಳ ಗಮನ, ವಿಕಿರಣಪಟು ಉತ್ಪನ್ನಗಳ ಹರಡುವಿಕೆ, ಕಾರ್ಖಾನೆಗಳ ಅನಿಲೋಚ್ಚಾಟನೆಗಳ ವಿತರಣೆ ಇವುಗಳ ಮೇಲೆಲ್ಲ ಗಾಳಿ ಗಮನಾರ್ಹವಾಗಿ ಪ್ರಭಾವ ಬೀರುತ್ತದೆ. ಮೋಡಗಳ ಸಂಚಾರ, ಮಳೆಸುರಿತ, ಹವೆ ಮುಂತಾದವುಗಳ ಮೇಲೆ ಕೂಡ ಗಾಳಿಯ ಪ್ರಭಾವ ಉಂಟು. ಗಾಳಿಯ ವೇಗವನ್ನು ಅನುಸರಿಸಿ ಅದರಲ್ಲಿ ಪ್ರಭೇದಗಳನ್ನು ಮಾಡಲಾಗಿದೆ. ಇವುಗಳ ವಿವರಣೆಗೆ **(ನೋಡಿ– ಮಾರುತಗಳು; ವಾಯು)**. *

**ಗಾಳಿ[2] :** ಗಾಳಿ ಎಂಬ ಶಬ್ದಕ್ಕೆ ಎರಡು ಅರ್ಥಗಳುಂಟು. ಒಂದು–ಚಲಿಸುತ್ತಿರುವ ವಾಯು ಎಂದು; ಎರಡು–ದೆವ್ವ ಎಂದು. ಎರಡನೆಯ ಅರ್ಥದಲ್ಲಿ ಅದನ್ನು ಇಲ್ಲಿ ವಿವೇಚಿಸಲಾಗಿದೆ. ಅಕಾಲಮರಣಕ್ಕೆ ತುತ್ತಾದ ಅತೃಪ್ತಜೀವಗಳು ದೆವ್ವ ಪಿಶಾಚಿಗಳಾಗಿ ಅಲೆಯುತ್ತ ಹಲವರ ಮೈ ಹೊಕ್ಕು, ಅವರ ಮುಖಾಂತರ ಅತೃಪ್ತ ಆಸೆಗಳನ್ನು ಈಡೇರಿಸಿಕೊಂಡು ತೃಪ್ತಿಪಟ್ಟುಕೊಳ್ಳುತ್ತವೆ ಎಂಬುದು ಜನಪದ ನಂಬಿಕೆ. ಅಷ್ಟೇ ಅಲ್ಲ, ಅನ್ಯಾಯದಿಂದ ಕೊಲೆಗೀಡಾದವರು ಕೊಲೆ ಮಾಡಿದವರ ಮೇಲೆ ಸೇಡು ತೀರಿಸಿಕೊಳ್ಳಲೆಂದೇ ದೆವ್ವವಾಗಿ ಅವರಿಗೆ ಕಾಟ ಕೊಡುತ್ತಾರೆಂದೂ ಆಸ್ತಿಪಾಸ್ತಿ ಒಡವೆ ವಸ್ತುಗಳ ಮೇಲೆ ಅತಿಯಾದ ಆಸೆಯುಳ್ಳವರು, ಜಿಪುಣರು ಸತ್ತರೂ ಅವರ ಆತ್ಮ ಐಹಿಕ ಆಸೆ ಅಪೇಕ್ಷೆಗಳಿಂದ ಮುಕ್ತವಾಗದೆ ಹೀಗೇ ದೆವ್ವವಾಗಿ ಅಲೆಯುತ್ತ ಕಾಟ ಕೊಡುತ್ತಾರೆಂದೂ ನಂಬಿಕೆ. ಅಕಾಲಮರಣಕ್ಕೆ ತುತ್ತಾದವರ ಜೀವಗಳು ಅಗೋಚರವಾಗಿ ಇಹಲೋಕದಲ್ಲೇ ಅಲೆದಾಡುತ್ತಿದ್ದು ಕಾಲಪ್ರಾಪ್ತಿಯಾದಾಗ ಸ್ವರ್ಗಕ್ಕೋ ನರಕಕ್ಕೋ ಹೋಗುತ್ತವೆಂದು ತತ್ತ್ವಶಾಸ್ತ್ರ ಹೇಳುತ್ತದೆ. ಇದು ವೈಜ್ಞಾನಿಕ ಸತ್ಯವೋ ಅಲ್ಲವೋ. ಆದರೂ ಅನೂಚಾನವಾಗಿ ಜನಮನದಲ್ಲಿ ಬೇರೂರಿ ಬೆಳೆದು ಬಂದಿರುವ ಅಂಶವಿದು. ನೀನು ಗಾಳಿಪಾಲಾಗ ಎಂಬ ಬೈಗಳೂ ಗಾಳಿ ಹಿಡಿದವನ್ಹಂಗೆ, ಗಾಳಿ ಹೊಕ್ಕವನ್ಹಂಗೆ ಎಂಬ ಮಾತುಗಳೂ ಗಾಳಿಯ ಅಸ್ತಿತ್ವವನ್ನು ಸೂಚಿಸುತ್ತವೆ. ಮನೋವಿಜ್ಞಾನ ಇದನ್ನು ಉನ್ಮಾದವೆಂದೂ ಅದುಮಿಟ್ಟ ಅತೃಪ್ತ ಭಾವನೆಗಳಿಂದ ಹದಗೆಟ್ಟ ಚಿತ್ತಕ್ಷೋಭೆಯೆಂದೂ ಹೇಳಬಹುದು. ಆದರೆ ಗಾಳಿ ಹಿಡಿದವರ ಮಾತುಕತೆಗಳನ್ನು ಕೇಳಿದವರಿಗೆ ಕಣ್ಣಾರೆ ನೋಡಿದವರಿಗೆ ವಿಜ್ಞಾನ ಒದಗಿಸುವ ಕಾರಣಗಳಲ್ಲಿ ಅಷ್ಟಾಗಿ ನಂಬಿಕೆ ಬರುವುದಿಲ್ಲ. ಪ್ರಪಂಚಾದ್ಯಂತ ಆದಿವಾಸಿಗಳಲ್ಲಿ ದೆವ್ವ ಬಿಡಿಸುವ ವಿಶಿಷ್ಟ ವೈದ್ಯರಿದ್ದರೆಂದು ತಿಳಿದುಬಂದಿದೆ. ಅವರು ತಮ್ಮ ವಿಚಿತ್ರ ಉಪಕರಣಗಳಿಂದ ವಿಶಿಷ್ಟ ಮಂತ್ರಗಳಿಂದ ದೆವ್ವವನ್ನು ಬಿಡಿಸುತ್ತಿದ್ದರು.

ಗಾಳಿ ಹಿಡಿದ ಹೆಣ್ಣೊಬ್ಬಳನ್ನು ಒಮ್ಮೆ ಸಿದ್ಧಗಂಗಾಕ್ಷೇತ್ರಕ್ಕೆ ಕರೆತಂದಿದ್ದರು. ಸ್ವಾಮಿಗಳು ಆಕೆಯ ಸ್ವಲ್ಪ ಕೂದಲನ್ನು ಬೆರಳಲ್ಲಿ ಸುತ್ತಿಕೊಂಡು (ಹಾಗೆ ಸುತ್ತಿಕೊಂಡರೆ ಮೈಮೇಲಿರುವ ಗಾಳಿ ಪರಾರಿಯಾಗಲು ಸಾಧ್ಯವಿಲ್ಲವಂತೆ) ಮಂತ್ರಗಳನ್ನು ಪಠಿಸಿ ವಿಭೂತಿಯ ಧೂಳನ್ನು ಆಕೆಯ ಮೈಮೇಲೆ ಉರುಬಿದಾಗ ಸುಟ್ಟುಕೊಂಡವಳಂತೆ ಬೆವರಿದ ಆಕೆ ಎಲ್ಲವನ್ನೂ ಹೇಳುವುದಾಗಿ ಬಾಯಿಬಿಟ್ಟಳು. ಸ್ವಾಮಿಗಳು ಒಂದೊಂದೇ ಪ್ರಶ್ನೆ ಕೇಳುತ್ತ ಹೊರಟರು. ಅವಳ ಮೈಮೇಲಿದ್ದ ಗಾಳಿ ಉತ್ತರಿಸುತ್ತ ಹೋಯಿತು. ತಾನು ಇಂಥವಳೆಂದೂ ಹಗೆಗಳು ಅನ್ಯಾಯದಿಂದ ತನ್ನನ್ನು ಸಾಯಿಸಿದರೆಂದೂ ಅದಕ್ಕಾಗಿ ದೆವ್ವವಾಗಿ ಅವರ ಮನೆಯ ಇಷ್ಟು ಜನರನ್ನು ಆಹುತಿ ತೆಗೆದುಕೊಂಡೆನೆಂದೂ ಗಾಳಿ ಹೇಳಿತು. ಬಾವಿಯ ಬಳಿ ನೀರು ಕುಡಿಯಲು ಬಂದಾಗ ಅವರನ್ನು ಬಾವಿಗೆ ತಳ್ಳಿದನೆಂದೂ ಅವರ ಹೆಸರು ಇಂಥದೆಂದೂ ಗಾಳಿ ಹೇಳಿದ ಮಾತುಗಳು ವಾಸ್ತವ ವಿಷಯಗಳಾಗಿದ್ದವು. ಇಷ್ಟು ಜನರನ್ನು ಕೊಂದು ಗಳಿಸಿದ ಶಾಪ ಸಾಕೆಂದೂ ಇನ್ನು ಆ ಕ್ಷೇತ್ರದಲ್ಲೇ ತಮಗೆ ಪಾಪ ಪರಿಹಾರ ಮಾಡಿಕೊಳ್ಳಬೇಕೆಂದೂ, ಒಪ್ಪಿಗೆಯಿದ್ದರೆ ಏನಾದರೂ ಗುರುತು ಕೊಡತಕ್ಕದೆಂದೂ ಸ್ವಾಮಿಗಳು ಕೇಳಿದಾಗ ಗಾಳಿಹಿಡಿದ ಹೆಣ್ಣು ತನ್ನ ತಲೆಯಿಂದ ಒಂದು ಹಿಡಿಕೂದಲನ್ನು ಕಿತ್ತುಕೊಟ್ಟಳು. ಆಮೇಲೆ ಮತ್ತೆ ದೆವ್ವ ಬರಲಿಲ್ಲವೆಂದೂ ಸುಖವಾಗಿದ್ದಾಳೆಂದೂ ತಿಳಿದುಬಂತು.

ಗಾಳಿ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ ನಡೆಯಬೇಕಾಗಿದೆ. ಹಿಡಿದ ಗಾಳಿಯನ್ನು ಬಿಡಿಸಲು ಅನುಸರಿಸುವ ಪ್ರಮುಖ ವಿಧಾನವೊಂದರ ವಿವರಗಳಿಗೆ **ನೋಡಿ– ಕಲ್ಲುಹುಯ್ಯಿಸುವುದು.** (ಎಸ್‌ಯು.)

**ಗಾಳಿಗೂಡೊಡೆದ ರೋಗ :** ಕುದುರೆಗಳಲ್ಲಿ ಮಾತ್ರ ಕಾಣಬರುವ ಉಸಿರಾಟ ಸಂಬಂಧಿರೋಗ. ಕಟ್ಟುಸಿರು (ಹೀವ್ಸ್), ಗಾಳಿಗೂಡಿನ ಬಿರಿತ (ಅಲ್‌ವಿಯೋಲಾರ್ ಎಂಫೈಸೀಮ) ಪರ್ಯಾಯನಾಮಗಳು. ಪುಪ್ಪಸದ ಗಾಳಿ ಗೂಡುಗಳ ಹಿಗ್ಗುವಿಕೆ, ಪುಪ್ಪಸಗಳಲ್ಲಿ ದೊಡ್ಡ ಪೊಳ್ಳುಗಳುಂಟಾಗುವುದು–ಇವು ಇದರ ಲಕ್ಷಣಗಳು. ಇವುಗಳಿಂದಾಗಿ ಪುಪ್ಪಸದ ಗಾತ್ರ ಕಡಿಮೆಯಾಗಿ ಉಸಿರಾಟದಲ್ಲಿ ಅಸಮರ್ಪಕತೆ ತಲೆದೋರುತ್ತದೆ. ವಾಯುವಿನಿಮಯವೂ ಸರಿಯಾಗಿ ಸಾಗದು. ರೋಗಕ್ಕೆ ನಿರ್ದಿಷ್ಟ ಕಾರಣಗಳು ಇನ್ನೂ ಸರಿಯಾಗಿ ಗೊತ್ತಾಗಿಲ್ಲ. ಪುಪ್ಪಸದ ಉರಿತ, ಕೊರಾದ ಪಂಗುಸಿರ್ನಾಳದ ಉರಿಯೂತ, ದೀರ್ಘಕಾಲದ ಕೆಮ್ಮು, ಬೇರೂರಿದ ಪಂಗುಸಿರ್ನಾಳದ ಉರಿಯೂತ ಮುಂತಾದವೂ ಕೆಲವು ಕಾರಣಗಳು. ಸೇವನೆಯ ಏರುಪೇರುಗಳಿಂದಲೂ ಇದು ಬರಬಹುದು. ತೇವಪೂರಿತ ವಾತಾವರಣ, ಹೆಚ್ಚಿನ ಕೆಲಸ, ಹೆಚ್ಚಾದ ಆಹಾರ, ಶೀತ ಹಾಗೂ ಬಿರುಗಾಳಿ ಪರಿಸ್ಥಿತಿಗಳಲ್ಲಿ ಕುದುರೆಗಳು ಈ ಬೇನೆಗೆ ಒಳಗಾಗುತ್ತವೆ. ದೂಳಿನಿಂದ ಆವೃತವಾದ ಪರಿಸರದಲ್ಲಿ ಇಬ್ಬನಿ ಇರುವ ಹುಲ್ಲನ್ನು ಮೇಯುವುದರಿಂದಲೂ ಹಸಿಯಾದ ಹಾಗೂ ಬೂಷ್ಟು ಬೆಳೆದಿರುವ ಆಹಾರವನ್ನು ತಿನ್ನುವುದರಿಂದಲೂ ಈ ರೋಗ ಬರುತ್ತದೆ. ತಿಮೋಥಿ ಕೆಂಪು ಕ್ಲೋವರ್, ಕುದುರೆ ಮಸಾಲೆ ಸೊಪ್ಪು ಹಾಗೂ ಇತರ ಜಾತಿಯ ಬೆಳೆಸಿದ ಮೇವನ್ನು ಕೊಡುವುದರಿಂದಲೂ ಈ ಬೇನೆ ಕಾಣಿಸಿಕೊಳ್ಳುತ್ತದೆ. ಡಿಕ್ಟಿಯೊಕೆವೊಲಸ್ ಆರ್ನ್‌ಫೆಲ್ಡಿ ಜಾತಿಯ ಹುಳುಗಳು ಪುಪ್ಪಸದಲ್ಲಿ ಇರುವುದರಿಂದಲೂ ಗಾಳಿಗೂಡೊಡೆದ ರೋಗ ಬರುವುದೆಂಬ ನಂಬಿಕೆ ಉಂಟು. ಹೆಚ್ಚು ಕಾಲ ಲಾಯದಲ್ಲಿರುವ ಕುದುರೆಗಳಲ್ಲಿ ಈ ರೋಗ ಹೆಚ್ಚು. ಹುಲ್ಲುಗಾವಲಿನಲ್ಲಿ ಸ್ವತಂತ್ರವಾಗಿ ಮೇಯುವ ಕುದುರೆಗಳಲ್ಲಿ ಇದು ಅಷ್ಟಾಗಿ ಕಾಣದು. ಒಣಹುಲ್ಲು ಹಾಗೂ ಬಾರ್ಲಿಯನ್ನು ಮೇಯುವ ಕುದುರೆಗಳಲ್ಲಂತೂ ಈ ಬೇನೆ ಬರುವುದೇ ಇಲ್ಲ. ಒಂದು ರೀತಿಯ ಆಸ್ತಮಾದಿಂದಲೂ ಈ ರೋಗ ಉಂಟಾಗುತ್ತದೆ. ಚೆನ್ನಾಗಿ ಬೆಳೆಸಿದ ಒಳ್ಳೆಯ ತಳಿಗಳಲ್ಲಿ ಅಷ್ಟಾಗಿ ಕಾಣಬರದು. ಆದರೆ ಸ್ಥೂಲಕಾಯದ, ಗಿಡ್ಡಕಾಲಿನ, ದೊಡ್ಡಹೊಟ್ಟೆಯ ಕುದುರೆಗಳು ಈ ರೋಗಕ್ಕೆ ಸುಲಭವಾಗಿ ತುತ್ತಾಗುತ್ತವೆ. ವಿಪರೀತ ಕೆಲಸ ಮಾಡುವ ಕುದುರೆಗಳಿಗೆ ಸರಿಯಾದ ಆಹಾರ ಸಿಗದೆ ಹೋದರೆ ಅವುಗಳ ಪುಪ್ಪಸ ತನ್ನ ರೋಗನಿರೋಧಕ ಶಕ್ತಿಯನ್ನು ಕಳೆದುಕೊಂಡು ರೋಗಪೀಡಿತವಾಗುತ್ತದೆ.

ಈ ಬೇನೆ ಭಾರತದಲ್ಲಿ ಅಷ್ಟಾಗಿಲ್ಲ. ಅರಬ್ ದೇಶದಲ್ಲಿ ಇಲ್ಲವೇ ಇಲ್ಲ. ಯೂರೋಪಿನ ವಿವಿಧ ದೇಶಗಳಲ್ಲೂ ಬಹು ವಿರಳ. ಅಮೆರಿಕ ಸಂಯುಕ್ತ ಸಂಸ್ಥಾನದ ವಿವಿಧ ಭಾಗಗಳಲ್ಲಿ ವ್ಯಾಪಕವಾಗಿದೆ. ಮಾತ್ರವಲ್ಲ ಅಲ್ಲಿ ಈ ರೋಗ ವರ್ಷವರ್ಷವೂ ಹೆಚ್ಚುತ್ತಿದೆ.

ರೋಗಲಕ್ಷಣಗಳು: ಬಹಳ ನಿಧಾನವಾಗಿ ಕಾಣಿಸಿಕೊಳ್ಳುತ್ತವೆ. ಮೊದಲು ಕಾಣಿಸಿಕೊಳ್ಳುವುದು ಕೆಮ್ಮು. ಎಡೆಬಿಡದೆ ಬರುವ ಕೆಮ್ಮನ್ನು ತಾಳಲಾರದೆ ಕುದುರೆ ನರಳುತ್ತದೆ. ಅನಂತರ ಮೂಗಿನಲ್ಲಿ ನೀರು ಸುರಿಯಲು ಆರಂಭವಾಗುತ್ತದೆ. ಕುದುರೆಗೆ ವಿಶ್ರಾಂತಿ ಕೊಡದೆ ಓಡಾಡಿಸಿದರೆ ಆಗ ಅದು ಉಸಿರಾಡಲು ತೊಳಲಾಡುತ್ತದೆ. ರೋಗದ ಮೊದಲ ದಿನಗಳಲ್ಲಿ ಕುದುರೆ ವಿಶ್ರಾಂತಿ ಪಡೆಯುತ್ತಿರುವಾಗ ಅದರ ಉಸಿರಾಟ ಸರಾಗವಾಗಿ ಇರುತ್ತದೆ. ಮುಂದೆ ರೋಗ ಉಲ್ಬಣವಾಗುತ್ತ ಹೋದಹಾಗೆ ಉಸಿರಾಡುವುದು ಕಷ್ಟವಾಗುತ್ತ ಬರುತ್ತದೆ. ಇದರಿಂದ ರೋಗಸ್ಥಿತಿಯನ್ನು ಬಹಳ ಸುಲಭವಾಗಿ ಗುರುತಿಸಬಹುದು. ಕೆಮ್ಮುವಾಗ ಸೀನು ಇರುವುದಿಲ್ಲ. ಕುದುರೆಯಿಂದ ಶ್ರಮದಾಯಕ ಕೆಲಸಮಾಡಿಸಿದರೆ ಕೆಮ್ಮು ಹೆಚ್ಚಾಗುತ್ತದೆ. ಎಲ್ಲಿಯೊ ದೂರದಲ್ಲಿ ಕೆಮ್ಮಿದ ಹಾಗೆ ಸದ್ದು ಉಂಟಾಗುತ್ತದೆ. ಸಾಮಾನ್ಯವಾಗಿ ಉಸಿರಾಟದ ವೇಗ ಹೆಚ್ಚುತ್ತದೆ. ಉಸಿರೆಳೆದುಕೊಳ್ಳುವುದರಲ್ಲಿ ಯಾವ ಬದಲಾವಣೆ ಇಲ್ಲದಿದ್ದರೂ ಉಸಿರು ಬಿಡುವಾಗ ಕುದುರೆಗೆ ಕಷ್ಟವಾಗುತ್ತದೆ. ಅಲ್ಲದೆ ನಿಃಶ್ವಾಸದಲ್ಲಿ ಎರಡು ಹಂತಗಳನ್ನು ಕಾಣಬಹುದು. ಜೊತೆಗೆ ಒಡಕು ಇಲ್ಲವೆ ಶಿಳ್ಳೆಯ ಶಬ್ದವೂ ಬರುತ್ತದೆ. ಅಲ್ಲದೆ ಹಿಸ್ ಹಿಸ್ ಎಂಬ ಸದ್ದೂ ಉಂಟಾಗುತ್ತದೆ. ಎದೆಗೂಡು ವಿಶಾಲವಾದಂತಾಗಿ ಪುಪ್ಪಸದ ಅಂಗಾಂಶಗಳು ತನ್ನ ಪುಟಿತತೆಯನ್ನು ಕಳೆದುಕೊಳ್ಳುತ್ತವೆ. ಪುಪ್ಪಸದ ಪರೆ ಬಿಳಿಚಿಕೊಳ್ಳುತ್ತದೆ. ಪಕ್ಕೆಲಬುಗಳ

ಹಿಂದಿನ ಭಾಗದಲ್ಲಿ ಗುಳಿ ಬೀಳುತ್ತದೆ. ಅಲ್ಲಿನ ಸ್ನಾಯುಗಳು ಇಳಿಬೀಳುತ್ತವೆ. ಪುಪ್ಪುಸದ ಒಳಶಬ್ದವನ್ನು ಸ್ಟೆತೋಸ್ಕೋಪಿನ ಸಹಾಯದಿಂದ ಕೇಳಬಹುದು. ಪುಪ್ಪುಸದಲ್ಲಿ ಚಿಟಗುಟ್ಟುವ ಶಬ್ದದ ಅಲೆಗಳು ಸ್ಫುಟವಾಗಿ ಕೇಳುವುದರ ಜೊತೆಗೆ ರಕ್ತನಾಳಗಳ ಮರ್ಮರ ಧ್ವನಿಯೂ ಕೇಳಿಬರುತ್ತದೆ.

**ರೋಗನಿದಾನ:** ರೋಗ ಚೆನ್ನಾಗಿ ಉಲ್ಬಣಿಸಿದ ಮೇಲೆಯೆ ಅದನ್ನು ಗುರುತಿಸಲು ಸಾಧ್ಯವಾಗುವುದರಿಂದ ಕುದುರೆಗಳನ್ನು ಕೊಳ್ಳುವಾಗ ಪರಿಣಿತ ಪಶು ವೈದ್ಯರಿಂದ ಪರೀಕ್ಷೆ ಮಾಡಿಸಿ ರೋಗ ಇದೆಯೊ ಇಲ್ಲವೊ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಹೆನ್‌ಬೇನ್, ದತ್ತೂರಿ, ಬೆಲಡೊನ ಬೀಜ ಮುಂತಾದ ಮತ್ತು ಬರಿಸುವ ಔಷಧಿಗಳನ್ನು ಬಳಸಿ ಗಾಳಿಗೂಡೊಡೆದ ರೋಗವನ್ನು ಮರೆಮಾಡಬಹುದಾದ್ದರಿಂದ ಕುದುರೆಗಳನ್ನು ಕೊಳ್ಳುವಾಗ ಈ ವಿಷಯದಲ್ಲಿ ಸಾಕಷ್ಟು ಎಚ್ಚರ ವಹಿಸಬೇಕು.

ಗಾಳಿಗೂಡೊಡೆದ ರೋಗಕ್ಕೆ ಸರಿಯಾದ ಔಷಧಿಗಳಿಲ್ಲ. ಕುದುರೆಗಳು ಒಮ್ಮೆ ರೋಗಪೀಡಿತವಾದರೆ ಅವನ್ನು ಗುಣಪಡಿಸುವದು ಕಷ್ಟ. ಇದರಿಂದ ರೋಗಬಾರದಂತೆ ಮೊದಲೇ ಎಚ್ಚರ ವಹಿಸುವುದು ವಿಹಿತ. ಕುದುರೆಗಳಿಗೆ ಹಗುರಾದ ಕೆಲಸವನ್ನು ಕೊಡುವುದರಿಂದ, ಅವನ್ನು ಶೀತದಿಂದ ರಕ್ಷಿಸುವುದರಿಂದ, ಮಿತವಾದ ಪೌಷ್ಟಿಕ ಆಹಾರ ಕೊಡುವುದರಿಂದ, ಒಣಗಿದ ಮತ್ತು ಒಳ್ಳೆಯ ಹುಲ್ಲನ್ನು ತಿನ್ನಿಸುವುದರಿಂದ ರೋಗವನ್ನು ತಡೆಗಟ್ಟಬಹುದು. ಫೌಲರನ ಆರ್ಸೆನಿಕ್ ದ್ರಾವಣ ಹಾಗೂ ಶಾಮಕ ಔಷಧಗಳ (ಸಡೇಟಿವ್ಸ್) ಬಳಕೆಯಿಂದಲೂ ಇದನ್ನು ತಡೆಯಬಹುದು. (ಜಿ.ಆರ್.ಆರ್.ಎಸ್.)

**ಗಾಳಿತುಂಬಿದೆದೆ :** ಎದೆಗೂಡಿನ ಎರಡು ಪಕ್ಕಗಳಲ್ಲೂ ಇರುವ ಅಳ್ಳೆಪೊರೆಯ (ಪ್ಲೂರಲ್) ಪೊಳ್ಳಿನಲ್ಲಿ ಗಾಳಿಯೋ ಅನಿಲವೋ ತುಂಬಿರುವಿಕೆ (ನ್ಯೂಮೋತೋರಾಕ್ಸ್). ರೋಗದಿಂದ ಇಲ್ಲವೇ ಆಕಸ್ಮಿಕಗಳಿಂದಾದ ಕಾಯಿಲೆಯನ್ನು ಸಹಜವಾಗಿ ಆದದ್ದೆಂದೂ ಪುಪ್ಪುಸಗಳ ರೋಗದ ಚಿಕಿತ್ಸೆಗಾಗಿ ವೈದ್ಯನೇ ಒಳಕ್ಕೆ ಗಾಳಿಯನ್ನು ಚುಚ್ಚಿ ಹೊಗಿಸಿ ಆದುದನ್ನು ಕೃತಕವಾದದ್ದೆಂದೂ ಹೇಳುತ್ತಾರೆ. ಸಹಜವಾಗಿ ಗಾಳಿತುಂಬಿದೆದೆ ಆದಾಗ ಅಳ್ಳೆಪೊರೆಯ ಪೊಳ್ಳಿನೊಳಕ್ಕೆ ಸಾಧಾರಣವಾಗಿ ಪುಪ್ಪುಸದಿಂದ ವಾಯು ನುಗ್ಗುವುದು. ಪುಪ್ಪುಸದ ಮೇಲ್ಮೈಯ ಹತ್ತಿರ ಇರುವ ಕ್ಷಯದ ಗೂಡು ಒಡೆದುಕೊಂಡು ಉಸಿರ್ನಾಳದಲ್ಲಿರುವ ವಾಯು ಪೊಳ್ಳಿನೊಳಕ್ಕೆ ತೂರುವುದು ಸಾಮಾನ್ಯ. ಅಪರೂಪವಾಗಿ ಗೂರಲು ರೋಗಿಗಳಲ್ಲಿ ಆಗಿರುವಂತೆ ಹಿರಿಹಿಗ್ಗಿದ ಗಾಳಿಯುಬ್ಬಟೆಯ (ಎಂಫಿಸೀಮ್ಯಾಟಸ್) ಕಿರುಕೋಶ ಒಡೆದುಕೊಂಡರೂ ಹೀಗಾಗಬಹುದು. ಇನ್ನುಳಿದವರಲ್ಲಿ ಗಾಳಿತುಂಬೆದೆದೆ ಆಗಲು ಎದೆಗೆ ಬಿದ್ದ ಪೆಟ್ಟು, ಇಲ್ಲವೆ ಮುರಿತ ಮುಂತಾದವು ಕಾರಣ. ಆದರೆ ಸಹಜವಾಗಿ ಆಗುವ ಈ ಕಾಯಿಲೆಗೆ 90% ಮಂದಿಯಲ್ಲಿ ಪುಪ್ಪುಸದ ಕ್ಷಯವೇ ಕಾರಣ.

ಸಾಮಾನ್ಯವಾಗಿ ಗಾಳಿತುಂಬಿದೆದೆ ಇದ್ದಕ್ಕಿದ್ದ ಹಾಗೆ ತಲೆದೋರುತ್ತದೆ. ರೋಗಿ ವಿರಮಿಸಿಕೊಳ್ಳುತ್ತಿರುವಾಗ ಕೂಡ ಇದು ತಲೆದೋರಬಹುದು. ಆಗ ಎದೆಯ ಪಕ್ಕೆಯಲ್ಲಿ ಇದ್ದಕ್ಕಿದ್ದ ಹಾಗೆ ಇರಿವಂಥ ಚಳುಕು, ಉರಿಯಾಗಿ ಉಸಿರಾಡಲು ಬಹುಮಟ್ಟಿಗೆ ಕಷ್ಟವಾಗುತ್ತದೆ. ಪುಪ್ಪುಸ ಒಡೆಬಿರಿದು ಅದರ ಹೊದಿಕೆಯಾಗಿರುವ ಅಳ್ಳೆಪೊರೆ ಹರಿದಿರುತ್ತದೆ. ಅಳ್ಳೆಪೊರೆಯ ಪೊಳ್ಳಿನೊಳಕ್ಕೆ ಆಗ ಸಹಜವಾಗಿ ವಾಯು ನುಗ್ಗಿ ಅದೇ ಪಕ್ಕದ ಪುಪ್ಪುಸ ಚಿಕ್ಕದಾಗಿ ಮುದುರಿಕೊಳ್ಳುವುದು. ಎದೆಯ ನಡುವೆ ಇರುವ ಗುಂಡಿಗೆ ಆಗ ರೋಗವಿಲ್ಲದ ಪಕ್ಕಕ್ಕೆ ತಳ್ಳಿದಂತಾಗಿ ಸರಿಯುತ್ತದೆ. ರೋಗಿ ಹೆಜ್ಜೆಹಾಕಲಾರದೆ ಕುಸಿದುಬೀಳುತ್ತಾನೆ. ಹಾಸಿಗೆಯಲ್ಲಿ ಮಲಗಿಸಿದರೆ ರೋಗದ ಪಕ್ಕಕ್ಕೆ ವಾಲಿಕೊಂಡು ದಿಂಬಿಗೆ ಒರಗಿಕೊಳ್ಳುತ್ತಾನೆ.

ಸಹಜವಾಗಿ ಆಗುವ ಗಾಳಿತುಂಬಿದೆದೆಯ ಕೆಲವು ಬಗೆಗಳಲ್ಲಿ ಪುಪ್ಪುಸಕ್ಕೂ ಅಳ್ಳೆಪೊರೆಗೂ ನಡುವೆ ಇರುವ ಕಂಡಿ ತೆರೆದೇ ಇರುವುದರಿಂದ ರೋಗಿ ಉಸಿರಾಡಿದಂತೆಲ್ಲ ಸಿಳ್ಳೆಹಾಕುವ ಸದ್ದಾಗುವುದು. ಆಗ ಅಳ್ಳೆಪೊರೆಯ ಪೊಳ್ಳಿನಲ್ಲಿ ಒತ್ತಡ ಶೂನ್ಯವಾಗಿದ್ದುದು ವಾಯುವಿನ ಒತ್ತಡದ ಸಮಕ್ಕೆ ಬರುತ್ತದೆ. ಇನ್ನು ಕೆಲವರಲ್ಲಿ ಅಳ್ಳೆಪೊರೆಯ ಹರಿದ ಚೂರು ಕವಾಟದಂತಾಗಿ ಪುಪ್ಪುಸದಿಂದ ಅಳ್ಳೆಪೊರೆಯ ಪೊಳ್ಳಿನೊಳಕ್ಕೆ ವಾಯು ತೂರಲು ಬಿಟ್ಟು ವಾಯು ಹಿಂತಿರುಗಲು ಬಿಡದಂತಾಗುವುದು. ಆಗ ಪೊಳ್ಳಿನೊಳಗಿನ ಒತ್ತಡ ವಿಪರೀತ ಹೆಚ್ಚಿ ಉಸಿರಾಟಕ್ಕೆ ಬಲು ತೊಡಕಾಗುತ್ತದೆ. ಕೂಡಲೇ ಎದೆಗೆ ತೂತುಸೂಜಿ ಚುಚ್ಚಿ ವಾಯುವನ್ನು ಹೊರಕ್ಕೆ ಬಿಟ್ಟರೆ ಶಮನವಾಗುವುದು.

**ಕೃತಕ ಗಾಳಿತುಂಬಿದೆದೆ :** ಪುಪ್ಪುಸದ ಕೆಲವು ಬಗೆಗಳ ಕ್ಷಯ, ಗಾಳಿಯುಬ್ಬಟೆ ರೋಗಗಳಲ್ಲಿ ಬೇಕೆಂದೆ ಪಕ್ಕದ ಪುಪ್ಪುಸಕ್ಕೆ ವಿರಾಮಕೊಡಲು ಅದು ಮುದುರಿಕೊಳ್ಳುವಂತೆ ಮಾಡುವುದೂ ಒಂದು ಚಿಕಿತ್ಸೆ. ಎರಡು ಪಕ್ಕೆಲುಬುಗಳ ನಡುವೆ ಎದೆಗೂಡಿನ ಗೋಡೆಯಲ್ಲಿ ತೂತುಸೂಜಿ ಚುಚ್ಚಿ ಅಳ್ಳೆಪೊರೆ ಪೊಳ್ಳಿನೊಳಕ್ಕೆ ವಾಯುವನ್ನು ಬಿಡುವರು. ಒಂದಕ್ಕೊಂದು ಕೊಳವೆಗಳ ಮೂಲಕ ಸಂಬಂಧಿಸಿರುವ ನಂಜುರೋಧಕ ದ್ರವವಿರುವ ಎರಡು ದೊಡ್ಡ ಸೀಸೆಗಳಿಗೆ ರಬ್ಬರು ಕೊಳವೆ ಮೂಲಕ ತಗಲಿಸಿದ ತೂತುಸೂಜಿಯನ್ನು ಎದೆಯೊಳಕ್ಕೆ ಚುಚ್ಚಬೇಕು. ಒಂದು ಸೀಸೆಯನ್ನು ಮೇಲೆತ್ತಿ ಹಿಡಿದರೆ ಅದರಲ್ಲಿ ದ್ರವ ಅಳ್ಳೆಪೊರೆಯ ಪೊಳ್ಳಿನೊಳಗಣ ಒತ್ತಡವನ್ನು ಒತ್ತಡಮಾಪಿ ಗುರುತಿಸುತ್ತದೆ. ಒಂದೊಂದು ಬಾರಿಗೂ ಕೊಂಚವೇ ತುಂಬಿದಾಗ ವಾಯು ಹೀರಿಹೋಗುವುದರಿಂದ ಮತ್ತೆ ಮತ್ತೆ ಅದನ್ನು ತುಂಬುತ್ತಿರಬೇಕಾಗುವುದು. ಹೀಗೇ ಎದೆಯಲ್ಲಿ ತುಂಬಿದ್ದರೆ ಆ ಭಾಗದ ಪುಪ್ಪುಸ ಚಲಿಸದೆ ಮುದುರಿಕೊಂಡು ವಿರಮಿಸುವುದರಿಂದ ಅದರೊಳಗಿನ ರೋಗ ವಾಸಿಯಾಗಲು ಅವಕಾಶ ಕೊಟ್ಟಂತಾಗುವುದು (**ನೋಡಿ– ಕ್ಷಯ–2**). ಕ್ಷಯ ರೋಗಾಣುಮಾರಕವಾದ ಇಂದಿನ ಹೊಸ ಮದ್ದುಗಳು ಬರುವತನಕ ಕೃತಕ ಗಾಳಿತುಂಬಿದೆದೆ ರೋಗಿಗೆ ಕ್ಷಯರೋಗಿಗೆ ಮಾಡುವ ಮದ್ದನ್ನೇ ಮಾಡಲಾಗುತ್ತಿತ್ತು. ಒಂದು ಬಾರಿ ಇದನ್ನು ಆರಂಭಿಸಿದರೆ ಎರಡು ವರ್ಷಗಳ ವರೆಗಾದರೂ ಕೊಡಬೇಕಿತ್ತು. ಇದರಿಂದ ಹಲವು ತೊಡಕುಗಳು ಏಳುತ್ತಿದ್ದವು. ಎದೆಗೆ ಹಾಕಿದ ಸೂಜಿ ಅಳ್ಳೆಪೊರೆಗೆ ತಾಗಿದ ಕೂಡಲೇ ಕೆಲವರು ಸಾಯುತ್ತಿದ್ದರು. ಒಳಗೆ ಬಿಟ್ಟ ವಾಯು ರಕ್ತನಾಳದೊಳಕ್ಕೂ ಅಪರೂಪವಾಗಿ ಹೋಗಿಬಿಡುತ್ತಿತ್ತು. ಎದೆಯಲ್ಲಿ ಸೋಂಕುಹತ್ತಿ ಕೀವು ಸೇರಿಬಿಡುತ್ತಿತ್ತು. ಉಸಿರಾಟದ ಆಳವೂ ಕುಗ್ಗಿ ಪುಪ್ಪುಸ ಮತ್ತೆ ಎಂದಿನಂತೆ ಹಿಗ್ಗದೆ ನಾರುಗಟ್ಟುತ್ತಿತ್ತು. ಎಲ್ಲಕ್ಕೂ ಹೆಚ್ಚಿನದಾಗಿ ರೋಗಿ ಸಾಕಷ್ಟು ಕಳವಳಕ್ಕೀಡಾಗುತ್ತಿದ್ದ. 1950ರಿಂದ ಈಚೆಗೆ ಈ ಚಿಕಿತ್ಸೆ ಬಳಕೆಯಲ್ಲಿಲ್ಲ (**ನೋಡಿ– ಉಸಿರಾಟ**) (**ನೋಡಿ– ಉಸಿರಾಟದ–ಮಂಡಲದ–ಅಂಗರಚನೆ**). (ವೆ.ಆರ್.;ಡಿ.ಎಸ್.ಎಸ್.)

**ಗಾಳಿಪಟ :** ನೆಲದೆಡೆಗೆ ಸಾಗಿರುವ ಉದ್ದವಾದ ದಾರದ ಒಂದು ಕೊನೆಗೆ ಬಂಧಿತವಾಗಿರುವ ಹಾರಾಟ ಸಾಧನ (ಕೈಟ್) ಗಾಳಿಪಟ ಹಾರಿಸುವಾತ ನೆಲದ ಮೇಲೆ ನಿಂತು ಇಲ್ಲವೇ ಚಲಿಸುತ್ತ, ದಾರವನ್ನು ಹಿಡಿದು ಜಗ್ಗುವುದರ ಅಥವಾ ಸಡಿಲಬಿಡುವುದರ ಮೂಲಕ ಗಾಳಿಪಟವನ್ನು ನಿಯಂತ್ರಿಸುತ್ತಾನೆ. ಇದರಿಂದ ಮತ್ತು ವಾಯುವಿಗೆ ಸಹಜವಾಗಿ ಇರಬಹುದಾದ ಚಲನೆಯಿಂದ ಜನಿಸುವ ವಾಯುವಿನ ಸಾಪೇಕ್ಷಚಲನೆ ಉತ್ಪಾದಿಸುವ ವಾಯುಗತೀಯ ಬಲಗಳು ಗಾಳಿಪಟಕ್ಕೆ ಅದರ ದಾರದ ಸಮೇತ ಸಮತೋಲವನ್ನು ಕಾಪಾಡಿಕೊಳ್ಳಲು ಬೇಕಾದ ಆಧಾರವನ್ನು ಒದಗಿಸುತ್ತವೆ.




ಸಾದಾಪಟ

ವಾಯುವನ್ನು ಕೆಳಮುಖವಾಗಿ ವಿಚಲನೆಗೊಳಿಸುವುದರಿಂದ ಗಾಳಿಪಟವನ್ನು ಮೇಲೆತ್ತಲು ಬೇಕಾಗುವ ನೆಗಪುಬಲ (ಲಿಫ್ಟಿಂಗ್ ಫೋರ್ಸ್) ಒದಗಿಬರುತ್ತದೆ. ಇದರ ಪರಿಣಾಮವಾಗಿ ಸಂವೇಗದಲ್ಲಿ (ಮೊಮೆಂಟಂ) ಉಂಟಾಗುವ ಬದಲಾವಣೆ ಮೇಲ್ಮುಖಬಲವನ್ನು ಗಾಳಿಪಟದ ಮೇಲೆ ಪ್ರಯುಕ್ತಿಸುತ್ತದೆ. ಆದ್ದರಿಂದ ಒಂದು ಗಾಳಿಪಟ ಯಶಸ್ವಿ ಆಗಬೇಕಾದರೆ ಅತ್ಯಂತ ಕಡಿಮೆ ರೆಕ್ಕೆ ಹೊರೆ (ವಿಂಗ್ ಲೋಡಿಂಗ್) ಎಂದರೆ ತೂಕ/ವಿಸ್ತೀರ್ಣ ಇರಬೇಕು. ಅಲ್ಲದೇ ಅದರ ನೆಗಪು–ವಿಕರ್ಷಣ (ಲಿಫ್ಟ್–ಡ್ರ್ಯಾಗ್) ನಿಷ್ಪತ್ತಿ (ರೇಷಿಯೊ) ಸಾಧ್ಯವಾಗುವಷ್ಟು ದೊಡ್ಡದಾಗಿರಬೇಕು. ಒಂದು ಗಾಳಿಪಟಕ್ಕೆ

ಈ ನಿಷ್ಪತ್ತಿ ಹಾಗೂ ಸ್ಥಿರತೆ (ಸ್ಟೆಬಿಲಿಟಿ) ಎರಡೂ ದಾರದ ಉದ್ದವನ್ನು ಅವಲಂಬಿಸಿರುವ ಉತ್ಪನ್ನಗಳು (ಫಂಕ್ಷನ್ಸ್). ದಾರವನ್ನು ಹೆಚ್ಚು ಹೆಚ್ಚು ಸಡಿಲ ಬಿಟ್ಟಂತೆ ಹೆಚ್ಚು ಹೆಚ್ಚು ವಿಕರ್ಷಣ (ಡ್ರ್ಯಾಗ್) ಉಂಟಾಗುತ್ತದೆ. ಹೀಗೆ ಅಧಿಕಗೊಂಡ ವಿಕರ್ಷಣವೂ ಗಾಳಿಪಟ ಮತ್ತು ದಾರದ ಒಟ್ಟು ತೂಕವೂ ಸೇರಿ ಗಾಳಿಪಟ ಕೆಳಮುಖವಾಗಿ ಜೋಲುವಂತೆ ಮಾಡುತ್ತವೆ. ಆದ್ದರಿಂದ ಒಂದು ಗಾಳಿಪಟವನ್ನು ಅನಿರ್ಬಂಧಿತವಾಗಿ ಮೇಲೆ ಮೇಲೆ ಏರಿಸಲು ಸಾಧ್ಯವಿಲ್ಲ ಎಂಬುದು ಸಿದ್ಧವಾಗುತ್ತದೆ.

ಗಾಳಿಪಟ ಹಾರಿಸುವುದು ಜಗತ್ತಿನಲ್ಲಿ ಒಂದು ವಿಶೇಷ ಬಗೆಯ ಆಟ. ಭಾರತೀಯರಿಗೂ ಇದರ ಬಗ್ಗೆ ಹೆಚ್ಚಾದ ಒಲವುಂಟು. ಬಹಳಮಟ್ಟಿಗೆ ಈ ಆಟ ಬಾಲಕರಿಗೆ ಮೀಸಲಾದುದಾದರೂ ದೊಡ್ಡವರೂ ಭಾಗವಹಿಸುವುದುಂಟು. ಹಳ್ಳಿಗಳಲ್ಲಂತೂ ಅಂತೆಯೇ ಪಟ್ಟಣಗಳಲ್ಲೂ ಇದು ರೂಢಿಯಲ್ಲಿದೆ. ಗಾಳಿಪಟ ಹಾರಿಸುವುದು ಹೇಗೆ ಒಂದು ಮನೋರಂಜಕ ಆಟವೋ ಹಾಗೆ ಅದನ್ನು ಕಟ್ಟುವುದು ಒಂದು ಕುಶಲ ಕಲೆಯೂ ಹೌದು. ಕಡ್ಡಿಗಳನ್ನು ಒಂದು ಗೊತ್ತಾದ ಆಕೃತಿಯಲ್ಲಿ ಕಟ್ಟಿ, ಅದಕ್ಕೆ ಬಣ್ಣಬಣ್ಣದ ಕಾಗದವನ್ನು ಅಂಟಿಸಿ ಗಾಳಿಪಟವನ್ನು ತಯಾರಿಸುತ್ತಾರೆ. ಅನಂತರ ಅದಕ್ಕೊಂದು ಸೂತ್ರ ಕಟ್ಟಿ ಪಟಕ್ಕೆ ಅನುಕೂಲವಾದ ಬಾಲಂಗೋಚಿಯೊಂದನ್ನು ಹೊಂದಿಸಿ ದಾರ ಕಟ್ಟಿ ಗಾಳಿಯಲ್ಲಿ ಹಾರಿಸುತ್ತಾರೆ. ಗಾಳಿಯ ಪಟದ ಆಕಾರ ಪಟದಂತಿದ್ದು ಅದು ಗಾಳಿಯಲ್ಲಿ ಹಾರುವುದರಿಂದ ಇದಕ್ಕೆ ಗಾಳಿಪಟ ಎಂಬ ಹೆಸರು ಬಂದಿದೆ. ಪಟ ಗಾಳಿಯಲ್ಲಿ ನಾಗರಹಾವಿನ ಹೆಡೆಯ ಹಾಗೆ ಮೇಲಕ್ಕೂ ಕೆಳಕ್ಕೂ ಅಕ್ಕಕ್ಕೂ ಪಕ್ಕಕ್ಕೂ ಬಾಗಿ, ಬಳುಕಿ, ತೂಗಿ ನಲಿಯುವುದರಿಂದ ನೋಡುವವರಿಗೆ ರಂಜಕವಾಗಿರುತ್ತದೆ.




ಬಣ್ಣಬಣ್ಣದ ಚೀನೀ ಗಾಳಿ ಪಟಗಳು

ದೊರೆತಿರುವ ಒಂದು ಸಂಪ್ರದಾಯದ ಆಧಾರದ ಮೇಲೆ ಪ್ರ.ಶ.ಪೂ. 4ನೆಯ ಶತಮಾನದಲ್ಲಿ ಆರ್ಕಿಟಾಸ್ ಎಂಬ ಗ್ರೀಕ್ ವಿಜ್ಞಾನಿ ಗಾಳಿಪಟವನ್ನು ಮೊದಲ ಬಾರಿಗೆ ರೂಪಿಸಿದನೆಂದು ಗೊತ್ತಾಗಿದೆ. ಆದರೆ ಪಟಹಾರಿಸುವ ಹವ್ಯಾಸ ಏಷ್ಯನ್ ಜನತೆಯಲ್ಲಿ ಗುರುತು ಸಿಗದ ಎಷ್ಟೋ ಕಾಲದಿಂದ ಪ್ರಚಲಿತವಿತ್ತೆಂದು ಊಹಿಸಬಹುದಾಗಿದೆ. ಅಲ್ಲದೆ ಕೊರಿಯ, ಚೀನ, ಜಪಾನ್, ಮತ್ತು ಮಲಯ ದೇಶಗಳಲ್ಲಿ ಗಾಳಿಪಟ ಹಾರಿಸುವುದು ಬಹಳ ಕಾಲದವರೆಗೆ ರಾಷ್ಟ್ರೀಯ ಆಟವಾಗಿ ಖ್ಯಾತಿಯನ್ನು ಪಡೆದಿತ್ತು. ರಾತ್ರಿ ವೇಳೆಯಲ್ಲಿ ಮನೆಗಳ ಮೇಲೆ ಗಾಳಿಪಟ ಹಾರಿಸುವುದರಿಂದ ದುಷ್ಟಶಕ್ತಿಗಳನ್ನು ದೂರಕ್ಕೆ ತಳ್ಳಬಹುದು ಎಂಬ ನಂಬಿಕೆಯೂ ಜನರಲ್ಲಿತ್ತು. ಏಷ್ಯಖಂಡದಲ್ಲಿ ಕೆಲವು ಸಂದರ್ಭಗಳಲ್ಲಿ ಪಟ ಹಾರಿಸುವುದು ಒಂದು ಬಗೆಯ ಧಾರ್ಮಿಕ ಸಂಕೇತವಾಗಿತ್ತು.

ಕರ್ನಾಟಕದಲ್ಲಿ ಕೆಲವು ಕಡೆ ಆಷಾಢದ ಏಕಾದಶಿಯ ಸಮಯದಲ್ಲಿ ಗಾಳಿಪಟದ ಹಬ್ಬವನ್ನು ಆಚರಿಸುತ್ತಾರೆ. ಇದನ್ನು ಪಟದ ಹಬ್ಬ ಎಂದು ಕರೆಯುವುದು ರೂಢಿ. ಈ ಹಬ್ಬದ ದಿನ ಮನೆಯನ್ನು ಸಾರಿಸಿ ಗುಡಿಸಿ, ಸ್ವಚ್ಛಮಾಡಿ ಉಪವಾಸವಿರುತ್ತಾರೆ. ಸಂಜೆ ಗಂಡಸರು ಮತ್ತು ಮಕ್ಕಳು ಬಯಲಿಗೆ ಹೋಗಿ ಪಟ ಹಾರಿಸುತ್ತಾರೆ. ರಾತ್ರಿ ಎಲ್ಲರೂ ದೇವರನ್ನು ಪೂಜಿಸಿ ಫಲಾಹಾರ ಸೇವಿಸುತ್ತಾರೆ. ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಅಳಿಯ ಮನೆ ಬಂದಾಗ ತಿಂಡಿಯ ಬುಟ್ಟಿಯಲ್ಲಿ ಗಾಳಿಪಟವನ್ನೂ ಇಟ್ಟುಕೊಡುತ್ತಾರೆ.

ಗಾಳಿಪಟದ ಮುಖ್ಯ ಉಪಯೋಗ ಮನೋರಂಜನೆಯಾದರೂ ಇದರ ಇತರ ಉಪಯೋಗಗಳೂ ಗಮನಾರ್ಹವಾಗಿವೆ. ಕವಿಗಳು ಪಟವನ್ನು ಮಾನವನ ಅನಿಶ್ಚಿತ ಗತಿಗೆ ಸಂಕೇತವಾಗಿ ಬಳಸಿರುವುದುಂಟು. ಹಿಂದೆ ಕೆಲವು ದೇಶಗಳಲ್ಲಿ ಗಾಳಿಪಟವನ್ನು ಯುದ್ಧಭೂಮಿಯಲ್ಲಿ ಸಂಕೇತವಾಗಿ ಬಳಸುತ್ತಿದ್ದರು. ದೊಡ್ಡ ದೊಡ್ಡ ಪಟಗಳಿಗೆ ಕ್ಯಾಮರಾಗಳನ್ನು ಕಟ್ಟಿ ಸುಂದರವಾದ ಭೂಪ್ರದೇಶಗಳ ಛಾಯಾಚಿತ್ರಗಳನ್ನು ತೆಗೆಯುತ್ತಿದ್ದುದೂ ಉಂಟು. 1860 ರಿಂದ 1901ರಲ್ಲಿ ಗಾಳಿಪಟವನ್ನು ಹಲವಾರು



ಎಂಟು ಮೂಲೆ ಜಂಟಿ ಪಟ

ವೈಜ್ಞಾನಿಕ ಉದ್ದೇಶಗಳಿಗಾಗಿ ಬಳಸಿದ್ದಾರೆ. ವಿಶೇಷವಾಗಿ (melionology) ಏರೋನಾಟಿಕ್ಸ್, ತಂತಿರಹಿತ ದೂರಸಂಪರ್ಕ ಹಾಗೂ ಫೋಟೋಗ್ರಫಿಗಳಲ್ಲಿ ಬಳಸುತ್ತಿದ್ದರು.

1752ರಲ್ಲಿ ಬೆಂಜಮಿನ್ ಫ್ರಾಂಕ್ಲಿನ್ ಎಂಬ ವಿಜ್ಞಾನಿ ಗಾಳಿಪಟಕ್ಕೆ ಲೋಹದ ಬೀಗದ ಕೈಯನ್ನು ತೂಗುಹಾಕಿ, ಪ್ರಚಂಡ ಬಿರುಗಾಳಿಯಲ್ಲಿ ವಿದ್ಯುಚ್ಛಕ್ತಿಯನ್ನು ಆಕರ್ಷಿಸಿ ಅದರಲ್ಲಿನ ಬೆಳಕಿನ ಗುಣವನ್ನು ತೋರಿಸಿಕೊಟ್ಟ. ಗಾಳಿಪಟವನ್ನು ಅನೇಕ ವರ್ಷಗಳ ವರೆಗೆ ವಾಯುಮಂಡಲ ಪರಿಶೀಲನೆಗೆ ಸಹಾಯಕ ಸಾಧನವಾಗಿ ಬಳಸುತ್ತಿದ್ದರು. ಗೊತ್ತಾದ ಯಂತ್ರವನ್ನು ಬಹಳ ಎತ್ತರವಾದ ಪ್ರದೇಶಕ್ಕೆ ಪಟದ ಮೂಲಕವಾಗಿ ಏರಿಸಿ ಅಲ್ಲಿನ ಹವೆಯ ಸ್ಥಿತಿಯನ್ನು ಗುರುತಿಸುತ್ತಿದ್ದರು. ಹೀಗೆ ಯಾವುದೇ ಪಟ ಹಾರಿದ ಅತ್ಯಂತ ದೊಡ್ಡ ಎತ್ತರ 23,835 ಅಡಿಗಳಾಗಿದೆ. ವಿಮಾನ ಮತ್ತು ಬಲೂನುಗಳ ಬಳಕೆಯಿಂದಾಗಿ ಅಮೆರಿಕನರು 1931ರ ತರುವಾಯ ಗಾಳಿಪಟವನ್ನು ವಾಯುಮಂಡಲ ಶಾಸ್ತ್ರದ ಸಾಧನ ಸಾಮಗ್ರಿಯನ್ನಾಗಿ ಬಳಸುವುದನ್ನು ನಿಲ್ಲಿಸಿಬಿಟ್ಟರು. ಆದರೆ 20ನೆಯ ಶತಮಾನಕ್ಕೆ ಮುಂಚೆ ಕೆಲವು ದೇಶಗಳಲ್ಲಿ ದೊಡ್ಡ ದೊಡ್ಡ ಪಟಗಳ ಮೂಲಕವಾಗಿ ಮಾನವನನ್ನು ಆಕಾಶಕ್ಕೇರಿಸುವ ಪ್ರಯತ್ನಗಳು ನಡೆದವು. ಇದು ಸೈನಿಕ ಇಲಾಖೆಯವರ ಪ್ರಯತ್ನವಾಗಿತ್ತು. ಮಿಲಿಟರಿ ಶಕ್ತಿಯನ್ನು ಹೊಂದಿದ್ದ ಕೆಲವು ದೊಡ್ಡ ರಾಷ್ಟ್ರಗಳು ವಿಮಾನದ ಕಂಡುಹಿಡಿಯುವಿಕೆಯಿಂದಾಗಿ ಪಟಗಳಲ್ಲಿ ನಡೆಸುತ್ತಿದ್ದ ಪ್ರಯೋಗಗಳನ್ನು ನಿಲ್ಲಿಸಿಬಿಟ್ಟವು. ಪ್ರಪಂಚಾದ್ಯಂತ ಗಾಳಿಪಟ ಉತ್ಸವವು ಆಚರಿಸಲ್ಪಡುತ್ತದೆ. ಏಷ್ಯಖಂಡದಲ್ಲಿ ಗಾಳಿಪಟ ಪಂದ್ಯಗಳು ನಡೆಯುತ್ತವೆ.

ಆಫ್ಘಾನಿಸ್ತಾನದಲ್ಲಿ ನಡೆಯುವ ಗಾಳಿಪಟ ಪಂದ್ಯವನ್ನು ಗುರಿ ಪರಣ್‌ಬಾಜಿ ಎನ್ನುತ್ತಾರೆ. ಈ ಪಂದ್ಯಗಳನ್ನಾಡುವ ಕೆಲವರು ಗಾಳಿಪಟದ ದಾರಕ್ಕೆ ಗ್ಲಾಸ್‌ಪೌಡರ್ ಹಾಗೂ ಗ್ಲೂಗಳನ್ನು ಹಾಕಿರುತ್ತಾರೆ. ಇದರಿಂದ ತಮ್ಮ ವಿರೋಧಿ ಬಣದ ಗಾಳಿಪಟದ ದಾರವನ್ನು ಬೇಗ ಕತ್ತರಿಸಲು ಸಹಾಯವಾಗುತ್ತದೆ.

ಪಾಕಿಸ್ತಾನದಲ್ಲಿ ಇದನ್ನು ಗುರಿಬಾಜಿ ಅಥವಾ ಪಂತಗ್‌ಬಾಜಿ ಅನ್ನುತ್ತಾರೆ. ಗಾಳಿಪಟದ ಪಂದ್ಯ ಇಡೀ ಪಾಕಿಸ್ತಾನದಲ್ಲಿ ಪ್ರಸಿದ್ಧವಾಗಿದೆ.


ವಿಯೆಟ್ನಾಂನಲ್ಲಿ ಗಾಳಿಪಟಕ್ಕೆ ಬಾಲಂಗೋಚಿ ಬದಲು ಸಣ್ಣ ಕೊಳಲುಗಳನ್ನು ಕಟ್ಟಿರುತ್ತಾರೆ. ಪಟಗಾಳಿಯಲ್ಲಿ ಹಾರಿದಾಗ 'ಹಂ' ಎನ್ನುವ ಸಂಗೀತದ ಸ್ವರ ಕೇಳುತ್ತದೆ.

ದಕ್ಷಿಣ ಅಮೆರಿಕದ ಚಿಲಿಯಲ್ಲಿ ಗಾಳಿಪಟ ಉತ್ಸವ ಬಹಳ ಪ್ರಸಿದ್ಧವಾಗಿದ್ದು, ಸ್ವಾತಂತ್ರ್ಯೋತ್ಸವದ ದಿನ ಸೆಪ್ಟೆಂಬರ್ 18ರಂದು ವಿಶೇಷವಾಗಿ ಆಚರಿಸಲ್ಪಡುತ್ತದೆ.

ಗಯಾನದಲ್ಲಿ ಈಸ್ಟರ್ ದಿನದಂದು ಧಾರ್ಮಿಕ ಗುಂಪುಗಳು ಹಾಗೂ ಬುಡಕಟ್ಟು ಜನಾಂಗದವರು ಸೇರಿ ಗಾಳಿಪಟ ಹಾರಿಸುವ ಉತ್ಸವದಲ್ಲಿ ಭಾಗವಹಿಸುತ್ತಾರೆ.

ಗಾಳಿಪಟಗಳಲ್ಲಿ ಅನೇಕ ಬಗೆಯ ಪ್ರತಿರೂಪಗಳನ್ನು ಕಾಣಬಹುದು. ಮುಖ್ಯವಾಗಿ ಪ್ರಸಿದ್ಧವಾದ ಮೂರು ಬಗೆಗಳನ್ನಿಲ್ಲಿ ವಿವರಿಸಿದೆ.

**1 ಷಟ್ಕೋಣಾಕೃತಿಯ ಪಟಗಳು:** ಈ ಪಟಕ್ಕೆ ಆರು ಮುಖಗಳು (ಕೋನಗಳು) ಇರುವುದರಿಂದ ಇದನ್ನು ಷಟ್ಕೋಣಾಕೃತಿಯ ಪಟ ಎಂಬುದಾಗಿ ಕರೆಯುತ್ತಾರೆ. ಇದಕ್ಕೆ ಮೂರು ಕಡ್ಡಿಗಳನ್ನು ರಚನೆಯ ಸಾಧನವಾಗಿ ಬಳಸುವುದರಿಂದ ಇದನ್ನು ಮೂರು ಕಡ್ಡಿಯ ಪಟ ಎಂದೂ ಕರೆವುದಿದೆ. ಇದರ ರಚನೆಗೆ ಬಳಸುವ ಮೂರು ಕಡ್ಡಿಗಳೂ ಒಂದೇ ಅಳತೆಯವಾಗಿರುತ್ತವೆ. ಇವನ್ನು ಅಡ್ಡಡ್ಡಲಾಗಿ ಸೇರಿಸಿ ಒಳ್ಳೆಯ ಹೊಂದಾಣಿಕೆಯೊಂದಿಗೆ ದಾರದ ಸಹಾಯದಿಂದ ಭದ್ರವಾಗಿ ಕಡ್ಡಿಗಳ ಮಧ್ಯದಲ್ಲಿಯೂ ಮತ್ತು ಅಂಚಿನಲ್ಲಿಯೂ ಕಟ್ಟಲಾಗುತ್ತದೆ. ಅನಂತರ ಇಡೀ ರಚನೆಯನ್ನು ಹಗುರವಾದ ಕಾಗದ ಮುಂತಾದ ವಸ್ತುಗಳನ್ನು ಹೊಂದಿಸಿ ಅಂಟಿಸಲಾಗುತ್ತದೆ. ಬಳಿಕ ಪಟದ ಕೆಳಗಡೆಯ ಎರಡು ಕೋನಬಿಂದುಗಳಿಗೆ ಸೇರಿದ ವಂಕಿಯೊಂದಕ್ಕೆ ಬಾಲವನ್ನು ತೂಗುಬಿಡುತ್ತಾರೆ. ಪಟವನ್ನು ಗಾಳಿಗೆ ಒಡ್ಡಿ ಹಾರಿಸಲು ಸಹಾಯಕವಾಗುವಂತೆ ಅದರ ಮಧ್ಯಕ್ಕೆ ಸೂತ್ರದ ಹುರಿಯೊಂದನ್ನು ಕಟ್ಟುತ್ತಾರೆ. ಆ ಹುರಿ ಅನೇಕ ಪಾದಗಳಿಂದ ಕೂಡಿದ್ದು, ಆ ಪಾದಗಳು ಪಟದ ಅಂಚಿನ ನಾನಾ ಸಂದುಗಳನ್ನು ಬಂಧಿಸಿ ಇರುತ್ತವೆ. ಆ ಪಾದಗಳ ಉದ್ದ ಪಟದ ಒಟ್ಟು ಉದ್ದದ ಅರ್ಧದಷ್ಟು.



ಚೋರಂಟಿ ಪಟ

**2 ವಜ್ರಾಕೃತಿಯ ಪಟ:** ವಜ್ರಾಕೃತಿಯನ್ನು ಹೋಲುವುದರಿಂದ ಈ ಪಟಕ್ಕೆ ಈ ಹೆಸರು. ಇದರಲ್ಲಿ ಸಮಾನ ಅಳತೆಯ ಎರಡು ಕಡ್ಡಿಗಳನ್ನು ಅಡ್ಡಡ್ಡಲಾಗಿ ಸೇರಿಸಿ ಮಧ್ಯದಲ್ಲಿ ದಾರದ ಸಹಾಯದಿಂದ ಬಲವಾಗಿ ಕಟ್ಟಿರುತ್ತಾರೆ. ಇದಕ್ಕೆ ಕಟ್ಟಿದ ಸೂತ್ರಕ್ಕೆ (ಮೂಗುದಾರ) ಎರಡು ಪಾದಗಳು ಇವೆ. ಒಂದು ಪಾದವನ್ನು ಪಟದ ಮೇಲ್ಭಾಗದ ಬಿಂದುವಿಗೂ ಇನ್ನೊಂದು ಪಾದವನ್ನು ಪಟದ ಕೆಳಭಾಗದ ಬಿಂದುವಿಗೂ ಸೇರಿಸಿ ಕಟ್ಟಲಾಗಿರುತ್ತದೆ.

**3 ಪೆಟ್ಟಿಗೆ ಪಟ:** ಇದನ್ನು 1890ರಲ್ಲಿ ಆಸ್ಟ್ರೇಲಿಯ ದೇಶದ ಲಾರೆನ್ಸ್ ಹಾರ್ಗ್ರೇವ್ ಎಂಬಾತ ಕಂಡುಹಿಡಿದ. ಇದು ಸಮಚತುಷ್ಕೋಣಾಕೃತಿಯಲ್ಲಿದ್ದು ರಚನೆಯಲ್ಲಿ ಪೆಟ್ಟಿಗೆಯನ್ನು ಹೋಲುವುದರಿಂದ ಇದನ್ನು ಪೆಟ್ಟಿಗೆ ಪಟ ಎಂದು ಕರೆಯಲಾಗಿದೆ. ಇದರಲ್ಲಿ ಚೌಕಾಕೃತಿಯ ಎರಡು ಮೈಕಟ್ಟಿನ ರಚನೆ ಉಂಟು. ಉದ್ದ ಮತ್ತು ಅಗಲ ಒಂದೇ ಅಳತೆಯದು. ಪಟದ ಮೈಕಟ್ಟಿನ ಅಂಚಿಗೆ ಯಾವ ಬಗೆಯ ಹೊದಿಕೆಯೂ ಇರುವುದಿಲ್ಲ. ಸೂತ್ರ ಪಟದ ಮೈಕಟ್ಟಿನ ಮೇಲ್ಭಾಗದ ಮಧ್ಯದಲ್ಲಿ ಲಂಬವಾಗಿ ಸೇರಿರುವ ಕಡ್ಡಿಗಳನ್ನು ತನ್ನೆರಡು ಪಾದಗಳಿಂದ ಬಂಧಿಸಿರುತ್ತದೆ. ಪಟ ಗಾಳಿಯಲ್ಲಿ ಏಕಮುಖ ಕೋನದಿಂದ ನಿರಾಯಾಸವಾಗಿ ತೇಲುತ್ತದೆ. ಇದಕ್ಕೆ ಬಾಲದ ಅಗತ್ಯವಿಲ್ಲ. ಸೂತ್ರದಲ್ಲಿ ನಾಲ್ಕು ಪಾದಗಳು ಇದ್ದಾಗ ಪಟ ವಿಶಾಲವಾಗಿ ಎಲ್ಲ ಕಡೆಯೂ ಹಾರಲು ಅನುಕೂಲವಾಗುತ್ತದೆ. ಇದರಲ್ಲಿ ತ್ರಿಕೋನಪಟ, ದುಂಡುಪಟ (ಕೊಳವೆ ಆಕೃತಿಯ ಪಟ) ಮತ್ತು ಷಟ್ಕೋಣಾಕೃತಿಯ ಪಟಗಳನ್ನು ರಚಿಸುವುದೂ ಸಾಧ್ಯ.

ಇತ್ತೀಚೆಗೆ ಹಕ್ಕಿ ಆಕೃತಿಯಲ್ಲಿ, ಮನುಷ್ಯಾಕೃತಿಯಲ್ಲಿ, ದೋಣಿಯಾಕೃತಿಯಲ್ಲಿ, ಚಿಟ್ಟೆಯಾಕೃತಿಯಲ್ಲಿ ಪಟಗಳನ್ನು ರಚಿಸಿರುವ ನಿದರ್ಶನಗಳಿವೆ. ಡ್ರೇಗನ್ ಮಾದರಿ ಚೀನದ ಅಚ್ಚುಮೆಚ್ಚಿನ ಪಟದಾಕೃತಿಯಾಗಿದೆ.

ಕನ್ನಡದಲ್ಲಿ ಗಾಳಿಪಟ ಎಂಬ ಹೆಸರಿನಲ್ಲಿಯೇ ಪ್ರಬಂಧ ಸಂಕಲನವೊಂದನ್ನು ಪ್ರಕಟಿಸಿರುವ ರಾ. ಕು. ಅವರು ತಮ್ಮ ಕೃತಿಯಲ್ಲಿ ಚೌಕುಪಟ, ಬುಗಲಿ, ಕಿಳ್ಳಿಕೇತ (ರೊಯ್ ಪಟ), ಜೋಡು ಪಟಗಳನ್ನು ಹೆಸರಿಸಿ ಅವುಗಳ ವಿಶಿಷ್ಟತೆಯನ್ನು ತಿಳಿಸಿದ್ದಾರೆ. ಅಲ್ಲದೆ ಗಾಳಿಪಟಕ್ಕೆ ಕೋತಿಪಟ ಎಂಬ ಹೆಸರಿರುವುದನ್ನು ಅವರು ತಿಳಿಸಿದ್ದಾರೆ.

ಗಾಳಿಪಟದ ರಚನೆಯ ಬಗ್ಗೆ ಒಂದೆರಡು ಅಂಶಗಳನ್ನು ಅಗತ್ಯವಾಗಿ ಗಮನಿಸಬಹುದಾಗಿದೆ. ಕಡ್ಡಿಗಳು ಸೇರುವ ಸಂದುಗಳನ್ನು ದಪ್ಪ ಹುರಿಯಿಂದ ಒಂದೆರಡು ಸುತ್ತು ಗಂಟುಹಾಕುವುದಕ್ಕಿಂತ ಸಣ್ಣ ದಾರದಲ್ಲಿ ಅನೇಕ ಸುತ್ತು ಬಳಸಿ ಗಂಟು ಹಾಕುವುದು ಉತ್ತಮ. ದಪ್ಪ ಹುರಿಯಲ್ಲಿ ಗಂಟು ಹಾಕುವುದರಿಂದ ಕಡ್ಡಿಗಳು ಜಾರಿಗೋಗುವ ಸಂಭವ ಉಂಟು. ಈ ಸಂದುಗಳನ್ನು ಸೇರಿಸಿ ಭದ್ರಪಡಿಸಲು ಕೆಲವು ಸಾರಿ ಗೋಂದು (ಮೇಣ), ಅರಗು, ವಜ್ರ ಮೊದಲಾದ ಅಂಟುವ ಪದಾರ್ಥಗಳನ್ನು ಬಳಸುತ್ತಾರೆ. ಪಟದ ಪ್ರಮುಖ ಸಾಧನಗಳಲ್ಲಿ ಬಾಲವೂ ಒಂದು. ಇದನ್ನು ಗಾಳಿಗೆ ಪ್ರತಿರೋಧಕ ಶಕ್ತಿಯಾಗಿ ಉಪಯೋಗಿಸುತ್ತಾರೆಯೆ ಹೊರತು ತೂಕಕ್ಕಾಗಿ ಅಲ್ಲ.



ಪೆಟ್ಟಿಗೆ ಪಟ

ಮನೆ, ಕಂಬ, ಮರ ಮೊದಲಾದ ಅಡಚಣೆಗಳಿಲ್ಲದ ಬಯಲು ಪ್ರದೇಶ ಪಟ ಹಾರಿಸಲು ಒಳ್ಳೆಯ ಸ್ಥಳ. ಗಾಳಿ ಹೆಚ್ಚು ರಭಸದಿಂದ ಬೀಸಿದರೆ ಪಟ ಜೋಲಿ ಹೊಡೆದು ನೆಲಕ್ಕೆ ಅಪ್ಪಳಿಸುವ ಸಾಧ್ಯತೆ ಉಂಟು. ಅಥವಾ ತೀರ ಮಂದಗತಿಯಲ್ಲಿ ಬೀಸಿದರೆ ಪಟ ಮೇಲೇರದೆಯೂ ಹೋಗಬಹುದು.

ಸಾಮಾನ್ಯವಾಗಿ ಪಟವನ್ನು ಗಾಳಿ ಬೀಸುವ ದಿಕ್ಕಿಗೆ ಪ್ರತಿಮುಖವಾಗಿ ಹಾರಿಸುತ್ತಾರೆ. ಉದಾಹರಣೆಗೆ, ಪೂರ್ವದಿಂದ ಪಶ್ಚಿಮದ ಕಡೆಗೆ ಗಾಳಿ ಬೀಸುತ್ತಿದ್ದರೆ ಪೂರ್ವದ ಕಡೆಗೆ ದಾರ ಹಿಡಿದುಕೊಂಡು ಓಡುತ್ತಾರೆ. ಪಟದ ಗಾತ್ರಕ್ಕೆ ಅನುಗುಣವಾಗಿ ಅದನ್ನಾಡಿಸುವ ದಾರದ ಗಾತ್ರವೂ ಇರಬೇಕಾಗುತ್ತದೆ. ಏಕೆಂದರೆ ತುಂಬ ದೊಡ್ಡ ಪಟವನ್ನು ನೂಲೆಳೆಯಲ್ಲಿ ಆಡಿಸಲು ಹೋದಾಗ ದಾರ ತುಂಡಾಗಿ ಪಟ ಭೂಮಿಗೆ ಬಿದ್ದುಹೋಗುತ್ತದೆ. ವಿದ್ಯುತ್ ತಂತಿಗಳಿರುವಲ್ಲಿ ಪಟವನ್ನು ಹಾರಿಸುವುದು ಅಪಾಯಕರ.


ಗಾಳಿಪಟದ ಮುಖ್ಯ ಉಪಯೋಗ ಮನೋರಂಜನೆ. ಇದು ಮನಸ್ಸಿಗೆ ಹರ್ಷವನ್ನೂ ಉಲ್ಲಾಸವನ್ನೂ ತಂದುಕೊಡುತ್ತದೆ. ಈಗಲೂ ಹಳ್ಳಿಗಳಲ್ಲಿ ದೊಡ್ಡ ದೊಡ್ಡ ಗಾಳಿಪಟಗಳನ್ನು ಮೇಲಕ್ಕೆ ಹಾರಿಸಿ ಅದರ ಹುರಿಯನ್ನು ತುಂಬ ಎತ್ತರವಾದ ಮರದ ತುದಿಗೆ ಕಟ್ಟಿ ಪಟ ಹಾರುವುದನ್ನು ಬೆಳಗ್ಗೆಯಿಂದ ಸಂಜೆಯವರೆಗೆ ನೋಡಿ ಆನಂದಿಸುವುದುಂಟು.

ಒಟ್ಟಿನಲ್ಲಿ, ಆರಂಭದಲ್ಲಿ ಜನಪದದ್ದಾಗಿದ್ದ ಈ ಆಟ-ಕ್ರಮೇಣ ನಾಗರಿಕ ಆಟವಾಗಿ, ಇಂದು ವಿಶ್ವದೆಲ್ಲೆಡೆಯಲ್ಲಿ ಮಾನ್ಯತೆ ಪಡೆದಿದೆ. (ಎಂ.ಪಿ.ವಿ.)

**ಗಾಳಿಮರ :** ಕ್ಯಾಷ್ಯುಯಾರೈನೇಸೀ ಕುಟುಂಬಕ್ಕೆ ಸೇರಿದ ಒಂದು ಚೆಲುವಾದ ಮರ. ಸರ್ವೆಮರ ಪರ್ಯಾಯನಾಮ. ಕ್ಯಾಷ್ಯುಯಾರೈನ ಎಕ್ವಿಸಿಟಿಫೋಲಿಯ ಇದರ ವೈಜ್ಞಾನಿಕ ಹೆಸರು. ಇದರ ಪುಟ್ಟರೆಂಬೆಗಳು ಕ್ಯಾಸೊವರಿ ಹಕ್ಕಿಯ ಪುಕ್ಕಗಳನ್ನು

ಹೋಲುತ್ತವೆ ಎಂಬ ಕಾರಣದಿಂದ ಬಹುಶಃ ಈ ವೈಜ್ಞಾನಿಕ ಹೆಸರು ಬಂದಿರಬೇಕು (ಕ್ಯಾಸೊವರಿಯ ವೈಜ್ಞಾನಿಕ ಹೆಸರು ಕ್ಯಾಸ್ಯುಯೇರಿಯಸ್ ಎಂದು). ಸಾಮಾನ್ಯ ಬಳಕೆಯ ಇಂಗ್ಲಿಷಿನಲ್ಲಿ ಬೀಫ್‌ವುಡ್, ಶೀ ಓಕ್ ಎಂದು ಕರೆಯಲಾಗುತ್ತದೆ. ಆಸ್ಟ್ರೇಲಿಯ, ಮಲೇಸಿಯ ಮತ್ತು ಪೆಸಿಫಿಕ್ ದ್ವೀಪಗಳ ತೀರಪ್ರದೇಶಗಳಲ್ಲಿ ಇದು ಸ್ವಾಭಾವಿಕವಾಗಿ ಬೆಳೆಯುತ್ತದೆ. ಬಂಗಾಳ, ಬರ್ಮ ಮತ್ತು ಅಂಡಮಾನ್‌ಗಳಲ್ಲೂ ಇದನ್ನು ಸಮುದ್ರ ತೀರಪ್ರದೇಶಗಳಲ್ಲಿ ಕಾಣಬಹುದು. ಅಲ್ಲದೆ ಉರುವಲಾಗಿ ಉಪಯೋಗಿಸುವುದರಿಂದ ಇದನ್ನು ದೊಡ್ಡ ದೊಡ್ಡ ತೋಪುಗಳಲ್ಲಿ ಬೆಳೆಸಲಾಗುತ್ತಿದೆ. ನೋಡಲು ಅಂದವಾಗಿ ಪೈನ್ ಮರಗಳಂತೆ ಕಾಣುವುದರಿಂದ ಅಲಂಕಾರಕ್ಕೆಂದು ಉದ್ಯಾನಗಳಲ್ಲಿ ರಸ್ತೆ ಪಕ್ಕಗಳಲ್ಲಿ ಬೆಳೆಸುವುದೂ ಉಂಟು.

ಗಾಳಿಮರ ಸುಮಾರು 30 ಮೀ ಎತ್ತರಕ್ಕೆ ಬೆಳೆಯುವ ಬೃಹದ್ಗಾತ್ರದ ಮತ್ತು ನಿತ್ಯಹಸಿರಿನ ಮರ. ಬಲು ವೇಗವಾಗಿ ಬೆಳೆಯುವ ಗುಣ ಇದಕ್ಕೆ ಉಂಟು. ಮುಖ್ಯ ಕಾಂಡ ನೆಟ್ಟಗೆ ಮೇಲ್ಮುಖವಾಗಿ ಬೆಳೆಯುತ್ತಿದ್ದು ಉರುಳೆಯಾಕಾರದಲ್ಲಿದೆ. ತುದಿಯಲ್ಲಿನ ರೆಂಬೆಗಳು ಸಣ್ಣದಾಗಿ ಮೃದುವಾಗಿವೆ. ಎಲೆಗಳು ಹುರುಪೆಗಳಾಗಿ ಮಾರ್ಪಾಡಾಗಿರುವು



ದರಿಂದ ಆಹಾರ ತಯಾರಿಕೆಯ ಕಾರ್ಯ ಈ ಎಳೆಯ ರೆಂಬೆಗಳದ್ದು. ಇದಕ್ಕಾಗಿ ಇವುಗಳಲ್ಲಿ ಹರಿತ್ತು ಇರುತ್ತದೆ. ಇದರಿಂದಲೇ ಇವುಗಳ ಬಣ್ಣ ಹಸುರು. ಎಲೆಗಳು ರೆಂಬೆಗಳ ಗೆಣ್ಣುಗಳಲ್ಲಿ ವರ್ತುಲ ಮಾದರಿಯಲ್ಲಿ ಜೋಡಣೆಗೊಂಡಿವೆ. ಈ ಲಕ್ಷಣದಲ್ಲಿ ಗಾಳಿಮರ ಕುದುರೆಬಾಲದ ಗಿಡವನ್ನು ಹೋಲುತ್ತದೆ. ಗಾಳಿಮರದ ಹೂಗಳು ಏಕಲಿಂಗಿಗಳು. ಗಂಡು ಹೂಗಳು ಉದ್ದವಾದ ಕದಿರುಗೊಂಚಲುಗಳಲ್ಲೂ ಹೆಣ್ಣು ಹೂಗಳು ಗುಂಡನೆಯ ಚಂಡು ಮಂಜರಿಗಳಲ್ಲೂ ಜೋಡಣೆಗೊಂಡಿವೆ. ಗಂಡುಹೂಗಳಲ್ಲಿ 1–2 ಪುಷ್ಪಪತ್ರಗಳೂ ಒಂದೇ ಒಂದು ಕೇಸರವೂ ಇವೆ. ಹೆಣ್ಣು ಹೂಗಳಲ್ಲಿ ಪುಷ್ಪಪತ್ರಗಳೇ ಇಲ್ಲ; ಬರಿಯ ಒಂದೇ ಒಂದು ಅಂಡಾಶಯವಿದೆ. ಫಲ ನಟ್‌ಲೆಟ್ ಮಾದರಿಯದು. ಒಂದು ಹೂಗೊಂಚಲಿನ ಫಲಗಳೆಲ್ಲ ಒಟ್ಟುಗೂಡಿ ಹೆಚ್ಚು ಕಡಿಮೆ ರುದ್ರಾಕ್ಷಿಯನ್ನು ಹೋಲುವಂಥ ಸಂಯುಕ್ತ ಫಲವಾಗಿ ಬೆಳೆಯುತ್ತವೆ.

ಗಾಳಿಮರ ಕಡಲ ತೀರಪ್ರದೇಶಗಳ ಮರಳು ಭೂಗುಣಕ್ಕೆ ಹೊಂದಿಕೊಂಡು ಚೆನ್ನಾಗಿ ಬೆಳೆಯುತ್ತದೆ. ಆದರೆ ಗಟ್ಟಿಯಾದ ಜಿಗುಟು ಅಥವಾ ಜೌಗುನೆಲದಲ್ಲಿ ಬೆಳೆಯಲಾರದು. ಗಾಳಿಮರಗಳ ಬೇರಿನಲ್ಲಿ ಸಾರಜನಕವನ್ನು ಸ್ಥಿರೀಕರಿಸುವ ಬ್ಯಾಕ್ಟೀರಿಯಗಳ ಗಂಟುಗಳಿರುತ್ತವೆ. ಗಟ್ಟಿ ನೆಲದಲ್ಲಿ ಈ ಬ್ಯಾಕ್ಟೀರಿಯಗಳ ಕಾರ್ಯ ನಿಂತುಹೋಗುವುದರಿಂದ ಅಂಥ ನೆಲ ಗಾಳಿಮರದ ಬೆಳವಣಿಗೆಗೆ ಯೋಗ್ಯವಲ್ಲ.

ಗಾಳಿಮರವನ್ನು ಭೂರಿಗಾತ್ರದಲ್ಲಿ ಬೆಳೆಸುವಾಗ ಮೊದಲು ನರ್ಸರಿಗಳಲ್ಲಿ ಬೀಜ ಬಿತ್ತಿ ಸಸಿಗಳನ್ನು ಪಡೆದು ಬೇಕಾದ ಸ್ಥಳಕ್ಕೆ ವರ್ಗಾಯಿಸುತ್ತಾರೆ. ಬಿತ್ತಿದ ಬೀಜಗಳಿಗೆ ಇರುವೆಗಳು ಮುತ್ತಿ ಅವು ನಾಶವಾಗುವುದನ್ನು ತಪ್ಪಿಸಲು ಬೀಜ ಬಿತ್ತುವ ಮುನ್ನ ಅಥವಾ ಅನಂತರ ನೀರಿನೊಂದಿಗೆ ಮೈಲುತುತ್ತದ ದುರ್ಬಲ ದ್ರಾವಣವನ್ನೊ ಮೀನುಮಾರಿ ಗಿಡದ ಬೇರಿನ ಕಷಾಯವನ್ನೊ ಹಾಕುತ್ತಾರೆ. ಬಿತ್ತುವ ಸಮಯ, ಸಸಿಗಳನ್ನು ವರ್ಗಾಯಿಸುವ ಕಾಲ ಮತ್ತು ಇತರ ವ್ಯವಸಾಯ ಕ್ರಮಗಳು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆಬೇರೆಯಾಗಿವೆ. ಸಾಮಾನ್ಯವಾಗಿ ಬಿತ್ತಿದ 6–18 ತಿಂಗಳ ಅನಂತರ ಸಸಿಗಳನ್ನು ಬೇರೆಡೆಗೆ ವರ್ಗಾಯಿಸಬಹುದು. ನಾಟಿ ಮಾಡುವಾಗ ಅವುಗಳ ನಡುವೆ 2–3 ಮೀ ಅಂತರವಿರುವಂತೆ ನೋಡಿಕೊಳ್ಳಲಾಗುತ್ತದೆ. ಕೆಲವು ಬಾರಿ 4 ಮೀ ಅಂತರವಿಟ್ಟು ತ್ರಿಕೋನಾಕೃತಿಯಲ್ಲಿ ನೆಡುವ ಪದ್ಧತಿಯೂ ಉಂಟು. ಸಸಿಗಳ ನಡುವಣ ಅಂತರ ಮರಗಳನ್ನು ಯಾವ ಕಾರ್ಯಕ್ಕೆ ಉಪಯೋಗಿಸಲಾಗುತ್ತದೆ ಎಂಬ ಅಂಶವನ್ನು ಅವಲಂಬಿಸಿದೆ. ಸೌದೆಗಾಗಿ ಬೆಳೆಸುವಾಗ ಅಂತರ ಕಡಿಮೆ ಇದ್ದರೂ ಪರವಾಗಿಲ್ಲ. ಚೌಬೀನೆಗಾಗಿ ಬೆಳೆಸಿದರೆ ಸಸಿಯಿಂದ ಸಸಿಗೆ ಅಂತರ ಸಾಕಷ್ಟಿರಬೇಕು. ಇದರಿಂದ ಮರಗಳು ಹುಲುಸಾಗಿ ಬೆಳೆಯುತ್ತವೆ. ಸಸಿಗಳು ಚೆನ್ನಾಗಿ ಬೇರೂರುವ ತನಕ (1–3 ವರ್ಷಗಳ ವರೆಗೆ) ನೀರು ಹಾಯಿಸುವುದು ಅತ್ಯಗತ್ಯ.

ಗಾಳಿಮರ ಹಲವು ಕೀಟಗಳ ಹಾಗೂ ಶಿಲೀಂಧ್ರಗಳ ಹಾವಳಿಗೆ ತುತ್ತಾಗುತ್ತದೆ. ನರ್ಸರಿಯಲ್ಲಿ ಸಸಿಗಳು ಚಿಮ್ಮಂಡೆಗಳ ಹಾವಳಿಗೆ ತುತ್ತಾಗುತ್ತವೆ. ಇವನ್ನು ತಡೆಯಲು ನರ್ಸರಿಯ ಸುತ್ತ 6 ಮೀ ಆವರಣದಲ್ಲಿ ಬೆಳೆಯುವ ಗಿಡಮರಗಳನ್ನು ತೆಗೆದು ಆಗಾಗ್ಗೆ ಕಾಣಬರುವ ಚಿಮ್ಮಂಡೆಗಳನ್ನು ನಾಶ ಮಾಡಬೇಕು. ಇದಲ್ಲದೆ ತೊಗಟೆ ತಿನ್ನುವ ಕಂಬಳಿಹುಳುಗಳು (ಆರ್ಬೆಲ ಜಾತಿ) ಗಾಳಿಮರಕ್ಕೆ ಸಾಕಷ್ಟು ಹಾನಿ ಉಂಟುಮಾಡುತ್ತವೆ. ನೆಲದಲ್ಲಿ ನೀರಿನ ಅಂಶ ಹೆಚ್ಚಿದಲ್ಲಿ ಬೇರುಗಳಿಗೆ ಟ್ರೈಕೋಸ್ಪೋರಿಯಮ್ ವೆನಿಕ್ಯುಲೋಸಮ್ ಎಂಬ ಶಿಲೀಂಧ್ರ ರೋಗ ಬರುತ್ತದೆ. ಶಿಲೀಂಧ್ರ ಹಾಗೂ ಕೀಟಗಳಿಗೆ ತುತ್ತಾದ ಮರಗಳನ್ನು ನಾಶಗೊಳಿಸುವುದರಿಂದ ರೋಗ ಹರಡುವಿಕೆ ಯನ್ನು ತಡೆಯಬಹುದಲ್ಲದೆ ತೋಪಿನಲ್ಲಿ ಮರಗಳನ್ನು ಬೀಳಿಸಿ ಮತ್ತೆ ಬೇರೆ ಸಸಿಗಳನ್ನು ಹಾಕಲು 2 ತಿಂಗಳ ಅವಧಿ ಇರುವಾಗ ಈ ಮರಗಳ ನಡುವೆ ಗೇರು, ಹೊಂಗೆ, ಬೇವು, ಬೇಟೆ ಮುಂತಾದವನ್ನು ಬೆಳೆಸುವುದರಿಂದ ರೋಗಕ್ಕೆ ತುತ್ತಾದ ಮರಗಳು ಮಿಕ್ಕ ಆರೋಗ್ಯವಂತ ಮರಗಳಿಂದ ಬೇರ್ಪಡುತ್ತವೆ. ಅಲ್ಲದೆ ಬೇರೆ ಜಾತಿಯ ಮರಗಳಿಂದ ಆಕರ್ಷಿತವಾಗುವ ಕೀಟಾಹಾರಿ ಹಕ್ಕಿಗಳ ಸಂಖ್ಯೆ ಹೆಚ್ಚಾಗಿ ಕೀಟಪಿಡುಗು ಕಡಿಮೆಯಾಗುತ್ತದೆ. ತೋಪಿನಲ್ಲಿನ ಗಾಳಿಮರಗಳನ್ನು ನಿರ್ದಿಷ್ಟ ಅವಧಿಯ ಅನಂತರ ಕಡಿದು ಹಾಕಿ ಮತ್ತೆ ಹೊಸ ಮರಗಳನ್ನು ಬೆಳೆಸುವ ಕ್ರಮ ಇದೆ. ಈ ಅವಧಿ ತಮಿಳುನಾಡಿನಲ್ಲಿ 10 ವರ್ಷಗಳಾದರೆ ಕರ್ನಾಟಕದ ಉತ್ತರಕನ್ನಡ ಜಿಲ್ಲೆಯಲ್ಲಿ 30 ವರ್ಷಗಳು. ಆರ್ಥಿಕ ದೃಷ್ಟಿಯಿಂದ 15 ವರ್ಷಗಳ ಅವಧಿ ಉತ್ತಮವೆನ್ನಲಾಗಿದೆ.

ಗಾಳಿಮರಕ್ಕೆ ಕೆಲವು ವಿಶೇಷ ಗುಣಗಳಿವೆ. ಅದರ ರಸಕಾಷ್ಠದ ಬಣ್ಣ ನಸುಗಂದು. ಚೇಗುಕಾಷ್ಠ ಕೆಂಪು ಮಿಶ್ರಿತ ಕಪ್ಪು ಬಣ್ಣದ್ದಾಗಿದ್ದು ಬಲಿಯುತ್ತ ಹೋದಂತೆ ಕಂದು ಬಣ್ಣಕ್ಕೆ ತಿರುಗುತ್ತದೆ. ಚೌಬೀನೆ ಭಾರವಾಗಿ ಗಟ್ಟಿಯಾಗಿ ಇದ್ದರೂ ಒಣಗಿದ ಮೇಲೆ ಸೀಳುತ್ತದೆ. ಅಲ್ಲದೆ ಇದನ್ನು ಹದ ಮಾಡುವುದು ಸ್ವಲ್ಪ ಕಷ್ಟಕರವಾದ ಕೆಲಸ. ಈ ಮರವನ್ನು ಸೌದೆಯಾಗಿ ಉಪಯೋಗಿಸುವುದೇ ಹೆಚ್ಚು. ಇದು ಹಸಿಯಾಗಿರುವಾಗಲೇ ಚೆನ್ನಾಗಿ ಉರಿಯುವುದಲ್ಲದೆ ಹೆಚ್ಚಿನ ಕಾವನ್ನು ಸಹ ಉಳಿಸಿ ಕೊಂಡಿರುತ್ತದೆ. ಹೀಗಾಗಿ ಇದನ್ನು ಅತ್ಯುತ್ತಮ ಉರುವಲು ಎಂದು ಪರಿಗಣಿಸಲಾಗಿದೆ. ಆದರೂ ಗಾಳಿಮರಕ್ಕೆ ಬೇರೆ ಉಪಯೋಗಗಳೂ ಇಲ್ಲದಿಲ್ಲ. ಇದನ್ನು ತೊಲೆ, ಆಸರೆಕಂಬ, ವಿದ್ಯುತ್ ಕಂಬಗಳಾಗಿ ಉಪಯೋಗಿಸುತ್ತಾರೆ. ಇದಲ್ಲದೆ ಗೃಹಕೈಗಾರಿಕೆಗಳಲ್ಲಿ, ಗ್ಯಾಲರಿಗಳ, ನೊಗಗಳ ಹಾಗೂ ದೋಣಿಯ ಮೀಟುಕೋಲಿನ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ; ಚಕ್ರಗಳ ಆಧಾರ ಕಂಬಗಳಾಗಿಯೂ ಬಳಸುತ್ತಾರೆ. ಗಾಳಿಮರಕ್ಕೆ ಔಷಧೀಯ ಗುಣಗಳೂ ಉಂಟು. ಇದರ ತೊಗಟೆ ಒಳ್ಳೆಯ ಪ್ರತಿಬಂಧಕವೆನಿಸಿದೆ. ಇದನ್ನು ಅತಿಸಾರ ಮತ್ತು ಆಮಶಂಕೆಗೆ ಮದ್ದಾಗಿ ಉಪಯೋಗಿಸುತ್ತಾರೆ. ಎಲೆಗಳ ಕಷಾಯವನ್ನು ಉದರ ಶೂಲೆಗೂ ಪುಡಿಮಾಡಿದ ಬೀಜಗಳನ್ನು ತಲೆನೋವಿಗೆ ಪಟ್ಟು ಹಾಕಲೂ ಉಪಯೋಗಿಸುತ್ತಾರೆ. ತೊಗಟೆಯಲ್ಲಿ ಶೇ. 6–15 ರಷ್ಟು ಟ್ಯಾನಿನ್ ಇವೆ. ತೊಗಟೆಯನ್ನು ಬಟ್ಟೆಗಳಿಗೆ ನಸುಕೆಂಪು ಬಣ್ಣ ಹಾಕಲೂ ಮೀನಿನ ಬಲೆಯನ್ನು ಗಟ್ಟಿಯಾಗಿಸಲೂ ಉಪಯೋಗಿಸುತ್ತಾರೆ. (ಕೆ.ಎಸ್.ಎನ್.)

**ಗಾಳಿಯುಬ್ಬಟೆ ರೋಗ :** ಪುಪ್ಪಸದ ಗಾಳಿಗೂಡುಗಳು ಒಡೆದು ಹೋಗಿ, ಅವು ತಮ್ಮ ಸ್ಥಿತಿಸ್ಥಾಪಕ ಶಕ್ತಿ ಕಳೆದುಕೊಳ್ಳುವುದರಿಂದ ಪುಪ್ಪಸ ಅತಿಯಾಗಿ ಹಿಗ್ಗಿ ದೊಡ್ಡದಾಗುವ ಒಂದು ರೋಗ (ಎಂಫಿಸೀಮ). ಗಾಳಿ ಗೂಡುಗಳು (ಆಲ್ವಿಯೋಲೈ)

ತೆಳುವಾದ ಪೊರೆಯಿಂದ ರೂಪುಗೊಂಡು, ಉಸಿರೆಳೆದುಕೊಂಡಾಗ ಉಬ್ಬಿ, ಉಸಿರು ಬಿಟ್ಟಾಗ ತಮ್ಮ ಯಥಾಸ್ಥಿತಿಗೆ ಹಿಂತಿರುಗುತ್ತವೆ; ಆದರೆ ಗಾಳಿಯುಬ್ಬಟೆಯಿಂದ ಪೀಡಿತವಾದಾಗ ಇವು ಅತಿಯಾಗಿ ಹಿಗ್ಗಿರುವುದರಿಂದ ಯಥಾಸ್ಥಿತಿಗೆ ಹಿಂತಿರುಗದೆ ದೊಡ್ಡವಾಗೇ ಉಳಿಯುತ್ತವೆ. ಇದರಿಂದ ಇಕ್ಕೆಡೆಗಳಲ್ಲೂ ಇರುವ ಫುಪ್ಪಸಗಳು ದೊಡ್ಡವಾಗಿ ಎದೆಗೂಡಿಗೆ ಪೀಪಾಯಿ ಆಕಾರ ಬರುತ್ತದೆ. ಸಾಮಾನ್ಯವಾಗಿ ಈ ರೋಗವನ್ನು ತುತೂರಿ, ಓಲಗ, ಕೊಳಲು ಮುಂತಾದ ವಾದ್ಯಗಳನ್ನು ನುಡಿಸುವ ಸಂಗೀತಗಾರರಲ್ಲಿ ಕಾಣಬಹುದು. ಈ ರೋಗ ಧೂಮಪಾನ ಮಾಡುವವರಲ್ಲಿ ಗೋಚರಿಸುವ ಮುಖ್ಯ ರೋಗ. ಫುಪ್ಪಸಗಳ ಗಾಳಿ ಗೂಡುಗಳಲ್ಲಿ ಗಾಳಿಯೊತ್ತಡ ಒಂದೇ ಸಮವಾಗಿ ಏರಿ ಉಳಿಯುವುದರಿಂದ ಕಾಲ ಕ್ರಮೇಣ ಈ ಪರಿಸ್ಥಿತಿ ಒದಗುತ್ತದೆ. ಅವರಲ್ಲಿ ಉಸಿರು ಹೊರಬಿಡುವುದು ತುಂಬ ಕಷ್ಟಕರ. ಇದೇ ರೀತಿ ಉಬ್ಬಟೆ ಇತರ ಅಂಗಾಂಶಗಳಲ್ಲೂ ಕಾಣಿಸಿಕೊಳ್ಳಬಹುದು. ಉದಾಹರಣೆಗೆ ಎರಡು ಫುಪ್ಪಸಗಳ ಮಧ್ಯೆ ಹಾಗೂ ಬೆನ್ನೆಲುಬು ಮತ್ತು ಎದೆ ಎಲುಬುಗಳ ನಡುವಣ ಸ್ಥಳದಲ್ಲೂ ಚರ್ಮದಡಿಯ ಅಂಗಾಂಶಗಳಲ್ಲೂ ಗಾಳಿಯುಬ್ಬಟೆಗೆ ಅವಕಾಶವಿದೆ. ಪಕ್ಕೆಲುಬು ಮುರಿದು ಫುಪ್ಪಸವನ್ನು ಚುಚ್ಚಿ ಹರಿದರೆ ಈ ಬಗೆಯ ಗಾಳಿಯುಬ್ಬಟೆ ಕಾಣಿಸಿಕೊಳ್ಳಬಹುದು.

ವಾಯು ಅಥವಾ ಇತರ ಅನಿಲಗಳು ದೇಹದ ನಾನಾ ಕುಹರಗಳಲ್ಲಿ ಸಂಗ್ರಹವಾಗಬಹುದು. ಎದೆಗೂಡಿನ ಕುಹರಗಳಲ್ಲಿ ಈ ರೀತಿ ವಾಯು ಸಂಗ್ರಹವಾದರೆ ನ್ಯೂಮೋತೋರ್‍ಯಾಕ್ಸ್ (ಗಾಳಿ ತುಂಬಿದೆದೆ) ಎಂದೂ ಹೊಟ್ಟೆಯೊಳಗೆ ನಾನಾ ಅಂಗಗಳನ್ನಾವರಿಸಿರುವ ಪೆರಿಟೋನಿಯಂ ಪೊರೆಯ ಕುಹರಗಳಲ್ಲಿ ಸಂಗ್ರಹವಾದರೆ ನ್ಯೂಮೋಪೆರಿಟೋನಿಯಂ ಎಂದೂ ಕರೆಯಲಾಗುತ್ತದೆ. ಇವು ಗಾಯದಿಂದ ಅಥವಾ ರೋಗದಿಂದ ಉತ್ಪತ್ತಿಯಾಗುತ್ತವೆ. ಅನಿಲವನ್ನು ಉತ್ಪತ್ತಿಮಾಡುವ ಏಕಾಣುಜೀವಿಗಳ ಸೋಂಕುಂಟಾದರೆ ಅಂಗಾಂಶಗಳಲ್ಲಿ ಗಾಳಿಯುಬ್ಬಟೆ ಕಾಣಿಸಿಕೊಳ್ಳುತ್ತದೆ. (ಆರ್.ಎಸ್.ವಿ.)

**ಗಿಂಗ್‌ಕೋ :** ಗಿಂಗೊಯೋಲೀಸ್ ಗಣದ ಗಿಂಗೊಯೇಸೀ ಕುಟುಂಬಕ್ಕೆ ಸೇರಿದ ಒಂದು ನಗ್ನ ಬೀಜ ಸಸ್ಯ. ಪರ್ಮಿಯನ್ ಅವಧಿಯಲ್ಲಿ ಪ್ರಥಮತಃ ಕಾಣಿಸಿಕೊಂಡ ಈ ಮರ ಬಹುಪ್ರಾಚೀನಕಾಲದ ಸಸ್ಯಗಳ ಏಕೈಕ ಪ್ರತಿನಿಧಿಯಾಗಿ




ಇಂದಿಗೂ ಮೂಲತಃ ಯಾವ ಬದಲಾವಣೆಯನ್ನೂ ತೋರಿಸದೆ ಉಳಿದಿರುವುದರಿಂದ ಇದನ್ನು ಜೀವಂತ ಫಾಸಿಲ್ ಎಂದು ಕರೆಯುವುದುಂಟು. ಟ್ರಯಾಸಿಕ್, ಜುರಾಸಿಕ್ ಮತ್ತು ಟರ್ಶಿಯರಿ ಕಾಲಗಳಲ್ಲಿ ಅತ್ಯಂತ ಉಚ್ಛ್ರಾಯಸ್ಥಿತಿಯನ್ನು ಮುಟ್ಟಿದ್ದ ಗಿಂಗ್‌ಕೋದಲ್ಲಿ ಈಗ ಬೈಲೋಬ ಎಂಬ ಒಂದೇ ಒಂದು ಪ್ರಭೇದ ಮಾತ್ರ ಉಳಿದಿದೆ. ಇದಾದರೂ ಪಶ್ಚಿಮ ಚೀನದ ಕೆಲವು ಪ್ರದೇಶಗಳಲ್ಲಿ ಮಾತ್ರ ಕಾಣದೊರೆಯುತ್ತದೆ. ಚೀನದಲ್ಲಿ ಇದನ್ನು ಪವಿತ್ರಮರವೆಂದು ಪರಿಗಣಿಸಲಾಗಿದ್ದು ಅಲ್ಲಿನ ದೇವಾಲಯಗಳ ಆವರಣಗಳಲ್ಲಿ ಬೆಳೆಸಲಾಗಿದೆ. ಜಪಾನಿನಲ್ಲೂ ಇದನ್ನು ಕಾಣಬಹುದು. ಭಾರತದಲ್ಲಿ ನೀಲಗಿರಿಯಲ್ಲಿ ಸಸ್ಯಾರಾಮ, ಡೆಹ್ರಾಡೂನ್ ಮುಂತಾದೆಡೆಗಳಲ್ಲಿ ಕೆಲವು ಮರಗಳನ್ನು ನೋಡಬಹುದು.

ಗಿಂಗ್‌ಕೋ ಸುಮಾರು 120' ಎತ್ತರಕ್ಕೆ ಬೆಳೆಯುವ ಚೆಲುವಾದ ಮರ. ಇದರಲ್ಲಿ ಹೆಚ್ಚು ರೆಂಬೆಗಳು ಹುಟ್ಟುವುದಿಲ್ಲ. ರೆಂಬೆಗಳಲ್ಲಿ ಉದ್ದರೆಂಬೆ ಮತ್ತು ಮೋಟುರೆಂಬೆ ಎಂಬ ಎರಡು ಬಗೆಗಳಿವೆ. ಮೋಟುರೆಂಬೆಗಳ ಮೇಲೆಯೇ ಎಲೆಗಳು ರೂಪುಗೊಳ್ಳುವುದು. ಗುಂಪು ಗುಂಪಾಗಿ ಹುಟ್ಟುವ ಈ ಎಲೆಗಳು ತಮ್ಮ ಆಕಾರ, ನೋಟ ಮತ್ತು ನಾಳವಿನ್ಯಾಸದಲ್ಲಿ ತಾಮ್ರಶಿಖಿ ಎಂಬ (ಮೇಡನ್ ಹೇರ್ ಫರ್ನ್) ಜರೀಗಿಡದ ಎಲೆಗಳನ್ನು ಹೋಲುತ್ತವೆ. ಇದರಿಂದ ಗಿಂಗ್‌ಕೋ ಮರಕ್ಕೆ ಮೇಡನ್ ಹೇರ್ ಟ್ರೀ ಎಂಬ ಹೆಸರಿದೆ. ಒಂದೊಂದು ಎಲೆಯೂ 2"–4" ಉದ್ದವೂ ಹೆಚ್ಚು ಕಡಿಮೆ ಅಷ್ಟೇ ಅಗಲವೂ ಇದ್ದು ಬೀಸಣಿಗೆಯಾಕಾರದಲ್ಲಿದೆ ಹಾಗೂ ದ್ವಿಭಜನ ರೀತಿಯ ನಾಳ ವಿನ್ಯಾಸವನ್ನು ಪ್ರದರ್ಶಿಸುತ್ತದೆ. ಎಲೆಗಳು ವರ್ಷಕ್ಕೊಮ್ಮೆ ಉದುರುತ್ತವೆ. ಗಿಂಗ್‌ಕೋವಿನಲ್ಲಿ ಲಿಂಗಭೇದವಿದೆ. ಈ ಲಕ್ಷಣದಲ್ಲಿ ಇದು ಗೊಡ್ಡು ಈಚಲು ಜಾತಿಯ ಮರಗಳನ್ನು (ಸೈಕ್ಯಾಸ್) ಹೋಲುತ್ತದೆ. ಕಾಯಿ ಒಂದು ರೀತಿಯ ಅಷ್ಠಿಫಲ. ಇದರ ತಿರುಳಿಗೆ ಒಂದು ಬಗೆಯ ದುರ್ವಾಸನೆಯಿದೆ.

ಗಿಂಗ್‌ಕೋ ಮರ ಆಕರ್ಷಕವಾಗಿರುವುದರಿಂದ ಇದನ್ನು ಅಲಂಕಾರಕ್ಕಾಗಿ ತೋಟಗಳಲ್ಲಿ ಅಲ್ಲಲ್ಲಿ ಬೆಳೆಸಲಾಗಿದೆ. ಇದನ್ನು ಬೀಜಗಳ ಮೂಲಕ ಇಲ್ಲವೆ ಕಾಂಡತುಂಡುಗಳಿಂದ ವೃದ್ಧಿಸಬಹುದು. ಆದರೆ ಬೆಳೆವಣಿಗೆ ಬಲು ನಿಧಾನ. ಕಾಂಡತುಂಡುಗಳಿಂದ ಬೇರುಮೂಡಲು ಕೊನೆಯ ಪಕ್ಷ ಎರಡು ವರ್ಷಗಳಾದರೂ ಬೇಕು. ಗಿಂಗ್‌ಕೋ ಮರದಿಂದ ಹಲವಾರು ಉಪಯೋಗಗಳುಂಟು. ಚೀನ, ಜಪಾನುಗಳಲ್ಲಿ ಬೀಜದಲ್ಲಿನ ತಿರುಳಿನ ಭಾಗವನ್ನು ಹುರಿದು ಇಲ್ಲವೇ ಬೇಯಿಸಿ ತಿನ್ನುವುದಿದೆ. ಬಟ್ಟೆಗಳನ್ನು ಒಗೆಯುವುದಕ್ಕೂ ಬೀಜಗಳನ್ನು ಉಪಯೋಗಿಸುವುದುಂಟು. ಇದರ ಚೌಬೀನೆ ಹಳದಿವರ್ಣದಿಂದಿದ್ದು ಹಗುರವೂ ಬಿದುರವೂ ಆಗಿದೆ. ಚೀನ, ಜಪಾನುಗಳಲ್ಲಿ ಆಟದ ಸಾಮಾನುಗಳನ್ನು ಮತ್ತು ಕೇರಂ ಬೋರ್ಡುಗಳನ್ನು ತಯಾರಿಸಲು ಇದನ್ನು ಉಪಯೋಗಿಸುತ್ತಾರೆ. (ಎ.ಕೆ.ಕೆ.)

**ಗಿಡತಿಗಣೆಗಳು :** ಹೆಮಿಪ್ಟರ ಗಣ ಮತ್ತು ಹೆಟಿರಾಪ್ಟರ ಉಪಗಣಗಳ ಹಲವಾರು ಕುಟುಂಬಗಳಿಗೆ ಸೇರಿದ ಕೀಟಗಳು (ಪ್ಲಾಂಟ್‌ಬಗ್ಸ್). ತಿಗಣೆ, ಹೇನು ಮುಂತಾದ ಕೀಟಗಳಿಗೆ ಬಲು ಹತ್ತಿರ ಸಂಬಂಧಿಗಳು. ಹಲವಾರು ಬಗೆಯ ಸಸ್ಯಗಳ ಕಾಂಡ, ಎಲೆ, ಹೂ ಮುಂತಾದ ಅಂಗಗಳ ಮೇಲೆ ಪರಾವಲಂಬಿಗಳಾಗಿದ್ದು ಅವುಗಳ ರಸವನ್ನು ಕುಡಿದು ಬದುಕುವುದರಿಂದ ಇವಕ್ಕೆ ಈ ಹೆಸರು ಬಂದಿದೆ.




ವಿವಿಧ ಬಗೆಯ ಗಿಡ ತಿಗಣೆಗಳು : 1. ರೇನೇಟ್ರ ಫಸ್ಕ, 2. ಹಾಲ್ಟಿಕಸ್, ಬ್ರಾಕ್ಟಿಯೇಟಸ್, 3. ಲೈಗೀಡಿಯ ಮೆಂಡಾಕ್ಸ್, 4. ಏಫೇನಸ್ ಇಲ್ಯುಮಿನೇಟಸ್, 5. ಲೆಪ್ಟೊಕೋರಿಸ ಟ್ರೈವಿಟೇಟಸ್, 6. ಫೈಮೇಟ ಫ್ಯಾಸಿಯೇಟ

ಗಿಡತಿಗಣೆಗಳ ದೇಹಲಕ್ಷಣಗಳು ಬಗೆಯಿಂದ ಬಗೆಗೆ ಸ್ವಲ್ಪ ವ್ಯತ್ಯಾಸವಾದರೂ ಎಲ್ಲಕ್ಕೂ ಸಮಾನವಾದ ಕೆಲವು ಗುಣಲಕ್ಷಣಗಳನ್ನು ಗುರುತಿಸಬಹುದು. ಈ ಕೆಳಗಿನವುಗಳು ಹೀಗಿವೆ : 1. ರೆಕ್ಕೆಗಳು ಎರಡು ಜೊತೆ ಇವೆ. ಮುಂದಿನ ಜೊತೆ ಬುಡಭಾಗ ದಪ್ಪವಾಗಿಯೂ ಚರ್ಮಿಲವಾಗಿಯೂ ಇದೆ. ತುದಿಭಾಗ ಪೊರೆಯಂತಿದೆ. ಇದರಿಂದಾಗಿ ಈ ಬಗೆಯ ರೆಕ್ಕೆಯನ್ನು ಹೆಮೆಲಿಟ್ರಾನ್ ಮಾದರಿಯದು ಎಂದು ಕರೆಯಲಾಗುತ್ತದೆ. ಹಿಂದಿನ ರೆಕ್ಕೆಗಳು ಸಂಪೂರ್ಣವಾಗಿಯೇ ಎಲೆಗಳ ರೂಪದಂತಿವೆ.

ರೆಕ್ಕೆಗಳನ್ನು ಮಡಚಿದಾಗ ಅವು ಉದರಭಾಗದ ಮೇಲೆ ಚಪ್ಪಟೆ ಆಕಾರವಾಗಿ ಕುಳಿತುಕೊಳ್ಳುತ್ತವೆ. ಕೆಲವು ಕೀಟಗಳಿಗೆ ರೆಕ್ಕೆಯೇ ಇಲ್ಲ. 2. ಕುಡಿಮೀಸೆಗಳು (ಆಂಟೆನೀ) ಉದ್ದವಾಗಿವೆ ಹಾಗೂ 4–5 ತುಂಡುಗಳಿಂದ ಕೂಡಿವೆ. 3. ಕಣ್ಣುಗಳು ಸಂಯುಕ್ತ ಮಾದರಿಯವು. 4. ಬಾಯಿಯ ಭಾಗಗಳು ಸಸ್ಯಭಾಗಗಳನ್ನು ಚುಚ್ಚಿ, ರಸವನ್ನು ಹೀರಲು ಅನುಕೂಲವಾಗಿವೆ. ತಲೆಯ ಮುಂಭಾಗ ಒಂದು ರೀತಿಯ ತೆಳುವಾದ ಕೊಕ್ಕಿನಂಥ ರಚನೆಯಿದೆ. ಇದು ಹಿಮ್ಮುಖವಾಗಿ ಬುಡದವರೆಗೂ ಚಾಚಿದೆ. ಇದರೊಳಗೆ ಚುಚ್ಚುಸಾಧನಗಳಾದ 2 ಮ್ಯಾಂಡಿಬಲ್‌ಗಳೂ 2 ಮ್ಯಾಕ್ಸಿಲಗಳೂ ಇವೆ. ಮ್ಯಾಕ್ಸಿಲಗಳು ಒಂದರೊಡನೊಂದು ಕೂಡಿಕೊಂಡು ಆಹಾರ ಮತ್ತು ಜೊಲ್ಲು ಸಾಗಣೆಗೆ ಅನುಕೂಲವಾದ ಕಾಲುವೆಗಳಾಗಿ ಪರಿವರ್ತಿತವಾಗಿವೆ. 5. ಬಹುಪಾಲು ಗಿಡತಿಗಣೆಗಳಲ್ಲಿ ವಾಸನೆಯನ್ನು ಉಂಟುಮಾಡುವ ಗ್ರಂಥಿಗಳಿವೆ. ಇವು ವಿಶಿಷ್ಟ ರೀತಿಯ ಹಾಗೂ ಅಸಹ್ಯವಾದ ವಾಸನೆಯನ್ನು ಹೊರಸೂಸುತ್ತವೆ. 6. ಗಿಡತಿಗಣೆಗಳು ಸರಳರೀತಿಯ ರೂಪಾಂತರತೆಯನ್ನು ಪ್ರದರ್ಶಿಸುತ್ತವೆ.

ಗಿಡತಿಗಣೆಗಳ ಸಂಖ್ಯೆ ಅಗಾಧ ಮತ್ತು ವ್ಯಾಪ್ತಿ ಬಲು ವಿಸ್ತಾರ. ಪ್ರಪಂಚದಾದ್ಯಂತ ಸುಮಾರು 55,000 ಬಗೆಯ ಗಿಡತಿಗಣೆಗಳಿವೆ. ಭಾರತದಲ್ಲಿ ಸುಮಾರು 4500 ಬಗೆಗಳು ಕಾಣಬರುತ್ತವೆ. ಇವುಗಳಲ್ಲಿ ಹೆಚ್ಚಿನವು ನೆಲವಾಸಿಗಳು. ಕೆಲವು ಜಲವಾಸಿಗಳೂ ಹೌದು. ಸಸ್ಯಗಳ ರಸವನ್ನು ಹೀರಿ ಬದುಕುವ ಇವು ಕೃಷಿ ಸಸ್ಯಗಳಿಗೆ ತೀವ್ರಸ್ವರೂಪದ ಹಾನಿಯುಂಟು ಮಾಡುತ್ತವೆ. ಆದರೆ ಅವುಗಳಲ್ಲೂ ಕೆಲವು ಉಪಕಾರಿ ಕೀಟಗಳಿಲ್ಲದೇ ಇಲ್ಲ. ಇಂಥವು ಇತರ ಬಗೆಯ ಹಾನಿಕಾರಕ ಕೀಟಗಳನ್ನು ತಿಂದು ಮಾನವನಿಗೆ ಉಪಕಾರಿಗಳೆನಿಸಿವೆ.

ಕುಡಿಮೀಸೆಗಳ ಲಕ್ಷಣಗಳ ಆಧಾರದ ಗಿಡತಿಗಣೆಗಳ ಗಣವನ್ನು ಕ್ರಿಪ್ಟೊಸೆರೇಟ ಮತ್ತು ಜಿಮ್ನೊಸೆರೇಟ ಎಂಬ ಎರಡು ಉಪಗಣಗಳಾಗಿ ವಿಂಗಡಿಸಲಾಗಿದೆ. ಇದೊಂದು ಉಪಗಣವನ್ನೂ ಅದರಲ್ಲಿನ ಕೀಟಗಳ ರೆಕ್ಕೆ, ಕಾಲು ಮತ್ತು ಕೊಕ್ಕುಗಳ ಗಣಗಳನ್ನು ಆಧರಿಸಿ ಹಲವಾರು ಕುಟುಂಬಗಳಾಗಿ ವಿಂಗಡಿಸಲಾಗಿದೆ. ಇವುಗಳಲ್ಲಿ ಮುಖ್ಯವಾದ ಕುಟುಂಬಗಳನ್ನೂ ಅವುಗಳ ಪ್ರರೂಪೀ ಕೀಟಗಳನ್ನೂ ಮುಂದೆ ವಿವರಿಸಲಾಗಿದೆ. 1) ಕಾರಿಕ್ಸಿಡೀ–ಉದಾ : *ಕಾರಿಕ್ಸ್*. 2) ನೋಟೋನೆಕ್ಟಿಡೀ ಉದಾ : *ನೋಟೋನೆಕ್ಟ*. 3) ನೇಪಿಡೀ–ಉದಾ : *ನೇಪ, ರೆನೇಟ್ರ*, 4) ಬೆಲಾಸ್ಟೊಮಾಟಿಡೀ–ಉದಾ : *ಬೆಲಾಸ್ಟೋಮ*. 5) ಜೆರಿಡೀ–ಉದಾ : *ಜೆರಿಸ್*. 6) ಮಿರಿಡೀ–ಉದಾ : *ಹಾಲ್ಟಿಕಸ್, ಲೈಗಸ್, ಲೈಗೀಡಿಯ* ಇತ್ಯಾದಿ. 7) ಫೈಮ್ಯಾಟಿಡೀ–ಉದಾ : *ಫೈಮೇಟ*, 8) ಪೆಂಟಟೋಮಿಡೀ–ಉದಾ : *ಬೆಗ್ರಾಡ*. 9) ಲೈಗೀಯಿಡೀ–ಉದಾ : *ಬ್ಲಿಸಸ್, ಆಕ್ಸಿಕೆರೀನಸ್, ಫೇನಸ್* ಇತ್ಯಾದಿ. 10) ಕೋರಿಯಿಡೀ–ಉದಾ *ಲೆಪ್ಟೊಕೊರಿಸ*. (ವಿ.ಪಿ.ಎಂ.)

**ಗಿಡ್ಡಲೂರು :** ಆಂಧ್ರಪ್ರದೇಶ ರಾಜ್ಯದ ಕರ್ನೂಲ್ ಜಿಲ್ಲೆಯಲ್ಲಿರುವ ಪ್ರಾಗೈತಿಹಾಸಿಕ ನೆಲೆ. ಪ್ರಪ್ರಥಮ ಬಾರಿಗೆ ಕಮಿಯಡೆ ಶಿಲಾಯುಗ ಕಾಲದ ಉಪಕರಣಗಳನ್ನು ಸಂಗ್ರಹಿಸಿದ. ಇದನ್ನು ಬರ್ಕಿಟ್ ಪರೀಕ್ಷಿಸಿದ. ಈ ಉಪಕರಣಗಳನ್ನು ಗಿಡ್ಡಲೂರು ಮತ್ತು ಗುಂಡಲ–ಬ್ರಹ್ಮೇಶ್ವರಂ ಬೆಟ್ಟದ ಬಳಿ ಗುಂಡ್ಲಕಮ್ಮ ನದಿಯ ಗರಸು ಮಣ್ಣಿನ ಪದರದಲ್ಲಿ ಮತ್ತು ಯರ್ರಕೊಂಡಪಾಲೆಮ್ ಪ್ರದೇಶಗಳಿಂದ ಸಂಗ್ರಹಿಸಲಾಗಿತ್ತು. ಈ ಎರಡು ಪ್ರದೇಶಗಳು ನಲ್ಲಮಲ್ಲೈ ಬೆಟ್ಟದ ಡೊರ್‌ನಾಲ–ಅತಮ್‌ಕುರ್‌ನ ಕಣಿವೆಯ ಆಚೆ–ಈಚೆ ಅಂಚಿನಲ್ಲಿವೆ. ಶಿಲಾಯುಗದ ನಾಲ್ಕು ಸಂಸ್ಕೃತಿಗಳನ್ನು ಬರ್ಕಿಟ್ ಗುರುತಿಸಿದ. ಇವು ಆದಿ ಹಳೆಶಿಲಾಯುಗದ ಕೈಗೊಡಲಿ ಹಂತದಿಂದ ಸೂಕ್ಷ್ಮಶಿಲಾಯುಗದ ಅಗೇಟ್ ಮತ್ತು ಬೆಣಚುಕಲ್ಲಿನ ಉಪಕರಣಗಳ ಸಂಸ್ಕೃತಿಯ ಹಂತದವರೆಗಿನವು. ಪದರ ವಿಶ್ಲೇಷಣೆಯಿಂದ ಇವುಗಳ ನಡುವಿನ ಹಂತಗಳನ್ನೂ ಗುರುತಿಸಲಾಗಿದೆ. ಈ ಹಂತಗಳು ಡಿಟೆರ್ರ ಮತ್ತು ಪ್ಯಾಟರ್‌ಸನ್ ಸೂಚಿಸಿರುವ ಹಿಮಯುಗದ ಹಿಮಘಟ್ಟಗಳು ಮತ್ತು ಇವುಗಳ ನಡುವಿನ ಘಟ್ಟಗಳಿಗೆ ಹೊಂದಿಕೆಯಾಗುತ್ತವೆ.

ಎಫ್.ಈ. ಜ಼ಾಯನರ್, ವಿ.ಡಿ. ಕೃಷ್ಣಸ್ವಾಮಿ ಮತ್ತು ಸೌಂದರರಾಜನ್ ಗಿಡ್ಡಲೂರು ಸುತ್ತಮುತ್ತಲ ನೆಲೆಗಳಲ್ಲಿ ಇನ್ನಷ್ಟು ಸಂಶೋಧನೆ ನಡೆಸಿದರು. ಆದಿ ಹಳೆಶಿಲಾಯುಗ, ಮಧ್ಯ ಹಳೆಶಿಲಾಯುಗ, ಅಂತ್ಯ ಹಳೆಶಿಲಾಯುಗ ಮತ್ತು ಸೂಕ್ಷ್ಮಶಿಲಾಯುಗ ಸಂಸ್ಕೃತಿಗಳ ಶಿಲೋಪಕರಣಗಳನ್ನು ಇವರು ಸಂಗ್ರಹಿಸಿದರು. ಭೂಮಿಯ ಮೇಲ್ಪದರದಲ್ಲಿ ಅಶೂಲಿಯನ್ ಮಾದರಿಯ ಒಂದು ಕೈಗೊಡಲಿ ಮತ್ತೊಂದು ಚೌಕೋನದ ಕಡಿಗತ್ತಿ ದೊರೆತವು. ಇಲ್ಲಿಯ ಅತ್ಯಂತ ಕೆಳಸ್ತರದ ಸಿಮೆಂಟಿನಂತಹ ಗರಸು ಮಣ್ಣಿನ ಪದರ, ಇದರ ಮೇಲೆ ಜೇಡಿಮಣ್ಣಿನ ಪದರ ಮತ್ತು ಇದರ ಮೇಲೆ ಸಡಿಲವಾದ ಬೆಣಚುಕಲ್ಲಿನಂದ ಕೂಡಿದ ಪದರವಿದ್ದು ಒಟ್ಟಾಗಿ 3.5 ಮೀ ನಷ್ಟಿದೆ. ಈ ರೀತಿ ಪದರಗಳು ಎಸ್.ಪಿ.ಜಿ. ಮೆಷಿನ್ ಬಂಗಲೋ, ಗಿಡ್ಡಲೂರು ರಸ್ತೆಯ 86 ಮತ್ತು 87 ನೆಯ ಮೈಲಿಗಲ್ಲು, ರೈಲ್ವೇ ಲೈನ್ ಮತ್ತು ಗಿಡ್ಡಲೂರು ರಸ್ತೆ ಹಾಗೂ ನದಿಯ ನಡುವಿನ ಪ್ರದೇಶಗಳಲ್ಲಿಯೂ ಕಂಡುಬರುತ್ತವೆ.

ಗಿಡ್ಡಲೂರು–1 ಮತ್ತು ಗಿಡ್ಡಲೂರು–2ರಲ್ಲಿ ಆದಿ ಲೆವಾಲ್ವ ಮಾದರಿಯ ಉಪಕರಣಗಳಿವೆ. ಗಿಡ್ಡಲೂರು–1ರಲ್ಲಿ ಮುಖ್ಯವಾಗಿ ಆದಿ ಹಳೆಶಿಲಾಯುಗದ ಎಲ್ಲ ಪ್ರಕಾರಗಳ ಉರುಟು ಕಲ್ಲಿನ ಉಪಕರಣಗಳಿಂದ ಹಿಡಿದು ಕ್ಲಾಕ್ಟೊನ್ ಮಾದರಿಯ ಹೆರೆಯುವ ಚಕ್ಕೆಗಳು, ಕೊಕ್ಕಿನಾಕೃತಿಗಳು, ಅಂಡಾಕೃತಿಯ ಉಪಕರಣಗಳು ದೊರಕಿದರೆ ಗಿಡ್ಡಲೂರು–2ರಲ್ಲಿ, ಗಿಡ್ಡಲೂರು–1ರಲ್ಲಿ ಸಿಕ್ಕಿರುವ ಉಪಕರಣ ಮಾದರಿಗಳು ಕಂಡುಬರದಿದ್ದರೂ ಸಮಾನಾಂತರ ಅಂಚಿನ ನೀಳಚಕ್ಕೆಗಳು, ಕೊರೆಯುಳಿಗಳು ಇತ್ಯಾದಿ ದೊರಕಿವೆ. ಗಿಡ್ಡಲೂರಿನಲ್ಲಿ ಸಂಗ್ರಹಿಸಿದ 240 ಉಪಕರಣಗಳನ್ನು ಪರೀಕ್ಷಿಸಲಾಗಿ ಬರ್ಕಿಟ್ ಹೇಳಿರುವಂತೆ ಇವು ಆಫ್ರಿಕ ದೇಶದ ಉಪಕರಣಗಳಿಗೆ ಹೋಲಿಕೆಯಾಗುತ್ತವೆ. ಆದರೆ ಆಫ್ರಿಕ ಮತ್ತು ಗಿಡ್ಡಲೂರುಗಳಿಗೆ ಯಾವುದೇ ರೀತಿಯ ನೇರವಾದ ಜನಾಂಗ–ಸಂಸ್ಕೃತಿಯ ಸಂಪರ್ಕವಿರಲಿಲ್ಲ. ಗಿಡ್ಡಲೂರಿನ ಮೊದಲ ಎರಡು ಸಂಸ್ಕೃತಿಗಳ ಉಪಕರಣಗಳನ್ನು ತಿಳಿಗಂದು ಬಣ್ಣದ ಬೆಣಚು ಕಲ್ಲಿನ ರೂಪಾಂತರ ದಿಂದಾದ ಶಿಲೆಯಿಂದ ತಯಾರಿಸಲಾಗಿದೆ.

ಗಿಡ್ಡಲೂರು–2ರ (ನರಸಿಂಹಕೊಂಡ) ಸೂಕ್ಷ್ಮಶಿಲಾಯುಗ ಉಪಕರಣಗಳನ್ನು ನಸುಹಸಿರು ಬಣ್ಣದ ಬೆಣಚು ಕಲ್ಲು ರೂಪಾಂತರ ಶಿಲೆ, ನಾಳರಚನೆಯುಳ್ಳ ಬೆಣಚುಕಲ್ಲು, ಸ್ಫಟಿಕ, ಯಡಿನೈಟ್, ಅಗೇಟ್ ಮತ್ತು ಚಕಮಕಿ ಕಲ್ಲುಗಳಿಂದ ತಯಾರಿಸಲಾಗಿದೆ. ಹರಿತವಾದ ಇಬ್ಬದಿ ಅಲಗುಗಳು ಮತ್ತು ಸುತ್ತಲೂ ಹರಿತವಾಗಿರುವ ನೀಳಚಕ್ಕೆ, ಅರ್ಧಚಂದ್ರಾಕೃತಿ, ಹೆರೆಚಕ್ಕೆ, ಬೈರಿಗೆ, ಮೊನೆ, ಕೊರೆಯುಳಿ ಇತ್ಯಾದಿ ದೊರಕಿವೆ. ಇವೆಲ್ಲ ಸಾಮಾನ್ಯವಾಗಿ ಸೂಕ್ಷ್ಮಶಿಲಾಯುಗದ ಉಪಕರಣಗಳಾಗಿವೆ. (ಆರ್.ಎನ್.ಎಸ್.)

**ಗಿಡಿಂಗ್ಸ್, ಫ್ರಾಂಕ್ಲಿನ್ ಹೆನ್ರಿ :** 1885–1931. ಅಮೆರಿಕ ಸಂಯುಕ್ತ ಸಂಸ್ಥಾನಗಳ ಅತ್ಯಂತ ಪ್ರತಿಭಾವಂತರಾದ ಸಮಾಜಶಾಸ್ತ್ರಜ್ಞರಲ್ಲಿ ಒಬ್ಬ. ಅಲ್ಲಿನ ಸಮಾಜಶಾಸ್ತ್ರದ ಸಕ್ರಮ ಬೆಳೆವಣಿಗೆಯ ಪ್ರವರ್ತಕನೆಂದು ಪ್ರಸಿದ್ಧನಾಗಿದ್ದಾನೆ.

ಈತ ಹುಟ್ಟಿದ್ದು ಕನೆಕ್ಟಿಕಟ್‌ನ ಷರ್ಮನ್ ಎಂಬ ಪಟ್ಟಣದಲ್ಲಿ. ಈತನ ತಂದೆ ತಾಯಿಗಳು ಪ್ಯೂರಿಟನ್ ಪಂಥಕ್ಕೆ ಸೇರಿದವರು. ಮನೆಯ ವಾತಾವರಣ ಬೌದ್ಧಿಕ ಜೀವನಕ್ಕೆ ಉತ್ತೇಜನ ಕೊಡುವ ರೀತಿಯದಾಗಿದ್ದುದರಿಂದ ಮೊದಲಿನಿಂದಲೂ ಈತನಿಗೆ ಓದುವ ಹವ್ಯಾಸ ಅಂಟಿ ಬಂತು. ಕಾಲೇಜು ಪ್ರವೇಶಿಸುವುದಕ್ಕೆ ಮೊದಲೇ ಅನೇಕ ಪ್ರೌಢಗ್ರಂಥಗಳನ್ನು ಓದಿದ್ದ. ಇದಲ್ಲದೆ ವಿವಾದಾಸ್ಪದವಾದ ಅನೇಕ ಬರೆವಣಿಗೆಗಳನ್ನೂ ಅಧ್ಯಯನ ಮಾಡಿ ತನ್ನ ಸ್ವಂತ ಅಭಿಪ್ರಾಯಗಳನ್ನು ರೂಪಿಸುವ ಶಕ್ತಿಯನ್ನು ಪಡೆದಿದ್ದ. ಡಾರ್ವಿನ್, ಹಕ್ಸ್‌ಲಿ, ಜಾನ್ ಟಿಂಡಾಲ್ ಮತ್ತು ಸ್ಪೆನ್ಸರ್ ಇವರುಗಳ ಕೃತಿಗಳನ್ನು ವಿಮರ್ಶನದೃಷ್ಟಿಯಲ್ಲಿ ಈತ ಅಧ್ಯಯನ ಮಾಡಿದ್ದ.

ಗಿಡಿಂಗ್ಸ್‌ನ ತಾತ್ತ್ವಿಕ ಹಿನ್ನೆಲೆಗೆ ರೂಪಕೊಟ್ಟಿದ್ದ ಬರೆವಣಿಗೆಗಾರರಲ್ಲಿ ಮುಖ್ಯರಾದವರು ಆಡಂ ಸ್ಮಿತ್, ಅಗಸ್ಟ ಕಾಂಟ್, ಎಲ್. ಎಫ್. ವಾರ್ಡ್ ಮತ್ತು ಜಾನ್ ಸ್ಟೂಯರ್ಟ್ ಮಿಲ್–ಇವರು. ಇವರು ನಿರೂಪಿಸಿದ ವ್ಯಕ್ತಿತ್ವವಾದ ಗಿಡಿಂಗ್ಸ್‌ನ ಬರೆವಣಿಗೆಗಳಲ್ಲಿ ವಿವಿಧ ರೂಪಗಳಲ್ಲಿ ಕಾಣಬರುತ್ತದೆ. ಒಟ್ಟಿನಲ್ಲಿ ವ್ಯಕ್ತಿತ್ವವಾದ ಗಿಡಿಂಗ್ಸ್‌ನ ಸಮಾಜಶಾಸ್ತ್ರದ ಸೈದ್ಧಾಂತಿಕ ನಿಲುವಾಗಿದೆ.

ಗಿಡಿಂಗ್ಸ್ 1877ರಲ್ಲಿ ಯೂನಿಯನ್ ಕಾಲೇಜಿನ ಪದವೀಧರನಾಗಿ 1888ರಿಂದ ಆರು ವರ್ಷಗಳ ಕಾಲ ರಾಜ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರಗಳಲ್ಲಿ ಪ್ರಾಧ್ಯಾಪಕನಾಗಿ ಕೆಲಸ ಮಾಡಿ 1894ರಲ್ಲಿ ಕೊಲಂಬಿಯ ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ಪ್ರಾಧ್ಯಾಪಕನಾಗಿ ನೇಮಕಗೊಂಡ. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಪೂರ್ಣಾವಧಿ ಸಮಾಜಶಾಸ್ತ್ರ ಅಧ್ಯಾಪಕರಾದವರಲ್ಲಿ ಈತ ಮೊದಲನೆಯವ.

ಗಿಡಿಂಗ್ಸ್ ಸಮಾಜಶಾಸ್ತ್ರ ಕ್ಷೇತ್ರವನ್ನು ಪ್ರವೇಶಿಸಿದಾಗ, ಅದು ನೀತಿಶಾಸ್ತ್ರದ ಮತ್ತು ಇತಿಹಾಸತತ್ತ್ವಶಾಸ್ತ್ರದ ಭಾಗವಾಗಿ ಪರಿಗಣಿಸಲ್ಪಟ್ಟಿತು. ವ್ಯಕ್ತಿತ್ವವಾದದ ಜೊತೆಗೆ. ಅಗಸ್ಟ ಕಾಂಟನ ಲೋಕಸಿದ್ಧವಾದ ಮತ್ತು ಸ್ಪೆನ್ಸರನ ವಿಕಾಸವಾದಗಳು ಆಗ್ಗೆ ಗಿಡಿಂಗ್ಸ್‌ನ ನೂತನ ಸಮಾಜಶಾಸ್ತ್ರ ನಿರೂಪಣೆಗೆ ಸ್ಫೂರ್ತಿ ನೀಡಿದುವು. ಗಿಡಿಂಗ್ಸ್ ಸಂಖ್ಯಾಕಲನ ಶಾಸ್ತ್ರದಲ್ಲಿ ಪ್ರಾವೀಣ್ಯಗಳಿಸಿದುದಲ್ಲದೆ, ತನ್ನ ಸಂಶೋಧನೆಗಳಲ್ಲಿ ಅದನ್ನು ಗಣನೀಯವಾಗಿ ಬಳಸಿಕೊಂಡ. ಅಂಕಿ ಅಂಶಗಳ ಪರಿಶೀಲನೆಯಿಂದ ಸಮಾಜಶಾಸ್ತ್ರದ ಘನತೆ ಹೆಚ್ಚುವುದೆಂದು ಆತ ನಂಬಿದ್ದ. ಸಮಾಜಶಾಸ್ತ್ರ ವಾಸ್ತವಾಂಶಗಳ ಆಧಾರದ ಮೇಲೆ ಅನುಗಮನ ತಾರ್ಕಿಕ ಮಾರ್ಗವನ್ನು ಅನುಸರಿಸಿ ತನ್ನ ತತ್ತ್ವಗಳನ್ನು ನಿರೂಪಿಸಬೇಕು–ಎಂಬುದು ಆತನ ನಿಲುವು.